ನಿರಂಜನ : ಮೂವತ್ತು ಸಂಪುಟಗಳಲ್ಲಿ-೫

# ಕನಸು

ಮೂರು ಕಾದಂಬರಿ

**ನಿರಂಜನ**

ಐಬಿಎಚ್ ಪ್ರಕಾಶನ
ಐದನೆಯ ಮುಖ್ಯರಸ್ತೆ, ಗಾಂಧಿನಗರ
ಬೆಂಗಳೂರು-560 009

KANASU—A collection of three novels in Kannada by Niranjana, namely, Paalige Banda Panchaamrta, Ekaangini and Deekshe, being the fifth volume in the series: Complete works of Niranjana—in thirty volumes. Published by G. K. Ananthram for IBH Prakashana, 5th Main Road, Gandhinagar, Bangalore—560 009

Demy octavo Pages 440+viii Price: Rs.

© Seemanthini Niranjana

Publishing rights in Kannada, IBH Prakashana

ಬೆಲೆ : ರೂ.

AAKRUTI
150-00

ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯ ರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಫ. ಶಿ. ಭಾಂಡಗೆ ತ್ವರಿತ ಮುದ್ರಣ ನಂಗಾಪೂರಪೇಟ ಗದಗ–582 101.

# ವಾಚಕ ಮಹಾಶಯ

ನನ್ನ ಮೂರು ಕಾದಂಬರಿಗಳಾದ 'ಪಾಲಿಗೆ ಬಂದ ಪಂಚಾಮೃತ', 'ಏಕಾಂಗಿನಿ' ಮತ್ತು 'ದೀಕ್ಷೆ' ಗಳನ್ನು ಒಟ್ಟಿಗೆ ಒದಗಿಸುತ್ತಿರುವ ಸಂಪುಟ–'ಕನಸು'. (ನಿರಂಜನ: ಮೂವತ್ತು ಸಂಪುಟಗಳಲ್ಲಿ... ಸರಣಿಯಲ್ಲಿ ಇದು ಐದನೆಯದು.)

ಈ ಸಂಪುಟದಲ್ಲಿರುವ ಮೂರೂ ಕಾದಂಬರಿಗಳನ್ನು ವ್ಯಾಪಿಸಿರುವುದು ಅರ್ಥ ಪೂರ್ಣ ಬದುಕಿನ ಕನಸು.

*   *   *   *

'ಪಾಲಿಗೆ ಬಂದ ಪಂಚಾಮೃತ'ದ ನಾಯಿಕೆ, ಸುನಂದಾ. ಅವಳ ಪಾಲಿಗೆ ವಿವಾಹ ಕಬ್ಬಿಣದ ಸಂಕೋಲೆಯಾಯಿತು. ಆದರೆ, ಆಕೆ ಸುಶೀಲೆ, ಸಹನಶೀಲೆ. ಬೇರೆಯೇ ಸೂರ್ಯೋದಯವನ್ನು ನಿರೀಕ್ಷಿಸುತ್ತ ಬಹಳ ದಿನ ಕಳೆದಳು. ಆದರೆ ದಟ್ಟೈಸಿದ ಮೋಡಗಳು ಕರಗಲಿಲ್ಲ.

ಸ್ವಾತಂತ್ರ್ಯೋತ್ತರ ಭಾರತ. ಹಿಂದೂ ವಿವಾಹ ಮಸೂದೆ ಲೋಕಸಭೆಯಲ್ಲಿ ಮಂಡಿತವಾಗಿ, ಬಿರುಸಿನ ವಾಗ್ಯುದ್ಧ ನಡೆದು, ಅಂತಿಮ ಒಪ್ಪಿಗೆ ದೊರೆತು, ಮಸೂದೆ ಶಾಸನವಾದ ವರ್ಷ ೧೯೫೫. ಆ ಕಾಲಾವಧಿಗೆ ನಾನು ಸ್ಪಂದಿಸಿದ್ದು, 'ಪಾಲಿಗೆ ಬಂದ ಪಂಚಾಮೃತ' ಮತ್ತು 'ಏಕಾಂಗಿನಿ' ಕಾದಂಬರಿಗಳ ರಚನೆಯ ಮೂಲಕ.

ಸೃಷ್ಟಿ ಕಾರ್ಯ ಮುಗಿದಾಗ ಸುನಂದಾ ನನ್ನಿಂದ ಅನುಕಂಪದ ಉಡುಗೊರೆ ಪಡೆದಳು. ಆಕೆ ಸದಾ ಏಕಾಂಗಿನಿಯಾಗಿ ಇರಬಾರದು ಎನಿಸಿತು. ಈಗಲೂ ಅನಿಸು ತ್ತಿದೆ: 'ಅವಳಿಗೆ ಎಂದಾದರೊಂದು ದಿನ ನ್ಯಾಯ ದೊರಕಿಸಿ ಕೊಡಬೇಕು.'

*   *   *   *

ಸುನಂದಾ ಅನುಕಂಪಕ್ಕೆ ಪಾತ್ರಳು. 'ದೀಕ್ಷೆ'ಯ ನಾಯಕ ಮುರಲೀಧರ ಪಾತ್ರನಲ್ಲವೆ?

ಖಂಡಿತ ಹೌದು.

ಮುರಲೀಧರನ ಸುತ್ತ ಮೂರು ಭಾಗಗಳ ಕಾದಂಬರಿ ಹೆಣೆಯಲು ನಾನು ಬಯಸಿದ್ದೆ. ಮೊದಲಿನದು 'ದೀಕ್ಷೆ', ಎರಡನೆಯದು 'ಚಕ್ರವ್ಯೂಹ' ಮತ್ತು ಮೂರ ನೆಯದು 'ಪುಷ್ಪ ಸಮರ್ಪಣೆ'. 'ದೀಕ್ಷೆ'ಯನ್ನು ಓದುಗರಿಗೆ ನೀಡಿದೊಡನೆ ಸ್ವಪ್ನ ಭಂಗವಾಯಿತು...

ನನ್ನ ಈ ಯೋಜನೆಯ ಪರಿಚಯವಿಲ್ಲದವರಿಗೆ 'ದೀಕ್ಷೆ', ಸಾಧಾರಣವಾಗಿ ದುಂಡಗಿರುವ ಕೃತಿಯೇ. ಆದರೆ, 'ಪೂರ್ಣ ದುಂಡಗಿರುವ' ಎಂಬ ಪದಗಳನ್ನು ಇಲ್ಲಿ ಬಳಸಲಾರೆ.

ಇನ್ನೆರಡುಮೂರು ವರ್ಷಗಳ ಬಳಿಕ ಮೇಜು ಸ್ವಚ್ಛಗೊಳಿಸುವಾಗ, 'ದೀಕ್ಷೆ'ಯ ಕನಸನ್ನು ಖಂಡಿತ ನೆನೆಯುತ್ತೇನೆ.

* * * *

ಈ ಸಂಪುಟದ ಅಂತ್ಯದಲ್ಲಿ ತುಸು ಅನುಬಂಧವಿದೆ. ದಾಖಲೆ ಗೆರೆಗಳು. ದಯವಿಟ್ಟು ಅವನ್ನೂ ಓದಿನೋಡಿ.

* * * *

ಮೂವತ್ತು ಸಂಪುಟಗಳಲ್ಲಿ ನನ್ನ ಸಾಹಿತ್ಯ ಕೃಷಿಯನ್ನು ಹೊರತರುತ್ತಿರುವ ಕನ್ನಡದ ಹಿರಿಯ ಪ್ರಕಟಣ ಸಂಸ್ಥೆಯಾದ ಐಬಿಎಚ್ ಪ್ರಕಾಶನದ ಶ್ರೀ ಜಿ. ಕೆ. ಅನಂತರಾಮ್ ಅವರಿಗೆ ನಾನು ಕೃತಜ್ಞ.

'ಕನಸು' ಸಂಪುಟವನ್ನು ಸೊಗಸಾಗಿ ಮುದ್ರಿಸಿರುವ ತ್ವರಿತ ಮುದ್ರಣದ ಶ್ರೀ ಫ. ಶಿ. ಭಾಂಡಗೆ ಅವರಿಗೆ ನಾನು ಆಭಾರಿ.

ನಿರಂಜನ

'ಕಥೆ' 515, 7ನೇ ಮುಖ್ಯ-ಬೀದಿ,
46ನೇ ಅಡ್ಡರಸ್ತೆ, 5ನೇ ಬ್ಲಾಕ್, ಜಯನಗರ, ಬೆಂಗಳೂರು-560 041

# ಪಾಲಿಗೆ ಬಂದ ಪಂಚಾಮೃತ

೧

ಬಾಗಿಲು ತಟ್ಟಿದ ಸದ್ದಾಯಿತು. ಜತೆಯಲ್ಲೇ, ಕರೆದ ಸ್ವರ ಕೇಳಿಸಿತು.

"ಅಮ್ಮಾ, ಅಮ್ಮಾ!"

ತೊಟ್ಟಿಲು ತೂಗುತ್ತಿದ್ದ ಸುನಂದಾ ಬಾಗಿಲ ಬಳಿಗೆ ನಡೆದು ಬಂದು ಅಗಣಿ ತೆಗೆದಳು.

ಸ್ನೇಹಪರವಲ್ಲದ ಮುಖಮುದ್ರೆಯೊಡನೆ ಅಗಸರವನು ಅಲ್ಲಿ ನಿಂತಿದ್ದ.

"ಏನಪ್ಪಾ?"

ಆತನೆಂದ:

"ಅಂಗಡೀ ಕಡೆ ಬತ್ತೀನಿ ಅಂದ ರಾಯ್ರು ಬರಲೇ ಇಲ್ವಲ್ರಮ್ಮಾ. ಇಂಗಾದರೆ ಎಂಗೆ?"

ಸುನಂದಾ ಪ್ರಯತ್ನಪೂರ್ವಕವಾಗಿ ನಗೆಯ ಮುಖವಾಡ ಧರಿಸಿದಳು.

"ಬರಲೇ ಇಲ್ವೇನು? ಮರೆತರೂಂತ ಕಾಣುತ್ತೆ. ಇವತ್ತು ಜ್ಞಾಪಿಸ್ತೀನಿ."

ಆದರೆ ಅಗಸನ ಪಾಲಿಗೆ ಇಂತಹ ಉತ್ತರ ಅಪರಿಚಿತವಾಗಿರಲಿಲ್ಲ.

"ಎಷ್ಟು ದಿನಾಂತ ಸುಮ್ನಿರಾಕಾತದೆ–ನೀವೇ ಹೇಳ್ರಮ್ಮಾ..."

ಹೌದು,–ಎಷ್ಟು ದಿನದಿಂದ ಹೀಗೆ? ಒಂದು ತಿಂಗಳಾಯಿತೆ? ಎರಡೆ?

ಮನೆಯಾಕೆಯ ಮೌನ ಕಂಡು ಅಗಸರವನೇ ಮಾತು ಮುಂದುವರಿಸಿದ:

"ಈಗ ನಮ್ಮಂಗಡೀಲಿ ಬಟ್ಟೆ ಆಕೋದೂ ಬುಟ್ಬುಟ್ರು...."

ಆ ಮಾತಿನಲ್ಲಿ ನೋವಿನ ಧ್ವನಿಯಿತ್ತು. ಬಟ್ಟೆ ಹಾಕುವುದನ್ನಾದರೂ ನಿಲ್ಲಿಸದೇ ಇದ್ದಿದ್ದರೆ ಅಗಸರವನು ಹಣಕ್ಕಾಗಿ ಅಷ್ಟು ತಗಾದೆ ಮಾಡುತ್ತಲೂ ಇರಲಿಲ್ಲ.

ಏನನ್ನು ಹೇಳಬೇಕೆಂದು ತಿಳಿಯದೆ ಸುನಂದೆಗೆ ತಡವರಿಸಿತು. ಆದರೆ ಸುಧಾರಿಸಿ ಕೊಂಡು ಆಕೆ ಎಂದಳು:

"ಬೇರೆ ಅಂಗಡೀಲೂ ಎಲ್ಲೂ ಹಾಕ್ತಾ ಇಲ್ಲವಪ್ಪಾ. ಕೆಲಸದವಳೇ ಒಗೀತಾಳೆ."

ಅರ್ಧ ನಿಜ, ಅರ್ಧ ಸುಳ್ಳು. ಬೇರೆ ಅಗಸರವನನ್ನೇನೂ ಗೊತ್ತುಮಾಡಿರಲಿಲ್ಲ. ಆದರೆ ಈಗ ಬಟ್ಟೆ ಒಗೆಯುತ್ತಿದ್ದುದೆಲ್ಲ ಕೆಲಸದವಳಲ್ಲ–ಸುನಂದೆಯೇ.

ಪಕ್ಕದ ಬೀದಿಯಲ್ಲೇ ಅಂಗಡಿ ಇಟ್ಟಿದ್ದ ಅಗಸರವನು ಒಳ್ಳೆಯವನಾಗಿದ್ದ. ಸುನಂದಾ ಮದುವೆಯಾಗಿ ಗಂಡನ ಮನೆಗೆ ಬಂದ ಆ ಎರಡು ವರ್ಷಗಳಲ್ಲಿ ಆತ ನಂಬಿಕೆ ಯಿಂದಲೇ ನಡೆದುಕೊಂಡಿದ್ದ. ಸಾಮಾನ್ಯವಾಗಿ ಸುನಂದೆಯ ಗಂಡ ಹಣ ಕೊಡು ವುದು ತಡವಾಗುತ್ತಿರಲಿಲ್ಲ. ಒಮ್ಮೊಮ್ಮೆ ತಡವಾದರೂ ಅಗಸರವನು ಆಗ್ರಹ ತೊಡುತ್ತಿರಲಿಲ್ಲ.

ಆದರೆ ಮನೆಯವರು ಬಟ್ಟೆ ಹಾಕುವುದನ್ನೇ ನಿಲ್ಲಿಸಿದ ಮೇಲೆ, ಬಾಕಿಯಾಗಿದ್ದ ಹದಿನಾರು ರೂಪಾಯಿಯಷ್ಟರ ಹಣದ ಯೋಚನೆಯನ್ನು ಆತ ಮಾಡಲೇಬೇಕಾಯಿತು.

ಒಳಗೆ ಎಚ್ಚರಗೊಂಡ ಮಗು ತಾಯಿಯನ್ನು ಕಾಣದೆ ಗಟ್ಟಿಯಾಗಿ ಅತ್ತಿತು. ಅಳುವ ಧ್ವನಿ ಕೇಳುತ್ತಲೆ ಸುನಂದಾ ಒಳಕ್ಕೆ ಧಾವಿಸಲು ಸಿದ್ಧಳಾದಳು.

"ಇವತ್ತು ಖಂಡಿತ ಕೊಡೋ ಹಾಗೆ ಹೇಳ್ತೀನಪ್ಪ."

ಮಗುವಿನ ರೋದನವನ್ನು ಕೇಳಿ ಅಗಸರವನು ಸುಮ್ಮನಾದ. ಮನೆಯೊಡತಿಯ ಗೆಲುವಿನ ಮುಖವಾಡದ ಹಿಂದೆ ಸಪ್ಪೆ ಮೋರೆ ಇದ್ದುದನ್ನೂ ಅನುಭವಿಯಾದ ಆತ ಗಮನಿಸಿದ.

"ಅಂಗೇ ಆಗ್ಲೇಳಿ"

–ಎಂದು ಉತ್ತರವಿತ್ತು ಅವನು ಹೊರಟು ಹೋದ.

ಸುನಂದಾ ಬಾಗಿಲು ಮುಚ್ಚಿ ಅಗಣಿ ಹಾಕಿ ಮಗುವಿನೆಡೆಗೆ ನಡೆದಳು.

"....ಜೋ ಜೋ ಕಂದಮ್ಮ ಜೋ ಜೋ...."

ಕಿರೀ ಕಿರೀ ಎಂದು ತೊಟ್ಟಿಲಿನ ಕ್ರಮಬದ್ಧ ಹಿಮ್ಮೇಳ....ತಾಯಿಯ ಮುಖ ನೋಡಿ ಮಗು ಸಮಾಧಾನಗೊಂಡು ಸುಮ್ಮನಾಯಿತು.

ಹೊರಗಿನವನಿಗೋಸ್ಕರ ತೋರ್ಪಡಿಸಿದ್ದ ಮುಖಭಾವ ಬದಲಿತು. ಸುಂದರಿಯಾದ ಸುನಂದೆಯ ಕಣ್ಣುಗಳಿಂದ ಕಂಬನಿ ಹಣಿಕಿ ನೋಡಿತು.

* * * *

ಹಾಗೆ ಬಾಗಲಿಗೆ ಬಂದವನು ಅಗಸರವ ಮೊದಲಿಗನಾಗಿರಲಿಲ್ಲ. ಹಿಂದಿನ ದಿನ ಹಾಲಿನವನೂ ಬಂದು ಸ್ವಲ್ಪ ನಿಷ್ಠುರವಾಗಿಯೇ ಆಡಿದ್ದ.

ಕೆಲಸದವಳನ್ನೂ ಹೋಗೆಂದು ಹೇಳಬೇಕಾಗಿ ಬಂದ ಪ್ರಮೇಯ......ಆಕೆಗೆ ಕೊಡುತ್ತಿದ್ದುದು ತಿಂಗಳಿಗೆ ಮೂರು ರೂಪಾಯಿ ಮತ್ತು ಒಂದಿಷ್ಟು ಅನ್ನ ಸಾರು. ಅಷ್ಟನ್ನು ಕೊಡುವುದೂ ಸಾಧ್ಯವಾಗದೆ ಹೋಯಿತು.

ಆಕೆ ಕೇಳಿದ್ದಳು:

"ಯಾಕಮ್ಮಣ್ಣೀ, ಬೇರೆ ಯಾರನಾರಾ ಗೊತ್ಮಾಡ್ಕಂಡಿದೀರಾ?"

"ಇಲ್ಲ ಕಣೇ. ನಿನ್ನ ಬಿಟ್ಬಿಟ್ಟು ಇನ್ನೊಬ್ಬಳ್ನ ಕರೀತೀನಾ?"

"ಮತ್ಯಾಕಮ್ಮಣ್ಣೀ?"

"ಸ್ವಲ್ಪ ದಿವಸ ನಾನೇ ನೋಡ್ಕೊಬೇಕೂಂತ ಮಾಡಿದೀನಿ."

ಕ್ಷಣ ಕಾಲ ಮೌನವಾಗಿದ್ದು ಕೆಲಸದವಳು ತಗ್ಗಿದ ಸ್ವರದಲ್ಲಿ ಕೇಳಿದ್ದಳು:

"ಸ್ವಾಮಿಯೋರ ಕೆಲಸ ಹೋಯಿತೇನ್ರಮ್ಮ?"

ಆ ಮಾತು ಕೇಳಿ ಸುನಂದೆಗೆ ಹಾವು ಮೆಟ್ಟಿದ ಹಾಗೆ ಅನುಭವವಾಗಿತ್ತು. ಆದರೂ ನಕ್ಕು ಆಕೆಯೆಂದಿದ್ದಳು:

"ಇಲ್ಲವಪ್ಪ ಸದ್ಯಃ! ಯಾಕೆ ಹಾಗಂತೀಯಾ?"

"ಕೋಪಿಸ್ಕೋಬೇಡಮ್ಮಣ್ಣೆ. ಹಿಂದೆ ಒಂದ್ಸಲಿ ಮೂರನೇ ಬೀದಿಯೋರ ಮನೇಲಿ ಹಾಗಾಯಿತ್ರವ್ವಾ..."

ಆ ಕಹಿ ಮಾತುಗಳನ್ನೆಲ್ಲ ಕೊನೆಗಾಣಿಸುವುದೇ ಮೇಲೆಂದು ಸುನಂದಾ ಅಂದಿದ್ದಳು:

"ನೀನೀಗ ಹೋಗು. ಹದಿನೈದನೇ ತಾರೀಕು ಬಾ. ದುಡ್ಕೊಡ್ತೀನಿ."

ಉತ್ತರ ಸಂದೇಹದ ಪಡಿನೆಳಲಿನಲ್ಲೆ ದೊರೆತಿತ್ತು:

"ಯಾಕ್ರಮ್ಮಣ್ಣಿ? ಸ್ವಾಮಿಯೋರ್ಗೆ ಸಂಬಳ ಅತ್ನೇ ತಾರೀಕಿಗೇ ಅಲ್ವಾ ಬರೋದು?"

ಸುನಂದೆಗೆ ರೇಗಿತ್ತು:

"ನಿನಗ್ಯಾತಕ್ಕಮ್ಮಾ ಅದೆಲ್ಲಾ? ಹೋಗು ಅಂದರೆ ಸುಮ್ನೆ ಹೋಗ್ಬೇಕು."

ಕೆಲಸದವಳು ದುಗುಡ ತುಂಬಿದ ಮುಖದಿಂದ ಹೊರಟು ಹೋಗಿದ್ದಳು—ಹದಿನೈದನೇ ತಾರೀಕಿಗೇ ಬರುವೆನೆಂದು ಎಚ್ಚರಿಕೆಯನ್ನಿತ್ತು.

ಎಂತಹ ಮಾತನ್ನಾಡಿದ್ದಳು ಆಕೆ! ಸ್ವಾಮಿಯವರ ಕೆಲಸ ಹೋಯಿತೆ?-ಎಂದು ಕೇಳಿದ್ದಳು.

....ಕೆಲಸ ಹೋಗಿರಲಿಲ್ಲ. ಎಂಜಿನಿಯರ್ ಗಂಡ ದುಡಿಯುತ್ತಿದ್ದ ಸಂಸ್ಥೆ ಸುಭದ್ರವಾಗಿತ್ತು. ತಿಂಗಳ ಸಂಪಾದನೆ ನೂರ ಎಪ್ಪತ್ತೈದು ರೂಪಾಯಿ. ಆ ಪುಟ್ಟ ಸಂಸಾರಕ್ಕೆ ಅಷ್ಟು ಸಾಲದೆ? ತನ್ನ ಅತ್ತೆ ಬದುಕಿದ್ದಾಗ ಆತನಿಗೆ ಬರುತ್ತಿದ್ದುದು ನೂರ ಇಪ್ಪತ್ತೈದು ಮಾತ್ರ. ಆಗ ಅಷ್ಟೇ ಸಾಕಾಗುತ್ತಿತ್ತು. ಸೊಸೆ ಮನೆಗೆ ಬಂದ ಮೊದಲ ವರ್ಷವೇ ಅತ್ತೆ ತೀರಿಕೊಂಡಿದ್ದರು. ಮೊಮ್ಮಗನ ಮುಖ ಕಾಣುವ ಹಂಬಲ ಈಡೇರದೆ ಅವರು, "ನೀನು ಬಂಜೆ ಅಂತ ಕಾಣುತ್ತೆ" ಎಂದು ಕೊಂಕು ನುಡಿಯನ್ನು ಮಾತ್ರ ಆಡದೆ ಹೋಗಿರಲಿಲ್ಲ.

ಸುನಂದಾ ಬಸಿರು ತಳೆದುದು ಆಮೇಲೆ. ತವರುಮನೆಯಲ್ಲಿ ಹೆರಿಗೆಯಾಯಿತು. ಹುಟ್ಟಿದುದು ಹೆಣ್ಣು ಮಗು. ಅಲ್ಲಿರಲಾರದೆ ಒಂದು ತಿಂಗಳಲ್ಲೇ ಆಕೆ ಗಂಡನ ಮನೆಗೆ ಬಂದು ಬಿಟ್ಟಿದ್ದಳು. ಸರಸ್ವತಿ ಬಸಿರಲ್ಲಿದ್ದಾಗಲೇ ಆತನಿಗೆ ಸಂಬಳ ಹೆಚ್ಚಿತ್ತು. ಇನ್ನು ಜೀವನ ಕಷ್ಟದಾಯಕವಾಗಲಾರದೆಂಬ ಆಸೆಯಿಂದಲೇ ಸುನಂದಾ ತಾಯಿ ಮನೆಯಿಂದ ಹೊರಟು ಬಂದಿದ್ದಳು.

ಆದರೆ ವೈಯಕ್ತಿಕ ಆಸೆಗೂ ವಸ್ತು ಸ್ಥಿತಿಗೂ ಇದ್ದ ಅಂತರ ಎಷ್ಟೊಂದು!

ಯಾಕೆ ಹಾಗಾಯಿತು? ಯಾಕೆ?

ಕೈ ಹಿಡಿದವನ ಒಲವು ಎಂಬುದೊಂದು ಅನಂತ ಜಲರಾಶಿ ಎಂದು ಸುನಂದಾ ಭಾವಿಸಿದ್ದಳು. ಆದರೆ ಉಸುಬುಕಾಡಿನ ಉರಿಯುವ ಗಾಳಿ ಆಕೆಗೆ ಉಸಿರು ಕಟ್ಟಿಸಿತು.

ಅತ್ತೆ ಬದುಕಿದ್ದಷ್ಟು ಕಾಲವೂ ಅವರೇ ಹಣದ ಲೆಕ್ಕವಿಡುತ್ತಿದ್ದರು. ಒಂದು ರೀತಿಯಲ್ಲಿ ಜಿಪುಣೆ–ಒಂದು ರೀತಿಯಲ್ಲಿ ಧಾರಾಳಿ. ಒಂದಾಣೆಯ ಪೊರಕೆಯನ್ನು

ಒಂಭತ್ತು ಕಾಸಿಗೆ ಪಡೆಯಲು ಆಕೆ ಘಂಟೆಗಟ್ಟಲೆ ವಾದಿಸುತ್ತಿದ್ದರು. ಆದರೆ ಮಗ ಎರಡು ಮೂರು ರೂಪಾಯಿ ಕೇಳಿದರೆ ಐದು ರೂಪಾಯಿಯ ನೋಟನ್ನೇ ತೆಗೆದು ಕೊಡುತ್ತಿದ್ದರು. ದೂರದ ಊರಲ್ಲಿದ್ದ ಹಿರಿಯಮಗನ ಬದಲು ಮುದ್ದಿನ ಕಿರಿಯವ ನೊಡನೆ ಕೊನೆಯವರೆಗೂ ಉಳಿದ ಆ ಅತ್ತೆಗೆ ಮುತ್ತೈದೆಸಾವು ದೊರೆಯದೇ ಇದ್ದರೂ ಪುತ್ರವಾತ್ಸಲ್ಯ ಲಭಿಸಿತ್ತು. ಅವರಿಗೆ ಹೇಳಿಕೊಳ್ಳುವಂತಹ ಯಾವ ಕೊರತೆಯೂ ಇರಲಿಲ್ಲ. ಆದರೂ ಆಕೆ ಸದಾಕಾಲವೂ ಅತೃಪ್ತಿಯಿಂದ ಬುಸುಗುಟ್ಟುತ್ತ ಗೊಣಗು ತ್ತಿದ್ದರು. ಅವರು ಸೊಸೆಯನ್ನು ದಂಡಿಸುವ ಚಂಡಿಯಾಗಿರಲಿಲ್ಲ. ಮೊಸರಲ್ಲಿ ಕಲ್ಲು ಕಾಣುತ್ತಿರಲಿಲ್ಲ. ಆದರೆ ಗೃಹಲಕ್ಷ್ಮಿಯನ್ನು ಮಗಳಂತೆ ದೇವಿಯಂತೆ ಪ್ರೀತಿಸಿ ಆರಾಧಿಸುವ ಅತ್ತೆಯೂ ಅವರಾಗಿರಲಿಲ್ಲ...

* * * *

ನೆನಪಿನ ಕುದುರೆಯನ್ನು ತಡೆದು ನಿಲ್ಲಿಸಿ ಸುನಂದಾ, ಕುಳಿತಲ್ಲಿಂದ ಎದ್ದಳು. ಮಗು ನಿದ್ರಿಸಿತ್ತು. ಆ ನಡು ಹಜಾರದ ಹಿಂಭಾಗದಲ್ಲಿದ್ದುದೇ ಅಡುಗೆ ಮನೆ. ಗಂಡನಿ ಗಾಗಿ ಟಿಫಿನ್ ಕ್ಯಾರಿಯರ್‌ನಲ್ಲಿ ಕೊಟ್ಟು ಕಳುಹಿದ ಮೇಲೆ ಉಳಿದಿದ್ದ ಅನ್ನ ಅರೆ ಮುಚ್ಚಿದ್ದ ತಪ್ಪಲೆಯೊಳಗಿಂದ ಇಣಿಕಿ ನೋಡುತ್ತಿತ್ತು. ಅದರ ಬಳಿಯಲ್ಲೆ ಹುಳಿ. 'ಊಟದ ಶಾಸ್ತ್ರ ಮುಗಿಸಬೇಕು' ಎಂದುಕೊಂಡಳು ಸುನಂದಾ. ಆದರೆ ಮನಸ್ಸಾಗಲಿಲ್ಲ. ಬೆಳಗ್ಗೆ ಕುಡಿದಿದ್ದುದು ಬರಿಯ ಒಂದು ಲೋಟ ಕಾಫಿ ಮಾತ್ರ. ಗಂಡ ಕೆಲಸಕ್ಕೆ ಹೋಗುತ್ತ ಹಾದಿಯಲ್ಲಿ ಮಾವಳ್ಳಿ ಟಿಫಿನ್ ರೂಮ್ಸಿಗೆ ಭೇಟಿಕೊಡುವುದು ರೂಢಿ ಯಾದ ಮೇಲೆ, ಮನೆಯಲ್ಲಿ ತಿಂಡಿಮಾಡುವ ಅಗತ್ಯ ಮರೆಯಾಗಿತ್ತು. ಮಾಡಿದರೆ, ತನಗೊಬ್ಬಳಿಗೋಸ್ಕರ. ಹೀಗಾಗಿ, ಮಾಡದೇ ಇರುವ ದಿನಗಳೇ ಹೆಚ್ಚು....

ಎಷ್ಟು ಹೊತ್ತಾಯಿತೊ?

ಮನೆಯಲ್ಲಿ ಗಡಿಯಾರವಿರಲಿಲ್ಲ. ತಾನು ಕಾಲೇಜಿಗೆ ಹೋಗುತಿದ್ದಾಗ ಸುನಂದಾ ಪುಟ್ಟದೊಂದು ಕೈ ಗಡಿಯಾರವನ್ನು ಕಟ್ಟಿಕೊಳ್ಳುತ್ತಿದ್ದಳು. ಆ ಅಧ್ಯಯನವಿದ್ದುದು ಇಂಟರ್ ತನಕ. ವಿವಾಹದ ಮಾರುಕಟ್ಟೆಯಲ್ಲಿ ಅನುಕೂಲವಾಗಲೆಂದು ತಾಯಿತಂದೆ ಅಷ್ಟು ಓದಿಸಿದ್ದರು. ಅನಂತರ ಆಕೆಯ ಒಡಹುಟ್ಟಿದವಳ ಸರದಿ. 'ಈ ಕಾಲೇಜು ಕೈ ಗಡಿಯಾರ ಇನ್ನು ನಿನಗಿರಲಮ್ಮ' ಎಂದು ಸುನಂದಾ ತನ್ನದನ್ನು ಬಿಚ್ಚಿ ತಂಗಿಯ ಕೈಗೆ ಆಗ ಕಟ್ಟಿದ್ದಳು.

ದಾಂಪತ್ಯ ಜೀವನದ ಹೊಸತಿನಲ್ಲಿ ಸುನಂದಾ, ಮನೆಯಲ್ಲೊಂದು ಟೈಂಪೀಸು ಇದ್ದರೆ ಮೇಲಲ್ಲವೆ?—ಎಂದು ಸೂಚಿಸಿದ್ದಳು. ಆದರೆ ಅತ್ತೆಗೆ ಆ ಸೂಚನೆ ಮಾನ್ಯ ವಾಗಿರಲಿಲ್ಲ. ಅವರು ಮನೆಯ ಮುಂದೆ ನೆರಳು ನೋಡಿಯೇ ಹೊತ್ತು ಗೊತ್ತು ಮಾಡುತ್ತಿದ್ದರು.

ಆ ಅತ್ತೆಯ ಅನಂತರವೂ ಮನೆಗೆ ಗಡಿಯಾರ ಬರಲಿಲ್ಲ.

....ಸುನಂದಾ ಬಾಗಿಲ ಬಳಿ ನಿಂತು ಬೀದಿಯ ಕಡೆ ನೋಡಿದಳು.

ಎಷ್ಟು ನಿಮಿಷ ಹಾಗೆ ನಿಂತಿದ್ದಳೊ.

ನಡೆದು ಬರುತ್ತಿದ್ದ ಅಂಚೆಯವನು ಆಕೆಗೆ ಕಾಣಿಸಿದ.

'ಹನ್ನೆರಡಾಯಿತು ಹಾಗಾದರೆ.'

ಸುನಂದೆಯ ತಾಯಿಮನೆಯಿಂದ ಕಾಗದ ಬರುತ್ತಿದ್ದುದು ಎಂದಾದರೊಮ್ಮೆ. ಬಂದಾಗಲೆಲ್ಲ ಅದರಲ್ಲಿರುತ್ತಿದ್ದುದು ಗೋಳಿನ ಕಥೆ. 'ನಿನ್ನ ತಂಗಿಗಿನ್ನೂ ವರ ಹುಡುಕುತ್ತಲೇ ಇದ್ದೇವೆ'...'ಒಂದು ಸಂಬಂಧ ಮುರಿದು ಹೋಯಿತು'....'ಎಲ್ಲಾದರೂ ಪ್ರಯತ್ನ ಮಾಡಬೇಕೂಂತ ನಿನ್ನ ಯಜಮಾನರಿಗೆ ಹೇಳು'...ಸುನಂದೆಗೆ ಆ ವಾಕ್ಯಗಳೆಲ್ಲ ಕಂಠಪಾಠವಾಗಿದ್ದುವು. ಅದಲ್ಲದೆ ಎಂದಾದರೂ ಬರೆಯುತ್ತಿದ್ದವರು, ಆಕೆಯ ಒಬ್ಬಿಬ್ಬರು ಗೆಳತಿಯರು. ಗಂಡನ ಕಾಗದಗಳೆಲ್ಲ ಆತನ ಕಚೇರಿಗೆ ಬರುತ್ತಿದ್ದುವು.

ಆದರೂ ಅಂಚೆಯವನು ತಮ್ಮ ಮನೆಯನ್ನು ಹಾದು ಹೋಗುವ ವರೆಗೂ ಸುನಂದಾ ಬಾಗಿಲಲ್ಲೆ ನಿಂತಳು. ಆ ಬಾಗಿಲಿಗೆ ಅಷ್ಟಾಗಿ ತಿರುಗಿ ಅಭ್ಯಾಸವಿಲ್ಲದ ಅಂಚೆಯವನು ಅತ್ತ ನೋಡಲೇ ಇಲ್ಲ.

ಆತ ಕಣ್ಣಿನಿಂದ ಮರೆಯಾಗುವವರೆಗೂ ಬೀದಿಯತ್ತ ನೋಡುತ್ತಲಿದ್ದ ಸುನಂದಾ, ಬದುಕಿನ ನಿಯಮಕ್ಕೆ ಅನುಸಾರವಾಗಿ ಒಂದು ತುತ್ತು ಅನ್ನ ತಿನ್ನಲೆಂದು ಅಡುಗೆ ಮನೆಗೆ ನಡೆದಳು.

* * * *

ಊಟವಾದ ಮೇಲೆ, ಮಗು ಏಳುವುದಕ್ಕೆ ಮುಂಚೆಯೊಂದು ಸಣ್ಣ ನಿದ್ದೆ. ಹೊತ್ತು ಕಳೆಯಲು ಅದೊಳ್ಳೆಯ ಸಾಧನ...

...ಆ ದಿನಗಳಲ್ಲಿ ಎಂಥೆಂಥ ಆಸೆಗಳಿದ್ದುವು. ಓದಿದ ಹುಡುಗಿಯಾದ ವಿದ್ಯಾವತಿಯಾದ ತಾನು ಸುಸಂಸ್ಕೃತ ಜೀವನವನ್ನು ನಡೆಸಬೇಕೆಂದು ಸುನಂದಾ ಅಂದು ಕೊಂಡಿದ್ದಳು.

ಆಕೆಯೊಂದು ರಾತ್ರೆ ಗಂಡನನ್ನು ಕೇಳಿದ್ದಳು:

"ನಾವು ಕಲ್ಚರ್ಡ್ ಆಗಿರಬೇಕು ಅಲ್ವಾ?"

ಆಗ ಬಂದಿದ್ದ ಉತ್ತರ:

"ಅದೇನೇ ಕಲ್ಚರ್ಡ್ ಅಂದರೆ?"

ಆಕೆಯನ್ನು ದಿಗಿಲುಗೊಳಿಸಿದ್ದು ಉತ್ತರ ಮಾತ್ರವಲ್ಲ—ಅದರ ಜತೆಗಿದ್ದ ವ್ಯಂಗ್ಯ ನಗೆ.

ಏನು ಸಂಸ್ಕೃತಿ ಎಂದರೆ? ಸ್ಪಷ್ಟ ಉತ್ತರವನ್ನು ಕೊಡುವುದು ಸುನಂದೆಯಿಂದ ಸಾಧ್ಯವಾಗುತಿತ್ತೋ ಇಲ್ಲವೋ....

ಆದರೆ ಆಕೆಗೆ ಇಷ್ಟು ಗೊತ್ತಿತ್ತು: ತಾವೆಲ್ಲ ಒಳ್ಳೆಯವರಾಗಿರಬೇಕು; ಒರಟು ಮಾತನಾಡಬಾರದು; ನಯ ವಿನಯದಿಂದ ವರ್ತಿಸಬೇಕು; ಒಂದಿಷ್ಟು ಪುಸ್ತಕಗಳು

ಪತ್ರಿಕೆ...ರೇಡಿಯೋ...ಕಲೆಯ ಅಭಿರುಚಿ...

ಇಲ್ಲ, ಅದೊಂದೂ ಸಾಧ್ಯವಾಗಿರಲಿಲ್ಲ. ಕೈ ಹಿಡಿದವನಿಗೆ ಅಂಥದರಲ್ಲಿ ಆಸಕ್ತಿ ಇರಲಿಲ್ಲ.

* * * *

ಮಗು ಎದ್ದು ತಾಯಿಯ ನಿದ್ದೆಗೆ ಭಂಗ ತಂದಿತು. ಸುನಂದಾ ಸರಸ್ವತಿಯನ್ನು ರಮಿಸುತ್ತಾ ಅತ್ತಿತ್ತ ನಡೆದಳು.

ಆಗ ಪಕ್ಕದ ಮನೆಯ ರಾಧಮ್ಮ ಬಂದರು.

"ಆಯ್ತೆ ಊಟ?"

ಎಷ್ಟು ಹೊತ್ತಾದರೂ ಕೇಳಲೇ ಬೇಕಾದ ಮಾಮೂಲಿನ ಪ್ರಶ್ನೆ.

"ಹೂಂ ಕಣ್ರಿ."

ಅಂತಹ ಚುಟುಕು ಉತ್ತರದಿಂದೆಲ್ಲ ತೃಪ್ತಿಯಾಗುವವರಲ್ಲ ರಾಧಮ್ಮ. ಸುನಂದಾ, ತನ್ನೊಳಗಿನ ಬೇಗುದಿಯನ್ನು ಬಚ್ಚಿಡಲು ಬಯಸುತ್ತ ಮತ್ತೊಮ್ಮೆ ನಗೆಯ ಮುಖ ವಾಡ ಧರಿಸಿದಳು.

ಆದರೆ ರಾಧಮ್ಮನದು ತೀಕ್ಷ್ಣದೃಷ್ಟಿ.

"ಇದೇನ್ರೀ ಹೀಗಿದೀರಾ? ಮೈಲಿ ಹುಷಾರಿಲ್ವೆ?"

"ಚೆನ್ನಾಗೇ ಇದೀನಿ ರಾಧಮ್ನೋರೆ."

"ಅದೇನೋಪ್ಪ, ಮನಸ್ಸು ಬಿಟ್ಟು ಮಾತಾಡೋಲ್ಲ ನೀವು. ಆ ನಿಮ್ಮ ಯಜಮಾನರೋ, ನಿಮಗೆ ಸರಿಯಾದ ಜೋಡಿ....ಅದ್ಯಾಕೋ ಈ ನಡುವೆ ಸ್ವಲ್ಪ ವಿಚಿತ್ರವಾಗಿದಾರಪ್ಪಾ–ಗುಂ ಅಂತಿರ್ತಾರೆ."

....ಸರಿಯಾದ ಜೋಡಿ! ವಿಚಿತ್ರವಾಗಿದಾರೆ!...

ಒಮ್ಮೆಲೆ ಹೃದಯ ಬಿರಿದು ಒಳಗಿರುವುದೆಲ್ಲ ಹರಿದು ಹೋಗುವುದೇನೋ ಎಂದು ಸುನಂದೆಗೆ ಭಯವಾಯಿತು. ಆದರೂ ಆಕೆ ಧೈರ್ಯಗೆಡದೆ, ತನ್ನ ಕೊರಗನ್ನು ಒಳಗೇ ಹತ್ತಿಕ್ಕಿ, ಅದಕ್ಕೆ ಮೌನದ ಕವಚ ತೊಡಿಸಿದಳು.

ಅನಂತರ ಮಾತು—ಒಂದಕ್ಕೊಂದು ಸಂಬಂಧವಿಲ್ಲದ ಮಾತು.

* * * *

ಮನೆ ಬಾಡಿಗೆ ಕೊಟ್ಟಿರಲಿಲ್ಲ. ಜಿನಸಿನ ಅಂಗಡಿಗೂ....ಸಂದಾಯವಾಗದೆ ಇದ್ದ ಇನ್ನೊಂದು ದೊಡ್ಡ ಬಿಲ್ಲು ಡಾಕ್ಟರದು....

...ಮತ್ತೆ ಸುನಂದಾ ಮಗುವನ್ನೆತ್ತಿಕೊಂಡು ಬೀದಿಗೆ ನಿಂತಳು.

ಮೊದಲಾದರೆ ಗಂಡ ನಿರ್ದಿಷ್ಟ ಹೊತ್ತಿಗೆ ಮನೆಗೆ ಬರುತ್ತಿದ್ದ.

ತಾನು ಒಳಗಿದ್ದಾಗ ಆತ, ಮೆಲ್ಲನೆ ತಟ್ಟಿ ಹೇಳುತ್ತಿದ್ದ "ಬಾಗಿಲು!" ಎಂಬ ಮೃದು ಧ್ವನಿ, ಮೋಹಕವಾಗಿತ್ತು.

ಈಗ ಆ ಪದ ಅದೆಷ್ಟು ಕರ್ಕಶ!

ತೆರೆಯುವುದು ತಡವಾದರೆ ಬಾಗಿಲಿಗೆ ಬೂಟುಗಾಲಿನಿಂದ ಒದೆತ ಬೇರೆ...

...ಕತ್ತಲಾಯಿತೆಂದು ಸುನಂದಾ ವಿದ್ಯುತ್ ಗುಂಡಿಯನ್ನು ಒತ್ತಲು ಹೋದಳು. ಆ ಬಿಲ್ಲೂ ಬಂದಿತ್ತು. ಇಪ್ಪತ್ತೊಂದನೆಯ ತಾರೀಕು ದೂರವಿರಲಿಲ್ಲ. ಅಷ್ಟರೊಳಗೆ ಅದರ ಸಂದಾಯವಾಗಬೇಕು.

...ಇನ್ನು ರಾತ್ರೆಯ ಅಡುಗೆ....ತನಗೆ ಹಸಿವೆಯೇ ಇಲ್ಲವೆನ್ನುವಂತಹ ಮನೋಸ್ಥಿತಿ. ಆದರೂ ತಾನು ಏನನ್ನಾದರೂ ಒಂದಿಷ್ಟು ಬೇಯಿಸಿಡಬೇಕು.

ಮಗು ರಂಪ ಮಾಡಿತು.

"ನನ್ನ ದುಃಖ ನಿನಗೂ ಅರ್ಥವಾಗುತ್ತೇನಮ್ಮಾ..."

—ಎಂದು ಮೆಲ್ಲನೆ ಆಡುತ್ತ ಸುನಂದಾ, ಐದು ತಿಂಗಳ ಕೂಸು ಸರಸ್ವತಿಯನ್ನು ಬಲವಾಗಿ ಎದೆಗೆ ಅವಚಿಕೊಂಡಳು. ಮಗು ಮತ್ತಷ್ಟು ಗಟ್ಟಿಯಾಗಿ ಅತ್ತಿತು.

## ೨

ಪುಟ್ಟಣ್ಣ ಒಳಗೆ ಬಂದವನೆ ಕೋಟು ಕಳಚಿದ. ಹಿಂದೆ ಸುನಂದ ನೆರವಾಗುತ್ತಿದ್ದಳು. ಈಗ ಆತನಿಗದು ಇಷ್ಟವಿರಲಿಲ್ಲ. ಕುರ್ಚಿಯ ಮೇಲೆ ಧೊಪ್ಪನೆ ಕುಳಿತು ಬೂಟು ಬಿಚ್ಚಿದ.

ಕೊಠಡಿಯ ಹೊರಗೆ ಆತನನ್ನು ನೆಟ್ಟ ದೃಷ್ಟಿಯಿಂದ ನೋಡುತ್ತ ನಿಂತಿದ್ದ ಸುನಂದಾ ಕೈ ಬಳೆಗಳನ್ನು ಅಲುಗಿಸಿ ಸದ್ದು ಮಾಡಿದಳು.

ಆದರೆ ಪುಟ್ಟಣ್ಣ ಅದರ ಕಡೆಗೆ ಲಕ್ಷ್ಯ ಕೊಡಲಿಲ್ಲ.

ಪುಟ್ಟಣ್ಣ ಬಟ್ಟೆ ಬದಲಿಸಿದ.

ಸುನಂದಾ ಮತ್ತೂ ಅಲ್ಲೇ ನಿಂತಿದ್ದಳು.

ಅದನ್ನು ಕಂಡು ಆತ ಕೇಳಿದ:

"ಯಾಕ್ನಿಂತಿದೀಯಾ ಅಲ್ಲೇ?"

"ಹೀಗೇ ನಿಂತೆ"

—ಎಂದು ಸುನಂದಾ ಉತ್ತರವಿತ್ತಳು. 'ನಿಲ್ಲುವ ಅಧಿಕಾರವೂ ನನಗಿಲ್ಲವೇನು?' ಎಂದು ಮನಸ್ಸಿನೊಳಗೇ ಮಾತು ರೂಪುಗೊಂಡಿತು. ಆದರೆ ಅದನ್ನಾಕೆ ಬಾಯಿ ತೆರೆದು ಆಡಲಿಲ್ಲ.

ಒಂದರೆಕ್ಷಣ ತನ್ನ ವರ್ತನೆ ಸರಿಯಾಗಿಲ್ಲವೇನೋ—ಎನ್ನಿಸಿತು ಪುಟ್ಟಣ್ಣನಿಗೆ. ಅದಕ್ಕೆ ಸಮಾಧಾನವೆಂದು ಆತ ಕೇಳಿದ:

"ಮಗು ನಿದ್ದೆ ಹೋಯ್ತೆ?"

"ಹೂಂ."

ಆ ಉತ್ತರವನ್ನು ಒತ್ತಿ ಹೇಳಿ ಹೃದಯದ ನೋವನ್ನೆಲ್ಲ ಒಳಕ್ಕೆ ತಳ್ಳಲು ಸುನಂದಾ ಯತ್ನಿಸಿದಳು.

ಸಂಜೆಯ ಕಾಫಿಯೂ ನಿಂತು ಹೋಗಿ ಎಷ್ಟೋ ಕಾಲವಾಗಿತ್ತು. ಆದರೂ ಯಾವುದೋ ಆಸೆಯಿಂದ ಸುನಂದಾ ಕೇಳಿದಳು:

"ಕಾಫಿಗೆ ನೀರಿಡಲಾ?"

"ಇದೇನು ಹೊಸದಾಗಿ ಕೇಳ್ತಿದೀಯಾ? ನನ್ನದಾಯ್ತು."

ಹಾಗೆ ಒರಟು ಸ್ವರದಲ್ಲಿ ಹೇಳುತ್ತ ಪುಟ್ಟಣ್ಣ ಕೈ ಗಡಿಯಾರ ಬಿಚ್ಚಿ, ಹೊತ್ತು ನೋಡಿ, ಕಿವಿಯ ಬಳಿಗೆ ಅದನ್ನೊಯ್ದು, ಮತ್ತೆ ಕೈಗೆ ಕಟ್ಟಿದ. ಕಟ್ಟುತ್ತ ಆತ ಕೇಳಿದ:

"ನೀನಿನ್ನೂ ಕುಡೀಲಿಲ್ಲ?"

ಸುನಂದಾ ಕುಡಿದಿರಲಿಲ್ಲ. ಕಾಫಿ ಮಾಡಿದ್ದರಲ್ಲವೆ ಕುಡಿಯುವುದು? ಆದರೂ ಬಿಮ್ಮನೆ ಬಿಗಿದಿದ್ದ ತುಟಿಗಳನ್ನು ಅರೆತೆರೆದು ಆಕೆ ಉತ್ತರವಿತ್ತಳು:

"ಕುಡಿದಾಯ್ತು."

"ಸರಿ ಮತ್ತೆ."

ಆತ ಚಪ್ಪಲಿ ಮೆಟ್ಟಿಕೊಂಡು ಬೀದಿಯತ್ತ ನೋಡಿದ.

"ಅಂಗಡಿ ಬೀದಿ ಕಡೆ ಹೋಗ್ತೀರೇನು?"

"ಯಾಕೆ? ಏನ್ಬೇಕಾಗಿತ್ತು ಈಗ?"

"ಮನೇಲಿ ತರಕಾರಿ ಏನೂ ಇಲ್ಲ."

ಪುಟ್ಟಣ್ಣ ಹುಬ್ಬು ಗಂಟಿಕ್ಕಿದ.

"ಎಷ್ಟು ಸಾರೆ ಹೇಳಿದೀನಿ ನಿಂಗೆ, ಮನೆ ಬಾಗಿಲಿಗೆ ಬಂದಾಗ್ಲೇ ಕೊಂಡುಕೋಂತ. ಯಾರೂ ಮಾರ್ಕೊಂಡು ಬರಲೇ ಇಲ್ಲ, ಅಲ್ಲ?"

ಕಟುವಾಗಿದ್ದ ಆ ಸ್ವರದಲ್ಲಿ ವ್ಯಂಗ್ಯ ಬೆರೆತಿತ್ತು. ಅದನ್ನು ಕೇಳಿ ಒಮ್ಮೆಲೆ ಅಳು ವಂತಾಯಿತು ಸುನಂದೆಗೆ. ಆದರೂ ಆಕೆ ಮನಸ್ಸನ್ನು ಕಠಿನ ಮಾಡಿಕೊಂಡು ಅಂದಳು:

"ಬಂದಿತ್ತು. ಆದರೆ ಕೊಂಡುಕೊಳ್ಳೋಕೆ ನನ್ನಲ್ಲಿ ದುಡ್ಡಿರಲಿಲ್ಲ."

ಪುಟ್ಟಣ್ಣ ಆ ಮಾತಿಗೆ ಮಾರುತ್ತರ ಕೊಡುವುದು ಒಂದು ನಿಮಿಷ ತಡವಾಯಿತು.

"ನಾನೀಗ ತರಕಾರಿ ಅಂಗಡೀಗೆ ಹೋಗ್ತಾ ಇಲ್ಲ. ಏನೂ ಇಲ್ದೆ ಹೋದರೆ ನಾಳೆ ಬರೀ ಬೇಳೆ ಸಾರು ಮಾಡು."

"ನಿಮ್ಮಿಷ್ಟ."

ಗಂಡ ಹೊರಡುತ್ತಿದ್ದಂತೆಯೆ ಸುನಂದಾ, ಅಗಸರವನು ಬಂದಿದ್ದ ವಿಷಯ ಹೇಳ ಬೇಕೇ ಬೇಡವೇ ಎಂದು ಅನಿರ್ಧಾರದ ಉಯ್ಯಾಲೆಯಲ್ಲಿ ಕ್ಷಣ ಕಾಲ ತೂಗಾಡಿದಳು. ಆದರೆ ಗಂಡ ಬಾಗಿಲೆಳೆದುಕೊಂಡ ಸದ್ದು ಆ ತೂಗಾಟಕ್ಕೆ ಭಂಗ ತಂದಿತು.

"ಬೆಳಗ್ಗೆ ಅಗಸರವನು ಬಂದಿದ್ದ."

ಪುಟ್ಟಣ್ಣ ತಡೆದು ನಿಂತು ಮನೆಯತ್ತ ತಿರುಗಿ ಉರಿಗಣ್ಣಿನಿಂದ ಹೆಂಡತಿಯನ್ನು ನೋಡಿದ:

"ಬೇರೆ ಯಾರೂ ಬರಲಿಲ್ವೇನು?"

"ಇಷ್ಟಕ್ಕೇ ಯಾಕೆ ಕೋಪಿಸ್ಕೋತೀರಾ? ಸುಮ್ನೆ ಹೇಳ್ದೆ. ನಾಳೆ ತಿರ್‍ಗಾ ಬರ್‍ತಾನೆ."

ಹೆಂಡತಿಯ ಆ ಮಾತು ಕೇಳಿಯೂ ಕೇಳಿಸದವನಂತೆ ಪುಟ್ಟಣ್ಣ ಹೊರಟೇ ಹೋದ.

ಸುನಂದಾ ಗಂಡ ಕುಳಿತಿದ್ದ ಕುರ್ಚಿಯ ಮೇಲೆಯೇ ತಲೆಬಾಗಿಸಿ ಕಣ್ಣು ಮುಚ್ಚಿ ಕುಳಿತಳು.

ಆಕೆಯ ಮೆದುಳು ಸಿಡಿಮಿಡಿಗುಟ್ಟಿತು. ಕಣ್ಣುಗಳು ಉರಿಯತೊಡಗಿದುವು. ಮೈ ಕಾವೇರಿತು.

ತನ್ನ ಗಂಡ ಹೋದುದೆಲ್ಲಿಗೆ? ಎಲ್ಲಿಗೆ? ಯಾಕೆ ಹೀಗಾಯಿತು? ಯಾಕೆ?

* * * *

ಮದುವೆಯಾದ ಹೊಸತಿನಲ್ಲೊಮ್ಮೆ ಪುಟ್ಟಣ್ಣ ಹೇಳಿದ್ದ:

"ನಾವು ದಿನಾ ಸಾಯಂಕಾಲ ವಾಕಿಂಗ್ ಹೋಗ್ಬೇಕು ಕಣೇ."

ಆ ಸ್ವರ ಮಧುರವಾಗಿತ್ತು. ಆಕೆಯೂ ಕತ್ತು ಕೊಂಕಿಸಿ ಅಂದಿದ್ದಳು:

"ಹೂಂ."

ಹಾಗೆ ಒಟ್ಟು ಹತ್ತು ಸಲ ಅವರು ಹೋಗಿದ್ದರೋ ಇಲ್ಲವೋ. ಅಷ್ಟರಲ್ಲೇ ಆ ಕಾರ್ಯಕ್ರಮ ನಿಂತು ಹೋಯಿತು. ಅತ್ತೆಯೇನೋ ಒಂದೆರಡು ಸಾರಿ ಒರಟಾಗಿ ಕೇಳಿದ್ದರು–'ಎಲ್ಲಿಗೆ ಹೋಗಿತ್ತು ಸವಾರಿ?' ಎಂದು. ಅದೇ ಕಾರಣವಾಯಿತೊ, ಅಥವಾ ಆಕೆಗೆ ತಿಳಿಯದ ಬೇರೆ ಕಾರಣಗಳಿದ್ದುವೊ–ಅಂತೂ ಸವಾರಿ ಹೊರಡುವುದು ನಿಂತು ಹೋಯಿತು.

ಸುನಂದೆಯ ಅತ್ತೆ, ತಮ್ಮ ಮಗನನ್ನು ಬಹಳ ಪ್ರೀತಿಸುತ್ತಿದ್ದರೆಂಬುದರಲ್ಲಿ ಸಂದೇಹವಿರಲಿಲ್ಲ. ಸುನಂದಾ ಪುಟ್ಟಣ್ಣನ ಪ್ರೀತಿಗೆ ಹಕ್ಕುದಾರಳಾಗಿ ಬಂದಳು. ಅತ್ತೆ ತನ್ನನ್ನು ಅಷ್ಟಾಗಿ ಪ್ರೀತಿಸದಿರಲು ಕಾರಣವೇನೆಂಬುದನ್ನು ವಿದ್ಯಾವತಿಯಾದ ಸುನಂದಾ ಊಹಿಸಿಕೊಂಡಿದ್ದಳು. ಮನಶ್ಶಾಸ್ತ್ರದ ಸೂತ್ರಗಳನ್ನು ಸ್ವಲ್ಪಮಟ್ಟಿಗೆ ತಿಳಿದಿದ್ದ ಆಕೆಗೆ ಅದು ಕಷ್ಟವಾಗಿರಲಿಲ್ಲ. ಆದರೂ, ಮೌನ ಸಮ್ಮತಿಯಿಂದ ಅತ್ತೆ ಸಾಧ್ಯಗೊಳಿಸಿದ್ದ ಸೀಮಿತ ಕ್ಷೇತ್ರದೊಳಗೆ ಗಂಡನ ಅನುರಾಗಕ್ಕೆ ಪಾತ್ರಳಾಗಲು ಸುನಂದಾ ಯತ್ನಿಸಿದಳು.

ಪುಟ್ಟಣ್ಣನ ಸ್ವಭಾವ ವಿಚಿತ್ರವಾಗಿತ್ತು. ಅಷ್ಟು ದೊಡ್ಡವನಾಗಿದ್ದರೂ ಆತ ಅಮ್ಮನ ಸೆರಗಿಗೇ ಅಂಟಿಕೊಳ್ಳುತ್ತಿದ್ದ. ಎಲ್ಲಾದರೂ ಎಡವಿ ಕಾಲಿಗೆ ಗಾಯವಾದರೆ

ಅಮ್ಮನಿಗೆ ವರದಿ ಮಾಡುತ್ತಿದ್ದ. ಏನಾದರೂ ತಿಂಡಿ ತಿನ್ನಬೇಕೆಂದು ಆಸೆಯಾದರೂ ಅಮ್ಮನಿಗೇ ಅರ್ಜಿ. ಷರಾಯಿ ಗುಂಡಿ ಹೋಗಿದ್ದರೂ ಅಮ್ಮನಿಗೇ ಶರಣು.

ಇದನ್ನೆಲ್ಲ ಕಂಡು ಸುನಂದಾಗೆ ಬೇಸರವಾಗುತ್ತಿತ್ತು. ಒಮ್ಮೆ ಗಂಡನನ್ನು ಕೆರಳಿಸಬೇಕೆಂದು ಒಂದು ಕಥೆ ಕಟ್ಟಿ ಆಕೆ ಹೀಗೆ ಹೇಳಿದ್ದಳು:

"ಇವತ್ತಿನ ದಿವಸ ಯಾರೋ ಬಂದು ಈ ಮನೇಲಿ ಎಷ್ಟು ಜನ ಇದಾರೇಂತ ಕೇಳಿದರೂಂದ್ರೆ."

"ಸೆನ್ಸಸ್‌ನವರೋ ಏನೋ"

"ಇದ್ದರೂ ಇರಬಹುದು."

"ಏನಂದಳು ಅಮ್ಮ?"

ಸುನಂದೆಗೆ ನಗುಬಂದಿತ್ತು. ಅಷ್ಟರಲ್ಲೇ ಬೇಸ್ತು ಬಿದ್ದಿದ್ದ ಆ ಗಂಡ!

"ಅತ್ತೆ ಬಚ್ಚಲು ಮನೇಲಿದ್ರು. ನಾನೇ ಉತ್ತರ ಕೊಟ್ಟೆ."

"ಏನೂಂತ?"

"ಮೂವರೂಂತ. ನಾನು, ನಮ್ಮತ್ತೆ ಮತ್ತು ಕೂಸು ಅಂತ."

"ಏನು? ಕೂಸೆ? ಯಾವ ಕೂಸು?"

"ಪುಟ್ಟಕೂಸು. ಇನ್ಯಾವುದು? ನೀವೇ!"

"ಏನಂದೆ?"

"ನಿಮ್ಮಮ್ಮನಿಗೆ ನೀವು ಕೂಸಲ್ಲವೇನೋ?"

"ಸುನಂದಾ!"

ಆ ಸ್ವರ ಕೇಳಿ ಒಮ್ಮೆಲೆ ಆಕೆ ಬೆಚ್ಚಿ ಬಿದ್ದಿದ್ದಳು.

ತಾನು ಆಡಿದ್ದು ಅತಿಯಾಯಿತೇನೋ ಎಂದು ಅವಳಿಗೆ ಭಯವಾಯಿತು. ಸ್ವರವಡಗಿ ಗಂಟಲೊಣಗಿ ಆಕೆ ಮೌನವಾದಳು.

ಆ ಪ್ರಕರಣದ ಬಳಿಕ ಒಂದು ದಿನವೆಲ್ಲ ಗಂಡ ಆಕೆಯೊಡನೆ ಮಾತು ಬಿಟ್ಟಿದ್ದ. ಕಣ್ಣೀರಿಟ್ಟು ಕ್ಷಮೆ ಕೇಳಬೇಕೆಂದು ಸುನಂದಾ ಯೋಚಿಸಿದಳು. ಆದರೆ ಅಷ್ಟರಲ್ಲೇ, ಆ ಘಟನೆ ನಡೆದುದರ ನೆನಪೂ ಇಲ್ಲವೆಂಬಂತೆ, ಆತನೇ ಮಾತನಾಡತೊಡಗಿದ....

....ಅದು ಅತ್ತೆ ಬದುಕಿದ್ದಾಗಿನ ಮಾತು.

ಅನಂತರ ಒಮ್ಮೆಲೆ ಪರಿಸ್ಥಿತಿ ಬದಲಾಯಿತು. ಬಹಳ ಕಾಲದ ಬಾಕಿಯನ್ನೆಲ್ಲ ಸಂದಾಯ ಮಾಡುವವನಂತೆ ಪುಟ್ಟಣ್ಣ ಸುನಂದೆಯನ್ನು ಪ್ರೀತಿಸಿದ. ಅವರು ವಾಯು ಸೇವನೆಗೆ ಹೋಗಲಿಲ್ಲ. ಆದರೆ ಸಿನಿಮಾ ಮಂದಿರಗಳಿಗೆ ಎಡೆಬಿಡದೆ ಭೇಟಿಕೊಟ್ಟರು. ಒಳ್ಳೆಯ ಸೀರೆಗಳು ಸಣ್ಣಪುಟ್ಟ ಆಭರಣಗಳು ಮನೆಗೆ ಬಂದುವು.

ಸುನಂದಾ ತಾಯಿಯಾಗುವ ಲಕ್ಷಣಗಳು ಕಾಣಿಸಿಕೊಂಡುವು.

ಅಷ್ಟರವರೆಗೂ ಹೊಸ ಹುರುಪಿನಿಂದ ವರ್ತಿಸುತ್ತಿದ್ದ ಪುಟ್ಟಣ್ಣ ಆಗ ಒಮ್ಮೆಲೆ ಅಧೀರನಾದುದನ್ನು ಸುನಂದಾ ಗಮನಿಸಿದಳು.

ಆಕೆ ಕೇಳಿದ್ದಳು:

"ನಿಮಗೆ ಸಂತೋಷ ಆಗಲ್ವಾ? ಯಾಕೆ ಸಪ್ಪಗಿದೀರ?"

"ಎಲ್ಲಿ ಸಪ್ಪಗಿದೀನಿ?"

ಅಳು ತುಂಬಿದ ಕಣ್ಣುಗಳಿಂದ ಕೈ ಹಿಡಿದವನನ್ನು ನೋಡುತ್ತ ಸುನಂದಾ ಅಂದಿದ್ದಳು:

"ಮಗು ಅಂದರೆ ಇಷ್ಟ ಇಲ್ವಾ ನಿಮಗೆ?"

"ಯಾರು ಇಷ್ಟವಿಲ್ಲ ಅಂದೋರು?"

ಉತ್ತರ ರೂಪವಾಗಿ ಬಂದ ಪ್ರಶ್ನೆಗಳ ಸ್ವರ ಗಡಸಾಗಿತ್ತು.

ಅದು ಆಕೆಯ ಮನಸ್ಸಿನ ಮೇಲೆ ಮೂಡಿ ಮಾಯದೇ ಉಳಿದ ಮೊದಲ ಗಾಯ.

ಆ ಬಳಿಕ ಅನಿವಾರ್ಯವಾಗಿ ಅವರಿಬ್ಬರ ನಡುವೆ ಬಂದು ನಿಂತ ನೈಸರ್ಗಿಕ ಸ್ಥಿತ್ಯಂತರ...

ಸುನಂದೆಯ ತಂದೆ ಬಂದು, ತಮ್ಮ ಸ್ವಂತದ ಕಷ್ಟಗಳೊಂದನ್ನೂ ಲೆಕ್ಕಿಸದೆ, ಮಗಳನ್ನು ಮೊದಲ ಬಾಣಂತಿತನಕ್ಕಾಗಿ ತಮ್ಮ ಊರಿಗೇ ಕರೆದೊಯ್ದರು. ಅಲ್ಲಿಯೇ ಹೆರಿಗೆಯಾಯಿತು.....

* * * *

ಅಡುಗೆ ಮನೆಯಲ್ಲಿ ಸದ್ದಾಯಿತೆಂದು ಸುನಂದಾ ಧಡಕ್ಕನೆದ್ದು 'ಬೆಕ್ಕು!' ಎಂದು ಕೂಗುತ್ತ ಒಳಕ್ಕೆ ಓಡಿದಳು.

ಕಳ್ಳಬೆಕ್ಕು ಅನ್ನದ ತಪ್ಪಲೆಯ ಮುಚ್ಚಳವನ್ನು ಕೆಳಕ್ಕೆ ತಳ್ಳಿತ್ತು. ಸುನಂದಾ ಬೆಕ್ಕನ್ನೋಡಿಸಿ, ಮತ್ತೆ ತಪ್ಪಲೆಯನ್ನು ಮುಚ್ಚಿಟ್ಟು, ಅಡುಗೆ ಮನೆಯ ಬಾಗಿಲೆಳೆದು ಕೊಂಡು ಒಳ ಹಜಾರಕ್ಕೆ ಬಂದಳು.

ಅಂಗೈಗಳನ್ನು ಮುಷ್ಟಿ ಬಿಗಿದು ತೊಟ್ಟಿಲಲ್ಲಿ ಮಗು ಮಲಗಿತ್ತು. ಅದರ ಮೇಲು ಹೊದಿಕೆಯ ಮೇಲೆ ಕೈಯಾಡಿಸಿ ಸುನಂದಾ ತೊಟ್ಟಿಲ ಮಗ್ಗುಲಲ್ಲೇ ತನ್ನ ಹಾಸಿಗೆ ಬಿಡಿಸಿ, ಅದರ ಮೇಲೆ ಅಡ್ಡಾದಳು.

'ನಿದ್ದೆ ಬಂದರೆ ಕಷ್ಟ' ಎಂದುಕೊಂಡಳು ಸುನಂದಾ. ಆದರೆ, ಹಾಗೆಲ್ಲ ನಿದ್ದೆ ಬರುವ ಪ್ರಮೇಯವೇ ಇರಲಿಲ್ಲ. ಯಾವ ಕಾಲಕ್ಕೂ ಮುಗಿಯಲಾರವೇನೋ ಎನ್ನುವಷ್ಟು ಯೋಚನೆಗಳು ಆಕೆಯ ಜತೆಗಿದ್ದುವು.....

* * * *

ಹಿಂದೆ ಹಾಗಿರಲಿಲ್ಲ. ದಿಂಬಿಗೆ ತಲೆ ಸೋಂಕಿದೊಡನೆಯೇ ಆಕೆಗೆ ನಿದ್ದೆ ಬರು ತ್ತಿತ್ತು. "ಎಂಥ ನಿದ್ದೆಯೇ ಇದು?" ಎಂದು ಗಂಡ ಹಲವೊಮ್ಮೆ ಆಕೆಯ ಮೈ ಕುಲುಕಿ ಎಚ್ಚರಿಸುತ್ತಿದ್ದ–ತನಗೆ ಬೇಕಾದುದನ್ನು ಪಡೆಯುವುದಕ್ಕೋಸ್ಕರ. ಅದು ಮುಗಿದ ಮೇಲೆ, ಮುಗುಳುನಗೆಯೊಡನೆ ಗಂಡನನ್ನು ತಬ್ಬಿಕೊಂಡೇ ಆಕೆ ಮತ್ತೆ ನಿದ್ದೆ

ಹೋಗುತ್ತಿದ್ದಳು.

ಆಗ ತನಗೆ ಆತ್ಮೀಯವೆನಿಸಿದ್ದ ಜೀವದ ಸುಖಸ್ಪರ್ಶ ಈಗ ಇಲ್ಲ. ಅಂತಹ ನಿದ್ದೆಯೂ ಇಲ್ಲವೀಗ.

ಯಾಕೆ ಹೀಗಾಯಿತು? ಏನಾಗಿ ಹೋಯಿತು?

ಒಂದು ಸಂದೇಹ ಸುನಂದೆಯನ್ನು ಬಹಳ ದಿನದಿಂದ ಬಾಧಿಸುತಲಿತ್ತು:

ತಾನು ಬಾಣಂತಿತನದ ಸಂಭ್ರಮದಲ್ಲಿದ್ದಾಗ, ತನ್ನ ಸಾಮೀಪ್ಯವಿಲ್ಲದೇ ಇದ್ದಾಗ, ಬೇರೆ ಯಾವಳಾದರೂ ಹೆಣ್ಣು–ಬೆಲೆವೆಣ್ಣು–ಆತನನ್ನು ಬಲೆಯಲ್ಲಿ ಕೆಡವಿರಬಹುದೆ?

ಇದ್ದರೂ ಇರಬಹುದು–ಎನ್ನುತ್ತಿತ್ತು ಮನಸ್ಸು.

ಗಂಡು ಜೀವಕ್ಕೆ ಚಪಲ ಜಾಸ್ತಿ–ಎನ್ನುವ ವಾಡಿಕೆಯ ಮಾತನ್ನು ಒಳಗಿನಿಂದಲೆ ಮನಸ್ಸು ಆಡುತ್ತಿತ್ತು.

ತಾನು ತವರಿಗೆ ಹೋದಾಗ ಪ್ರೀತಿಯ ಕಾಗದಗಳನ್ನು ಗಂಡ ಬರೆಯಬಹುದೆಂದು ಸುನಂದಾ ನಿರೀಕ್ಷಿಸಿದ್ದಳು. ಆ ನಿರೀಕ್ಷೆಯೂ ಸುಳ್ಳಾಯಿತು, ಇತರ ಎಲ್ಲಾ ನಿರೀಕ್ಷೆಗಳ ಹಾಗೆ. ಹೆರಿಗೆಯ ಸಮಯದಲ್ಲೆಲ್ಲ ಆತ ರಜಾ ಪಡೆದು ಬಂದು ತನ್ನ ಬಳಿಯಲ್ಲೆ ಇರಬಹುದೆಂದು ಸುನಂಧಾ ಆಸೆಕಟ್ಟಿಕೊಂಡಿದ್ದಳು. ಅದೂ ಈಡೇರದೆ ಹೋಯಿತು. ಗಂಡಸರಿಗೆಲ್ಲ ಗಂಡು ಮಗುವೇ ಇಷ್ಟ ಎಂದು ಆಗಲೇ ಮನವರಿಕೆಯಾಗಿದ್ದ ಸುನಂದಾ 'ಮಗು ಗಂಡಾಗಲಿ ದೇವರೇ' ಎಂದು ಹರಕೆ ಹೊತ್ತಳು. ದೇವರು ಆ ಹರಕೆಯ ಲಂಚಕ್ಕೆ ಮನಸೋಲಲಿಲ್ಲ. ಹೆಣ್ಣು ಹುಟ್ಟಿತು. ಆಕೆಯ ತಂದೆಯೇನೋ ಸುಖಪ್ರಸವದ ಶುಭವಾರ್ತೆ ತಿಳಿಸಿ ಅಳಿಯ ದೇವರಿಗೆ ಕಾಗದಬರೆದರು. ಆದರೆ ಸುನಂದಾ ಅಳುಕಿಯೇ ಇದ್ದಳು. ಗಂಡನ ಪಾಲಿಗೆ ಇದು ಶುಭವಾರ್ತೆಯಾಗುವುದುಂಟೆ? ಎಂಬ ಶಂಕೆ ಅವಳನ್ನು ಬಾಧಿಸುತ್ತಲೇ ಇತ್ತು. ಮಗುವನ್ನು ನೋಡುವ ಆತುರವಾದರೂ ಗಂಡನಿಗಿರಬಹುದೆಂದು ಆಕೆ ಭಾವಿಸಿದ್ದಳು. ಆದರೆ ಆತನಿಗೆ ಆ ಆತುರವೂ ಇರಲಿಲ್ಲ. "ರಜಾ ಇಲ್ಲ, ಬರುವುದಿಲ್ಲ"–ಎಂದು ಬರೆದ. ದಿನಗಳುರುಳಿ ಸುನಂದಾ ಎದ್ದು ಓಡಾಡತೊಡಗಿದಳು. "ಕರೆದುಕೊಂಡು ಹೋಗಿ" ಎಂದು ಆಕೆಯೇ ಸ್ವತಃ ಬರೆದಳು. ಉತ್ತರ ಬಂದುದು ಆಕೆಯ ತಂದೆಗೆ: "ನನಗೆ ಬಿಡುವಿಲ್ಲ. ನೀವೇ ಕರೆದುತಂದು ಬಿಟ್ಟು ಹೋಗುವಿರೆಂದು ನಂಬಿದ್ದೇನೆ." ಸುನಂದಾ, ಕಾಗದ ಬಂದ ಆ ಕ್ಷಣವೇ ಹೊರಟುನಿಂತಳು. ಮಾರನೆಯ ದಿನದ ಒಳ್ಳೆಯ ಘಳಿಗೆಯವರೆಗೆ ತಂದೆ, ಬಲು ಪ್ರಯಾಸಪಟ್ಟು ಮಗಳ ಪ್ರವಾಸವನ್ನು ತಡೆಹಿಡಿದರು.

ಮರುದಿನ ಒಳ್ಳೆಯ ಘಳಿಗೆಯಲ್ಲೇ ಆಕೆ ಗಂಡನ ಮನೆಗೆ ಮಗುವಿನೊಡನೆ ಹೊರಟು ಬಂದುದಾಯಿತು.

ಹಾಗೆ ಸುಮುಹೂರ್ತ ನೋಡಿ ಬಂದಿದ್ದರೂ ಪ್ರಯೋಜನವೇನೂ ಆಗಲಿಲ್ಲ.

ಮಗುವನ್ನು ಎತ್ತಿ ಆಡಿಸಲು ಮೊದಮೊದಲು ಗಂಡ ಉತ್ಸಾಹ ತೋರಿದ್ದ. ಆಗ, "ನಿಮ್ಮ ಕೈಲಾಗಲ್ಲ. ಸುಮ್ನುಸುಮ್ನೆ ಅಳಿಸ್ಬೇಡಿ ಮಗೂನ" ಎಂದಿದ್ದಳು ಸುನಂದಾ,

ತಮಾಷೆಗೆ. ಆದರೆ ನಿಜವಾಗಿಯೂ ಮಗು ಅತ್ತಾಗ ಅವಳಿಗೆ ರೇಗಿತ್ತು. "ಮಗೂನ ಎತ್ಕೊಳ್ಳೋಕೂ ತಿಳೀದು" ಎಂದಿದ್ದಳು. ಕ್ರಮೇಣ ಆತ ಮಗುವಿನ ಸಮಿಾಪಕ್ಕೆ ಬರುವುದನ್ನೇ ಕಡಮೆಮಾಡಿದ. "ಒಂದ್ನಿಮಿಷ ಮಗೂನ ಎತ್ಕೊಳ್ಳೀಂದ್ರೆ" ಎಂದು ಸುನಂದಾ ಕೇಳಿದರೆ, "ಬಟ್ಟೆ ಒದ್ದೆಯಾಗುತ್ತೆ, ಗಲೀಜಾಗುತ್ತೆ" ಎಂದು ಉತ್ತರ ಬರುತ್ತಿತ್ತು.

ಸಂಜೆಯ ಹೊತ್ತು ಮಗುವನ್ನು 'ಪ್ರಾಮ್'ನಲ್ಲಿ ಕುಳ್ಳಿರಿಸಿ ತಳ್ಳಿಕೊಂಡು ಹೋಗುವ ದಂಪತಿಯನ್ನು ಸುನಂದಾ ಕಂಡಿದ್ದಳು. ಒಂದು ದಿನ ತನ್ನ ಮಗುವನ್ನೂ ಹೀಗೆಯೇ ಪ್ರಾಮ್‌ನಲ್ಲಿಟ್ಟು ತಳ್ಳಬೇಕೆಂಬ ಆಸೆಯಾಗಿತ್ತು ಅವಳಿಗೆ...

ಸುನಂದಾ ಅಂದುಕೊಂಡಳು:

ಎಲ್ಲಾ ಆಸೆಗಳೇ, ಬರಿಯ ಆಸೆಗಳೇ.

ಮಗುವಿನ ನಾಮಕರಣದ ವಿಷಯದಲ್ಲೂ ಆಸಕ್ತಿ ತೋರಿರಲಿಲ್ಲ ಮಹಾನು ಭಾವ. ಕಾಗದ ಬರೆದು ಕೇಳಿದ್ದಕ್ಕೆ, "ಏನಾದರೊಂದು ಹೆಸರಿಟ್ಟು ಬಿಡಿ" ಎಂದು ಮಾವನಿಗೆ ಬರೆದಿದ್ದ.

"ಗಂಡು ಹುಟ್ಟಲಿಲ್ಲವೆಂದು ಅವನಿಗೆ ಬೇಸರವಾಗಿದೆ"

—ಎಂದಿದ್ದರು ಸುನಂದೆಯ ತಾಯಿ, ಅಳಿಯನ ಆ ಅಭಿಪ್ರಾಯ ತಿಳಿದಾಗ.

"ಸುಮ್ಮನಿರಮ್ಮ ನೀನು"

—ಎಂದು ಸುನಂದಾ, ದುಃಖವನ್ನು ತನ್ನೊಳಗೇ ಹತ್ತಿಕ್ಕಿ ಆಗ ಅಂದಿದ್ದಳು.

ವಿದ್ಯಾಪಕ್ಷಪಾತಿಯಾಗಿದ್ದ ಆಕೆಯ ತಂದೆ ಮೊಮ್ಮಗಳಿಗೆ 'ವಿದ್ಯಾ' ಎಂದು ಹೆಸರಿಡಲು ಬಯಸಿದರು. "ಅದೇನು ಹೆಸರೋ!" ಎಂದು ಸುನಂದೆಯ ತಾಯಿ ಆ ಹೆಸರನ್ನು 'ಸರಸ್ವತಿ'ಗೆ ಬದಲಾಯಿಸಿದರು.

ಸರಸ್ವತಿ ಮುದ್ದು ಮಗು. ಸಂದೇಹವಿಲ್ಲ. ಸುನಂದೆಗೆ ಚೆನ್ನಾಗಿ ಗೊತ್ತಿತ್ತು. 'ಹೆತ್ತವಳಿಗೆ ಹೆಗ್ಗಣ ಮುದ್ದು' ಎಂಬ ಕಾರಣದಿಂದಲ್ಲ. ನಿಜವಾಗಿಯೂ ಮಗು ಮುದ್ದಾಗಿದೆ, ದೊಡ್ಡವಳಾದಾಗ ಸರಸ್ವತಿ ಸುಂದರಿಯಾಗುತ್ತಾಳೆ–ಎಂದು ಮಗುವನ್ನು ನೋಡಿದ ಯಾರಾದರೂ ಹೇಳುವ ಹಾಗಿತ್ತು.

ಆದರೆ ಅವರ ದೃಷ್ಟಿಯಲ್ಲಿ ಆ ಮಗುವಿಗೇನು ಬೆಲೆಯೊ?

ಒಮ್ಮೊಮ್ಮೆ, ಮಗುವನ್ನು ತಾನು ಅತಿಯಾಗಿ ಪ್ರೀತಿಸಿ, ಅವರನ್ನು ಉದಾಸೀನ ನೋಟದಿಂದ ಕಂಡು, ಈ ವಿರಸಕ್ಕೆ ಕಾರಣಳಾದೆನೆ–ಎಂದು ಸುನಂದೆಗೆ ಅನಿಸುತಿತ್ತು. ಗಂಡನ ಮನಸ್ಸನ್ನು ತಿಳಿಯಲು ಆಕೆ ಯತ್ನಿಸುತ್ತಿದ್ದಳು. ತಾಯಿ ಇದ್ದಾಗ ಆತ ಆ ಪ್ರೀತಿಯನ್ನೇ ನೆಚ್ಚಿಕೊಂಡಿದ್ದ. ಆ ಬಳಿಕ ತನ್ನ ಪ್ರೀತಿ ಯಥೇಚ್ಛವಾಗಿ ದೊರೆ ಯಿತು. ಈಗ ತಾನು ತಾಯಿಯಾದಮೇಲೆ, ತನಗೊಬ್ಬನಿಗೇ ದೊರೆಯಬೇಕಾದ ಪ್ರೀತಿಯ ಅಭಾವದ ಫಲವಾಗಿ ಆತ ಬದಲಾಗಿರಬಹುದೆ?... ತರ್ಕ ಸ್ವಾರಸ್ಯಕರ ವಾಗಿತ್ತು, ಆಕರ್ಷಣೀಯವಾಗಿತ್ತು–ಒಪ್ಪಿ ಬಿಡೋಣವೆ? ಎನ್ನಿಸುವಷ್ಟು. ಆದರೆ

ಮರುಕ್ಷಣ ಆಕೆಗೆ, 'ಇವರೇನು ಮಗು ಕೆಟ್ಟುಹೋದರೆ? ಎಂಥ ಗಂಡಸುತನ! ಇಸ್ಸಿ!' ಎನಿಸುತಿತ್ತು.

ಇನ್ನೊಬ್ಬ ಹೆಣ್ಣಿನ ಬಾಹುಗಳು ಅವರ ಕೊರಳನ್ನು ಸುತ್ತುವರಿದಿರಬಹುದೆಂಬ ಶಂಕೆ. ಅದು ದುಸ್ಸಹವಾದುದು. ಹಾಗಿದ್ದರೆ, ತನ್ನ ದಾಂಪತ್ಯಸುಖ ಮಣ್ಣುಗೂಡಿದಂತೆಯೇ. ಹಾಗಾಗುವ ವಿಷಯ ಎಷ್ಟೋ ಕಾದಂಬರಿಗಳಲ್ಲಿ ಸುನಂದಾ ಓದಿದ್ದಳು; ಸಿನಿಮಾಗಳಲ್ಲೂ ಕಂಡಿದ್ದಳು. ಅಂತಹ ಘೋರ ಆಪತ್ತು ತನಗೇ ಸಂಭವಿಸುವುದೆಂದರೆ? 'ಹಾಗಾಗಬಾರದು' ಎನ್ನುವ ಆಕೆಯ ಅಂತರ್ಯದ ಆಸೆ, 'ಹಾಗಿರಲಾರದು' ಎನ್ನುವ ಭರವಸೆಯನ್ನು ಬಹಿರಂಗವಾಗಿ ಆಕೆಗೆ ಪದೇ ಪದೇ ಕೊಡುತ್ತಿತ್ತು.

* * * *

ಹಾಸಿಗೆಯ ಮೇಲುರುಳಿಕೊಂಡು ಸುನಂದಾ ತಾರಸಿಯನ್ನೆ ದಿಟ್ಟಿಸಿದಳು. ವಿದ್ಯುದ್ದೀಪದ ಮಂದಪ್ರಕಾಶದಲ್ಲಿ ಬಿಳಿಯ ತಾರಸಿ ಛಾವಣಿ ಹಳದಿಯಾಗಿ ತೋರುತ್ತಿತ್ತು. ತಾರಸಿಯಿಂದ ಇಳಿದು ಬಂದಿದ್ದ ದೊಡ್ಡ ಕೊಕ್ಕೆ ಮೊಳೆಗಳು ಎರಡು. ಅವುಗಳಿಗೆ ತೊಟ್ಟಿಲನ್ನು ಕಟ್ಟಿದ್ದರು.

ಸುನಂದಾ ಅಂದುಕೊಂಡಳು:

'ಎಷ್ಟೊಂದು ಮುಂದಾಲೋಚನೆ ಮನೆ ಕಟ್ಟಿಸುವವರಿಗೆ! ಮನೆಯಲ್ಲಿ ವಾಸ ಮಾಡುವವರಿಗೆ ಮಕ್ಕಳಾಗಿಯೇ ಆಗುತ್ತವೆಂಬ ನಂಬಿಕೆ ಅವರದು. ಅದಕ್ಕಾಗಿ ಮುಂದಾಗಿಯೇ ತೊಟ್ಟಿಲು ತೂಗಲು ಏರ್ಪಾಟು!'

ಅಲ್ಲದೆ, ಮನೆ ತುಂಬಾ ಮಕ್ಕಳಾಗಲಿ-ಎಂಬ ಮಾತು ಸುಮ್ಮನೆ ಬಂತೆ?

ಮನೆ ತುಂಬಾ ಮಕ್ಕಳು!

ಸದ್ಯಃ ತನ್ನ ಪಾಲಿಗೆ ಹಾಗೆ ಆಗದಿದ್ದರೆ ಸಾಕು. ಒಂದನ್ನು ಪಡೆದು ಅನುಭವಿಸುತ್ತಿರುವ ಸುಖವೇ ಸಾಲದೆ?

ಗಂಡ ಹೆಂಡತಿ ಅನ್ಯೋನ್ಯವಾಗಿ ಬಾಳ್ವೆ ನಡೆಸುವ, ಮಕ್ಕಳನ್ನು ಬೆಳೆಸಿ ದೊಡ್ಡವರಾಗಿ ಮಾಡುವ, ವೃದ್ಧಾಪ್ಯದಲ್ಲಿ ಪ್ರೀತಿಯ ಮಕ್ಕಳ ಸಂಪಾದನೆಯ ಮೇಲೆಯೇ ಜೀವನ ಸಾಗಿಸುವ ಕಲ್ಪನೆಯೆಲ್ಲ ಎಷ್ಟು ಸುಂದರ!

ತಮ್ಮ ಮಟ್ಟಿಗೂ ಅಂತಹ ಸಂಸಾರಸುಖ ಲಭ್ಯವಾಗುವ ಸಾಧ್ಯತೆ....

ಎಷ್ಟು ಸಾರೆ ಹಾಗೆ ಯೋಚಿಸಿ ಏನು ಫಲ?...

ಯಾಕಾದರೂ ಪೀಡಿಸುತ್ತವೊ ಈ ಹಾಳು ಯೋಚನೆಗಳು?

ನಿದ್ದೆಯಾದರೂ ಬಂದಿದ್ದರೆ–

ಬಲು ಹಿಂದೆ ಚಿಕ್ಕವಳಾಗಿದ್ದಾಗ, ತಂಗಿಯೂ ಆಕೆಯೂ ಒಂದೇ ಹಾಸಿಗೆಯ ಮೇಲೆ ಮಲಗಿದ್ದಾಗ, ಬಹಳ ಹೊತ್ತು ಅವರು ಮಾತಾಡುತ್ತಲೇ ಇದ್ದರೆ, ಅವರ ತಂದೆ ಅನ್ನುತ್ತಿದ್ದರು:

"ಮಲಕೊಳ್ರೀ ಇನ್ನು."

ತಾಯಿಯೂ ಹೇಳುತ್ತಿದ್ದರು:

"ಮಲಕೋಬಾರದಾ?"

ಆಗ ತಂಗಿ ರಾಗವೆಳೆಯುತ್ತಿದ್ದಳು:

"ನಿದ್ದೆ ಬರಲ್ಲಾ....ಊ...."

ತಂದೆ ಸಲಹೆ ಕೊಡುತಿದ್ದರು:

"ಒಂದು ಎರಡು ಮೂರು ಎಣಿಸಿ. ನಿದ್ದೆ ಬರುತ್ತೆ..."

ಒಂದು, ಎರಡು, ಮೂರು...ಹಾಗೆ ನಿದ್ದೆ ಬರುವವರೆಗೂ.

ಒಂದು, ಎರಡು, ಮೂರು....

೩

"ಸುನಂದಾ! ಏ ಸುನಂದಾ!"

ಒಂದು ನಿಮಿಷದಿಂದ ಬಾಗಿಲು ತಟ್ಟುತ್ತಲೇ ಇದ್ದ ಪುಟ್ಟಣ್ಣನಿಗೆ ರೇಗಿ ಹೋಯಿತು. 'ಮಲಕೊಂಡು ಬಿಟ್ಟಳೂಂತ ಕಾಣುತ್ತೆ' ಎಂದು ಮೆಲ್ಲಗೆ ಗೊಣಗಿ, ಮತ್ತೊಮ್ಮೆ ಗಟ್ಟಿಯಾಗಿ ಬಾಗಿಲು ಬಡೆದು ಆತ ಕೂಗಿದ:

"ಸುನಂದಾ! ಏ ಸುನಂದಾ!"

ಪಕ್ಕದ ಮನೆಯ ಕಿಟಕಿ ತೆರೆದ ಸದ್ದಾಯಿತು. ಅತ್ತ ನೋಡಿದ, ಪುಟ್ಟಣ್ಣನ ದೃಷ್ಟಿಗೆ ಮೊದಲು ರಾಧಮ್ಮ ಬಿದ್ದರು—ಬಳಿಕ ಆಕೆಯ ಗಂಡ ರಾಮಯ್ಯ.

ತಡವಾಗಿ ಮನೆಗೆ ಬಂದು ಬಾಗಿಲು ತಟ್ಟುವುದರಲ್ಲಿ ತಪ್ಪಿರಲಿಲ್ಲ. ಆದರೆ ಪುಟ್ಟಣ್ಣ ಮಾತ್ರ ಅವಮಾನಿತನಂತೆ ಕಸಿವಿಸಿಗೊಂಡ. ಆತ ಕುಡಿದು ಬಂದಿರಲಿಲ್ಲ; ಸೂಳೆಯ ಮನೆಯಿಂದಲೂ ಬಂದಿರಲಿಲ್ಲ. ಆದರೂ 'ಈ ಹಾಳು ಸುನಂದಾ ಬಾಗಿಲು ತೆರೆಯದೆ ನೆರೆಮನೆಯವರೆಲ್ಲ ನೋಡಿ ನಗುವಂತಾಯಿತು' ಎಂದು ಪುಟ್ಟಣ್ಣ ಸಿಟ್ಟಾದ. ಆ ಸಿಟ್ಟಿನಲ್ಲಿ ಮತ್ತೂ ಗಟ್ಟಿಯಾಗಿ ಬಾಗಿಲು ಬಡೆದ.

ಒಂದು, ಎರಡು, ಮೂರು ಎಂದು ಅದೆಷ್ಟೋ ಸಾರೆ, ಅದೆಷ್ಟೋ ಹೊತ್ತು, ಸಂಖ್ಯೆ ಎಣಿಸಿ ನಿದ್ದೆ ಹೋಗಿದ್ದ ಸುನಂದಾ ಒಮ್ಮೆಲೆ ಗಡಬಡಿಸಿ ಎದ್ದಳು. ಕರೆದವರು ಯಾರು? ಪರಿಸ್ಥಿತಿ ಏನು?—ಎಂಬುದನ್ನು ಊಹಿಸಿಕೊಳ್ಳಲು ಆಕೆಗೆ ಒಂದು ಕ್ಷಣ ಹಿಡಿಯಿತು.

ನಿದ್ದೆಯಿಂದ ಎಚ್ಚತ್ತವಳಿಗೆ ಎಷ್ಟು ಹೊತ್ತಾಯಿತೋ ಗೊತ್ತಾಗಲಿಲ್ಲ. ಆಕೆ ಕದ ತೆರೆದು ಗಂಡನನ್ನು ಇದಿರ್ಗೊಂಡಳು.

ಹಿಂದೆಯಾಗಿದ್ದರೆ ಆಕೆ ಗಂಡನನ್ನು ಕೇಳುತ್ತಿದ್ದಳು–ಹೊತ್ತೆಷ್ಟಾಯಿತು? ಎಂದು. ಈಗ ಅಂತಹ ಅಭ್ಯಾಸವಿರಲಿಲ್ಲ. ಆದರೆ ಬಾಗಿಲು ತೆರೆದಾಗ, ಆ ಬೀದಿಯಲ್ಲಿ ಬರುವ ನಗರದ ಬಸ್ಸೊಂದು ಅತ್ತ ಹೋಯಿತು. 'ಇನ್ನೂ ಬಸ್ಸಿದೆ; ಒಂಭತ್ತೂವರೆ ಆಗಿಲ್ಲ ಹಾಗಾದರೆ'–ಎಂದುಕೊಂಡಳು ಸುನಂದಾ.

'ಯಾಕಿಷ್ಟು ತಡ?' ಎಂದು ಗಂಡನನ್ನು ಕೇಳಬೇಕೆನ್ನಿಸಿತು ಅವಳಿಗೆ. ಆದರೆ ನಾಲಗೆ ಹೊರಳಲಿಲ್ಲ.

'ಯಾಕೆ ಹೀಗೆ ಗೋಳಾಡಿಸ್ತೀರಾ?' ಎಂದು ಅತ್ತು ಕೂಗಾಡಬೇಕೆನ್ನಿಸಿತು. ಆದರೆ ಮಾತು ಹೊರಡಲಿಲ್ಲ.

ಪುಟ್ಟಣ್ಣ ಕೊಠಡಿಗೆ ಹೋಗಿ ಕೈಗಡಿಯಾರವನ್ನು ಬಿಚ್ಚಿಟ್ಟ. ಅದನ್ನು ಸಮೀಪಿಸಿ ಘಂಟೆ ನೋಡಬೇಕೆಂದೇನೂ ಸುನಂದೆಗೆ ತೋಚಲಿಲ್ಲ.

ಆಕೆ ನೇರವಾಗಿ ಅಡುಗೆ ಮನೆಗೆ ಹೋಗಿ ತಟ್ಟೆ ಇಟ್ಟು ಬಡಿಸಲು ಅಣಿಮಾಡಿದಳು. ಪುಟ್ಟಣ್ಣ ಕೈಕಾಲು ತೊಳೆದು ಬಂದು ಕುಳಿತ.

ವಿದ್ಯುದ್ದೀಪದ ಬೆಳಕಿನಲ್ಲಿ ಆತನ ಮುಖವನ್ನು ಸುನಂದಾ ನೋಡಿದಳು. ಅದು ಕಂದಿತ್ತು. ಕಳೆಗುಂದಿ ಕಪ್ಪಿಟ್ಟಿತ್ತು. 'ಯಾಕಿದೀರಾ ಹೀಗೆ?' ಎಂದು ಕೇಳಬೇಕೆಂದು ಆಕೆಗೆ ತೋರಿತು. ಆದರೆ ಧೈರ್ಯವಾಗಲಿಲ್ಲ.

ಅನ್ನವಿಡಲೆಂದು ಕೈಗೆತ್ತಿಕೊಂಡಾಗ ಸುನಂದೆಯ ಮನಸ್ಸು ರೋದಿಸಿತು— 'ಅಯ್ಯೋ! ಎಷ್ಟೊಂದು ತಣ್ಣಗಿದೆ!' ಆ ಮೂಕ ವ್ಯಥೆಯೇ ಬಾಯ್ದೆರದು ಆಡಿತು: "ಊಟ ಮಾಡ್ಕೊಂಡೇ ಹೋಗೋಕೆ ಆಗ್ತಿರ್ಲಿಲ್ವೆ?"

ಪುಟ್ಟಣ್ಣ ತುತ್ತು ಅನ್ನದೊಡನೆ ಆ ಮಾತನ್ನೂ ನುಂಗಿದ. ಉತ್ತರವಾಗಿ ಹೇಳಬಯಸಿದ್ದು ಯಾವುದೋ, ಗಂಟಲಲ್ಲೆ ಸಿಲುಕಿಕೊಂಡು ಗರ್ ಎಂದಿತು.

ಗಂಡನಿಗೆ ಹಸಿವೆಯಾಗಿರಬಹುದೆಂದುಕೊಂಡು ಸುನಂದಾ ಮತ್ತೂ ಬಡಿಸ ಹೋದಳು. ಆತ ಕೈ ಅಡ್ಡಹಿಡಿದ:

"ಸಾಕು ನನಗೆ."

"ಇದೇನು ಇಷ್ಟೊಂದು ಕಡಮೆ ಊಟ ಮಾಡ್ತಿದೀರಲ್ಲಾ?"

"ನನಗೆ ಹಸಿವಿಲ್ಲ."

"ಯಾಕೆ? ತಿರ್‍ಗಾ ಹೋಟ್ಲಿಗೆ ಹೋದಿರಾ?"

"ಹಸಿವಿಲ್ಲ ಅಂದೆ!"

"ತಿಳೀತು. ಆದರೆ, ಯಾಕೆ ಹಸಿವಿಲ್ಲಾಂತ ಕೇಳಬಾರ್‍ದೆ?"

"ಸುನಂದಾ! ನಿಲ್ಸು ಮಾತು!"

ಸುನಂದಾ ಮಾತು ನಿಲ್ಲಿಸಿದಳು. ಆದರೆ, ಸೌಟನ್ನು ಗಟ್ಟಿಯಾಗಿ ತಪ್ಪಲೆಗೆ ಇಳಿಬಿಟ್ಟಳು. ಆಗ ಟೊಂಕ್ ಎಂದು ಸದ್ದಾಯಿತು. ಪುಟ್ಟಣ್ಣ ಎದ್ದುಬಿಟ್ಟ.

ಆತ ಕೈತೊಳೆದು ಕೊಠಡಿಗೆ ಹೋದೊಡನೆಯೇ ಸುನಂದೆಯ ಕಣ್ಣುಗಳಿಂದ

ಕಂಬನಿ ತಟಕ್ಕನೆ ಚಿಮ್ಮಿತು. ಆದರೆ ತಾನು ದುಃಖಿಸುತ್ತಿದ್ದುದು ಪುಟ್ಟಣ್ಣನಿಗೆ ತಿಳಿಯು ಬಾರದೆಂದು ಸುನಂದಾ, ಸೆರಗಿನಿಂದ ಕಣ್ಣೊರೆಸಿಕೊಂಡಳು. ರೋದಿಸಲೆಂದು ಅರೆ ಬಿರಿದಿದ್ದ ತುಟಿಗಳನ್ನು ಬಲವಾಗಿ ಬಿಗಿ ಹಿಡಿದಳು. ಹೃದಯದ ಆ ಸಂಕಟದ ನಡುವೆ ಏನೂ ಬೇಡವೆಂದಿತು ಹೊಟ್ಟೆ. ತನ್ನ ತಟ್ಟೆಗಿಷ್ಟು ಬಡಿಸಿಕೊಂಡು ಒಂದು ತುತ್ತನ್ನಷ್ಟೆ ತಿಂದು ಆಕೆಯೂ ಎದ್ದುಬಿಟ್ಟಳು...

ಸುನಂದಾ ಗರ್ಭಿಣಿ ಎಂದು ಗೊತ್ತಾದುದಕ್ಕೆ ಮುಂಚೆ ಹಲವು ಸಾರೆ ಪುಟ್ಟಣ್ಣ, ತನ್ನ ಊಟವಾದೊಡನೆಯೇ ಆಕೆಗೆ ಬಡಿಸಲು ಮುಂದಾಗುತ್ತಿದ್ದ. ಅದು ಅತ್ತೆಯ ಕಾಲದಲ್ಲಿ ಸಾಧ್ಯವಾಗದೇ ಇದ್ದ ಸರಸ. ಹಾಗೆ ಊಟವಾದ ಮೇಲೆ ದಂಪತಿ ಪರಸ್ಪರರಿಗೆ ಸುವಾಸನೆಯ ಅಡಿಕೆಪುಡಿ ಕೊಡುತ್ತಿದ್ದರು. ಬೇರೆಯೂ ಇನ್ನೇನೋ....ಈಗ ಅಂತಹದೊಂದೂ ಇರಲಿಲ್ಲ. ಬಹಳ ದಿನ ಗಂಡನ ಊಟವಾದ ಮೇಲೆ ಆತನಿಗೆ ಅಡಿಕೆಪುಡಿ ಸಲ್ಲಿಸಲು ಸುನಂದಾ ಯತ್ನಿಸಿದಳು. ಆದರೆ ಪುಟ್ಟಣ್ಣ ಅದಕ್ಕೆಲ್ಲ ತಡೆ ಹಾಕಿದ್ದ. "ಹೋಗು, ಊಟಮಾಡು. ಅಡಿಕೆ ಬೇಕಾದರೆ ನಾನೇ ತಗೋತೀನಿ," ಎಂದಿದ್ದ. ಸುನಂದಾ ಸುಮ್ಮನಾಗಿದ್ದಳು. ಮತ್ತೆ ಕೆಲವು ದಿನಗಳ ಮೇಲೆ ಅಡಿಕೆ ಕೊಡಲು ಯತ್ನಿಸಿದಾಗ ಆತ ಗದರಿಸಿದ್ದ: "ಒಮ್ಮೆ ಹೇಳ್ಲಿಲ್ವೆ ನಿನಗೆ? ಇನ್ನೊಮ್ಮೆ ವೈಯಾರ ಮಾಡ್ತಾ ಬಂದರೆ, ಹುಷಾರ್!"

ಅಬ್ಬ! ಎಂತಹ ಮಾತು! ಗಂಡನ ಮುಂದೆ ಹೆಂಡತಿಯ ವೈಯಾರ...

ಸುನಂದಾ ರೇಗಿ ಅಂದಿದ್ದಳು:

"ಯಾಕೆ ಹೀಗೆಲ್ಲಾ ಆಡ್ತೀರಾ? ನಿಮಗೆ ತಲೆ ಕೆಟ್ಟಿದೆಯೇನು?"

ಅವನು ಕಿವಿಯೊಡೆಯುವ ಹಾಗೆ ಕೂಗಾಡಿದ್ದ:

"ಹೌದು, ತಲೆ ಕೆಟ್ಟಿದೆ ನನಗೆ!"

...ತಲೆ ಕೆಟ್ಟಿರಲಿಲ್ಲ, ಆದರೂ ಅದೇನೋ ಆಗಿತ್ತು. ಮಗು ಬಸಿರಿನಲ್ಲಿದ್ದಾಗಲೇ ಆತನಿಗೇನೋ ಆಗಿತ್ತು. ತಾನು ತವರುಮನೆಯಲ್ಲಿದ್ದಾಗ ತನ್ನ ಗಂಡನ ಆ 'ಕಾಹಿಲೆ' ಬಲವಾಯಿತು. ತಾಯಿಯಾಗಿ ತಾನು ಮರಳಿದ್ದಳು. ಆದರೆ ಆತ ಹಿಂದಿನ ಗಂಡನಾಗಿಯೇ ತನಗೆ ದೊರೆಯಲಿಲ್ಲ...

...ಅಡುಗೆಮನೆಯ ಬಾಗಿಲೆಳೆದುಕೊಂಡು ಸುನಂದಾ ತೊಟ್ಟಿಲ ಬಳಿ ಬಂದು ನಿಂತಳು. ಏನನ್ನೋ ಮರೆತಹಾಗೆ ತೋರಿತು. ಗಂಡನಿಗೆ ಕುಡಿಯಲೆಂದು ಒಂದು ಲೋಟ ನೀರು ಒಯ್ದು ಕೊಟ್ಟಿರಲಿಲ್ಲ. ಮತ್ತೆ ಅಡುಗೆ ಮನೆಗೆ ಹೋಗಿ ಆಕೆ ನೀರು ತಂದಳು...ಹಿಂದೆ ಆ ರೀತಿ ಒಂದು ಲೋಟ ಹಾಲನ್ನು ಒಯ್ದು ಕೊಡುವುದು ಪದ್ಧತಿಯಾಗಿತ್ತು. ಈಗ ಹಾಲಿನ ಬದಲು ನೀರು ತುಂಬಿದ ಲೋಟ...

ಪುಟ್ಟಣ್ಣ ದೀಪ ಆರಿಸಿ ಕತ್ತಲೆಯಲ್ಲೇ ಹಾಸಿಗೆಯ ಮೇಲೆ ಉರುಳಿಕೊಂಡಿದ್ದ. ಆತ ನಿದ್ದೆ ಹೋಗಿರಲಿಲ್ಲವೆಂಬುದನ್ನು ಆ ದೇಹದ ನಿಶ್ಚಲತೆಯೇ ಸಾರುತಿತ್ತು. ಸುನಂದಾ ಮೆಲ್ಲನೆ ನಡೆದುಬಂದು ತಲೆಯ ಮೇಲುಭಾಗದಲ್ಲಿ ಗೋಡೆಯ ಬಳಿ ಲೋಟ

ವನ್ನಿಟ್ಟಳು. ಗಂಡ ಏನನ್ನಾದರೂ ಹೇಳಬಹುದೆಂಬ ಆಸೆಯಿಂದ ತಾನೂ ಒಂದು ನಿಮಿಷ ನಿಶ್ಚಲಳಾಗಿ ನಿಂತಳು. ಸುನಂದಾ ಅಲ್ಲಿ ನಿಂತುದರ ಅರಿವಾದರೂ, ಪುಟ್ಟಣ್ಣ ಮಿಸುಕಲಿಲ್ಲ.

"ನೀರು ತಂದಿಟ್ಟಿದೀನಿ"

—ಎಂದು ಆಕೆ, ತಾನು ಜೀವಂತಳಾಗಿರುವುದನ್ನು ಆತನ ಗಮನಕ್ಕೆ ತಂದಳು.

"ಹುಂ."

ಒಂದೇ ಸ್ವರ, ಒಂದೇ ಪದ.

ಯಾಕೆ ಆ ತಾತ್ಸಾರಭಾವ? ಆತನ ಕೈಹಿಡಿದವಳಲ್ಲವೆ ತಾನು? ತಾನೇನು ಊಳಿಗದ ಆಳೆ? ಕಟುವಾಗಿ ಏನನ್ನಾದರೂ ಅಂದು ಆತನನ್ನು ಕೆಣಕಬೇಕೆಂಬ ಆಸೆಯ ಕಿಡಿ ಸುನಂದೆಯ ಹೃದಯವನ್ನು ದಹಿಸಿತು. ಆದರೆ ಧೈರ್ಯವಾಗಲಿಲ್ಲ. ಕುತ್ತಿಗೆಯ ನರಗಳು ಬಿಗಿದು ಬಂದು ಉಸಿರು ಕಟ್ಟಿದ ಹಾಗಾಯಿತು. ಸುನಂದಾ ಆ ಯೋಚನೆಯನ್ನು ಬಿಟ್ಟುಕೊಟ್ಟಳು. ಹಾಸಿಗೆಯ ಬಳಿ ಸಾರಿ, ಆತನ ಪಾದಗಳತ್ತ ಬಾಗಿ, ಹೊದಿಕೆಯನ್ನು ಕೈಯಿಂದ ಮುಟ್ಟಿ ಸುನಂದಾ ಕೇಳಿದಳು:

"ಹೊದಿಸಿ ಹೋಗ್ಲೆ?"

ಮತ್ತೊಮ್ಮೆ ಒಂದೇ ಪದದ ಉತ್ತರ:

"ಬೇಡ!"

ಕೊಠಡಿಯಿಂದ ಹೊರಹೋಗುತ್ತ ಸುನಂದಾ ಕ್ಷೀಣ ಸ್ವರದಲ್ಲಿ ಕೇಳಿದಳು:

"ಮಲಕೊಳ್ಲಾ ನಾನು?"

"ಹೂಂ."

...ಆಕೆ ಒಳಹಜಾರದಲ್ಲಿ 'ಬೆಡ್ ಲ್ಯಾಂಪ್' ಹತ್ತಿಸಿ ಚಿಕ್ಕದಾಗಿ ಉರಿಸಿಟ್ಟಳು. ನಿದ್ದೆ ಹೋಗಿದ್ದ ಮಗುವಿನತ್ತ ಒಮ್ಮೆ ನೋಡಿ ದೀಪವಾರಿಸಿ ಹಾಸಿಗೆಯ ಮೇಲೆ ಗೋಡೆಗೊರಗಿ ಕುಳಿತುಕೊಂಡಳು.

* * * *

ಒಂದು ದಿನ ಮುಕ್ತಾಯವಾಗಿತ್ತು.

ವೈವಾಹಿಕ ಜೀವನಕ್ಕೆ ಸಂಬಂಧಿಸಿ ಸುನಂದಾ ಹಿಂದೆಯೇ ಎಷ್ಟೋ ಕನಸು ಕಂಡಿದ್ದಳು; ಎಷ್ಟನ್ನೋ ಊಹಿಸಿಕೊಂಡಿದ್ದಳು. ನವಿರುನವಿರಾದ ಕುಸುಮ ಕೋಮಲ ಸುಖ. ಅದು ಆಕೆಗೆ ದೊರೆತಿತ್ತೋ ಇಲ್ಲವೋ. ಆದರೂ 'ನಾನು ಸುಖಿ' ಎಂದು ಆಕೆ ಭಾವಿಸಿದ್ದ ದಿನಗಳಿದ್ದುವು. ಆದರೆ, ದಾಂಪತ್ಯ ಜೀವನದ ಸಂಕಟವೆಂದರೇನೆಂಬ ಆಕೆಯ ಕಲ್ಪನೆ ಪೂರ್ಣವಾಗಿಯೆ ಇರಲಿಲ್ಲ. ಈಗ, ಆ ಅಪೂರ್ಣ ಚಿತ್ರದ ಬದಲು ವಾಸ್ತವ ಘಟನೆಯೆ ರುದ್ರವಾಗಿ ಪರಿಪೂರ್ಣವಾಗಿ ನಿಂತಿತ್ತು.

ಮಡಚಿದ ಮೊಣಕಾಲುಗಳ ಮೇಲೆ ತನ್ನ ಮುಖವಿರಿಸಿ ಸುನಂದಾ

ಯೋಚಿಸಿದಳು....

ಸೀಮೆ ಎಣ್ಣೆಯ ಮಿಣುಕು ದೀಪದ ಮಂದಪ್ರಕಾಶ, ಒಂದು ಮೂಲೆಯಿಂದ ತೂರಿ ಬರುತ್ತಿತ್ತು.... ವಿದ್ಯುದ್ದೀಪ ಪ್ರಕಾಶಮಾನವಾದದ್ದು; ಇದು ಮಂದ. ಆದರೆ ಎರಡರಿಂದಲೂ ಬೆಳಕು ದೊರೆಯುತ್ತಿತ್ತು. ಮದುವೆಗೆ ಮುಂಚೆ ಎಷ್ಟೋ ಸಾರೆ ಸುನಂದಾ ತನ್ನಷ್ಟಕ್ಕೇ ಆಡಿಕೊಂಡಿದ್ದಳು: 'ಬಡವನಾದರೂ ಸರಿಯೆ. ನನ್ನ ಗಂಡ ಸದ್ಗುಣಿಯಾಗಿರಲಿ ದೇವರೆ. ನನ್ನ ದಾಂಪತ್ಯ ಜೀವನ ಮಂಗಲಕರವಾಗಲಿ. ಸಿರಿವಂತಿಕೆ ಇಲ್ಲದಿದ್ದರೆ ನನಗೆ ಬೇಸರವಿಲ್ಲ. ಆದರೆ ಒಳ್ಳೆಯತನದ ಕೊರತೆ ಮಾತ್ರ ನಮ್ಮನ್ನು ಕಾಡದಿರಲಿ. ಬಡವನ ಗುಡಿಸಲಾದರೂ ಸರಿಯೆ, ನಾವು ಆದರ್ಶವಾಗಿ ಬದುಕುವಂತೆ ಮಾಡು.'

ಮುಂದೆ ಮದುವೆಯಾದಾಗ, ಹಿಂದಿನ ಪ್ರಾರ್ಥನೆಯನ್ನೆಲ್ಲ ಸುನಂದಾ ಮರೆತಳು. ದಾಂಪತ್ಯ–ಜೀವನದ ಮಹಾ ಪ್ರಯೋಗವನ್ನು ಯಶಸ್ವಿಗೊಳಿಸಲೆಂದು ಹಾತೊರೆದ ಆಕೆಗೆ, ಹಿಂದಿನದನ್ನು ಸ್ಮರಿಸಿಕೊಳ್ಳಲು ಪುರಸೊತ್ತಿರಲಿಲ್ಲ.

ಆದರೆ ಈಗ, ಬದುಕು ಒಂದು ಘಟ್ಟಕ್ಕೆ ಬಂದು ನಿಂತಿತ್ತು. ಸಂಸಾರ ರಥದ ಗಾಲಿಗಳು ತೇವ ಮಣ್ಣಿನಲ್ಲಿ ಆಳಕ್ಕೆ ಹೂತುಹೋಗಿದ್ದುವು....

ಹುಡುಗಿಯಾಗಿದ್ದಾಗ ನಾಳೆಯ ಬಗೆಗೆ ಮಧುರತರ ಕಲ್ಪನೆಗಳ ನಕ್ಷತ್ರಮಾಲೆ ರಚಿಸುವುದು ಸಾಮಾನ್ಯ ವಿಷಯ. ಸುನಂದಾ ಅದಕ್ಕೆ ಹೊರತಾಗಿರಲಿಲ್ಲ. ಆಕೆ ಓರಗೆಯ ಹುಡುಗರೊಡನೆ ಓಡಿಯಾಡಿದವಳಲ್ಲ. ಅವರ ಕುಟುಂಬದಲ್ಲಿ ಸಮೀಪದವರೆನ್ನುವ ಸಂಬಂಧಿಕ ಎಳೆಯ ಯುವಕರು ಯಾರೂ ಇರಲಿಲ್ಲ. ಹೀಗಾಗಿ ಕೌಮಾರ್ಯದಲ್ಲಿ ಹೃದಯದೊಳಗೆ ಮೂಡಿಬಂದ ಒಲವಿಗೆ ಪ್ರತಿಯಾದ ಒಲವು ಆಕೆಗೆ ದೊರಕಿರಲಿಲ್ಲ. ಆಕೆಯ ಪ್ರಪಂಚ ಚಿಕ್ಕದಾಗಿತ್ತು. ಆ ಸಂಸಾರಕ್ಕೆ ಸಂಬಂಧಿಸಿದಷ್ಟು. ಅದರ ಹೊರತಾಗಿ ತಿಳಿದಿದ್ದುದೆಲ್ಲ, ಕಥೆ ಕಾದಂಬರಿಗಳ ಮೂಲಕ ಆಕೆ ಕಂಡುಕೊಂಡ ಲೋಕ. ಸುನಂದೆಗೆ ಆದರ್ಶದ ಹುಚ್ಚು ಬಲವಾಗಿ ಅಂಟಿಕೊಂಡಿತ್ತು. ತನ್ನದು ಆದರ್ಶ ಸಂಸಾರವಾಗಬೇಕು. ತಾನು ಆದರ್ಶ ಗೃಹಿಣಿಯಾಗಬೇಕು. ತನ್ನ ಕೈ ಹಿಡಿದವನು ಆದರ್ಶ ಪುರುಷನಾಗಬೇಕು...

ಈಗ ಏನಾಗಿತ್ತು? ವಸ್ತುಸ್ಥಿತಿಯೊಡನೆ ಘರ್ಷಣೆಯಾಗಿ ವಿರೂಪ ತಳೆದಿತ್ತು ಆ ಆದರ್ಶ....

....ನೀಳವಾಗಿ ಉಸಿರು ಬಿಟ್ಟು ಸುನಂದಾ ಗೋಡೆಗೊರಗಿಯೆ ಕುಳಿತಳು.

ಹಿಂದೆಯೂ ಹಾಗೆ ಎಷ್ಟು ಸಾರೆ ಕುಳಿತಿರಲಿಲ್ಲ ಆಕೆ! ಆಗ ಹೃದಯದಲ್ಲಿ ಮಿಡಿಯುತ್ತಿದ್ದುದು ಮಧುರ ಭಾವನೆ ಮಾತ್ರ. ದೀಪವಾರಿಸುವುದನ್ನೇ ಕಾದಿರುತ್ತಿದ್ದ ಆ ದಿನಗಳು...ಆಗ ಗಂಡ ತನ್ನೆಡೆಗೆ ಧಾವಿಸಿ ಬರುತ್ತಿದ್ದ. ಆತನ ತೋಳುಗಳು ಆಕೆಯನ್ನು ಸುತ್ತುವರಿಯುತ್ತಿದ್ದುವು. ಆ ವಕ್ಷಸ್ಥಳದ ಆಸರೆಯಲ್ಲಿ ಆಕೆ ಮೈ ಮರೆಯುತ್ತಿದ್ದಳು. ಆತನೂ ಅಷ್ಟೆ. ತಾನು ಪಡೆದ ಸುಖವನ್ನೇ ಆತನೂ ಪಡೆಯುತ್ತಿದ್ದ

ನೆಂಬುದನ್ನು ಸುನಂದಾ ಖಚಿತವಾಗಿ ತಿಳಿದಿದ್ದಳು.

ಆದರೆ ಬೇಟದ ಆ ಸುಖ ಸದಾ ಕಾಲವೂ ಆ ರೀತಿಯಾಗಿಯೇ ಇರುವುದು ಸಾಧ್ಯವಿತ್ತೆ?

ಸಂತಾನವೆನ್ನುವುದು ಗಂಡು ಹೆಣ್ಣಿನ ಸಂಬಂಧವನ್ನು ಸ್ಥಿರವಾಗಿ ಬೆಸೆಯುವ ಸಾಧನವೆಂದು ಸುನಂದಾ ತಿಳಿದಿದ್ದಳು. ಆದರೆ ಬಡಪಾಯಿಯಾದ ಆಕೆಯ ಪಾಲಿಗೆ ಹಾಗಾಗಲೇ ಇಲ್ಲ.

...ಈಗ ಎಷ್ಟು ಹೊತ್ತಾದರೂ ಆಕೆ ಕತ್ತಲಲ್ಲಿ ಕುಳಿತಿರಬಹುದು. ಆದರೆ ಗಂಡ ಬಂದು ಮುದ್ದಿಸಿ ಮೈದಡವಿ ಮಾತನಾಡುವುದು ಮಾತ್ರ ಇರಲಿಲ್ಲ. ಆಕೆ ಹಾಸಿಗೆಯುದ್ದಕ್ಕೂ ಕಾಲು ಚಾಚಿ ಕಣ್ಣುಮುಚ್ಚಬಹುದು ಆದರೆ 'ನಿದ್ದೆ ಬಂತೇನೆ?' ಎಂಬ ಸ್ವರ ಮಾತ್ರ ಕೇಳುತ್ತಿರಲಿಲ್ಲ.

ಅದೆಲ್ಲಾ ಕಾಮದ ಸಾಮ್ರಾಜ್ಯದಲ್ಲಿ ಪ್ರೇಮ ನಡೆಸುವ ಚೆಲ್ಲಾಟವೆಂದು ಸುನಂದಾ ತಿಳಿದಿದ್ದಳು. ಎಷ್ಟೋ ಸಾರೆ ಆ ಚೆಲ್ಲಾಟವಿಲ್ಲದೆಯೇ ಇರುಳು ಹಗಲಾಗುತ್ತದೆ ಎಂಬುದೂ ಆಕೆಗೆ ಗೊತ್ತಿತ್ತು. ಅದು ಸಿದ್ಧಾಂತ. ಆದರೆ ಪ್ರಯೋಗ ತೋರಿಸಿ ಕೊಡುತ್ತಿದ್ದುದೇ ಬೇರೆ. ಹೆಣ್ಣು ಗಂಡಿಗೂ ಗಂಡು ಹೆಣ್ಣಿಗೂ ನೀಡುವ ಒಲವಿನ ಭವ್ಯ ಲೋಕವನ್ನು ಆಕೆ ಕಾಣಬಯಸಿದ್ದಳು ನಿಜ; ಆದರೆ ಅದು ಕಂಡು ಬಂದಿರಲಿಲ್ಲ.

....ಹೀಗೆ ಯೋಚಿಸುತ್ತ ಮೌನವಾಗಿ ಕುಳಿತ ಸುನಂದಾ ನಿದ್ದೆಗಾದರೂ ಮೊರೆ ಹೋಗಲು ನಿರ್ಧಾರ ಮಾಡಿದಳು. ಅದಕ್ಕೆ ಸಿದ್ಧತೆಯೆಂದು, ಕುಳಿತಲ್ಲಿಂದೆದ್ದು ಬಚ್ಚಲು ಮನೆಗೆ ಹೋಗಿಬಂದಳು. ತೊಟ್ಟಿಲನ್ನೊಮ್ಮೆ ಮೆಲ್ಲನೆ ಮುಟ್ಟಿ, ನಡು ರಾತ್ರಿಯಲ್ಲಿ ಮಗು ಎದ್ದು ಅಳುವವರೆಗಿನ ನಿದ್ದೆಗೋಸ್ಕರ, ಹಾಸಿಗೆಯ ಮೇಲೆ ಒರಗಿ ಕೊಂಡಳು.

ಆದರೆ ಯೋಚನೆಗಳ ಇನ್ನೊಂದು ಸರಮಾಲೆ ಮೊದಲಾಯಿತು. ಬಾಕಿ ವಸೂಲಿಗೆ ಬರುವವರೆಲ್ಲ ಕಣ್ಣೆದುರು ಕುಣಿಯತೊಡಗಿದರು. ಅವರನ್ನೆಲ್ಲ ಕೈಬೀಸಿ ತಳ್ಳಿ, ಸುನಂದಾ ಹೊದಿಕೆ ಎಳೆದುಕೊಂಡಳು. ಆ ಮುಸುಕಿನ ಒಳಗೂ ಒಂದು ವಿಚಾರ ಮೂಡಿ ಬಂದು, ಬಲವಾಗಿ ಬೇರುಬಿಟ್ಟು, ದೃಢವಾಯಿತು.

'ನಾಳೆ ಇದರ ಇತ್ಯರ್ಥವಾಗಲೇಬೇಕು—ನಾಳೆ ಆಗಲೇಬೇಕು!'

ಳ

ಬೆಳಗ್ಗೆ ಎದ್ದು ಪುಟ್ಟಣ್ಣ ಮುಖಕ್ಷೌರ ಮಾಡಿಕೊಂಡ, ಎಂದಿನಂತೆ. ಆ ಕಾರ್ಯದಲ್ಲಿ ನಿರತನಾದಾಗ ಕನ್ನಡಿಯಲ್ಲಿ ಮುಖ ಕಾಣಿಸುತ್ತಿತ್ತು, ಯಾವಾಗಲೂ. ಈ ದಿನ

ಮನಸಿಗೆ ನೆಮ್ಮದಿ ಇಲ್ಲದೆಯೇ ಆತ ಎದ್ದಿದ್ದ. ನೂರೊಂದು ಯೋಚನೆಗಳು ಆತನನ್ನು ಕಾಡುತ್ತಿದ್ದುವು. ಯಾಕೆ ಹೀಗಾಯಿತೊ ಬದುಕು?—ಎಂದು ಅವನ ಹೃದಯ ಹೊಯ್ದಾಡುತ್ತಿತ್ತು.

ಒಳಗಿನ ತುಮುಲ ಹೊರಗೆ ಕಾಣಿಸುವುದೇನೊ ಎಂದು ಕನ್ನಡಿಯನ್ನು ಆತ ನೆಟ್ಟ ದೃಷ್ಟಿಯಿಂದ ನೋಡಿದ. ಅದೇ ದುಂಡಗಿನ ಮುಖ, ದೃಢ ನಿರ್ಧಾರವನ್ನು ತೋರುವ ಗಲ್ಲ, ಬಲಿತ ದೃಷ್ಟಿಯ ಕಣ್ಣುಗಳು;... ಒಂದೂ ಬದಲಾಗಿರಲಿಲ್ಲ. ದುಂಡಗೆ ಗುಂಡಗೆ ಬಲಶಾಲಿಯಾಗಿದ್ದನೆಂದು ಹಳೆಯ ಗೆಳೆಯರೂ ಹಿಂದೆ ಆತನಿಗೆ 'ಗುಂಡ' ಎಂದು ಅಡ್ಡಹೆಸರಿಟ್ಟಿದ್ದರು. ಈಗಲೂ ಅವರು ಆಗೊಮ್ಮೆ ಈಗೊಮ್ಮೆ ದೃಷ್ಟಿಗೆ ಬಿದ್ದು ಕಾಫಿ ತಿಂಡಿಗಳು ನಡೆದಾಗ, "ಚಿರಯೌವನ ಕಣೋ ನಿನ್ನದು. ಅದೇನು ಅಮೃತ ಗುಳಿಗೆ ತಿಂದಿದಿಯೋ ಗುಂಡ!" ಎಂದು ಮಾತು ಬರುತ್ತಿತ್ತು.

ಈ ಬೆಳಗ್ಗೆ ತನ್ನ ಮುಖದ ಪ್ರತಿಬಿಂಬವನ್ನು ನೋಡುತ್ತ ತುಟಿತೆರೆಯದೆಯೇ ವಕ್ರವಾಗಿ ನಕ್ಕು ಪುಟ್ಟಣ್ಣ ಅಂದುಕೊಂಡ:

'ಅಮೃತ ಗುಳಿಗೆಯಲ್ಲ. ನನ್ನ ಗಂಟಲಲ್ಲಿ ಸಿಲುಕಿ ಕೊಂಡಿರುವುದೀಗ ವಿಷದ ಗುಳಿಗೆ!'

...ಸುನಂದಾ ಕೊಠಡಿಯೊಳಕ್ಕೆ ಬಂದಳು. ಕಾಫಿಯ ಲೋಟವನ್ನು ಮೇಜಿನ ಮೇಲಿಟ್ಟು, "ಕಾಫಿ ಇಟ್ಟಿದೀನಿ" ಅಂದಳು. ಪುಟ್ಟಣ್ಣ ಮಾತನಾಡಲಿಲ್ಲ; ಅತ್ತ ತಿರುಗಿಯೂ ನೋಡಲಿಲ್ಲ. ಹೊರಡುತ್ತ ಆಕೆ ಬಾಗಿಲ ಬಳಿ ತಡೆದು ನಿಂತು, "ಸ್ನಾನಕ್ಕೆ ನೀರು ಕಾದಿದೆ" ಎಂದಳು. ಆಗಲೂ ಪುಟ್ಟಣ್ಣ ಉತ್ತರಿಸಲಿಲ್ಲ. ಕ್ಷೌರ ಸರಿಯಾಗಿ ಆಯಿತೇ ಎಂದು ಕತ್ತು ಗಲ್ಲಗಳನ್ನು ಮುಟ್ಟಿ ನೋಡಿಕೊಂಡ. ಸುನಂದಾ ಹೊರಟು ಹೋದುದರ ಕಾಲ ಸಪ್ಪಳ ಕೇಳಿಸಿದ ಮೇಲೆ ಮಾತ್ರ ಬಾಗಿಲಿನತ್ತ ತಿರುಗಿ ನೋಡಿದ.

ಮನಸ್ಸು ವಕ್ರ ವಕ್ರವಾಗಿ ಅಂದಿತು:

'ಇವಳೀಗ ನನ್ನ ಹೆಂಡತಿ!'

ಮದುವೆ ನಿಷ್ಕರ್ಷೆಯಾದಾಗಲೇ ಆತನಿಗೆ ಅನಿಸಿತ್ತು: ಈಕೆ ತನಗೆ ಸರಿಯಾದ ಜೋಡಿ ಅಲ್ಲವೆಂದು. ಆಗಲೆ ಎರಡು ಮೂರು ಹೆಣ್ಣುಗಳನ್ನು ನೋಡಿ ನಿರಾಕರಿಸಿದ್ದವನು ಈಕೆಯೂ 'ಬೇಡ' ಎನ್ನಬಹುದಿತ್ತು. ಆದರೆ ತಾಯಿ ಗೋಳು ಹೊಯ್ದು ಕೊಂಡಿದ್ದಳು: "ಈಕೇನೂ ಒಪ್ಪಿಗೆಯಾಗದೇ ಹೋದರೆ ನಿನಗೆ ಬೇಕಾದ ಹೆಣ್ಣನ್ನ ಬ್ರಹ್ಮ ಹುಟ್ಟಿಸಿಯೇ ಇಲ್ಲಾಂತ ತಿಳ್ಕೋತೀನಿ. ಏನಾಗಿದೆ ಇವಳಿಗೆ? ಯಾವ ಕೊರತೆ?"

ಹೃದಯ ದುರ್ಬಲವಾಗಿದ್ದ ಒಂದು ಕ್ಷಣಕಾಲದಲ್ಲಿ ಅಚಾತುರ್ಯವಾಗಿ ಹೋಗಿತ್ತು. ಪುಟ್ಟಣ್ಣನೆಂದಿದ್ದ:

"ಆಗಲಮ್ಮ. ಹುಡುಗಿ ನಿನಗೆ ಒಪ್ಪಿಗೆಯಾದರೆ ನನಗೂ ಒಪ್ಪಿಗೇನೆ."

ಅಷ್ಟರಿಂದಲೆ ಸಂತುಷ್ಟರಾದ ತಾಯಿ ವಾಡಿಕೆಯಾಗಿ ಹೇಳಿದ್ದರು:...

"ನನ್ನ ಒಪ್ಗೇನ ಸುಡ್ತು. ನಾನಾ ಮದುವೆ ಮಾಡ್ಕೊಳ್ಳೋದು? ನಾಳೆ ನನ್ನ ಬಯ್ಯಾರದು ನೀನು. ನೀನು ಬೇಡ ಅನ್ನೋ ಹಾಗಿದ್ದರೆ ಕಳಿಸ್ಬಿಡೋಣ."

ತಾಯಿ ಔಪಚಾರಿಕವಾಗಿ ಹಾಗೆ ಆಡುತ್ತಿದ್ದಳೆಂದು ಪುಟ್ಟಣ್ಣನಿಗೆ ಗೊತ್ತಿತ್ತು. ಆತ ಸ್ವರವೇರಿಸಿ ಅಂದಿದ್ದ:

"ಹೋಗಮ್ಮ. ಒಪ್ಗೆ. ಇನ್ನೇನು ಬೇಕಾದರೂ ಮಾಡ್ಕೊ."

ತಾಯಿಯ ಮುಖ ಅಷ್ಟಗಲವಾಗಿತ್ತು.

ಆದರೆ ಮದುವೆಯಾಗಿ ಸೊಸೆ ಮನೆಗೆ ಬಂದಮೇಲೆ ಆ ತಾಯಿಯೇ ಬದಲಾಗಿದ್ದಳು.

...ಅದನ್ನೆಲ್ಲ ಈಗ ಯೋಚಿಸುತ್ತ ಪುಟ್ಟಣ್ಣ ಅಂದುಕೊಂಡ:

'ಅಷ್ಟು ವರ್ಷ ಕಾದು ಮದುವೆಯಾದ ಮೇಲೂ ಇಂಥ ಗತಿ ಒದಗಿತಲ್ಲ!'

ಮನೆಗೆ ಬಂದ ಆ ಹೆಣ್ಣು ಮಹಾ ವಿದ್ಯಾವಂತೆಯ ಹಾಗೆ, ಸಾಹಿತ್ಯ–ಕಲೆ–ಸಂಸ್ಕೃತಿ ಎಂದು ಮಾತನಾಡಿದಳು. ಕಾಲೇಜಿನಲ್ಲಿ ಓದುತ್ತಿದ್ದಾಗಲೂ ಅಷ್ಟೆ, ಅನಂತರವೂ ಅಷ್ಟೆ, ಪುಟ್ಟಣ್ಣನಿಗೆ ಅಂಥದರಲ್ಲೆಲ್ಲ ಆಸಕ್ತಿ ಇರಲಿಲ್ಲ. ಆತನಿಗೆ ಬೇಕಾದುದೊಂದೇ, ಹೆಣ್ಣಿನ ಒಡನಾಟ. ಮನಸ್ಸು ಮಾಡಿದ್ದರೆ ಅದನ್ನು ಪಡೆಯುವುದು ಅಷ್ಟೇನೂ ಕಷ್ಟವಾಗುತ್ತಿರಲಿಲ್ಲ. ಆದರೆ ಆತ ಬೆಳೆದು ಬಂದಿದ್ದ ವಾತಾವರಣ ಆ ರೀತಿಯ ಚೆಲ್ಲಾಟಕ್ಕೆ ಅನುಕೂಲವಾಗಿರಲಿಲ್ಲ. ಮದುವೆಯಾದಮೇಲೆ ಸಾಮಾನ್ಯವಾಗಿ ಅಂತಹ ಅವಶ್ಯಕತೆಗಳೆಲ್ಲ ನಿರ್ದಿಷ್ಟ ರೂಪು ತಳೆಯುತ್ತವೆ. ಆದರೆ ಪುಟ್ಟಣ್ಣನಿಗೆ ಸಂಬಂಧಿಸಿ ಆ ಸಾಮಾನ್ಯ ನಿಯಮ ಸರಿಹೋಗಲಿಲ್ಲ. ಗಂಡ ಹೆಂಡಿರ ಸಂಬಂಧ ಒಂದು ಘಟ್ಟಕ್ಕೆ ಬಂದುದು ಮುಂದೆ ಅವರಿಬ್ಬರೇ ಉಳಿದಾಗ. ಆದರೆ ಸ್ವಲ್ಪ ಕಾಲದಲ್ಲೇ ಅಂತಹ ವೈವಾಹಿಕ ಜೀವನದಿಂದ ಆತನಿಗೆ ಬೇಸರ ತಲೆದೋರಿತು.

...ಪುಟ್ಟಣ್ಣ ಅಂಗವಸ್ತ್ರವನ್ನು ಮೈಮೇಲೆ ಹಾಕಿಕೊಂಡು, ತೊಳೆಯಲೆಂದು ಮುಖ ಕ್ಷೌರದ ಸಾಮಗ್ರಿಗಳನ್ನೂ ಕೈಲೆತ್ತಿಕೊಂಡು ಸ್ನಾನದ ಮನೆಗೆ ಹೊರಟ. ಹೋಗುತ್ತ, ಹಜಾರವನ್ನು ದಾಟುತ್ತಿದ್ದಂತೆ, ತೊಟ್ಟಿಲಲ್ಲಿ ಮಲಗಿದ್ದ ಮಗುವಿನತ್ತ ಆತನ ದೃಷ್ಟಿ ಹರಿಯಿತು.

ಆತನಿಗೆ ಇಷ್ಟವಿಲ್ಲದೆಯೇ ಭೂಮಿಗೆ ಇಳಿದು ಬಂದಿತ್ತು ಆ ಮಗು. 'ಹಿಂದೆ ಏನೂ ಆಗಿಲ್ಲ. ಈಗಲೂ ಏನೂ ಆಗಲಾರದು' ಎಂದು ಆತ ಭಾವಿಸಿದ್ದುದು ಸುಳ್ಳಾಗಿತ್ತು. ಪ್ರಾಯಶಃ ಆ ಮಗುವಿಲ್ಲದೇ ಹೋಗಿದ್ದರೆ ಈ ವಿರಸ ಏರ್ಪಡುತ್ತಿರಲಿಲ್ಲವೋ ಏನೋ. ತಾನು ತಂದೆಯಾಗುವುದು ಖಂಡಿತವೆಂದು ಗೊತ್ತಾದಾಗ, ಮಗು ಗಂಡಾಗಲಿ ಎಂಬೊಂದು ಆಸೆ ಮೊಳೆತಿತ್ತು. ಆ ಮೊಳಕೆ ಮುರಿದು ಬಿದ್ದಾಗ, ತನ್ನನ್ನೂ ಆ ಹೆಣ್ಣನ್ನೂ ಜತೆಯಾಗಿ ಬಂಧಿಸಿದ್ದ ಸೂತ್ರವೂ ಕಡಿದು ಬಿದ್ದಂತೆ ಪುಟ್ಟಣ್ಣನಿಗೆ ಅನಿಸಿತ್ತು.

...ನೀರು ಸುಡುತ್ತಿತ್ತು. ಕರೆದು ಹೇಳಬೇಕೆಂದು ಬಾಯಿತೆರೆದ ಪುಟ್ಟಣ್ಣ

ಸುಮ್ಮನಾಗಿ, ತಾನೇ ಕೊಳಾಯಿ ತಿರುಗಿಸಿ ಬಿಸಿ ನೀರಿನ ಹಂಡೆಗೆ ತಣ್ಣೀರು ಸುರಿದ. ಸುರಿದಮೇಲೆ ಬೆರಳು ಹಾಕಿದಾಗ ನೀರು ತಣ್ಣಗೆ ತೋರಿತು. ಬೆಪ್ಪನಾಗಿ ಅತ್ತಿತ್ತ ನೋಡಿ ಪುಟ್ಟಣ್ಣ, ಆ ನೀರೇ ಸರಿಯೆಂದು ಸ್ನಾನಕ್ಕೆ ಸಿದ್ಧನಾದ.

ಸ್ನಾನ ಮಾಡುತಿದ್ದಾಗ ಪುಟ್ಟಣ್ಣ, ಹೃಷ್ಟಪುಷ್ಟವಾದ ತನ್ನ ಅಂಗಾಂಗಗಳನ್ನು ನೋಡಿಕೊಂಡ. ಹೆಮ್ಮೆ ಎನ್ನಿಸಿತು. ಆ ಹೆಮ್ಮೆಯು ಹೊಗೆಯಲ್ಲೆ, 'ನನಗೆ ಆಕೆ ತಕ್ಕವಳಲ್ಲ' ಎಂಬ ಮಾತು ಸುರುಳಿ ಸುರುಳಿಯಾಗಿ ರೂಪುಗೊಂಡಿತು.

ಆದರೂ ಮೈ ಒರೆಸಿಕೊಳ್ಳುತ್ತಿದ್ದಾಗ ಅವನಿಗೆನಿಸಿತು: ಏನಿದ್ದರೂ ತಾನಿನ್ನೂ ಮಗುವೇ. ಹೆಂಡತಿಯನ್ನು ಆಳುವ ವಿಷಯದಲ್ಲಲ್ಲ; ತನ್ನ ಹೊಸ ಹವ್ಯಾಸವಾದ ಇನ್ನೊಂದರಲ್ಲಿ. ತಾನು ಯಾವಾಗಲೂ ಅಷ್ಟೆ. ಮೊದಮೊದಲಿಗೆ ಎಲ್ಲಿಲ್ಲದ ಎಳೆತನ. ಮೊದ ಮೊದಲಿಗೆಲ್ಲ ತನಗೇ ಸೋಲು.

—ಅಷ್ಟಕ್ಕೇ ಸುನಂದಾ, ತಾನು ಅಡ್ಡಹಾದಿ ಹಿಡಿದೆನೆಂದು ಭಾವಿಸಿದಳೋ ಏನೋ? ಹೆಣ್ಣು ಬುದ್ಧಿ ಎಷ್ಟೆಂದರೂ ಅಷ್ಟೇ. ಆದರೆ, ನಿರೀಕ್ಷಿಸಿದ್ದುದು ಕೈಗೆಟಕದೆ ಇದ್ದಾಗ, ಒಮ್ಮೊಮ್ಮೆ ತನ್ನ ಮನಸ್ಸಿನಲ್ಲೂ ಕಸಿವಿಸಿಯಾದುದಿತ್ತು. ಹಾಗೆ ಕಸಿವಿಸಿ ಯಾಗಲು ಕಾರಣ ಮಾತ್ರ ಸ್ಪಷ್ಟ. ಅದು ತನ್ನ ದೌರ್ಬಲ್ಯ. ತಾನೆಂದಿಗೂ ದುರ್ಬಲ ನಾಗಬಾರದು. ತಾನು ಆಳಬೇಕು. ತನಗೆ ಬೇಕಾದ ಪ್ರತಿಯೊಂದೂ ತನ್ನಿಚ್ಛೆಗನು ಸಾರವಾಗಿಯೇ ನಡೆಯಬೇಕು. ತಾನು ಅಸಹಾಯನಾದ ಬಡವನಾಗಬಾರದು; ದರ್ಪ ವುಳ್ಳ ಧನಿಕನಾಗಬೇಕು...

...ಸ್ನಾನದ ಮನೆಯಿಂದ ಪುಟ್ಟಣ್ಣ ಕೊಠಡಿಯತ್ತ ನಡೆದ. ಮಗು ತೊಟ್ಟಿಲಲ್ಲಿ ಎದ್ದು ಕುಳಿತು ಅಳುತಿತ್ತು. ಅದನ್ನು ನೋಡಿಯೂ ನೋಡದವನಂತೆ ಪುಟ್ಟಣ್ಣ ಕೊಠಡಿ ಸೇರಿದ.

* * * *

ಹಿಂದಿನ ರಾತ್ರೆ ಗಂಡ ಹೇಳಿದ್ದ: "ನಾಳೆ ಬರೀ ಬೇಳೆ ಸಾರು ಮಾಡು."

ಹಿಂದೆ ಸಾಮಾನ್ಯವಾಗಿ ಸುನಂದಾ ಬೆಳಗ್ಗೆ ಗಂಡನ ಕೊಠಡಿಯ ಬಾಗಿಲಲ್ಲಿ ನಿಂತು, "ಅಡುಗೆ ಏನು ಮಾಡ್ಲಿ?" ಎಂದು ಕೇಳುತ್ತಿದ್ದಳು. ಆದರೆ ಆ ಪ್ರಶ್ನೆಗೆ ಹಲವು ಸಾರೆ ಆಕೆಗೆ ದೊರೆಯುತ್ತಿದ್ದ ಉತ್ತರ ಒಂದೇ: "ಪದೇ ಪದೇ ನನ್ನ ಕೇಳ್ಬೇಡ! ಏನಿ ದೆಯೋ ಅದನ್ನ ಮಾಡು!"

ಈ ದಿನ ಅಂತಹ ಪ್ರಶ್ನೆ ಕೇಳಬೇಕಾದ್ದೇ ಇರಲಿಲ್ಲ. ಏನಿದೆಯೋ ಅದನ್ನು ಮಾಡುವುದು–ಇದ್ದ ಬೇಳೆಯನ್ನು ಬೇಯಿಸಿ ಸಾರು ಮಾಡುವುದು.

ಅದು ಆ ದಿನಕ್ಕಾಯಿತು. ಆದರೆ ನಾಳೆಗೆ? ಈ ದಿನ ತರಕಾರಿಯ ಅಭಾವ ವಾದರೆ ನಾಳೆ ಅಕ್ಕಿಯ ಸರದಿ....

ಬೇರೆ ರೀತಿಯಲ್ಲಿ, ಆ ನಾಳೆಗಿಂತಲೂ ಗಭೀರತರವಾದದ್ದು 'ಇವತ್ತು.' ಇದೇ

ಈಗ ಬೆಳಗಾಗಿದೆ. ಇನ್ನು ಸ್ವಲ್ಪ ಹೊತ್ತಿನಲ್ಲೆ ಒಬ್ಬೊಬ್ಬರಾಗಿ ವಸೂಲಿಗೆ ಬರುವರು...

ಈ ದಿನ ಗಂಡನೊಡನೆ ಖಡಾಖಂಡಿತವಾಗಿ ಮಾತನಾಡಲೇಬೇಕೆಂದು, ರಾತ್ರೆ ಸುನಂದಾ ನಿರ್ಧರಿಸಿದ್ದಳು. ಆ ನಿರ್ಧಾರವನ್ನೀಗ ಕೃತಿಗಿಳಿಸಬೇಕು.

ನಿರ್ಧರಿಸುವುದು ಅಷ್ಟು ಕಷ್ಟವಾಗಿರಲಿಲ್ಲ. ಆದರೆ ಕೃತಿಗಿಳಿಸುವುದು?

ಕೆಲಸ ಕಷ್ಟದ್ದೆಂದು ಸುಮ್ಮನಿರುವುದಾದರೂ ಸಾಧ್ಯವಿತ್ತೆ? ಮನೆ ಉರಿಯುತ್ತ ಲಿದ್ದಾಗ, ನಿದ್ರಾ ಭಂಗವಾಗುವುದೆಂದು ಕೂಗಿ ಕರೆಯದೆ ಇರುತ್ತಾರಾ?

ಸುನಂದಾ ಅಳುತ್ತಲಿದ್ದ ಮಗುವನ್ನೆತ್ತಿಕೊಂಡಳು. ತೊಟ್ಟಿಲು ಗಲೀಜಾಗಿತ್ತು. ಅದನ್ನು ಶುಚಿಗೊಳಿಸಲು ಆಕೆ ಮುಂದಾದಳು.

ಆ ಬಳಿಕ ಮಗುವನ್ನೆತ್ತಿಕೊಂಡೇ ಸುನಂದಾ ಗಂಡನ ಕೊಠಡಿಯ ಬಾಗಿಲಿಗೆ ಬಂದಳು. ತಾಯಿ ಯೋಚಿಸಿ ಸಿದ್ಧಳಾಗುತಿದ್ದ ಮಾತುಕತೆಯಲ್ಲಿ ಯಾವ ಆಸಕ್ತಿಯೂ ಇಲ್ಲವೆಂಬಂತೆ ಮಗು, ತನಗೆ ಬೇಕಾದುದನ್ನು ಕೇಳಿತು. ಸುನಂದಾ ಅಲ್ಲಿಯೇ ಗೋಡೆಯ ಬಳಿ ಕುಳಿತು ಮಗುವಿಗೆ ಮೊಲೆಯೂಡಿದಳು.

ಪುಟ್ಟಣ್ಣ ಪೋಷಾಕು ಧರಿಸಿಕೊಳ್ಳುತ್ತಿದ್ದ. ಇನ್ನು ಸ್ವಲ್ಪ ಹೊತ್ತಿನಲ್ಲೇ ಆತ ಹೊರಟು ಹೋಗುವ. ಮಾತುಕತೆಯನ್ನು ಮತ್ತಷ್ಟು ತಡೆಯುವುದರಲ್ಲಿ ಅರ್ಥವೇ ಇರಲಿಲ್ಲ.

ಒಮ್ಮೆಲೆ ಸುನಂದೆಗೆ ತೋರಿತು:

'ಹಾಳಾಗಿ ಹೋಗಲಿ. ರಾತ್ರೆ ಕೇಳೋಣ.'

ಆದರೆ ಮನಸ್ಸಿನ ಹೇಡಿತನವನ್ನು ಸಾತ್ವಿಕ ಗುಣವೆಂದು ಒಪ್ಪಿಕೊಂಡು ಸುಮ್ಮ ನಾಗಲು ವಿವೇಕ ಸಿದ್ಧವಿರಲಿಲ್ಲ. ಅದು ಕೇಳಿತು:

'ಈ ಸಂಜೆಯೂ ಮನೆಗೆ ಬಂದೊಡನೆ ಆತ ಹೊರಬಿದ್ದರೆ?'

'ಮನೆಗೆ–ಸಂಸಾರಕ್ಕೆ–ಸಂಬಂಧಿಸಿದ ಈ ವಿಷಯ ಮಾತನಾಡುವ ಅಧಿಕಾರವೂ ನನಗಿಲ್ಲವೆಂದಾಯಿತೆ ಹಾಗಾದರೆ?'

ಮಾತನಾಡುವುದೇನೋ ನಿಜವೆ. ಹೇಗೆ ಆರಂಭಿಸಬೇಕು? ಎನ್ನುವ ಮುಖ್ಯ ಪ್ರಶ್ನೆಯಿತ್ತು. ಅದನ್ನು ಕುರಿತು ಸುನಂದಾ ವಿವರವಾಗಿ ಯೋಚಿಸಿದಳು. ಆದರೆ ಯೋಚನೆ ನಿರ್ದಿಷ್ಟ ರೂಪ ತಳೆಯಲೇ ಇಲ್ಲ.

ಅಷ್ಟರಲ್ಲಿ ನಿರೀಕ್ಷಿಸುವುದಕ್ಕೆ ಮುಂಚಿತವಾಗಿಯೇ, ಗಂಡ ಬೂಟು ಹಾಕಿಕೊಳ್ಳು ತ್ತಿದ್ದಂತೆಯೇ, ಆಕೆಯ ಸ್ವರ ಹೊರಬಿತ್ತು:

"ಆಫೀಸಿಗೆ ಹೊರಟಿರೇನು?"

ಹಿಂದೆ ಆಕೆಯೇ ಬೂಟಿನ ಧೂಳನ್ನೊರೆಸಿ ಸಿದ್ಧಪಡಿಸುತ್ತಿದ್ದಳು. 'ಇದು ಹೆಣ್ಣು ಪರಾಧೀನಳೆಂದು ತೋರಿಸುವ ಗುಲಾಮ ಚಾಕರಿಯಲ್ಲ. ಪ್ರೀತಿಯ ಒಂದು ರೀತಿ' ಎಂದು ತನ್ನಷ್ಟಕ್ಕೆ ಸಿದ್ಧಾಂತ ರೂಪಿಸಿ ಕೊಂಡಿದ್ದಳು. ಈಗ ಅಂತಹ ಕೆಲಸವಿರಲಿಲ್ಲ.

'ನೀನಿನ್ನು ಬೂಟ್ಸು ಮುಟ್ಟಬಾರದು' ಎಂದು ಗಟ್ಟಿಯಾದ ಸ್ವರದಲ್ಲಿ ಗದರಿ ಹೇಳಿದ್ದ ಗಂಡ.

ಹೆಂಡತಿ ಮಾತನಾಡಬಹುದೆಂದು ನಿರೀಕ್ಷಿಸಿಯೇ ಇದ್ದ ಪುಟ್ಟಣ್ಣನಿಗೆ ಆ ಪ್ರಶ್ನೆ ಅನಿರೀಕ್ಷಿತವಾಗಿರಲಿಲ್ಲ. ಉತ್ತರವೆಂದು ಪುಟ್ಟಣ್ಣ ಗಂಟಲು ಸರಿಪಡಿಸಿದ.

"ಹೂಂ."

ಯಾಕೆ ಕೇಳಿದೆ? ಎಂಬ ಅವ್ಯಕ್ತ ಪ್ರಶ್ನೆಯೂ ಅಡಕವಾಗಿತ್ತು ಆ ಹೂಂ ಕಾರದಲ್ಲಿ.

"ನಿನ್ನೆ ಹೇಳಿದ್ದು ನೆನಪಿದೆಯೇನು?"

ನೆನಪಿತ್ತು. ಆದರೂ ಒಂದೂ ತಿಳಿಯದವನಂತೆ ಪುಟ್ಟಣ್ಣ ಕೇಳಿದ:

"ಇಲ್ವಲ್ಲ. ಏನು?"

ಗಂಡ ಸುಳ್ಳಾಡುತ್ತಿರುವನೆಂಬುದು ಗೊತ್ತಿದ್ದೇ ಸುನಂದಾ ಹೇಳಿದಳು:

"ಈ ದಿನ ಬಾಡಿಗೆ ವಸೂಲಿಗೆ ಮನೆ ಮಾಲಿಕರು ಬರಬಹುದು–"

ಒಮ್ಮೆಲೆ ರೋಷದಿಂದ ಮುಖ ಕೆಂಪಡರಿ ಪುಟ್ಟಣ್ಣ ಕೂಗಾಡಿದ:

"ಅಷ್ಟೇನಾ? ಎಲ್ಲಾ ಒಂದೇ ಸಲ ಹೇಳಿ ಮುಗಿಸು!"

ಸುನಂದೆಯ ಮುಖಕ್ಕೇ ಬಡೆದಂತಾಯಿತು ಆ ಮಾತು. ಶಾಂತವಾಗಿ ಬಿಡಿ ಬಿಡಿಯಾಗಿ ಒಂದೊಂದೇ ವಿಷಯವನ್ನು ಪ್ರಸ್ತಾಪಿಸಿ, ಅಗತ್ಯ ಬಿದ್ದರೆ ಮೃದುವಾಗಿ ವಾದಿಸಿ, ಕಣ್ಣೀರನ್ನು ಸುರಿಸಿ, ತಾನು ಗೆಲ್ಲಬೇಕೆಂದು ಸುನಂದಾ ಯೋಚಿಸಿದ್ದಳು. ಆದರೆ ಗಂಡನ ಆರ್ಭಟದೆದುರು ಆ ಯೋಚನೆಯಲ್ಲಿ ತಲೆಕೆಳಗಾಯಿತು. ಒಂದು ನಿಮಿಷ ನಾಲಗೆಯೇ ಉಡುಗಿ ಹೋದವರಂತೆ ಆಕೆ ಕುಳಿತಳು. ಆದರೆ ಗಂಡ ಕೋಟು ತೊಟ್ಟುಕೊಳ್ಳುತ್ತಿದ್ದಂತೆಯೇ ಚೇತರಿಸಿಕೊಂಡಳು:

"ಧಾರಾಳವಾಗಿ ಹೇಳ್ತೀನಿ. ಅಗಸರವನೂ ಬರ್ತಾನೆ. ನಾಳೆ ಅಕ್ಕಿ ತೀರುತ್ತೆ. ಜಿನಸಿನ ಅಂಗಡಿಯವನಿಗೆ ಮುಖ ತೋರಿಸೋ ಹಾಗಿಲ್ಲ. ನಾಡಿದ್ದು ಕೆಲಸದವಳು ಬಂದೇ ಬರ್ತಾಳೆ. ಹಾಲ್ನೋನು ನಿಲ್ಲಿಸ್ಬಿಡ್ತೀನಿ ಅಂದಿದಾನೆ. ಲೈಟ್ ಬಿಲ್ಲು ಕಟ್ನೋ ಸಮಯವೂ ಆಗ್ತಾ ಬಂತು...ಡಾಕ್ಟರಿಗೂ ಕೊಟ್ಟಿಲ್ಲ."

ಗಟ್ಟಿಯಾಗಿ ಹಾಗೆ ಹೇಳುತ್ತಿದ್ದ ತನ್ನ ಸ್ವರವನ್ನು ತಾನೆ ಕೇಳುತ್ತ ಸುನಂದಾ ಧೈರ್ಯಗೊಂಡಳು.

ಆದರೆ ಆತ ಅಷ್ಟಕ್ಕೆಲ್ಲ ಅಧೀರನಾಗುವಂತಿರಲಿಲ್ಲ.

"ಮುಗೀತೇನು?"

"ಮುಗೀತು–ಸದ್ಯಕ್ಕೆ. ಏನು ಯೋಚ್ನೆ ಮಾಡಿದೀರ ಹೇಳಿ?"

"ಯೋಚ್ನೆ ಮಾಡೋದೂಂದ್ರೆ?"

"ಯಾಕೆ? ಯೋಚ್ನೆ ಮಾಡೋದೂಂತ ಇಲ್ವೇನು?"

"ಸಾಕು! ಇನ್ನೂ ಉದ್ದಕ್ಕೆ ಎಳೀಬೇಡ!"

"ಉದ್ದವೋ ಗಿಡ್ಡವೋ. ದುಡ್ಡುಕೊಟ್ಟಿಟ್ಟು ಹೋಗಿ. ಈ ಸಲದ ಸಂಬಳದ ಹಣ–ಎಲ್ಲಿದೆ ತೋರಿಸಿ."

"ಸಂಬಳದ ಹಣ? ಪರವಾಗಿಲ್ವೆ ನೀನು! ಹೂಂ... ನನಗೊಂದು ಮೂಗುದಾರ ಹಾಕೋಣಾಂತ್ಲೋ?"

ಈ ಮಾತುಕತೆಯೊಂದನ್ನೂ ಗಮನಿಸದೆ ಮಗು ತನ್ನ ಕಾರ್ಯದಲ್ಲೆ ನಿರತ ವಾಗಿತ್ತು. ಆದರೆ ಒಮ್ಮೆಲೆ ಹಾಲು ನಿಂತುದನ್ನು ಕಂಡು ಅದು ಸಿಟ್ಟಾಯಿತು. ತಾಯಿ ಛಲದಿಂದ ಮಾತನಾಡಿದಂತೆ ಮಗುವೂ ಛಲದಿಂದ ಬರಿ ಮೊಲೆಯನ್ನೇ ಚೀಪಿತು. ಆದರೆ ಅತೃಪ್ತಿಯುಂಟಾಗಿ, ಅಸಹಾಯತೆಯಿಂದ ಅಳತೊಡಗಿತು.

ಅಳುತ್ತಿದ್ದ ಮಗುವನ್ನು ಸುನಂದಾ ಎದೆಗವಚಿಕೊಂಡಳು. ಗಂಡನ ಅಣಕಿಸುವ ಧ್ವನಿಗೆ ಆಕೆ ಅಂಜಲಿಲ್ಲ.

"ನೀವು ಇವತ್ತೊಂದು ದಿನ ಮನೇಲಿದ್ದು ನೋಡಿ. ಗೊತ್ತಾಗುತ್ತೆ"

"ನಿನಗೆ ಈಗಾಗ್ಲೇ ಗೊತ್ತಾಯ್ತೇನು?"

"ಓಹೋ."

"ಏನು ಗೊತ್ತಾಯ್ತು? ಸಂಸಾರ ಸಾಗಿಸೋದು ಕಷ್ಟ ಅಂತ್ಲೋ?"

"ನೀವು ಹೀಗೆಲ್ಲಾ ಮಾತಾಡ್ಬೇಡಿ."

"ತಲಹರಟೆ ಮಾತ್ನಾಡ್ಬೇಡಿ–ಅನ್ನು ಧೈರ್ಯವಾಗಿ."

"ಹೌದು, ತಲಹರಟೆ ಆಡ್ಬೇಡಿ. ಸಾಯಂಕಾಲದೊಳಗೆ ಬಾಕಿಯೆಲ್ಲಾ ಸಂದಾಯ ಮಾಡೋಕೆ ನೀವು ಏರ್ಪಾಟು ಮಾಡದೇ ಇದ್ದರೆ ನಾನು ಉಪವಾಸ ಬಿದ್ದು ಸಾಯ್ತಿನಿ."

"ಅದಕ್ಕೆ ಅನ್ನ ಸತ್ಯಾಗ್ರಹ ಅಂತ ಕಣೇ ಹೆಸರು!"

ಈಗ ಸುನಂದಾ ಉತ್ತರವೀಯಲಿಲ್ಲ. ತನ್ನ ಸಾಹಸದ ಕೋಟೆ ಮುರಿದು ಪುಡಿ ಯಾದ ಹಾಗೆ ಬಿಕ್ಕಿ ಬಿಕ್ಕಿ ಅತ್ತಳು.

ಆತನೇನೋ ಕಂಬನಿ ಒರೆಸಲು ಮುಂದೆ ಬರಲಿಲ್ಲ. ಬದಲು ಹೊರ ಬಾಗಿಲ ಬಳಿ ಸಾರಿ, ಮೆಟ್ಟಲಿಳಿದ.

ಇಳಿಯುತ್ತ ಹೇಳಿದ:

"ಇವತ್ತೊಂದು ದಿನ ತಡಕೋ; ರಾತ್ರಿ ತಂದ್ಹಾಕ್ತೀನಿ ದುಡ್ನ."

೫

ದಿನದ ಕೆಲಸದ ವಿರಾಮ ವೇಳೆಯಲ್ಲಿ ಪುಟ್ಟಣ್ಣ, ಮನಸಿಲ್ಲದ ಮನಸಿನಿಂದ ಬ್ಯಾಂಕಿಗೆ ಹೋದ. ಅಗತ್ಯದ ವೆಚ್ಚಕ್ಕೆ ಬೇಕಾದುದೆಷ್ಟೆಂಬುದನ್ನು ಲೆಕ್ಕ ಹಾಕಿ, ಅಷ್ಟು

ಹಣವನ್ನೂ ಹೆಚ್ಚಿಗೆ ಐವತ್ತು ರೂಪಾಯಿಗಳನ್ನೂ ಪಡೆದ.

ಹಣವನ್ನೆಲ್ಲ ಕೋಟಿನ ಒಳಜೇಬಿನಲ್ಲಿರಿಸಿದಾಗ ಆತನಿಗೆ ನಗುಬಂತು. ಅಂತೂ ಸರಿಯಾದ ರೀತಿಯಲ್ಲೇ ಹೆಂಡತಿಗೆ ಪಾಠ ಕಲಿಸಲು ಮೊದಲು ಮಾಡಿದ್ದೇನೆ–ಎಂದು ಕೊಂಡ.

ಹಣವಿದ್ದರೂ ಯಾಕೆ ಹಾಗೆ ವರ್ತಿಸಬೇಕು? ಹಲವರಿಗೆ ಇದು ಸ್ವಾರಸ್ಯಕರ ಪ್ರಶ್ನೆಯಾಗುವುದೆಂದು ಪುಟ್ಟಣ್ಣನಿಗೆ ಗೊತ್ತಿತ್ತು. ಆತನ ದೃಷ್ಟಿಯಲ್ಲಿ ಅಂಥವರೆಲ್ಲ, ಲೋಕದ ರೀತಿ ನೀತಿಗಳನ್ನು ತಿಳಿಯದವರು. ಪುಟ್ಟಣ್ಣ ಮಗುವಲ್ಲ ಈಗ. ಆತನಿಗೆ ಲೋಕದ ಅನುಭವವಿದೆ. ಹಣವಿದ್ದಾಗ ಇಲ್ಲದವನಂತಿರುವುದು; ಹಣವಿಲ್ಲದಾಗ ಇದ್ದವನಂತಿರುವುದು–ಒಂದು ನಾಣ್ಯದ ಎರಡು ಮುಖಗಳೆಂದು ಅವನ ಅಭಿಪ್ರಾಯ. ಆತನ ದೃಷ್ಟಿಯಲ್ಲಿ ಎರಡೂ ಸರಿಯೆ. ಹೊನ್ನು–ಹೆಣ್ಣು–ಮಣ್ಣು ಎಂದು ಜತೆ ಯಾಗಿ ಆಡುವ ರೂಢಿಯ ಮಾತೊಂದಿದೆ. ಅದು ಈಗಿನ ಕಾಲಕ್ಕೆ ಅನ್ವಯಿಸದ ಬರಡು ವೇದಾಂತ–ಎಂಬುದು ಪುಟ್ಟಣ್ಣನ ತೀರ್ಪು. ಈ ಕಾಲದಲ್ಲಿ ಮುಖ್ಯವಾದುದು ಹಣ ಮಾತ್ರ. ಹಣವೊಂದಿದ್ದರೆ ಹೆಣ್ಣಿಗೂ ಸ್ವಾಮಿಯಾಗಬಹುದು, ಮಣ್ಣಿಗೂ ಸ್ವಾಮಿಯಾಗಬಹುದು. ಕಾಂಚಾಣವಿಲ್ಲದ ವ್ಯಕ್ತಿ ಕಸಕ್ಕೆ ಸಮ...

ವಿಧ ವಿಧದ ಜನರನ್ನು ಪುಟ್ಟಣ್ಣ ನೋಡಿದ್ದ. ಕಾಂಚನವನ್ನು ಲಕ್ಷ್ಮೀದೇವಿ ಯಾಗಿ ಕಂಡು ಪೂಜೆಮಾಡುವ ಶ್ರೀಮಂತರಿದ್ದರು. ಮಹಡಿ ಮನೆಯಿಂದ ಗುಡಿಸಲಿ ಗಿಳಿದವರು ಕಾಂಚನವನ್ನು ಸೂಳೆಯೆಂದು ಜರೆಯುತಿದ್ದರು. ಪುಟ್ಟಣ್ಣನ ದೃಷ್ಟಿ ಯಲ್ಲಿ ಅದೆಲ್ಲ ಅರ್ಥವಿಲ್ಲದ ಭಾವವಿಕಾರ. ಆತನ ಪಾಲಿಗೆ ಹಣ ಎಂಬುದೊಂದು ಮಹಾ ಶಕ್ತಿ. ಆ ಶಕ್ತಿಯೊಂದೇ ಸತ್ಯ; ಉಳಿದುದೆಲ್ಲ ಮಿಥ್ಯ. ಅದಕ್ಕೆ ಸಂಬಂಧಿಸಿ ಭಕ್ತಿಯ ಪ್ರೇಮದ ತತ್ವಜ್ಞಾನವಿಲ್ಲ; ಹಣದ ಗಳಿಕೆಯ ಯತ್ನದಲ್ಲಿ ನೀತಿ ನಿಯಮ ಗಳೆಂಬುದಿಲ್ಲ....

ಹಾಗೆ ತಿಳಿದ ಪುಟ್ಟಣ್ಣ ಹೊಸ ಮನುಷ್ಯನಾಗಿದ್ದ. ಅರ್ಥವಾಗದೇ ಉಳಿದಿದ್ದ ಎಷ್ಟೋ ವಿಷಯಗಳು ಆತನಿಗೀಗ ಸ್ಪಷ್ಟವಾದುವು. ಸಂಸಾರ ಸಂತಾನ ಎಂಬ ಮೋಹವೆಲ್ಲ ಬರಿಯ ಭ್ರಮೆ. ಸಹಧರ್ಮಿಣಿ, ಬದುಕಿನ ಒಡನಾಡಿ, ಎಂದೆಲ್ಲ ಕೈ ಹಿಡಿದ ಹೆಣ್ಣನ್ನು ಕಾಣುವುದು ತಿಳಿವಳಿಕೆಯಿಲ್ಲದ ಪೆದ್ದುಗಳ ಲಕ್ಷಣ. ಪ್ರಾಮಾಣಿಕತೆ, ಋಜುಮಾರ್ಗ, ಎನ್ನುವುದೆಲ್ಲ ಉಳ್ಳವರು ಇಲ್ಲದವರಿಗೆ ಬೋಧಿಸುವ ವೇದಾಂತ. ಪಾಪ–ಎಂಬುದು ಅರ್ಥಹೀನ ಕಲ್ಪನೆ. ಶಕ್ತಿಯುಳ್ಳ–ಹಣದ ಶಕ್ತಿಯುಳ್ಳ–ಹುಲಿ ಯಾಗಿ ಬಾಳುವುದಾಗದೇ ಹೋದರೆ ಉಳಿಯುವ ಹಾದಿಯೊಂದೇ,–ಬಡ ಹುಳವಾಗಿ ನರಳುವುದು....ಪುಟ್ಟಣ್ಣ, ತಾನು ಹುಳವಾಗದೆ ಹುಲಿಯಾಗಬೇಕೆಂದು ತೀರ್ಮಾ ನಿಸಿದ್ದ.

ಹುಲಿ ಸಾಧು ಪ್ರಾಣಿಗಳನ್ನು ತಿನ್ನುತ್ತದೆ. ಆ ಪಾತ್ರವನ್ನು ವಹಿಸಲು ಪುಟ್ಟಣ್ಣನೂ ಸಿದ್ಧನಾಗಿದ್ದ. ಅದಕ್ಕೆ ಮೊದಲ ಹೆಜ್ಜೆ–'ಹೃದಯಹೀನ' ಎನ್ನಿಸಿ

ಕೊಳ್ಳುವುದು; 'ಕಠೋರ ಮನಸ್ಕ' ಎಂಬ ಬಿರುದು ಸಂಪಾದಿಸುವುದು. ಮನೋವೃತ್ತಿಯನ್ನೆ ಮೂಲಭೂತವಾಗಿ ಬದಲಾಯಿಸಿ, ತನ್ನ ವ್ಯಕ್ತಿತ್ವವನ್ನು ತನಗೆ ಬೇಕಾದಂತೆ ತಾನೇ ರೂಪಿಸಿಕೊಳ್ಳುವುದು. ಹಾಗೆ ಮಾಡಲು ಮೊದಲ ಪ್ರಯೋಗಕ್ಷೇತ್ರ, ಸ್ವಂತ ಮನೆಯೇ. ಆ ಪ್ರಯೋಗಕ್ಕೆ ಮೊದಲ ಮಿಕಗಳು, ಹೆಂಡತಿ ಮತ್ತು ಮಗುವೇ.

ಇಷ್ಟೆಲ್ಲ ನಡೆಯುತ್ತಿದ್ದರೂ ಏನೊಂದೂ ತಿಳಿಯದೆ ಆ ಬಡಪಾಯಿಗಳು ವಿಲಿ ವಿಲಿ ಒದ್ದಾಡುವುದನ್ನು ನಿರೀಕ್ಷಿಸಿನೋಡುವುದು ಎಂತಹ ಸುಖ!....

—ಹಾಗೆ ಯೋಚಿಸುತ್ತ ಪುಟ್ಟಣ್ಣ ಒಂದು ಹೋಟೆಲಿಗೆ ನುಗ್ಗಿದ. ಅದು ಆ ಬೀದಿಯ ಪ್ರಖ್ಯಾತ ಫಲಾಹಾರ ಮಂದಿರವಲ್ಲ–ಪುಟ್ಟ ಅಂಗಡಿ. ಒಮ್ಮೊಮ್ಮೆ ಅಂತಹ ಕೆಳ ತರಗತಿಯ ಕಾಫಿ ಹೋಟೆಲುಗಳನ್ನು ಹೊಕ್ಕು ಕುಳಿತಿರುವುದು ಪುಟ್ಟಣ್ಣನ ಹೊಸ ಅಭ್ಯಾಸ. ಹಣ ಎಲ್ಲಿ ಎಲ್ಲಿ ಯಾವ ಯಾವ ರೀತಿ ಬದುಕನ್ನು ಏರ್ಪಾಟುಗೊಳಿಸಿದೆ? ಎಂದು ತಿಳಿಯುವ ಆಸೆ ಆತನಿಗೆ–ಜನರ ನಡೆನುಡಿ ವಿಚಾರಗಳನ್ನು ಹೆಚ್ಚು ಚೆನ್ನಾಗಿ ತಿಳಿಯುವ ಆಸೆ.

ಅಲ್ಲಿ ಇದ್ದುದರಲ್ಲೇ ತನಗೆ ಬೇಕಾದ ತಿಂಡಿಯನ್ನು ಪುಟ್ಟಣ್ಣ ಆರಿಸಿದ. ಅದನ್ನು ತಿನ್ನುತ್ತಿದ್ದಂತೆ, ಹಿಂದೆ ಹೆಂಡತಿಯ ಕೈಯಡುಗೆಯ ರುಚಿಯನ್ನೇ ತಾನು ಬಯಸುತ್ತಿದ್ದ ದಿನಗಳು ಅವನ ನೆನಪಿಗೆ ಬಂದುವು. ಮನುಷ್ಯ ಹುಚ್ಚನಾಗುವುದಕ್ಕೂ ಒಂದು ಮಿತಿ ಬೇಕು–ಎಂದು ನಕ್ಕಿತು ಮನಸ್ಸು.

ಮನೆಯಲ್ಲಿ ಗಂಡ ಹೆಂಡಿರಿಬ್ಬರೇ ಉಳಿದಾಗಿನ ಕಾಲ. ಐದು ಗಂಟೆಯಾಗುವುದನ್ನೇ ಕಾಯುತ್ತಿದ್ದು ಆತ ನಿಮಿಷವೂ ತಡಮಾಡದೆ ಆಫೀಸು ಬಿಡುತ್ತಿದ್ದ.

ಒಂದು ದಿನ ಹೀಗಾಯಿತು. ಮೇಲಿನವರು ಪುಟ್ಟಣ್ಣನನ್ನು ತಡೆದು ಕೇಳಿದರು: "ಸ್ವಲ್ಪ ಫ್ಯಾಕ್ಟರಿ ಕಡೆ ಹೋಗಿ ಬರ್ತೀರಾ? ಅದು ಯಾವುದೋ ಡಿಸೈನನ್ನ ನೀವು ನೋಡಬೇಕಂತೆ."

ಪುಟ್ಟಣ್ಣನಿಗೆ ಪೇಚಿಗಿಟ್ಟುಕೊಂಡಿತು. ಸಿನಿಮಾಕ್ಕೆ ಹೊರಡಲು ಗಂಡನಿಗಾಗಿಯೇ ಕಾದಿದ್ದ ಹೆಂಡತಿ ಒಂದೆಡೆ; 'ಫ್ಯಾಕ್ಟರಿ ಕಡೆ ಹೋಗಿ ಬರ್ತೀರಾ?' ಎಂದು ಕೇಳುತ್ತಿದ್ದ ಮೇಲಿನ ಅಧಿಕಾರಿ ಒಂದೆಡೆ. ನಾಲಗೆ ಏನು ಹೇಳಲಿ ಎಂದು ಮನಸ್ಸನ್ನು ಕೇಳಿತು. ಬಲಗೈ ಪ್ಯಾಂಟಿನ ಜೇಬಿನೊಳಕ್ಕೆ ಇಳಿದು ಬೆವರೊಡೆಯುತಿದ್ದ ಮುಖವನ್ನೊರೆಸಲು ಕರವಸ್ತ್ರ ಹುಡುಕಿತು... ತಡವರಿಸುತ್ತ ಆತನೆಂದ:

"ಸಾರ್....ಆ ಕೆಲಸ ತುಂಬಾ ಅರ್ಜೆಂಟೇ ಸಾರ್? ನಾಳೆ ಬೆಳಗ್ಗೆ..."

ಮಾತನ್ನು ಪೂರ್ತಿಮಾಡಲಾಗದೆ ಒದ್ದಾಡುತ್ತಿದ್ದ ಪುಟ್ಟಣ್ಣನನ್ನು ಕಂಡು ಆ ಅಧಿಕಾರಿ ಗಟ್ಟಿಯಾಗಿ ನಕ್ಕು ಬಿಟ್ಟರು. ವಿಷಯ ತಿಳಿಯದೆ ಪುಟ್ಟಣ್ಣನ ಮುಖ ವಿವರ್ಣವಾಯಿತು.

"ಓ ಹೋ ಹೋ...ಸರಿ—ಸರಿ...ನಾಳೆ ಮಾಡೋಣ ಅಂತೀರಾ? ಈಗ ಪುರಸೊತ್ತಿಲ್ಲ ಅಲ್ಲ....?"

ಗದರಿಸಬೇಕಾದ ಕಡೆ ನಗೆಮಾತು.

"ಹಾಗಲ್ಲ ಸಾರ್..."

"ಪರವಾಗಿಲ್ಲ ಮಿ. ಪುಟ್ಟಣ್ಣ, ಹೋಗಿ ಸುಮ್ಮನೆ ತಮಾಷೆಗೆ ಅಂದೆ. ಮದುವೆ ಆಗಿ ಒಂದು ವರ್ಷವಾದ್ಮೇಲೆ ಹನಿಮೂನ್ ಶುರು ಮಾಡಿದೀರಲ್ಲ ಅದಕ್ಕೆ ಅಂದೆ."

ನಾಚಿಕೆಯಿಂದ ಮುಖಕೆಂಪೇರಿದ ಪುಟ್ಟಣ್ಣ ದಡದಡನೆ ಮೆಟ್ಟಲಿಳಿದು ಬೀದಿ ಸೇರಿದ.

....ಎಲ್ಲಾ ಎಷ್ಟೊಂದು ವಿಚಿತ್ರ! ಪುಟ್ಟಣ್ಣ ನಿಗನಿಸುತಿತ್ತು: ಎಲ್ಲ ಗಂಡಸರೂ ಹೀಗೆಯೇ ಇರಬೇಕು. ಮದುವೆಯಾಗಿ ಹೆಣ್ಣಿನ ಸಹವಾಸ ದೊರೆತ ಮೊದಲಲ್ಲಿ ಮೈಮರೆತು ಬಿಡುವುದು. ಆ ಮೇಲೂ ಎಚ್ಚರಗೊಳ್ಳುವವರ ಸಂಖ್ಯೆ ಕಡಮೆ. ಹೆಂಡಂದಿರಿಗೆ ದಾಸರಾಗುವವರೇ ಹೆಚ್ಚು; ಸಂಸಾರದ ಸುಳಿಯಲ್ಲಿ ಸಿಲುಕಿ ಆಳ ಆಳಕ್ಕೆ ಇಳಿಯುವವರೇ ಅಧಿಕ.

ತಾನು ಹಾಗಲ್ಲ, ತಾನು ಹಾಗಾಗಬಾರದು. ತನ್ನ ಬದುಕಿಗೊಂದು ಗುರಿಯಿದೆ. ಅದನ್ನು ತಾನು ಸೇರಬೇಕು. ಅಡೆತಡೆಗಳು ಏನು ಒದಗಿದರೂ ಒದ್ದು ಝಾಡಿಸಿ ಮುಂದೆ ಸಾಗಬೇಕು...

...ಹೋಟೆಲಿನ ಮಾಣಿ ಹತ್ತಿರ ಬಂದಾಗ ಪುಟ್ಟಣ್ಣ ಹೇಳಿದ:

"ಕಾಫಿ."

"ಸ್ಪೆಷಲ್ಲೆ ಸಾರ್?"

"ಹೂಂ."

...ಮನೆಯಿಂದ ಸುನಂದಾ ಕಳುಹಿದ್ದ ಊಟ ಆಗಲೆ ಬಂದಿತ್ತು. ಏನು ಅಡುಗೆ ಇವತ್ತು? ಹಿಂದೆಯಾದರೆ ಅದೇನೆಂದು ತಿಳಿದುಕೊಂಡು ಅದರ ರುಚಿಯ ನಿರೀಕ್ಷಣೆಯಲ್ಲಿ ಆತನಿರುತ್ತಿದ್ದ. ಈಗ ಆಸಕ್ತಿಯಿಲ್ಲ....'ಬೇಳೆ ಸಾರುಮಾಡು'—ತಾನೆ ಅಂದಿದ್ದನಲ್ಲವೆ ಆ ಮಾತನ್ನು? ಹುಂ! ಎಷ್ಟು ತಮಾಷೆ! ಹಿಂದೆ ತನ್ನ ಕೊರಳನ್ನು ಕೈಗಳಿಂದ ಸುತ್ತುವರಿದು, ಅದು ಬೇಕು—ಇದು ಬೇಕು ಎಂದು ಆಕೆ ಕೇಳುತ್ತಿದ್ದಳು. ತಾನು ಒಪ್ಪಿಕೊಂಡು ಬಿಡುತ್ತಿದ್ದ. ಹಾಗೆ ನಿಧಾನವಾಗಿ ತನ್ನ ಮೇಲೆ ಪ್ರಭುತ್ವ ನಡೆಸಲು ಆಕೆ ಯತ್ನಿಸುತ್ತಿದ್ದಳು. ಆದರೆ ಆ ತಂತ್ರ ಯಶಸ್ವಿಯಾಗುವುದಕ್ಕೆ ಮುಂಚೆಯೇ ತಾನು ಕೈ ಕೊಸರಿಕೊಂಡಿದ್ದ.

ಆತ್ಮಾಭಿಮಾನದಿಂದ ಪುಟ್ಟಣ್ಣನೆಂದುಕೊಂಡ:

"ನಾನು ಗಂಡಸು, ಆಕೆ ಎಷ್ಟೆಂದರೂ ಹೆಣ್ಣು ಹೆಂಗಸು."

ಕಾಫಿ ಬಂತು, ಬಿಲ್ ಬಂತು.

ಮನೆಯ ಊಟವನ್ನು ಜವಾನನಿಗೆ ಬಿಟ್ಟು ಈ ಉಪಾಹಾರಕ್ಕೋಸ್ಕರ ದುಡ್ಡು ತೆರುವುದು ತಪ್ಪಲ್ಲವೇನೊ—ಎಂದು ಕೆಣಕಿತು ಮನಸ್ಸು. ಮೌನದ ಭಾಷೆಯಲ್ಲಿ ಪುಟ್ಟಣ್ಣ ಮನಸ್ಸಿಗೆ ಉತ್ತರವಿತ್ತ: 'ತಪ್ಪಲ್ಲ: ಹೆಂಡತಿಯ ಮೇಲೆ, ಆ ಅಡುಗೆಯ

ಮೇಲೆ, ಯಾವ ವ್ಯಾಮೋಹವೂ ಇಲ್ಲವೆಂಬುದನ್ನು ತೋರಿಸಿಕೊಡುವುದಕ್ಕಾಗಿಯೇ ಹೀಗೆ ಮಾಡುತ್ತಿದ್ದೇನೆ!'

ವ್ಯಕ್ತಿ ಮೊದಲು ಸ್ವತಂತ್ರನಾಗಬೇಕು. ಆ ಬಳಿಕ ತನಗಿಷ್ಟಬಂದಂತೆ ಮಾಡಬೇಕು.

ತನ್ನ ಸ್ವಾತಂತ್ರ್ಯವನ್ನು ಪುಟ್ಟಣ್ಣ ಗಳಿಸಿದ್ದ. ಅನಂತರ ತನಗಿಷ್ಟಬಂದಂತೆ ಮಾಡಲು ತೊಡಗಿದ್ದ.

....ಕಾಲುನಡಿಗೆಯಲ್ಲೇ ಪುಟ್ಟಣ್ಣ ಆಫೀಸು ಸೇರಿದ.

ಆಫೀಸು–ಯಾವ ದೇಶದಿಂದಲೋ ಯಾರೋ ಬಂದು ದುಡ್ಡು ತಂದು ಇಲ್ಲಿ ನೆಲೆನಿಂತು ಕಟ್ಟಿದ ಕಾರ್ಖಾನೆಗೆ ಸಂಬಂಧಿಸಿದ ಆಫೀಸು. ಇಲ್ಲಿಯೇ ತಾನು ಮುದುಕನಾಗುವವರೆಗೂ ಇರುವುದುಂಟೆ? ಖಂಡಿತ ಇರಕೂಡದು. ಇಂತಹ ಕಾರ್ಖಾನೆಯನ್ನೇ ಸ್ವತಃ ಕೊಳ್ಳುವ ಸಾಮರ್ಥ್ಯವಂತನಾಗಬೇಕು ತಾನು. ನಿಂತಲ್ಲೇ ನಿಲ್ಲುವುದೆಂದರೆ ದಿನ ದಿನವೂ ಸ್ವಲ್ಪ ಸ್ವಲ್ಪವೇ ಸಾಯುವ ಹಾಗೆ. ತಾನಿರುವುದು ಸಾಯುವುದಕ್ಕಲ್ಲ, ಬದುಕುವುದಕ್ಕೆ; ಬದುಕಿ, ಬೇಗಬೇಗನೆ ಮೇಲೇರಿ ಹೋಗುವುದಕ್ಕೆ.

ಆ ಆಫೀಸಿನಲ್ಲಿ ಆತನಿಗೆ ಸಹೋದ್ಯೋಗಿಗಳಿದ್ದರು. ಹಿಂದೆ ಅವರೊಡನೆಲ್ಲ ಪುಟ್ಟಣ್ಣ ಅನ್ಯೋನ್ಯವಾಗಿರುತ್ತಿದ್ದ. ಈಗ ಅವರ ಬಗೆಗೆ ತಾತ್ಸಾರ. ಹಿಂದೆ ಅವರ ಸುಖದುಃಖಗಳನ್ನು ಆತ ವಿಚಾರಿಸುತ್ತಿದ್ದ–ತನ್ನ ವಿಷಯವಾಗಿಯೂ ವರದಿ ಮಾಡುತ್ತಿದ್ದ. ಈಗ ಅನಗತ್ಯವಾದ ಅಂತಹ ಮಾತಿಲ್ಲ. ಆ ಸಹೋದ್ಯೋಗಿಗಳು ತನ್ನ ವರ್ತನೆಯನ್ನು ವಿಚಿತ್ರ ದೃಷ್ಟಿಯಿಂದ ನೋಡುತ್ತಿದ್ದರೆಂಬುದು ಪುಟ್ಟಣ್ಣನಿಗೆ ಗೊತ್ತಿತ್ತು. ಅದರಿಂದ ಸಮಾಧಾನವಾಗಿತ್ತು ಆತನಿಗೆ. ಸಾಮಾನ್ಯವಾಗಿದ್ದರೆ ಯಾವಾಗಲೂ ಸಾಮಾನ್ಯನೇ. ವಿಚಿತ್ರವಾಗಿದ್ದರೇ ಮುಂದಿನ ಸೋಪಾನವನ್ನು ಮೆಟ್ಟಿ ಏರಲು ಶಕ್ತಿ ಬರುವುದು.

ಮೆಟ್ಟಿ ಏರುವುದು. ಅದೀಗ ಸಾಮರ್ಥ್ಯದ ಒರೆಗಲ್ಲು. ಹಾದಿಗಡ್ಡವಾಗಿ ಜನ ಮಲಗಿದ್ದರೆ ತುಳಿದು ಹೋಗಬೇಕು. ಹೆಣ ಮಲಗಿದ್ದರೂ ತುಳಿದು ಹೋಗಬೇಕು. ಬಾಗಿದವರನ್ನು ಮತ್ತೂ ಬಾಗಿಸಬೇಕು. ಆ ಬೆನ್ನಿನ ಮೇಲೆ ಕುಳಿತೇ ಸವಾರಿ ಮಾಡಬೇಕು.

'ಅಯ್ಯೋ ಪಾಪ!' ಎನ್ನುವ ಪದಪ್ರಯೋಗ ಒಂದಿತ್ತು. ಯಾವನು ಹಾಗೆ ಮೊದಲು ಅಂದನೋ! ಒಂದು ಕಾಲದಲ್ಲಿ ಪುಟ್ಟಣ್ಣನೂ ಹಾಗೆಯೇ ಆಡುತ್ತಿದ್ದ. ಸಂಕಟಪಡುವ ಯಾರನ್ನಾದರೂ ಕಂಡಾಗ ಮನಸ್ಸು 'ಅಯ್ಯೋ ಪಾಪ' ಎನ್ನುತ್ತಿತ್ತು. ಒಮ್ಮೊಮ್ಮೆ ಸ್ವರ ಹೊರಡಿಸಿಯೇ 'ಅಯ್ಯೋ ಪಾಪ!' ಎಂದು ಉದ್ಗಾರವೆತ್ತುತ್ತಿದ್ದ. ಈಗ ಆ ಪ್ರಸಂಗಗಳ ನೆನಪಾದಾಗ ನಗು ಆರುತ್ತಿತ್ತು...ಮನುಷ್ಯ ಎಷ್ಟೊಂದು ಮೂರ್ಖನಾಗುವುದೂ ಸಾಧ್ಯ! ಪುಟ್ಟಣ್ಣನ ದೃಷ್ಟಿಯಲ್ಲಿ 'ಕನಿಕರ' ಎನ್ನುವ ಪದ ದೌರ್ಬಲ್ಯದ ಸಂಕೇತ. ಯಾರಾದರೂ ಸಂಕಟಪಡುತ್ತಿದ್ದರೆ ಅದಕ್ಕೆ ಅವರೇ ಕಾರಣ. ಆ ಕಣ್ಣೀರಿನ ಕತೆ ಕೇಳಿದಾಗ "ಓ—ಹಾಗೋ" ಎಂದು ಹೇಳಿ ತಾತ್ಸಾರದಿಂದ

ನೋಡಬೇಕು. 'ಅಯ್ಯೋ ಪಾಪ!' ಎನ್ನುತ್ತ ಬುಳಬುಳನೆ ಕಣ್ಣೀರು ಸುರಿಸುವುದಲ್ಲ...

ಈ ಹೊಸ ತತ್ವಜ್ಞಾನವನ್ನು ರೂಪಿಸಿಕೊಂಡಿದ್ದ ಪುಟ್ಟಣ್ಣನೀಗ ಹೆಂಡತಿಯ ಕಣ್ಣೀರಿಗೆ ಹೆದರುವ ಗಂಡಲ್ಲ; ಯಾರ ಕಣ್ಣೀರನ್ನೂ ಕಂಡು ಕನಿಕರಿಸುವ ಹೆಣ್ಣಿಗನಲ್ಲ.

...ಆಫೀಸಿನ ಕೆಲಸ ಮುಗಿದು ಹೊರಡುವ ಹೊತ್ತಾಯಿತು. ಈಗೇನೂ ಬೇಗನೆ ಮನೆಗೆ ಹೋಗಬೇಕೆಂಬ ಆತುರವಿಲ್ಲ. ಮಗುವಿನ, ಹೆಂಡತಿಯ ಮುಖ ನೋಡಬೇಕೆಂಬ ಉತ್ಕಟ ಬಯಕೆಯೂ ಆತನಿಗಿಲ್ಲ.

ಆದರೆ ಹೆಚ್ಚು ತಡಮಾಡದೆ ಜತೆಗಾರರನ್ನು ಸೇರುವ ಕೆಲಸ ಒಂದಿದೆ. ಅದಕ್ಕೆ ಮುಂಚಿತವಾಗಿ ತಾನು ಮನೆಗೆ ಹೋಗಬೇಕು. ನೋಟುಗಳ ಕಂತೆಯನ್ನು ಹೆಂಡತಿಯ ಮುಖಕ್ಕೆಸೆಯಬೇಕು. ಆಗ ಅವಳಲ್ಲಾಗುವ ಮುಖಭಾವವನ್ನು ಗಮನಿಸಿ ಅಣಕಿಸಿ ಸಂತೋಷಪಡಬೇಕು.

ತನ್ನ ಶಕ್ತಿಯ ಪರಿಚಯವನ್ನು ಆಕೆಗೆ ಮಾಡಿಕೊಡುವುದಗತ್ಯ. ತನ್ನನ್ನು ಕಂಡು ಆಕೆ ಹೆದರುವಂತಾಗಬೇಕು. ಹೊರಗಿನವರು ಹೆದರುವುದಕ್ಕೆ ಮುಂಚಿತವಾಗಿ ಮನೆಯಾಕೆಯೇ ಹೆದರುವುದು ಮುಖ್ಯ. ಮೊದಲು ಮನೆ–ಬಳಿಕ ಊರು.

ಆತನಿಗೆ ಅರಿಯದಂತೆಯೇ ಕಾಲುಗಳು 'ಬಸ್ ಸ್ಟಾಪಿ'ನ ಬಳಿ ನಿಂತುವು. ಬಂದು ನಿಂತ ನೀಲಿ ಬಸ್ಸನ್ನು ಪುಟ್ಟಣ್ಣ ಹತ್ತಿದ. ಕುಳಿತುಕೊಳ್ಳಲು ಜಾಗವಿರಲಿಲ್ಲ. ಮೇಲಿನ ಕಂಬಿ ಹಿಡಿದು ಗಂಭೀರವಾಗಿ ನಿಂತು, ಕುಳಿತಿದ್ದವರು ತನಗಿಂತ ನಿಕೃಷ್ಟರೆಂಬಂತೆ, ತಿವಿಯುವ ನೋಟದಿಂದ ಅವರೆಲ್ಲರನ್ನೂ ಒಬ್ಬೊಬ್ಬರನ್ನಾಗಿಯೇ ನೋಡಿದ.

೬

ಬಹಳ ಹೊತ್ತು ಬಾಗಿಲ ಬಳಿ ಕಾದು ನಿಂತಿದ್ದ ಸುನಂದೆಯ ದೃಷ್ಟಿಗೆ, ಬರುತ್ತಲಿದ್ದ ಗಂಡ ಕಾಣಿಸಿದ. ಹಿಂದೆ, ಹಾಗೆ ಕಾದಿರುತ್ತಿದ್ದುದು ಹೇಗಿರುತಿತ್ತು! ಬಾಗಿಲಿಗೆ ಸ್ವಲ್ಪ ಮರೆಯಾಗಿ ಗೋಡೆಗೊರಗಿ ತುಡಿದು ಕೊಳ್ಳುತಿದ್ದ ಹೃದಯದಿಂದ ಇನಿಯನ ಬರವನ್ನು ಆಕೆ ಆಗ ಇದಿರುನೋಡುತ್ತಿದ್ದಳು. ದೂರದಿಂದ ಅಸ್ಪಷ್ಟವಾಗಿ ಯಾವುದೇ ಯುವಕಜೀವ ಕಾಣಿಸಿಕೊಂಡರೂ ಆಕೆಗೆ ಒಂದು ವಿಧವಾಗುತಿತ್ತು. ಆತ ಗಂಡನಲ್ಲವೆಂದು ಗೊತ್ತಾದ ಬಳಿಕ ನಿರಾಸೆ. ಆ ಬೀದಿಯಾಗಿ ಹೋಗುತ್ತಿದ್ದ ಯಾವನಾದರೂ, ಬಾಗಿಲ ಬಳಿ ಸಿಂಗರಿಸಿಕೊಂಡು ನಿಂತಿದ್ದ ಹೆಣ್ಣಿನತ್ತ ಕುತೂಹಲದಿಂದಲೋ ಆಸೆಯಿಂದಲೋ ನೋಡಿದಾಗ, ವಿಚಿತ್ರ ಅನುಭವ. ಮತ್ತೆಯೂ ಗಂಡನಿಗಾಗಿ ಕಾದು ನಿಂತಾಗ, ಎದೆಯಿಂದ ಆರಂಭವಾಗಿ ದೇಹದ ಅಂಗಾಂಗಗಳಿಗೂ ವ್ಯಾಪಿಸುತಿದ್ದ ನೋವು....

ಮಾತನ್ನು ಆಗಲೆ ಯೋಚಿಸಿದ್ದ ಪುಟ್ಟಣ್ಣ ಕೂಗಿ ಹೇಳಿದ:

"ಎಲ್ಲಿ ಸತ್ತೆ? ಬಂದು ಎತ್ಕೋ ಮಗೂನ! ಅಳ್ತಾ ಇರೋದು ಕೇಳಿಸೊಲ್ಲ?"

ಆಕೆ ಹೊರಗೆ ಬರಲಿಲ್ಲವೆಂದು ಪುಟ್ಟಣ್ಣ ಗದರಿದ:

"ಸುನಂದಾ! ನಾನು ಹೇಳಿದ್ದು ಕೇಳಿಸ್ತೋ ಇಲ್ವೋ?"

ಸುನಂದಾ ಹೊರಗೆ ಬಂದು ಮಗುವನ್ನೆತ್ತಿಕೊಂಡಳು. ತಾಯಿಯ ಕೈ ಆಸರೆ ದೊರೆತೊಡನೆಯೇ ಮಗು ಸುಮ್ಮನಾಯಿತು.

ದಿನವೆಲ್ಲಾ ಸುನಂದಾ ಸಿದ್ಧತೆ ಮಾಡಿಕೊಂಡಿದ್ದುದು ಅಷ್ಟು ಸುಲಭವಾಗಿ ವಿಫಲ ವಾಗಿತ್ತು. ಪ್ರತಿ ಸಲವೂ ಹಾಗೆಯೇ. ಯಾವಾಗಲೂ ಯಾವ ಪ್ರಯಾಸವೂ ಇಲ್ಲದೆ ಆತ ಜಯಶಾಲಿಯಾಗುತ್ತಿದ್ದ.

ಮಗುವನ್ನೆತ್ತಿಕೊಂಡು ಒಳಕ್ಕೆ ಹೊರಟು ಹೋಗೋಣವೆಂದಿತು ಸುನಂದೆಯ ಮನಸ್ಸು. ಅನುದಿನದ ಆ ದ್ವಂದ್ವದಲ್ಲಿ ಎಂದಿನಂತೆ ಈ ಸಲವೂ ವಿವೇಕ ನಕ್ಕಿತು... ಹೇಡಿಯಾಗಬಾರದೆಂದು ಸುನಂದಾ ಬಿಗಿದ ಮುಖ ತೋರಿಸುತ್ತ ಅಲ್ಲೇ ನಿಂತಳು.

ಆಕೆ ನಿಂತುದನ್ನು ಕಂಡು ಪುಟ್ಟಣ್ಣ ಪೆಚ್ಚಾದ.

ಆದರೆ ಮರುಕ್ಷಣವೆ ಮಾತಿನ ವೈಖರಿಯನ್ನು ಬದಲಾಯಿಸಿ ಆತ ಕೇಳಿದ: "ಬಂದಿದ್ದರೇನು ನಿನ್ನ ಸ್ನೇಹಿತರು?"

ಸ್ನೇಹಿತರು ಎಂಬ ಪದ ಯಾರಿಗೆ ಸಂಬಂಧಿಸಿ ಉಪಯೋಗವಾಗಿತ್ತೆಂಬುದು ಸುನಂದೆಗೆ ತಿಳಿಯಿತು. ಆದರೂ ಆಕೆ ಕೇಳಿದಳು:

"ಯಾವ ಸ್ನೇಹಿತರು?"

"ಅವರೇ ಕಣೇ....ಮನೆ ಮಾಲಿಕ, ಅಗಸರವನು, ಹಾಲಿನವನು...."

ಸುನಂದಾ ತುಟಿ ಕಚ್ಚಿ ಅಂದಳು:

"ಬಂದಿದ್ದರು! ಗಂಡ ಬರೋ ಹೊತ್ತಾಯ್ತೂಂತ ಕಳಿಸ್ಬಿಟ್ಟೆ!"

ಆ ದಿಟ್ಟತನ ಮತ್ತು ವ್ಯಂಗ್ಯ! ಪುಟ್ಟಣ್ಣ ಅದನ್ನು ನಿರೀಕ್ಷಿಸಿಯೇ ಇರಲಿಲ್ಲ. ಅರೆಕ್ಷಣ ಆತ ಅಪ್ರತಿಭನಾದ. ಆದರೂ ಅದನ್ನು ತೋರಿಸಿಕೊಳ್ಳದೆ ಹೆಂಡತಿಗೆ ಬೆನ್ನು ಮಾಡಿ ಕೋಟಿನ ಜೇಬಿನಿಂದ ನೋಟಿನ ಕಟ್ಟನ್ನು ಹೊರತೆಗೆದ. ಹತ್ತರ ಐದು ನೋಟುಗಳನ್ನು ತಾನಿಟ್ಟುಕೊಂಡು, ಉಳಿದ ನೂರಇಪ್ಪತ್ತೈದರ ಕಟ್ಟನ್ನು ಸುನಂದೆಯ ಕಡೆಗೆ ಎಸೆದ.

"ತಗೋ. ಸಾಲ ಸಂದಾಯಮಾಡಿ ನಿನ್ನ ಮಾನ ಉಳಿಸ್ಕೊ!"

ಆಕೆಯ ಮುಖಮುದ್ರೆ ನಿಶ್ಚಲವಾಗಿತ್ತು. ಅಲ್ಲಿ ಯಾವ ಭಾವ ವಿಕಾರವನ್ನೂ ಕಾಣದೆ ಆತ ನಿರಾಶನಾದ.

ಆ ನಿರಾಶೆಯಿಂದ ಸಿಟ್ಟು ಕೆರಳಿ, ಉರಿಮುಖದಿಂದಲೇ ಪುಟ್ಟಣ್ಣ ಚಪ್ಪಲಿ ಮೆಟ್ಟಿ ಕೊಂಡು ಬೀದಿಗಿಳಿದ.

ತಾನು ಆಡುತ್ತಿದ್ದುದೇನೆಂಬುದನ್ನು ಸರಿಯಾಗಿ ಯೋಚಿಸುವುದಕ್ಕೆ ಮುಂಚೆಯೇ

ಸುನಂದಾ ಕೇಳಿದಳು:

"ಊಟಾನೂ ಅವರ ಮನೇಲೇ ಮಾಡ್ತೀರಾ?"

'ಅವಳ ಮನೆ' ಎಂದು ನಾಲಗೆಯ ತುದಿಯವರೆಗೂ ಬಂದುದು 'ಅವರ ಮನೆ' ಯಾಗಿತ್ತು.

ಪುಟ್ಟಣ್ಣ, ತಿವಿಯುವಂತೆ ಬಂದ ಆ ಪ್ರಶ್ನೆಯನ್ನು ಕೇಳಿ ತಬ್ಬಿಬ್ಬಾದ. ಆದರೆ ಬಿರುಸು ಮುಖವಾಡವನ್ನು ಸಡಿಲ ಬಿಡದೆ ಹೇಳಿದ:

"ಹೌದು. ನನಗಾಗಿ ಕಾಯ್ಬೇಡ."

* * * *

ಹಾಗೆ ಆ ಹಂತವನ್ನಡರಿತು ವಿರಸದ ಪ್ರಕರಣ.

ಒಬ್ಬಳೇ ಉಳಿದಾಗ ಸುನಂದಾ ಯೋಚಿಸಿದಳು: ಸರಿಯಾಯಿತೆ ತಾನು ಮಾಡಿದ್ದು? ಹಾಗೆ ಪ್ರತ್ಯುತ್ತರ ಕೊಟ್ಟುದು ಸರಿಯಾಯಿತೆ?

ಸರಿ—ಎನ್ನುವುದರೊಡನೆ ಸಂದೇಹ ಹೆಡೆಯಾಡಿಸಿತು: ಕೊನೆಯ ಪ್ರಶ್ನೆಯನ್ನು ಕೇಳದೇ ಇದ್ದಿದ್ದರೆ ಮೇಲಾಗುತಿತ್ತೋ ಏನೋ. ಆ ಪ್ರಶ್ನೆಯನ್ನು ತಾನಾಗಿಯೇ ಕೇಳಿ ಅವರು 'ಅಲ್ಲೇ' ಊಟಮಾಡುವಂತೆ ಎಡೆಕೊಟ್ಟ ಹಾಗಾಯಿತೆ? ಅಥವಾ ಊಟವೇ ಇಲ್ಲದೆ ಬಂದು ಅವರು ಉಪವಾಸ ಮಲಗುವರೋ ಏನೋ. ಮೊದಲೇ ಆತ ಸ್ವಾಭಿಮಾನಿ. ಈಗ ಕಾರಣವಿಲ್ಲದೆಯೇ ಅಂಟಿಕೊಂಡಿದ್ದ ಹಟಮಾರಿತನ ಬೇರೆ........

ಆಕೆ ಆಡಿದ್ದು ಅಸಹಾಯುತೆಯಿಂದ ಹುಟ್ಟಿದ ಬಿರುನುಡಿ. ಅದರ ಬಗೆಗೆ ಇನ್ನೇನೂ ಮಾಡುವಂತಿರಲಿಲ್ಲ...

ಆದರೆ ಮೂಲ ತಪ್ಪು ಯಾರದು? ವಯಸ್ಸಿನಲ್ಲಿ ದೊಡ್ಡವರು, ಹೆಚ್ಚು ತಿಳಿವಳಿಕೆ ಉಳ್ಳವರು ಯಾರು? ಆಕೆಯ ಸಂಕಟವನ್ನು ತಿಳಿದು ಸರಿಯಾಗಿ ವರ್ತಿಸಬೇಕಾದವರು ಯಾರು?

ಮಗು ಅಷ್ಟೊಂದು ಅಳುತ್ತಿದ್ದರೂ ಆತ ಎತ್ತಿಕೊಳ್ಳಲೇ ಇಲ್ಲವಲ್ಲ!

ಸ್ನೇಹಿತರು ಬಂದಿದ್ದರೆ?—ಅಂತೆ. ಎಂಥ ಪ್ರಶ್ನೆ! ಅದಕ್ಕೆ ತಾನು ಕೊಟ್ಟ ಉತ್ತರ ಸರಿಯಾಗಿತ್ತು.

ವಾಸ್ತವವಾಗಿ ಆ ಹಗಲೆಲ್ಲ ಯಾರೂ ಬಂದಿರಲಿಲ್ಲ. ಪ್ರಾಯಶಃ ಗಂಡ ಆ ದಿನ ಕೆಲಸಕ್ಕೆ ಹೋಗದೆ, ಹಣ ತಂದು ಪ್ರತಿಯೊಬ್ಬರಿಗೂ ತಲಪಿಸಿಯಾಯಿತೇನೋ, ಎಂದು ಕೂಡ ಸುನಂದಾ ಯೋಚಿಸಿದ್ದಳು. ಅಂಥದೇನನ್ನೂ ಆತ ಮಾಡಿರಲಿಲ್ಲ. ಆದರೆ ಸದ್ಯಃ ಹಣ ಬಂದಿತ್ತು.

....ಪುಟ್ಟಣ್ಣ ಎಸೆದಿದ್ದ ನೋಟಿನ ಕಟ್ಟನ್ನೆತ್ತಿಕೊಂಡು ಹೊರಬಾಗಿಲು ಮರೆ ಮಾಡಿ ಸುನಂದಾ ಹಜಾರಕ್ಕೆ ನಡೆದಳು. ಮಗುವಿಗೆ ಮೊಲೆಯೂಡಿಸಿ ಅಲ್ಲಿಯೇ ಕೆಳಕ್ಕೆ ಆಡಲು ಬಿಟ್ಟು, ನೋಟುಗಳನ್ನೆಣಿಸಿದಳು. ಕೊಡಬೇಕಾದುದೆಲ್ಲವನ್ನೂ ಲೆಕ್ಕ

ಅದಕ್ಕೇ ಕೂತಿದೀನಿ. ನಮ್ಮವರು ಎಷ್ಟು ಚೆನ್ನಾಗಿ ಕಾಫಿ ಮಾಡ್ತಾರೆ ಗೊತ್ತೆ?"

ತನ್ನ ಗಂಡನನ್ನು ಆಕೆ ಹಾಗೆ ಹೊಗಳಿದುದು ಅದೇ ಮೊದಲಿನ ಸಲವಾಗಿರಲಿಲ್ಲ.

"ಪುಣ್ಯವಂತೆಯಮ್ಮ ನೀವು"

ಎಂದು ಸುನಂದಾ ನಿಟ್ಟುಸಿರು ಬಿಟ್ಟಳು.

ಆ ನಿಟ್ಟುಸಿರು ತಮಗೆ ಕೇಳಿಸಿತೆನ್ನುವಂತೆ ರಾಧಮ್ಮ, ಅದಕ್ಕೆ ವಿವರಣೆಯನ್ನು ಮೌನವಾಗಿಯೆ ಅಪೇಕ್ಷಿಸುತ್ತ ಸುನಂದೆಯನ್ನು ನೋಡಿದರು.

ರಾಮಯ್ಯ ಮಗನೊಡನೆ ಮನೆಯೊಳಕ್ಕೆ ಆಗಲೆ ಹೋಗಿದ್ದರು. ಶ್ಯಾಮು ಪೆಪ್ಪರಮೆಂಟು ಚಪ್ಪರಿಸುತ್ತ ಮತ್ತೆ ಮನೆಯಿಂದ ಹೊರಬಿದ್ದು ತಾಯಿಯ ಬಳಿಗೆ ಬಂದ.

"ಏಳಮ್ಮ. ಕರಕೊಂಡ್ಬಾ ಅಂದ ಅಪ್ಪ."

"ನಡಿ ಬಂದೆ."

ರಾಧಮ್ಮ ಎದ್ದು, "ಬರ್ತೀನಿ ಕಣ್ರೀ" ಎಂದು, ಮಗನೊಡನೆ ಮನೆ ಸೇರಿದರು.

....ಕಂಬನಿ ತುಂಬಿದ ಕಣ್ಣುಗಳಿಂದ ಆ ಮನೆಯನ್ನೇದಿಟ್ಟಿಸುತ್ತ ಸುನಂದಾ ಕೆಲವು ನಿಮಿಷ ಅಲ್ಲೇ ನಿಂತಳು. ಬಳಿಕ ಮೆಲ್ಲನೆ ಹಜಾರಕ್ಕೆ ಹಿಂತಿರುಗಿದಳು.

ಹದಿನೆಂಟು ವರ್ಷಗಳಾಗಿದ್ದುವು ರಾಧಮ್ಮನಿಗೆ ಮದುವೆಯಾಗಿ. ಅಷ್ಟು ಕಾಲವಾದಮೇಲೂ ಆ ದಂಪತಿಗಳು ಎಷ್ಟೊಂದು ಅನ್ಯೋನ್ಯವಾಗಿದ್ದರು! ತಾನು ಗಂಡನ ಮನೆಗೆ ಬಂದಂದಿನಿಂದಲೂ ಪಕ್ಕದ ಮನೆಯ ಆ ಸಂಸಾರವನ್ನು ಸುನಂದಾ ನೋಡುತ್ತಿದ್ದಳು. ಒಮ್ಮೆಯೂ ಅಸಹ್ಯವೆನ್ನಿಸುವ ಜಗಳವಿಲ್ಲ; ಹೇಳಿಕೊಳ್ಳುವಂತಹ ವಿರಸವಿಲ್ಲ. ತನ್ನ ಗಂಡನ ಸಂಪಾದನೆಗಿಂತ ಆತನದು ಕಡಮೆ. ಆದರೂ ರಾಧಮ್ಮ ಗೊಣಗಿದುದನ್ನು ಒಮ್ಮೆಯೂ ಸುನಂದಾ ಕಂಡಿರಲಿಲ್ಲ. ಒಮ್ಮೊಮ್ಮೆ ಸುನಂದೆಗೆ ಅನಿಸುತ್ತಿತ್ತು: ರಾಧಮ್ಮ ಹೆಚ್ಚು ವಿದ್ಯಾವತಿಯಾಗದೆ ಇರುವುದರಿಂದಲೇ ಅಂತಹ ಸುಖ ಸಾಧ್ಯವಾಗಿದೆಯೇನೋ. ಸಣ್ಣ ಪುಟ್ಟ ವಿಷಯಗಳಿಗೆಲ್ಲ ಯೋಚನೆ ಮಾಡುವುದೇ ಆಕೆಗೆ ತಿಳಿಯದೇನೋ. ಆಕೆಯ ಮನಸ್ಸು ನೋಯುವುದೆಂದೇ ಇಲ್ಲವೇನೊ... ಹಾಗೆ ಅನಿಸಿದಾಗ ಪ್ರತಿಯಾಗಿ ಬೇರೆಯೂ ಯೋಚನೆ ಮೂಡುತ್ತಿತ್ತು: ಹಾಗಿರಲಾರದು. ಆಕೆಯಷ್ಟೇ ಆ ಗಂಡಸೂ ಒಳ್ಳೆಯವನು. ಅಂತಹ ಯೋಚನೆಗೆಲ್ಲ ಆತ ಆಸ್ಪದ ಕೊಟ್ಟರಲ್ಲವೆ?

ತನ್ನ ಗಂಡನಿಗೂ ಆತನಿಗೂ ಎಷ್ಟೊಂದು ಅಂತರ! ಮದುವೆಯಾದ ಎರಡು ವರ್ಷಗಳೊಳಗೇ ಅಂತಹ ಬದಲಾವಣೆ....

ತಾನು ಬೀದಿಯ ಕಡೆ ದೃಷ್ಟಿ ಹಾಯಿಸುವುದೂ ತಪ್ಪು. ಕೊಠಡಿಯ ಬಾಗಿಲ ಬಳಿ ನಿಂತು ಆತನನ್ನು ದಿಟ್ಟಿಸುವುದೂ ತಪ್ಪು. ತಾನು ಕುಳಿತರೂ ಆತನಿಗೆ ಸಹನೆಯಿಲ್ಲ; ನಿಂತರೂ ಸಹನೆಯಿಲ್ಲ. ಅವರ ಬದುಕಿನಲ್ಲಿ ಆರಂಭವಾಗಿದ್ದ ಈ ಹೊಸ

ಅಧ್ಯಾಯದಲ್ಲಿ ಒಂದಾದರೂ ಒಳ್ಳೆಯ ಸವಿ ಮಾತು? ತನಗಾಗಿ ಒಂದು ಕುಚ್ಚು ಹೂ? ಸೀರೆ? ಸರಸಸಲ್ಲಾಪ?

ಎಲ್ಲರೂ ಹೇಳುತ್ತಿದ್ದರು–ಹೆಣ್ಣಾಗಿ ಹುಟ್ಟಬಾರದೆಂದು. ಆದರೆ ಉದಾತ್ತ ಚರಿತೆಯ ಸಾಧಕ ಸ್ತ್ರೀಯರ ವಿಷಯ ಓದುತ್ತ, ಸ್ತ್ರೀ ಜನ್ಮದ ಬಗೆಗೆ ಸುನಂದಾ ಹೆಚ್ಚು ಆದರ ತಾಳಿದ್ದಳು. ಆದರೆ ಈಗ ಅನಿಸುತ್ತಿತ್ತು: ತಲೆ ತಲಾಂತರಗಳಿಂದ ಬಳಕೆಯಲ್ಲಿದ್ದ ಆ ಮಾತೇ ನಿಜವೇನೋ? ಹೆಣ್ಣಾಗಿ ಹುಟ್ಟಬಾರದು, ಹೆಣ್ಣು ಅಬಲೆ— ಹೆಣ್ಣಿನ ಬಾಳು ಕಣ್ಣೀರು....

ಆದರೆ ರಾಧಮ್ಮ ಇದನ್ನು ಒಪ್ಪುವರೋ ಇಲ್ಲವೋ?

...ಸುನಂದಾ ತನ್ನ ಹಾಸಿಗೆ ಬಿಡಿಸಿದಳು. ಮಗು ನಿದ್ರಿಸಿದ್ದರೂ ಸುಮ್ಮನೆ ತೊಟ್ಟಿಲನ್ನು ಎರಡು ಸಾರೆ ಮೆಲ್ಲನೆ ತೂಗಿದಳು. ಹಾಸಿಗೆಯ ಮೇಲೆ ಮಲಗಿಕೊಂಡು ತಾರಸಿ ಛಾವಣಿಯನ್ನು ನೋಡಿದಳು....

ಎಂದಿನಂತೆಯೇ ಇದೂ ಒಂದು ದಿನ. ನಿನ್ನೆಯಂತೆಯೇ ಮತ್ತೊಂದು ಸಂಜೆ...

ಸುನಂದೆಯ ಮನಸ್ಸಿನಲ್ಲೊಂದು ಪ್ರಶ್ನೆ ಮೂಡಿ, ಬಲವಾಗಿ ನಿಂತು, ಆಕೆಯನ್ನು ಕಾಡಿತು:

'ರಾಧಮ್ಮನಿಗೆ ಹೇಳಿಬಿಡಲೆ? ತನ್ನ ಹೃದಯದ ಸಂಕಟವನ್ನು ಆಕೆಯೊಡನೆ ತೋಡಿಕೊಳ್ಳಲೆ? ಆಕೆ ಅನುಭವಿ. ಖಂಡಿತ ತನಗೆ ಸಹಾಯ ಮಾಡಬಹುದು. ಹೀಗಿರುತ್ತ, ಹೇಳುವುದರಲ್ಲಿ ತಪ್ಪೇನು?'

ಬಹಳ ಹೊತ್ತು ಯೋಚಿಸಿ ಯೋಚಿಸಿ ಸುನಂದಾ 'ನಾಳೆಯ ದಿನ ಹೇಳುವುದೇ ಸರಿ' ಎಂಬ ತೀರ್ಮಾನಕ್ಕೆ ಬಂದಳು.

ಹಾಗೆ ತೀರ್ಮಾನಿಸಿದ ಮೇಲೆ ಮನಸ್ಸಿಗೆ ಸ್ವಲ್ಪ ಹಾಯೆನಿಸಿತು.

ಇಷ್ಟೊಂದು ಓದಿರುವ ತಿಳಿದಿರುವ ತಾನು, ಹೋರಾಟವನ್ನು ಬಿಟ್ಟು ಕೊಡಬಾರದು. ತನ್ನ ಸಂಸಾರ ಛಿದ್ರವಾಗದಂತೆ ತಾನು ನೋಡಿಕೊಳ್ಳಬೇಕು. ಗಂಡನನ್ನು ಸರಿ ಹಾದಿಗೆ ತರಬೇಕು. ತಾನು ಜಯಿಸಬೇಕು...ಜಯಿಸಲೇ ಬೇಕು....

....ಹೊರ ಹೋಗಿದ್ದ ಗಂಡ ಬರುವವರೆಗೂ ಕಾದಿರಲಾರದೆ ಸುನಂದಾ ವಿಶ್ರಾಂತಿಗೆಂದು ಕಣ್ಣು ಮುಚ್ಚಿಕೊಂಡಳು. ದುಡಿದು ಬಸವಳಿದಿದ್ದ ಮೆದುಳು ಅದನ್ನೇ ಇದಿರು ನೋಡುತ್ತಿತ್ತು. ಆಕೆಗೆ ಸುಲಭವಾಗಿ ಜೊಂಪು ಹತ್ತಿತು.

೭

ಮಾರನೆಯ ದಿನ ರಾಧಮ್ಮನೊಡನೆ ಮಾತನಾಡುವುದು ಸಾಧ್ಯವಾಗಲಿಲ್ಲ. ಮೂರನೆಯ ದಿನ ರಾಮಯ್ಯನ ತಂಗಿ ಇಬ್ಬರು ಮಕ್ಕಳೊಡನೆ ಹಳ್ಳಿಯಿಂದ ಬಂದು

ಬೀಡು ಬಿಟ್ಟಳು. ಆಕೆ ಬಂದ ಸಂಭ್ರಮದಲ್ಲಿ ರಾಧಮ್ಮನಿಗೆ ಸುನಂದೆಯನ್ನು ಹೆಚ್ಚಾಗಿ ಮಾತನಾಡಿಸುವುದಕ್ಕೂ ಬಿಡುವಿಲ್ಲದೆ ಹೋಯಿತು. ರಾಧಮ್ಮನ ನಾದಿನಿ ಹಿಂದಿನ ಸಾರೆ ಬಂದಿದ್ದಾಗಲೇ ಸುನಂದೆಯ ಪರಿಚಯ ಮಾಡಿಕೊಂಡಿದ್ದಳು. ಆದರೆ ಸುನಂದಾ ಓದಿದವಳೆಂಬ ತಿಳಿವಳಿಕೆ, ಆಕೆಯಲ್ಲಿ ದೀನತನದ ಭಾವನೆಯನ್ನು ಹುಟ್ಟಿಸಿ ಅವರಿಬ್ಬರೊಳಗೆ ಆತ್ಮೀಯತೆಯುಂಟಾಗದಂತೆ ತಡೆಯೊಡ್ಡಿತು.

ರಾಧಮ್ಮ ಈ ಸಲವೂ ನಾದಿನಿಗೆ ಹೇಳಿದರು:

"ಹೋಗಿ, ಸುನಂದಾ ಕೈಲಿ ಮಾತಾಡ್ಕೊಂಡು ಬನ್ನಿ. ಪಾಪ, ಕೈಮಗು. ಇಲ್ದೇ ಹೋಗಿದ್ರೆ ಇಲ್ಲಿಗೇ ಕರೀಬಹುದಾಗಿತ್ತು."

"ಅಯ್ಯೋ ಬೇಡಿ ಅತ್ತಿಗೆ. ಅವರ ಕೈಲಿ ಏನ್ಮಾತಾಡೋಣಾಂತಲೇ ಗೊತ್ತಾಗಲ್ಲ."

"ಏನು ಭಯವೆ? ಪಾಪ! ಸಾಧು ಪ್ರಾಣಿ ಆಕೆ."

"ಒಳ್ಳೆಯವಳೇನೋ ನಿಜ. ಆದರೂ—"

ಈ ಸಂಕೋಚ ಸಾಲದುದಕ್ಕೆ, ಸುನಂದೆಯೂ ಅತಿಮಾತಿನವಳಾಗಿರಲಿಲ್ಲ. ತಾನಾಗಿ ಮೇಲೆ ಬಿದ್ದು ಸ್ನೇಹ ಸಂಪಾದಿಸುವ ಗುಣವೇ ಅವಳಿಗಿರಲಿಲ್ಲ. ಹೀಗಾಗಿ ಆಕೆ ಮನೆಯಲ್ಲೇ ಕುಳಿತಳು.

ರಾಧಮ್ಮ, ನಾದಿನಿಯನ್ನೂ ಮಕ್ಕಳನ್ನೂ ಕರೆದುಕೊಂಡು ಒಂದು ಸಿನಿಮಾ ನೋಡಿ ಬಂದರು. ವಿಶ್ವೇಶ್ವರನ ದರ್ಶನಮಾಡಿದರು. ಲಾಲ್‌ಬಾಗ್ ನೋಡಿದರು.

ಸುನಂದಾ ಮಗುವಿನೊಡನೆ ತನ್ನ ಮನೆಯ ಆವರಣದ, ತನ್ನ ಯೋಚನೆಗಳ, ಪುಟ್ಟ ಪ್ರಪಂಚದಲ್ಲೇ ದಿನ ಕಳೆದಳು.

ಆಕೆಯ ಗಂಡ ಈಗೀಗ ಸಂಜೆ ಮನೆಗೆ ಬರುತ್ತಿರಲಿಲ್ಲ. ಬಂದು ಮತ್ತೆ ಹೊರಡುವುದೇಕೆಂದು ಒಂದೇ ಸಾರೆ ಮರಳುತ್ತಿದ್ದ. ಮನೆಯ ವಾತಾವರಣಕ್ಕೆ ಆತ ಎಂದೂ ಹೊಂದಿಕೊಳ್ಳುತ್ತಿರಲಿಲ್ಲ. ಮಗುವನ್ನು ಎತ್ತಿ ಮುದ್ದಿಸುತ್ತಿರಲಿಲ್ಲ. ಗೃಹಕೃತ್ಯಕ್ಕೆ ಸಂಬಂಧಿಸಿದ ಅನಿವಾರ್ಯವಾದ ಕೆಲವು ಪದಗಳನ್ನು ಬಿಟ್ಟು ಬೇರೇನನ್ನೂ ಆತ ಆಡುತ್ತಿರಲಿಲ್ಲ.

ಆತ ದಿನವೂ ಧರಿಸುತ್ತಿದ್ದುದು, ಈ ಮನೆಗೆ ತಾನು ಪರಕೀಯನೆಂಬ ಮುಖವಾಡ. ಆ ಮುಖವಾಡದ ಹಿಂದೆ ಏನಿತ್ತೆಂಬುದನ್ನು ತಿಳಿಯುವುದು ಬಲು ಕಷ್ಟವಾಗಿತ್ತು. ಆದರೂ ಆತನ ಚಲನವಲನಗಳನ್ನು ಬಲು ಸೂಕ್ಷ್ಮವಾಗಿ ಸುನಂದಾ ನಿರೀಕ್ಷಿಸಿದಳು. ಒಮ್ಮೊಮ್ಮೆ ಮನೆಗೆ ಬಂದವನು ಬೇಗನೆ ದೀಪ ಆರಿಸಿ ಮಲಗುತ್ತಿದ್ದ. ಅಂತಹ ದಿನಗಳಲ್ಲಿ ಬಹಳ ಹೊತ್ತು ಆತ ನಿದ್ದೆ ಹೋಗುತ್ತಿರಲಿಲ್ಲವೆಂಬುದು ಆಕೆಗೆ ಗೊತ್ತಿತ್ತು. ಕೆಲವೊಮ್ಮೆ ಎಷ್ಟು ಹೊತ್ತಾದರೂ ಮಲಗದೆ ದೀಪವನ್ನು ಉರಿಯಬಿಟ್ಟು, ಯಾವುದಾದರೂ ಬಲು ಅಗ್ಗದ ಇಂಗ್ಲಿಷ್ ಕಾದಂಬರಿಯನ್ನು ಓದುತ್ತಲೋ ಓದಲು ಯತ್ನಿಸುತ್ತಲೋ ಇರುತ್ತಿದ್ದ. ದೀಪ ಆರಿಸಿದ ದಿನ ಆತನ ಮನಸ್ಸು ಹೆಚ್ಚು

ಉದ್ವಿಗ್ನವಾಗಿದೆಯೆಂದೂ ಓದುತ್ತ ಕುಳಿತ ದಿನ ಸ್ವಲ್ಪ ಸಮಾಧಾನಚಿತ್ತನಾಗಿರುವ ನೆಂದೂ ಸುನಂದಾ ಊಹಿಸುತಿದ್ದಳು.

ಸಮಯಸಾಧಿಸಿ ಸುನಂದಾ ಆತನ ಕೋಟಿನ ಜೇಬುಗಳನ್ನು ಶೋಧಿಸಿದಳು. ಅಲ್ಲಿ ಒಮ್ಮೊಮ್ಮೆ ಬರಿಯ ಜೇಬೇ ಇರುತಿತ್ತು; ಒಮ್ಮೊಮ್ಮೆ ಹಣವಿರುತ್ತಿತ್ತು.

ಏನೋ ಸಂದೇಹ ಬಂದು ಸುನಂದಾ ಬ್ಯಾಂಕಿನ ಲೆಕ್ಕಪುಸ್ತಕಕ್ಕಾಗಿ ಹುಡುಕಾಡಿದಳು. ಆ ಸಾಹಿತ್ಯವೆಲ್ಲ ಮೇಜಿನೊಳಗಿದ್ದಂತೆ ತೋರಿತು. ಅದಕ್ಕೆ ರಕ್ಷಣೆಯಾಗಿತ್ತು ಭದ್ರವಾದ ಬೀಗ. ಬೀಗದ ಕೈ ಆತನ ಜನಿವಾರಕ್ಕೆ ನೇತು ಬಿದ್ದಿತ್ತು.

ಈ ವರ್ತನೆಯೆಲ್ಲ ಭೇದಿಸಲಾಗದ ರಹಸ್ಯವಾಗಿಯೇ ಉಳಿಯಿತು ಸುನಂದೆಯ ಪಾಲಿಗೆ. ಗೃಹಕೃತ್ಯದ ಮುಖ್ಯ ವಿಷಯಗಳಿಂದ ತನ್ನನ್ನು ದೂರವಿಡಲು ಆತ ಯತ್ನಿಸುತ್ತಿದ್ದನೆಂಬುದು ಮಾತ್ರ ಆಕೆಗೆ ಸ್ಪಷ್ಟವಾಯಿತು.

ತಾನು ಬಡವಾಗುತ್ತಿದ್ದುದನ್ನು ಗುಮನಿಸದೇ ಇದ್ದರೂ ಸುನಂದಾ, ಸರಿಯಾದ ಆಹಾರ ಪಾನೀಯಗಳಿಲ್ಲದೆ ಗಂಡ ಸ್ವಲ್ಪ ಕೃಶನಾಗಿದ್ದುದನ್ನು ಕಂಡಳು. ಆದರೆ ಆ ವಿಷಯ ಪ್ರಸ್ತಾಪಿಸಿ ಪ್ರಯೋಜನವಿಲ್ಲವೆಂದು ಸುಮ್ಮನಾದಳು.

ಈ ನಡುವೆ ಆತನ ಕಣ್ಣುಗಳು ಕೆಂಪಗಿರುತ್ತಿದ್ದುವು. ಸ್ವಲ್ಪ ನೀಳವಾಗಿಯೆ ಇದ್ದ ಕ್ರಾಪು ಕೆದರಿರುತ್ತಿತ್ತು. ಆಗ ನಡಿಗೆ ಎಂದಿಗಿಂತ ಹೆಚ್ಚು ರಭಸವಾಗಿರುತ್ತಿದ್ದುದನ್ನು, ಸುನಂದಾ ಕಂಡಳು. ಅಂತಹ ರಾತ್ರೆಗಳಲ್ಲಿ ಆತ ಮಾತನಾಡುತ್ತಲೇ ಇರಲಿಲ್ಲ. ಒಮ್ಮೆ ಮಾತ್ರ ಆತ ತೊದಲಿದಂತೆ ತೋರಿತು.

ಅದರ ಕಾರಣ ಹೊಳೆದು ಸುನಂದಾ ದಿಗ್ಮೂಢಳಾದಳು. ನಿದ್ದೆ ಹೋಗಿ ಬಾಯಿ ತೆರೆದು ಆತ ಗೊರಕೆ ಹೊಡೆಯತೊಡಗಿದಾಗ, ಸುನಂದಾ ಕೊಠಡಿಯೊಳಕ್ಕೆ ಸದ್ದಿಲ್ಲದೆ ನಡೆದು ಹೋದಳು. ಆತನ ಉಸಿರಿನ ಜತೆಯಲ್ಲಿ ಅಪರಿಚಿತವಾದ ಅಸಹನೀಯವಾದ ವಾಸನೆ ಹೊರಟು ಕೊಠಡಿಯಲ್ಲೆಲ್ಲ ವ್ಯಾಪಿಸುತ್ತಿತ್ತು. ಆತ ಸಂಜೆ ಏನು ಮಾಡುತ್ತಿದ್ದನೆಂಬುದನ್ನು ಅಲ್ಲಿಯ ವಾತಾವರಣ ಯಾವ ಸಂದೇಹಕ್ಕೂ ಆಸ್ಪದವಿಲ್ಲದ ಹಾಗೆ ಸಾರಿ ಹೇಳಿತು.

ರಕ್ತ ಸಂಚಾರವೇ ನಿಂತ ಹಾಗೆ ಒಮ್ಮೆ ತಣ್ಣಗಾಯಿತು ಸುನಂದೆಯ ಮೈ. ಕೊರೆಯುವ ಚಳಿಗೆ ಸಿಲುಕಿದವರಂತೆ ಆಕೆಯ ಕೈ ಕಾಲುಗಳು ಕಂಪಿಸಿದುವು. ಆದರೂ ಹೊದಿಕೆಯನ್ನು ಆತನ ಎದೆಯವರೆಗೂ ಎಳೆದು, ಸುನಂದಾ ಹಜಾರಕ್ಕೆ ಬಂದು ಹಾಸಿಗೆಯ ಮೇಲುರುಳಿಕೊಂಡು, ಬಹಳ ಹೊತ್ತು ಅತ್ತಳು—ಸದ್ದಿಲ್ಲದೆ ಅತ್ತಳು.

ಅದಾದ ಮರುದಿನವೆ ಮಗು ಜ್ವರ ಹಿಡಿದು ಮಲಗಿತು. ಒಂದು ದಿನ, ಎರಡು ದಿನ. ಜ್ವರ ಬಿಡಲೇ ಇಲ್ಲ. ಆ ಅನಾರೋಗ್ಯದ ಗೊಂದಲದ ನಡುವಿನಲ್ಲೂ ಒಂದು ಆಸೆ ಆಕೆಯ ಮನಸ್ಸಿನಲ್ಲಿ ಮೊಳೆಯಿತು—ಮಗುವಿನ ಕಾಹಿಲೆಯ ಕಾರಣದಿಂದಲಾದರೂ ಗಂಡ ಹಾದಿಗೆ ಬರುವನೆಂಬ ಆಸೆ.

ಆದರೆ ಆತ ನಿರ್ಲಕ್ಷ್ಯಭಾವದಿಂದಲೆ ಇದ್ದುದನ್ನು ಕಂಡು ಎರಡನೆಯ ರಾತ್ರೆ

ಸುನಂದಾ ಮಾತನಾಡಿದಳು:

"ಮಗು ಜ್ವರ ಹಿಡಿದು ಮಲಗಿದೆ ಅನ್ನೋದು ಗೊತ್ತಿದ್ದೂ ತಡವಾಗಿ ಬರ್‍ತಿದೀರಲ್ಲ?"

ಆತ ಮಾತನಾಡದೇ ಇದ್ದುದನ್ನು ಕಂಡು ಸುನಂದಾ ರೇಗಿ ನುಡಿದಳು:

"ನೀವೇನು ಮನುಷ್ಯನೋ ರಾಕ್ಷಸನೋ? ನಿಷ್ಕರುಣಿ! ಮೈ ಮುಟ್ಟಿ ನೋಡಬಾರದೆ ಮಗೂನ?"

ಆ ಸ್ಫೋಟದೆದುರು ಪುಟ್ಟಣ್ಣ ಅವಾಕ್ಕಾದ. ಆದರೂ ತಡಮಾಡದೆ ಸುಧಾರಿಸಿಕೊಂಡು ಹೇಳಿದ:

"ಮಗೂಗೆ ಜ್ವರ ಬಂದಿದೇಂತ ತಾನೆ ನೀನು ಹೇಳೋದು?"

ಶಾಂತವಾಗಿತ್ತು ಆತನ ಸ್ವರ. ಅದರಲ್ಲಿ ಅಡಕವಾಗಿದ್ದ ಸೂಕ್ಷ್ಮ ಅಣಕದಿಂದ ಸುನಂದೆಗೆ ಅವಮಾನವಾಯಿತು.

"ಅಷ್ಟಾದರೂ ಗೊತ್ತಾಯ್ತು ನಿಮಗೆ?"

"ಇವತ್ತೇನು ಗೊತ್ತಾಗೋದು? ಮಗೂಗೆ ಜ್ವರ ಬಂದಿದೇಂತ ನಿನ್ನೇನೆ ಹೇಳಿರ್‍ಲಿಲ್ವೆ ನೀನು?"

"ಹೇಳಿದ್ದೆ ಅಲ್ಲ? ಕೇಳ್ಕೊಂಡು, ಔಷಧೀನಾದರೂ ತಂದಿರಾ?"

"ನಾನು ತರಬೇಕೆ ಔಷಧಿ? ಅವತ್ತೆಲ್ಲ ಡಾಕ್ಟರ ಹತ್ತಿರ ಒಬ್ಬಳೇ ಹೋಗ್ತಿದ್ದೆ–"

"ಮಗೂಗೆ ಜ್ವರ ಬಂದಿದೆ ಕಣ್ರೀ. ನಿಮ್ಮ ಮಗೂಗೆ ಜ್ವರ!"

"ತಿಳೀತು ಅಮ್ಮಣ್ಣಿ. ನಮ್ಮ ಮಗೂಗೆ ಜ್ವರ ಬಂದಾಗ ನೀವು ಔಷಧಿ ತಂದು ಕುಡಿಸಬಾರದೂಂತಿದೆಯೇನು?"

"ಥೂ! ಅದೇನು ಮಾತಾಡ್ತಿದಿರೋ ಮೊಂಡತನದ ಮಾತು. ಹೋಗಿ! ಡಾಕ್ಟರನ್ನಾದರೂ ಕರಕೊಂಡ್ಬನ್ನಿ."

ಒಂದು ಕ್ಷಣ ಉತ್ತರ ಬರಲಿಲ್ಲ. ಮೌನ ನಡುವೆ ಅತ್ತಿಂದಿತ್ತ ಸುಂಯ್ ಗುಟ್ಟಿತು.

ಆ ಬಳಿಕ, ನೇರವಾದ–ಸ್ವಲ್ಪ ಮೃದುವಾದಂತೆ ತೋರಿದ–ಸ್ವರದಲ್ಲಿ ಪುಟ್ಟಣ್ಣ ಮಾತನಾಡಿದ:

"ಸುನಂದಾ, ಇನ್ನು ಮುಂದೆ ಹೀಗೆಲ್ಲ ಆಡ್ಬೇಡ. ನಾಳೆ ಬೆಳಗ್ಗೆ ಮಗೂನ ಕರಕೊಂಡು ಹೋಗಿ ಡಾಕ್ಟರಿಗೆ ತೋರಿಸು. ಬೇಕಾದರೆ ಅವರನ್ನೇ ಕರೆಸು. ನನ್ನ ಕೇಳ್ಬೇಡ. ಈ ಸಲ ಡಾಕ್ಟರ ಬಿಲ್ಲು ಕೊಟ್ಟಿದೆ ತಾನೆ? ಮುಂದಿನ ಸಲವೂ ಕೊಟ್ಟರಾಯ್ತು. ಕೇಳಿಸ್ತಾ ನಾನು ಹೇಳಿದ್ದು....?"

ಕೇಳಿಸದೆ? ಪ್ರತಿಯೊಂದು ಮಾತೂ ಕಾದ ಸೀಸದ ಹಾಗೆ ಆಕೆಯ ಕಿವಿಯೊಳಗೆ ಇಳಿದಿತ್ತು.

...ಆಕೆ ಅಸಹಾಯಳಾಗಿ ದೀಪವಾರಿಸದೆ ಮಗುವಿನ ಬಳಿಯಲ್ಲೆ ರಾತ್ರಿಯೆಲ್ಲ

ಕುಳಿತಳು.

...ಆತ ಸ್ವಲ್ಪ ಹೊತ್ತು ಹಾಸಿಗೆಯ ಮೇಲೆ ಚಡಪಡಿಸಿದ. ಹೊಸ ವ್ಯಕ್ತಿತ್ವ ಬಿರುಕು ಬಿಟ್ಟು, ಕುಸಿಯುತ್ತಿದ್ದಂತೆ ಅವನಿಗೆ ಭಾಸವಾಯಿತು. ಒಮ್ಮೆಲೆ ಭಯ ವಾಯಿತು ಪುಟ್ಟಣ್ಣನಿಗೆ. ಎದ್ದು ಮಗುವನ್ನು ನೋಡಬೇಕು, ಡಾಕ್ಟರಲ್ಲಿಗೆ ಓಡಬೇಕು, ಎಂದು ತೋರಿತು. ಆದರೆ ಅಂತಹ ಸ್ಥಿತಿಯಲ್ಲೂ ಆತ ಮನಸ್ಸನ್ನು ಬಿಗಿ ಹಿಡಿದ. ಇದು ತನ್ನ ಸತ್ವಪರೀಕ್ಷೆ: ಸತ್ವಪರೀಕ್ಷೆಯಲ್ಲಿ ತನಗೆ ಜಯವಾಗಬೇಕು—ಎಂದುಕೊಂಡ.

...ಕೆದರಿದ ಕೂದಲಿನಿಂದ, ಕಣ್ಣಲ್ಲಿ ಕಣ್ಣಿಟ್ಟು, ಮಗುವನ್ನು ನೋಡಿಕೊಳ್ಳು ತ್ತಿದ್ದ ಸುನಂದೆಯೂ ಸ್ವರವೆತ್ತದೆಯೇ ಗೋಳಾಡಿದಳು. 'ನನ್ನ ಪಾಲಿಗಿದೊಂದು ಸತ್ವಪರೀಕ್ಷೆ. ಇದರಲ್ಲಿ ನಾನು ಸೋತು ಸಾಯಬೇಕು; ಇಲ್ಲವೆ ಗೆದ್ದು ಬದುಕ ಬೇಕು.'

* * * *

ಬೆಳಗಾಯಿತು. ಕುಳಿತೇ ಇದ್ದ ಸುನಂದೆಗೆ ದೀಪದ ಬದಲು ಸೂರ್ಯನ ಬೆಳಕು ದೊರೆಯಿತು.

ಪುಟ್ಟಣ್ಣನೂ ಬೇಗನೆ ಎದ್ದ. ಸುನಂದಾ ಬಚ್ಚಲು ಮನೆಗೆ ಹೋಗಿದ್ದಾಗ ಆತ ಮಗುವಿನ ಬಳಿ ಸಾರಿ ಅದನ್ನೊಮ್ಮೆ ಮುಟ್ಟಿ ನೋಡಿದ. ಹೇಗೊ ಹೇಗೋ ಆಯಿತು. 'ಹೀಗೆಯೇ ಈ ಮಗು ಕಣ್ಣುಮುಚ್ಚಿಕೊಳ್ಳುವುದೇನೋ' ಎನ್ನಿಸಿತು. 'ಹಾಗೇನಾದರೂ ಆದರೆ ಅದೂ ಸರಿಯೆ,' ಎಂದು ಮನಸಿನಲ್ಲೆ ಪುಟ್ಟಣ್ಣ ಅಂದು ಕೊಂಡ. ಜ್ವರದಿಂದ ಕುದಿಯುತ್ತಿದ್ದ ಆ ಮಗುವನ್ನು ನೋಡಲಾರದೆ, ಆತ ಕೊಠಡಿ ಯತ್ತ ನಡೆದ.

ಮಗುವನ್ನು ಆತ ನೋಡುತ್ತಿದ್ದುದನ್ನು ಕಂಡಿದ್ದಳು ಸುನಂದ. ಆ ನಿರಾಶೆ ಯಲ್ಲೂ ಹುಚ್ಚು ಮನಸ್ಸು ಆಡಿತು:

'ನನ್ನ ಪಾಲಿನ ದೇವರು ಕಣ್ಣು ತೆರೆದ ಅಂತ ತೋರುತ್ತೆ.'

ಇನ್ನೇನು, ಆತ ಬಟ್ಟೆ ಹಾಕಿಕೊಂಡು ಡಾಕ್ಟರನ್ನು ಕರೆಯಲು ಹೋಗಬಹುದು ಎಂದುಕೊಂಡಳು ಆಕೆ.

ಆದರೆ ಎಣಿಕೆ ತಪ್ಪಾಗಿತ್ತು. ಪುಟ್ಟಣ್ಣ ಎಂದಿನಂತೆಯೆ ಮುಖ ಕ್ಷೌರ ಮಾಡಿದ. ಸುನಂದಾ ಮಾಡಿಕೊಟ್ಟ ಕಾಫಿಯನ್ನೂ ಕುಡಿದ. ನೀರು ಕಾಯುವುದರ ಹಾದಿ ನೋಡದೆ, ಹಸಿಬಿಸಿ ನೀರನ್ನೇ ಸುರಿದುಕೊಂಡು ಸ್ನಾನ ಮಾಡಿದ.

ಆಗಲೂ ಸುನಂದೆಯ ಮನಸ್ಸು ಹೇಳಿತು.

'ಸಂಶಯವೇ ಇಲ್ಲ. ಈ ಅವಸರವೆಲ್ಲ ಡಾಕ್ಟರ ಬಳಿಗೆ ಹೋಗುವುದಕ್ಕೇ ಇರಬೇಕು.'

ಆತ ಬೇಗ ಬೇಗನೆ ಬಟ್ಟೆ ಹಾಕಿಕೊಂಡು ಹೇಳಿದ:

"ಮಧ್ಯಾಹ್ನದ ಊಟ ಕಳಿಸ್ಬೇಡ."

ಥಟಕ್ಕನೆ ಸುನಂದಾ ಕೇಳಿದಳು:

"ಆಫೀಸಿಗೆ ಹೋಗಲ್ವೆ ಇವತ್ತು?"

ಪುಟ್ಟಣ್ಣನ ತುಟಿಗಳು ಮುರುಟಿಕೊಂಡು ಅಲ್ಲೊಂದು ವಕ್ರನಗೆ ಮೂಡಿತು.

"ಹೋಗ್ತೆ! ಊಟ ಬೇಡ ಅಂದೆ. ನೀನು ಮಾಡ್ಕೊಂಡು ಊಟ ಮುಗಿಸು."

ಹೊರಕ್ಕಿಳಿಯುತ್ತಿದ್ದ ಬೂಟುಗಳ ಸದ್ದು.

'ಡಾಕ್ಟರು' ಎಂಬ ಪದ ಸುನಂದೆಯ ನಾಲಿಗೆಯ ತುದಿಗೆ ಬಂತು. 'ಸಾಯಂಕಾಲ ಬೇಗ್ನೆ ಬಂದ್ಬಿಡ್ತೀರಾ?' ಎನ್ನುವ ಪ್ರಶ್ನೆಯೂ ರೂಪುಗೊಂಡಿತು. ಆದರೆ ಗಂಟಲಿನಿಂದ ಯಾವ ಸ್ವರವೂ ಹೊರಡಲಿಲ್ಲ.

....ಬಂದಿದ್ದವರನ್ನೆಲ್ಲ ಹಿಂದಿನ ಸಂಜೆಯಷ್ಟೆ ಕಳುಹಿಕೊಟ್ಟಿದ್ದ ರಾಧಮ್ಮ, ರಾಮಯ್ಯ ಕೆಲಸಕ್ಕೆ ಹೋದೊಡನೆಯೇ ಸುನಂದೆಯ ಮನೆಗೆ ಬಂದರು. ಹಿಂದಿನ ದಿನ ಕೇಳಿದ್ದಾಗ "ಮಗೂಗೆ ಮೈ ಹುಷಾರಿಲ್ಲ" ಎಂದಷ್ಟೆ ಸುನಂದಾ ಹೇಳಿದ್ದಳು. ಆದರೆ ಪರಿಸ್ಥಿತಿಯ ಗಭೀರತೆ ಎಷ್ಟಿರಬಹುದೆಂದು ರಾಧಮ್ಮ ಊಹಿಸಿರಲಿಲ್ಲ. ಅವರ ಹೃದಯದೊಳಕ್ಕೆ ಪಿಚ್ಚೆನ್ನಿಸಿತು. ಮಗು ಸಾವು ಬದುಕುಗಳ ನಡುವೆ ಉಯ್ಯಾಲೆಯಾಡುತ್ತಿತ್ತೆಂಬುದು ಸ್ಪಷ್ಟವಾಗಿ ಅವರಿಗೆ ಅಧೈರ್ಯವಾಯಿತು. ಆದರೂ ಮುಖದ ಭಾವದಿಂದ ಒಂದನ್ನೂ ಅವರು ತೋರಗೊಡಲಿಲ್ಲ. ಸುನಂದೆಯನ್ನು ನೋಡುತ್ತ ಅವರು ಕೇಳಿದರು:

"ನಿಮ್ಮ ಯಜಮಾನರೆಲ್ಲಿ? ಡಾಕ್ಟರನ್ನ ಕರೆತರೋಕೆ ಹೋಗಿದ್ದಾರಾ?"

ಇರಲಾರದೆಂಬ ಸಂದೇಹವಿದ್ದರೂ ಅದು ಖಚಿತವಾಗಲೆಂದು ಅವರು ಹಾಗೆ ಅಂದರು.

ಸುನಂದಾ ಉತ್ತರ ಕೊಡಲಿಲ್ಲ. ಅವರ ಭುಜದ ಮೇಲೆ ಮುಖವಿಟ್ಟು ಗೋಳೋ ಎಂದು ಅತ್ತಳು. ಅಳುತಳುತ ಆಕೆಯೆಂದಳು:

"ಇಲ್ಲ ರಾಧಮ್ನೋರೆ. ಡಾಕ್ಟರನ್ನ ಕರೆಯೋಕೆ ಯಾರೂ ಹೋಗಿಲ್ಲ."

ನೆರೆಮನೆಯಾಕೆಯ ಸಂಸಾರದ ಕಥೆಯನ್ನು ಬಹುಮಟ್ಟಿಗೆ ಆಗಲೆ ಊಹಿಸಿಕೊಂಡಿದ್ದ ರಾಧಮ್ಮ, ಆ ವಿಷಯ ಮತ್ತೇನೂ ಪ್ರಸ್ತಾಪಿಸ ಬಯಸದೆ, ಅಳುತ್ತಿದ್ದ ಸುನಂದೆಗೆ ಧೈರ್ಯ ನೀಡಿದರು:

"ಅಳಬೇಡಿ ಸುನಂದಾ. ಮಗುವಿಗೇನೂ ಆಗೊಲ್ಲ. ಬರೇ ಜ್ವರ ಅಷ್ಟೆ. ಡಾಕ್ಟರಲ್ಲಿಗೆ ಕರಕೊಂಡು ಹೋಗೋಣ."

"ನೀವೂ ಬರ್ತೀರಾ ರಾಧಮ್ಮ?"

"ಬರ್ತೀನಿ. ನನ್ನ ಮಕ್ಕಳಿಗೆ ಹೀಗೆಲ್ಲ ಆಗಿಯೇ ಇರ್ಲಿಲ್ಲ ಅಂದ್ಕೊಂಡ್ರಾ? ಇದೆಲ್ಲ ಇರೋದೇನೇ...."

ಮಕ್ಕಳಿಗೆ ಆಗಿಗಬಹುದು. ಆದರೆ ಗಂಡನಿಗೂ ಹಾಗೆ ಆಗಿತ್ತೆ?–ತನ್ನ ಗಂಡನಿಗೆ ಆದ ಹಾಗೆ?

—ಅದು ಹೃದಯದ ನೋವಿನ ಆಳದಲ್ಲೆಲ್ಲೋ ತೇಲಿ ಮುಳುಗುತ್ತಿದ್ದ ವಿಚಾರ. ಆದರೆ ಮಗುವಿನ ಕಾಹಿಲೆಯಿಂದಾಗಿ ಶೋಕತಪ್ತಳಾಗಿದ್ದ ಆ ತಾಯಿಯನ್ನು ಆಗ ಪೀಡಿಸಲು ಮನಸ್ಸಿಲ್ಲದೆ ಸಮಯ ಕಾಯುತ್ತ ಆ ವಿಚಾರ ಮರೆ ಸೇರಿತು.

...ರಾಧಮ್ಮ ಎರಡು ನಿಮಿಷಗಳಲ್ಲೆ ಸಿದ್ಧರಾಗಿ ಬಂದರು. ಮಗುವನ್ನು ತಾನೆತ್ತಿಕೊಳ್ಳುವೆನೆಂದರು. ಸುನಂದಾ ಬಿಡಲಿಲ್ಲ. ಅದೇ ಸರಿ–ಎಂದು ರಾಧಮ್ಮ ಸುಮ್ಮನಾದರು.

ಏರಿ ಬರುತ್ತಿದ್ದ ಸೂರ್ಯನ ಬಿಸಿಲನ್ನೂ ಗಮನಿಸದೆ ಮೂರು ಬೀದಿಗಳಾಚೆ ಯಿದ್ದ ಡಾಕ್ಟರ ಔಷಧಾಲಯಕ್ಕೆ ಅವರಿಬ್ಬರೂ ಧಾವಿಸಿದರು. ಆ ನಡಿಗೆಯ ನಡುವೆ ರಾಧಮ್ಮನಿಗೆ ಭಯವಾಯಿತು: ಡಾಕ್ಟರ ಬಳಿಗೆ ಹೋಗುವುದರೊಳಗೇ ಮಗುವಿ ಗೇನಾದರೂ ಆದರೆ? ಡಾಕ್ಟರನ್ನೇ ಮನೆಗೆ ಕರೆಸಬೇಕಾಗಿತ್ತು...

......

ಆದರೆ, ಔಷಧಾಲಯ ಸಮೀಪಿಸಿ ಡಾಕ್ಟರ ಮುಖ ನೋಡಿದೊಡನೆ ರಾಧಮ್ಮನ ಆ ಭಯ ತೊಲಗಿತು. ಇಷ್ಟರಲ್ಲೆ ಮಗುವಿಗೆ ಗುಣವಾಯಿತೇನೋ—ಎಂಬಂತೆ ಸುನಂದೆಯೂ ಸ್ವಲ್ಪ ಸುಧಾರಿಸಿಕೊಂಡಳು. ಅದು ಡಾಕ್ಟರ್ ದಂಪತಿ ನಡೆಸುತ್ತಿದ್ದ ಚಿಕಿತ್ಸಾಲಯ. ಹೆಂಗಸರು ಮತ್ತು ಮಕ್ಕಳ ಕಾಹಿಲೆಗಳಿಗೆ ವಿಶೇಷ ಚಿಕಿತ್ಸೆ–ಎಂದು ಅವರು ಬೋರ್ಡು ತಗಲಿಸಿದ್ದರು.

ಡಾಕ್ಟರ್ ದಂಪತಿ ಪರೀಕ್ಷೆ ಮಾಡಿ ಮಗುವಿಗೆ ಔಷಧಿ ಕೊಟ್ಟದ್ದಾಯಿತು. ಅತ್ಯ ಗತ್ಯವೆಂದು, ಆ ಪುಟ್ಟ ಮಗುವಿಗೆ ಒಂದು ಸೂಜಿಮದ್ದನ್ನೂ ಚುಚ್ಚಿದರು.

ಅದೇ ರೀತಿ, ಚುಚ್ಚು ಮಾತೊಂದನ್ನು ಮೃದುವಾಗಿ ಡಾಕ್ಟರಮ್ಮ ಹೇಳಿದರು:

"ಹೇಳಿ ಕಳಿಸ್ಬೇಕಾಗಿತ್ತಮ್ಮ. ಕಾಹಿಲೆ ಮಗೂನ ಎತ್ಕೊಂಡು ಹೀಗೆಲ್ಲ ಬರೋದೆ? ಓದಿದೋರೂ ಹೀಗ್ಮಾಡಿದ್ರೆ ಹ್ಯಾಗೆ ಹೇಳಿ? ಎಲ್ಲಿ ನಿಮ್ಮ ಯಜಮಾನರು? ಕಾಣಿಸ್ಲೇ ಇಲ್ವಲ್ಲ ಇತ್ತೀಚೆಗೆ?"

ಸುನಂದಾ ಏನೂ ಉತ್ತರ ಕೊಡಲಿಲ್ಲ. ಹಾಗೆ ಮಗುವನ್ನು ಕರೆತರಲು ಕಾರಣ ರಾಗಿದ್ದ ರಾಧಮ್ಮನೂ ಮಾತನಾಡಲಿಲ್ಲ.

ಕಟುವಾಗಿ ತಾವು ಆಡಬಾರದಿತ್ತೇನೋ ಎಂದು ಸಂದೇಹಿಸುತ್ತ ಡಾಕ್ಟರಮ್ಮ ಹೇಳಿದರು:

"ನೀವೇನೂ ಯೋಚಿಸ್ಬೇಡಿ. ನಾಳೆಯೊಳಗೆ ಮಗು ಹುಷಾರಾಗುತ್ತೆ. ನಾಳೆ ಬೆಳಗ್ಗೆ ನಾನೇ ಬಂದು ನೋಡ್ತೀನಿ. ಸಾಯಂಕಾಲವೇನಾದರೂ ಜ್ವರ ಜಾಸ್ತೀಂತ ತೋರಿದ್ರೆ ಹೇಳಿಕಳಿಸಿ."

...ಸಾಹಸದ ಮತ್ತು ಅತ್ಯಂತ ಮಹತ್ವದ ಕೆಲಸವನ್ನು ಯಶಸ್ವಿಯಾಗಿ ನೆರ ವೇರಿಸಿದವರಂತೆ ರಾಧಮ್ಮನೂ ಸುನಂದೆಯೂ ಮಗುವಿನೊಡನೆ ಮನೆ ತಲಪಿದರು. ರಾಧಮ್ಮ ಮನೆಯ ಬೀಗ ತೆಗೆದೊಡನೆ ಸುನಂದಾ ಒಳಹೋಗಿ ಮಗುವನ್ನು

ಮಲಗಿಸಿದಳು.

ರಾಧಮ್ಮ ಕೇಳಿದರು:

"ಈ ಗಲಾಟೇಲಿ ಅಡುಗೆ ಏನಮ್ಮಾ ಮಾಡ್ತೀರ ನೀವು?"

"ಅವರು ಇವತ್ತು ಊಟ ಕಳಿಸೋದು ಬೇಡ ಅಂದ್ರು ರಾಧಮ್ಮ."

"ಹಾಗಂದರಾ? ಪುಣ್ಯವಂತ. ಬಹಳ ಒಳ್ಳೇ ಕೆಲಸ ಮಾಡಿದ್ರು. ನೀವು ಮಗೂನ ನೋಡ್ಕೊಂಡಿರಿ ಸುನಂದಾ. ನಾನು ಹೋಗಿ ಒಂದಿಷ್ಟು ಅಡುಗೆ ಮಾಡ್ತೀನಿ. ಇವತ್ತು ನೀವು ನಮ್ಮಲ್ಲೇ ಊಟ ಮಾಡುವಿರಂತೆ."

ವಿದ್ಯಾವತಿಯಾದ ಸುನಂದಾ ಅಭ್ಯಾಸ ಬಲದಿಂದ ಅಂದಳು:

"ಸುಮ್ಮನೆ ನಿಮಗೆ ತೊಂದರೆ ಯಾತಕ್ಕೆ—"

"ಮಹಾ ತೊಂದರೆ. ಸಾಕು ಬಿಡಿ. ಸುಮ್ನಿರಿ ನೀವು!"

ಸುನಂದಾ ಏನನ್ನೂ ಎದುರು ಹೇಳದೆ ಸುಮ್ಮನಾದಳು.

* * * *

ಹೊತ್ತು ಕಳೆಯಿತು.

ರಾಧಮ್ಮ ಬಡಿಸಲೆಂದು ಊಟ ತಂದಿರಿಸಿದ ಮೇಲೆ, ಅವರ ಆರೈಕೆಯಲ್ಲಿ ಮಗುವನ್ನು ಬಿಟ್ಟು, ಸುನಂದಾ ಸ್ನಾನ ಮಾಡಿ ಬಂದಳು.

ದೇಹದ ಬಳಲಿಕೆಯಿಂದ ಆಹಾರ ರುಚಿಸದೇ ಹೋದರೂ, ಹಿರಿಯಕ್ಕನ ಹಾಗೆ ಒತ್ತಾಯಿಸುತ್ತಿದ್ದ ರಾಧಮ್ಮ ಬಡಿಸಿದ್ದನ್ನೆಲ್ಲ ಆಕೆ ಉಂಡಳು.

ಊಟ ಮುಗಿಸಿ ರಾಧಮ್ಮನನ್ನು ನೋಡುತ್ತ ಸುನಂದಾ ಹೇಳಿದಳು:

"ನನಗೆ ತಂಗಿ ಇದಾಳೆ ರಾಧಮ್ಮ. ಅಕ್ಕ ಇಲ್ಲಾಂತ ಕೊರಗು ಇರ್ತಿತ್ತು. ಇನ್ನು ಆ ಕಸಿವಿಸಿ ಇಲ್ಲ."

ರಾಧಮ್ಮ ಆ ಮಾತಿಗೆ ಪ್ರತ್ಯುತ್ತರ ಕೊಡಲಿಲ್ಲ.

ಆಕೆಯೂ ಮನೆಗೆ ಹೋಗಿ ಊಟ ಮಾಡಿ ಬಂದರು.

ರಾತ್ರೆ ನಿದ್ದೆಗೆಟ್ಟಿದ್ದ ಸುನಂದಾ, ರಾಧಮ್ಮ ಒತ್ತಾಯಿಸಿದ ಮೇಲೆ ಸ್ವಲ್ಪ ಹೊತ್ತು ನಿದ್ದೆ ಹೋದಳು.

ಮಗುವಿನ ಜ್ವರ ಹೆಚ್ಚಾಗುವ ಲಕ್ಷಣಗಳೇನೂ ತೋರಲಿಲ್ಲ.

ಸುನಂದೆ ಎಚ್ಚರಗೊಂಡ ಮೇಲೆ ರಾಧಮ್ಮ ಕೇಳಿದರು:

"ಒಂದಿಷ್ಟು ಕಾಫಿ ಮಾಡ್ಕೊಡೀಮ್ಮ. ಇಷ್ಟೆಲ್ಲ ಸಹಾಯ ಮಾಡಿದ್ದಕ್ಕೆ ಸಂಬಳ ಬೇಡ್ವೆ ನಂಗೆ?"

ಸುನಂದಾ ಕಾಫಿ ಮಾಡುತ್ತಿದ್ದಂತೆ ರಾಧಮ್ಮ, ಬಹಳ ದಿನಗಳಿಂದ ಕೇಳ ಬೇಕೆಂದಿದ್ದ ಮಾತನ್ನು ಮೆಲ್ಲನೆ ಪ್ರಸ್ತಾಪಿಸಿದರು.

"ನಿಮ್ಮ ಯಜಮಾನರು ಎಷ್ಟು ಹೊತ್ತಿಗೆ ಬರ್ತಾರೆ ಸಾಯಂಕಾಲ?"

ಸುನಂದೆಯೂ ಬಹಳ ದಿನಗಳಿಂದ ತಾನು ಹೇಳಬೇಕೆಂದಿದ್ದುದನ್ನು ಬರಿದು

ಗೊಳಿಸಲು ಸಿದ್ಧಳಾಗುತ್ತ ದೀರ್ಘವಾಗಿ ನಿಟ್ಟುಸಿರು ಬಿಟ್ಟು ಅಂದಳು:

"ನಾನೇನಮ್ಮ ಹೇಳ್ಲಿ? ನನಗೊಂದೂ ಗೊತ್ತಾಗೋದಿಲ್ಲ. ನನ್ನ ಗತಿ ಆಗ್ಹೋಯ್ತು ರಾಧಮ್ಮ. ನಾನು ಸತ್ತಿದೀನೋ ಬದುಕಿದೀನೋ ಅದೇ ನನಗೆ ತಿಳೀದು...."

ಒಂದು ಜೀವ ಎಲ್ಲ ದುಃಖವನ್ನೂ ಮಾತುಗಳಲ್ಲಿ ತೋಡಿಕೊಂಡಿತು. ಇನ್ನೊಂದು ಜೀವ ಆ ಎಲ್ಲ ಮಾತುಗಳನ್ನೂ ಸಹಾನುಭೂತಿಯಿಂದ ಕೇಳಿತು.

೮

ರಾಧಮ್ಮ ತುಟಿ ಪಿಟಕ್ಕೆನ್ನದೆ ಎಲ್ಲದಕ್ಕೂ ಕಿವಿಗೊಟ್ಟರು. ಅವರು ಊಹಿಸಿದ್ದು ದೊಂದೂ ಸುಳ್ಳಾಗಿರಲಿಲ್ಲ. ಬತ್ತಿದ ಕಪೋಲಗಳೊಡನೆ ಇಂಗಿದ ಕಣ್ಣೀರಿನೊಡನೆ ಸುನಂದಾ ತನ್ನ ಕತೆ ಮುಗಿಸಿದಾಗ ರಾಧಮ್ಮನೂ ನಿಟ್ಟುಸಿರು ಬಿಟ್ಟು ಅಂದರು:

"ಧೈರ್ಯವಾಗಿರಿ ಸುನಂದಾ. ಎಲ್ಲಾ ಸರಿ ಹೋಗುತ್ತೆ. ಅವರನ್ನ ಹಾದಿಗೆ ತರೋದು ನಿಮಗೆಷ್ಟರ ಕೆಲಸ? ಯಾವ ಸುರಸುಂದರಿಗೆ ಕಡಮೆ ನೀವು? ಅದೇನು ಕೊರತೆ ಇದೆ ನಿಮ್ಮಲ್ಲಿ? ಯಾಕೇಂತ ಆತ ಹೀಗೆ ಮಾಡ್ಬೇಕು?"

ಅದು, ಸಮಾಧಾನದ ಮಾತು ಹೌದೋ ಅಲ್ಲವೋ. ಆದರೆ ರಾಧಮ್ಮನ ಮನಸ್ಸಿನಲ್ಲಿ ಹುಟ್ಟಿ ಬೆಳೆದ ತರ್ಕ ಸರಣಿ ಅಂಥಾದ್ದು:

ಅಬಲೆಯಾದ ಸುನಂದಾ ಅಂದಳು:

"ಎಲ್ಲಾ ನಾನು ಪಡಕೊಂಡು ಬಂದಿರೋದು ರಾಧಮ್ಮ. ಯಾರೇನು ಮಾಡೋದಕ್ಕಾಗುತ್ತೆ?"

ಆ ನಿರಾಸೆಯ ಧ್ವನಿ ರಾಧಮ್ಮನಿಗೆ ಒಪ್ಪಿಗೆಯಾಗಲಿಲ್ಲ.

"ಏನೂ ಆಗೋಲ್ಲ ಸುನಂದಾ. ಸುಮ್ನಿರಿ. ದೇವರಿದ್ದಾನೆ. ಯಾವ ಚಿಂತೇನೂ ಮಾಡ್ಬೇಡಿ. ಮೊದಲು ಮಗೂ ಸುಧಾರಿಸ್ಕೊಳ್ಳಿ. ಆ ಮೇಲೆ ಎಲ್ಲಾ ಮಾಡೋಣ."

"ಈ ಮಗು ಹುಟ್ಟಿ ಇಷ್ಟೆಲ್ಲ ಅಷ್ಟೈಶ್ವರ್ಯ ಬಂತಮ್ಮ ನನಗೆ."

"ಪಾಪ! ಕೂಸಿಗೆ ಯಾಕಂತೀರಾ?....ನೀವು ಹೀಗೆಲ್ಲ ಕೊರಗೋದು ಖಂಡಿತ ಸರಿಯಲ್ಲ. ನೀವು ಅನ್ನ ನಿದ್ದೆ ಬಿಟ್ಟು ಸೊರಗ್ತಾ ಇದ್ದು ಎದೆ ಹಾಲು ಬತ್ತಿ ಹೋದರೆ ಮಗು ಹ್ಯಾಗಮ್ಮ ಸುಖವಾಗಿರುತ್ತೆ?"

ಆ ಮಾತು ಸತ್ಯವಾಗಿತ್ತೆಂಬುದು ಸುನಂದೆಗೆ ಮನವರಿಕೆಯಾಗಿತ್ತು. ಮಗುವಿನ ಪೋಷಣೆಯ ಭಾರ ತನ್ನ ಮೇಲಿದೆ ಎಂಬುದನ್ನೂ ಮರೆತು ಈ ನಡುವೆ ಆಕೆ ವರ್ತಿಸಿದ್ದಳು. ತಾನು ಮಗುವಿನ ಯೋಚನೆಯನ್ನು ಸದಾ ಕಾಲವೂ ಮಾಡಬೇಕು. ಅದು ನ್ಯಾಯ. ಆದರೆ ಮಗುವಿನ ತಂದೆಗೆ ಅಂಥ ಯೋಚನೆ ಸ್ವಲ್ಪವಾದರೂ ಇತ್ತೆ?

"ಅವರಿಗೆ ಮಗೂನ ಕಂಡರಾಗಲ್ಲ ರಾಧಮ್ಮ. ಇದು ಕಣ್ಣು ಮುಚ್ಚಿದರೇ ಅವರಿಗೆ ಸಂತೋಷ ಅಂತ ಕಾಣುತ್ತೆ."

"ಶ್!" ಎಂದರು ರಾಧಮ್ಮ; "ಕೆಟ್ಟ ಮಾತಾಡ್ಬೇಡಿ."

ಹಾಗೆ ಹೇಳಿದರೂ ಅವರ ಒಳ ಧ್ವನಿ, ಸುನಂದೆ ಹೇಳಿದುದೇ ನಿಜವಿರಬೇಕು ಎಂದಿತು. 'ಪಾಪಿ!' ಎಂಬ ಪದ, ಕುಣಿಯುತ್ತ ನಾಲಗೆಯ ತುದಿಯವರೆಗೆ ಬಂದು ಹೊರಗೆ ಬೀಳದೆ ಆ ತೇವದಲ್ಲಿ ಕರಗಿಹೋಯಿತು.

...ಸಂಜೆಯಾಯಿತೆಂದು ರಾಧಮ್ಮ ಎದ್ದರು. ಎದ್ದವರು ಮಗುವಿನತ್ತ ಬಾಗಿ ನೋಡಿದರು. ಅವರ ಮುಖ ಅಗಲವಾಯಿತು.

"ನೋಡಿ ಸುನಂದಾ. ಮಗೂ ಮೈ ಬೆವತಿದೆ. ನೀವು ಪುಣ್ಯವಂತೆ ಕಣ್ರೀ. ಮಗೂ ಉಳಕೊಂಡ್ತು..."

ಹೃದಯದ ಹೊರೆಯನ್ನೆಲ್ಲ ಆಗಲೆ ಇಳಿಸಿ ಹಗುರವಾಗಿದ್ದ ಸುನಂದಾ, ತಾನೂ ಎದ್ದು ಬಂದು ಮಗುವನ್ನು ನೋಡಿದಳು. ಹೆರಿಗೆಯಾದ ಮೇಲೆ ಮಗುವನ್ನು ನೋಡಿದಾಗ ಆಗಿದ್ದ ಸಂತೋಷವೇ ಈಗಲೂ ಆಕೆಗೆ ಆಯಿತು.

"ದೇವರ ಮುಂದೆ ದೀಪ ಹಚ್ಚಿಡಿ ಸುನಂದಾ"

—ಎಂದರು ರಾಧಮ್ಮ.

ಸುನಂದಾ, ಅಡುಗೆ ಮನೆಯ ಮೂಲೆಯಲ್ಲಿದ್ದ ದೇವರೆಡೆಗೆ ನಡೆದು ಆ ಕೆಲಸ ಮಾಡಿದಳು. ಕ್ಷೀಣವಾಗಿದ್ದ ಆಕೆಯ ಕೈ ಬೆರಳುಗಳು ಕಡ್ಡಿ ಕೊರೆದಾಗ ನಡುಗಿದುವು. ಯಾವ ಯೋಚನೆಯೂ ಇಲ್ಲದೆ ದೇವರಿಗೆ ಕೈ ಮುಗಿದಾಗ, ಕಡು ಬೇಸಗೆಯಲ್ಲಿ ತಿಳಿ ನೀರಿನಲ್ಲಿ ಮಿಂದು ಬಂದಹಾಗೆ ಆಕೆಯ ಹೃದಯ ನಿರ್ಮಲವಾಯಿತು.

ಪ್ರಾಯಶಃ ಸುನಂದಾ ಒಪ್ಪಲಾರಳೆಂದು ಗೊತ್ತಿದ್ದರೂ ರಾಧಮ್ಮ ಕೇಳಿದರು:

"ಸಾಯಂಕಾಲದ ಅಡುಗೇನೂ ನಮ್ಮಲ್ಲೇ ಮಾಡ್ತೀನಿ. ಆಗದೇ ಸುನಂದಾ?"

ಆಕೆ ನಿರೀಕ್ಷಿಸಿದ್ದ ಉತ್ತರವೇ ಬಂತು.

"ಬೇಡಿ ರಾಧಮ್ನೋರೆ. ಇಲ್ಲೇ ಏನಾದರೂ ಮಾಡ್ತೀನಿ. ಅವರೂ ಬರ್ತಾರೆ."

ಇಷ್ಟೆಲ್ಲ ಆದಮೇಲೆಯೂ ಗಂಡನ ಬಗೆಗೆ ಸುನಂದಾ ತೋರಿಸುತ್ತಿದ್ದ ಪ್ರೀತಿಯನ್ನು ಕಂಡು ರಾಧಮ್ಮ ಉಗುಳುನುಂಗಿದರು.

"ಹಾಗೇ ಆಗಲಮ್ಮ. ನಿಮ್ಮನೇಲಿ ತರಕಾರಿ ಏನೂ ಇಲ್ಲಾಂತ ಕಾಣಿಸುತ್ತೆ. ನಮ್ಮಲ್ಲಿ ಸೀಮೆಬದನೆಕಾಯಿ ಇದೆ. ತಂದುಕೊಡ್ಲಾ?"

"ಬೇಡಿ ರಾಧಮ್ಮ. ನಮ್ಮವರಿಗೆ ಸೀಮೆಬದನೆಕಾಯಿ ಅಂದರೆ ಅಷ್ಟಕ್ಕಷ್ಟೆ. ಆಲೂಗಡ್ಡೆ ಇದೆ. ಪಲ್ಯ ಮಾಡ್ತೀನಿ. ಹಾಗೇ ಸಾರೂ ಮಾಡ್ತೀನಿ."

"ನಿಮ್ಮಿಷ್ಟ. ಹುಡುಗರು ಬಂದರೇನೋ ನೋಡ್ಕೊಂಡು ಆಮೇಲೆ ಬರ್ತೀನಮ್ಮ."

ರಾಧಮ್ಮ ಹೊರಟು ಹೋದ ಮೇಲೆ ಸುನಂದಾ, ಮಗುವಿನ ಮೈಯೊರೆಸಿ, ಅರಿವೆ ಬದಲಾಯಿಸಿ, ಒಲೆ ಹಚ್ಚಿದಳು. ರಾಧಮ್ಮನೊಡನೆ ತನ್ನ ದುಗುಡವನ್ನೆಲ್ಲ ತೋಡಿಕೊಂಡಾಗಲೇ ಸಂಕಷ್ಟ ಅರ್ಧಕ್ಕರ್ಧ ನಿವಾರಣೆಯಾದ ಹಾಗೆ ಆಕೆಗೆ ತೋರಿತ್ತು. ಇನ್ನೊಂದು ಮಾನವ ಜೀವ ಒದಗಿಸಿ ಕೊಟ್ಟ ಸ್ನೇಹಚೇತನದ ಫಲವಾಗಿ ಆಕೆ ಚೇತರಿಸಿ ಕೊಂಡಿದ್ದಳು. ಆ ಪರಿಸ್ಥಿತಿಯೊಡನೆ, ಮಗು ಗಂಡಾಂತರದಿಂದ ಪಾರಾಯಿತೆಂಬ ಮಹಾ ಸಮಾಧಾನವೂ ಸೇರಿ, ಸರಾಗವಾಗಿ ಉಸಿರಾಡುವುದು ಸಾಧ್ಯವೆನಿಸಿತು ಸುನಂದೆಗೆ.

ಆಕೆ ಆಸಕ್ತಿಯಿಂದ ಅಡುಗೆ ಮಾಡಿದಳು.

ಆದರೆ ಸಂಜೆಯಾಗಿ ಕತ್ತಲಾದರೂ ಗಂಡ ಬರಲಿಲ್ಲ. ಕತ್ತಲಾಗಿ ಹೊತ್ತಾದರೂ ಆತ ಕಾಣಿಸಲಿಲ್ಲ.

ಆಕೆ ಹಜಾರದಿಂದ ಬಾಗಿಲವರೆಗೆ ಹಲವಾರು ಸಾರೆ ಹೋಗಿ ಬಂದಳು. ನಿಮಿಷಗಳು ಕಳೆದು ಗಂಟೆಗಳು ರೂಪುಗೊಂಡು ಒಂದರ ಮೇಲೊಂದು ಉರುಳಿಹೋದಂತೆ, ಆಕೆಯ ಸಂಕಟ ಹೆಚ್ಚಿತು.

ರಾಧಮ್ಮ ತಮ್ಮ ಮನೆಯ ಕಿಟಿಕಿಯ ಎಡೆಯಿಂದ, ಸುನಂದಾ ಪಡುತ್ತಿದ್ದ ಅವಸ್ಥೆಯನ್ನು ನೋಡಿದರು. ಮನೆಯಲ್ಲಿ ಎಲ್ಲರ ಊಟವಾಗಿ ಮಕ್ಕಳು ಮಲಗಿದ ಮೇಲೆ, ಸುನಂದೆಯನ್ನು ನೋಡಿ ಬರುವೆನೆಂದು ಗಂಡನಿಗೆ ಹೇಳಿ, ರಾಧಮ್ಮ ಹೊರಟು ಬಂದರು.

ಸುನಂದಾ ಕೇಳಿದಳು:

"ಗಂಟೆ ಎಷ್ಟಾಯ್ತು ರಾಧಮ್ನೋರೆ?"

ಒಂಭತ್ತೂವರೆ ದಾಟಿತ್ತು ಆಗಲೆ. ಆದರೆ ಹಾಗೆ ಹೇಳಿ ಆಕೆಯ ಮನಸ್ಸಿನ ನೋವನ್ನು ಹೆಚ್ಚಿಸಲಾರದೆ ರಾಧಮ್ಮ ಸುಳ್ಳಾಡಿದರು.

"ಎಂಟು ದಾಟಿತೂಂತ ಕಾಣುತ್ತೆ."

"ಅಷ್ಟೇನೇ! ಬಹಳ ಹೊತ್ತಾಯ್ತೇನೋ ಅಂದ್ಕೊಂಡಿದ್ದೆ. ಬಸ್ಸುಗಳು ಇನ್ನೂ ಓಡಾಡ್ತಲೇ ಇವೆ ಹಾಗಾದರೆ."

ಕೊನೆಯ ಬಸ್ಸು ಬಂದು ಹೋದುದನ್ನೂ ಅದರಲ್ಲಿ ಸುನಂದೆಯ ಗಂಡ ಬರದೆ ಇದ್ದುದನ್ನೂ ಗಮನಿಸಿದ್ದ ರಾಧಮ್ಮ ಮಾತನಾಡಲಿಲ್ಲ.

ಮಗುವಿನ ಮೈ ಮುಟ್ಟಿ ನೋಡಿ, ಹಾಸಿಗೆಯ ಬಳಿ ಕುಳಿತು, ಅವರೆಂದರು:

"ಮಗೂಗೆ ಔಷಧಿ ಕುಡಿಸಿದಿರಾ?"

"ಹೂಂ ಕಣ್ರೀ."

ಅಲ್ಲಿಂದ ರಾಧಮ್ಮ ಅಡುಗೆ ಮನೆಯತ್ತ ಇಣಿಕಿ ನೋಡಿದರು.

"ಎಲ್ಲಾ ಆರಿ ಹೋಗ್ತಾ ಇದೆಯಲ್ಲ. ನೀವು ಊಟಕ್ಕೇಳಿ ಸುನಂದಾ, ಬಡಿಸ್ತೀನಿ."

"ಇಲ್ಲ ರಾಧಮ್ಮ. ಅವರೂ ಬರಲಿ."

ಹೊತ್ತು ಗೊತ್ತು ಒಂದೂ ಇಲ್ಲದೆ ಮನೆಗೆ ಬರುವವರಿಗಾಗಿ ಯಾತಕ್ಕೋಸ್ಕರ ಕಾಯುತ್ತಿರಬೇಕೋ—ಎಂದು ರಾಧಮ್ಮನ ಮನಸ್ಸು ಸುನಂದೆಯನ್ನು ಕೆಣಕಿ ಕೇಳ ಬಯಸಿತು. ಆದರೂ ಆ ಬಯಕೆಯನ್ನು ತಡೆ ಹಿಡಿದು ಅವರೆಂದರು:

"ಗಂಡಸರದೇನು ಬಿಡೀಮ್ಮಾ. ಎಲ್ಲಿ ಬೇಕಾದರಲ್ಲಿ ತಿಂಡಿ ತಿನ್ತಿರ್ತಾರೆ. ಹೆಂಗಸರ ಕಷ್ಟ ಅವರಿಗೇನು ಗೊತ್ತಾಗುತ್ತೆ? ನೀವು ಏಳಿ."

ಆದರೆ ಸುನಂದಾ ಒಪ್ಪಲಿಲ್ಲ; ಗಂಡ ಬಂದ ಮೇಲೆಯೇ ಊಟ-ಎಂದಳು.

ಗಂಡ ಕೊಡುತಿದ್ದ ಹಿಂಸೆಯ ಬಗೆಗೆ ಹಗಲು ಅಷ್ಟೊಂದು ವರದಿ ಕೊಟ್ಟ ಸುನಂದೆ ಈಕೆಯೇ ಅಲ್ಲವೇ? ಎಂದು ಒಂದು ಕ್ಷಣ ರಾಧಮ್ಮನಿಗೆ ವಿಸ್ಮಯವಾಯಿತು. ವಿಸ್ಮಯದ ಜತೆಯಲ್ಲೆ, ಎಷ್ಟೊಂದು ಒಳ್ಳೆಯ ಹೆಂಗಸು ಸುನಂದಾ—ಎಂಬ ಅಭಿಮಾನ ಮೂಡಿತು.

ಅವರಿಬ್ಬರೂ ಅಲ್ಲೇ ಬಹಳ ಹೊತ್ತು ಕುಳಿತರು, ಆ ಮಾತು ಈ ಮಾತು ಆಡುತ್ತ—ನಡುನಡುವೆ ಮೌನವಾಗಿ...

"ಕೊನೇ ಬಸ್ಸೂ ಹೋಯ್ತೂಂತ ಕಾಣುತ್ತೆ"

—ಎಂದಳು ಸುನಂದಾ, ಹೊತ್ತು ತಿಳಿಯದೆ.

ಹನ್ನೊಂದು ದಾಟಿರಬೇಕೆಂದು ತಿಳಿದಿದ್ದ ರಾಧಮ್ಮ, ತೂಕಡಿಸುತ್ತಿರಬಹುದಾದ ತನ್ನ ಗಂಡನ ನೆನಪಾಗಿ, ಮನೆಗೆ ಹೊರಡುವ ಯೋಚನೆ ಮಾಡಿದರು.

"ನಿಮ್ಮವರು ನಡೆದುಕೊಂಡೇ ಬರ್ತಾರೋ ಏನೋ"

—ಎಂದರು ರಾಧಮ್ಮ, ಏನನ್ನಾದರೂ ಹೇಳುವುದು ತನ್ನ ಕರ್ತವ್ಯವೆಂಬ ದೃಷ್ಟಿಯಿಂದ.

ಅವರು ಎದ್ದರೆಂದು ಸುನಂದೆಯೂ ಎದ್ದಳು. ಇಬ್ಬರೂ ಬಾಗಿಲ ಬಳಿಗೆ ಬಂದರು.

ಅಷ್ಟರಲ್ಲೆ ಪುಟ್ಟಣ್ಣನ ದರ್ಶನವಾಯಿತು. ಮನೆಯನ್ನು ಸಮೀಪಿಸುತಲಿದ್ದ ಆತನ ಹೆಜ್ಜೆಗಳು ಭದ್ರವಾಗಿರಲಿಲ್ಲ.

"ಬಂದರು ಕಣೇ..."

—ಎಂದು ಆತನನ್ನು ನೋಡಿದೊಡನೆಯೇ ಹೇಳಿದ ರಾಧಮ್ಮ, 'ಬರ್ತೀನಿ ಕಣೇ' ಎಂದೂ ಹೇಳಲು ಸಿದ್ಧರಾದರು.

ಆದರೂ ಆಕೆಯ ಕಾಲುಗಳು ತಡೆದು ಅಲ್ಲೇ ನಿಂತು, ಪುಟ್ಟಣ್ಣ ಒಳಬರಲು

ಹಾದಿ ಮಾಡಿಕೊಟ್ಟುವು.

ಕೆಂಪಗಾಗಿತ್ತು ಮುಖ. ಕಣ್ಣುಗಳನ್ನು ಮತ್ತು ಆವರಿಸಿತ್ತು.

'ಮಗೂಗೆ ಹೇಗಿದೆ?'

–ಎಂದು ಆತ ಕೇಳಲಿಲ್ಲ.

ಬದಲು, ಸುನಂದೆ ರಾಧಮ್ಮ ಇಬ್ಬರನ್ನೂ ನೆಟ್ಟ ದೃಷ್ಟಿಯಿಂದ ನೋಡುತ್ತ ಆತನೆಂದ:

"ಮಾತನಾಡ್ತಾ ಇದ್ದಿರಿ. ನಾನು ಬಂದು ತೊಂದರೆಯಾಯ್ತೊ?"

ಸುನಂದಾ ತಲೆತಗ್ಗಿಸಿದಳು. ರಾಧಮ್ಮನ ಎದೆ ಡವಡವನೆ ಹೊಡೆದುಕೊಂಡಿತು. ಆದರೂ ದೃಢತೆಯಿಂದ ಅವರೆಂದರು:

"ಪರವಾಗಿಲ್ಲ. ಮಾತಿಗೇನು? ಜೀವಮಾನವೆಲ್ಲ ಪುರಸೊತ್ತಿದೆಯಲ್ಲ. ಸದ್ಯಃ ಮನೆ ಇದೆ ಅನ್ನೋದು ನೆನಪಾಗಿ ನೀವು ಬಂದಿರಲ್ಲ–ಅದೇ ದೊಡ್ಡ ವಿಷಯ!"

ಕೊಠಡಿಯ ಒಳಹೋಗುತಿದ್ದ ಪುಟ್ಟಣ್ಣ ತಡೆದು ನಿಂತು ತಿರುಗಿ ನೋಡಿದ. ಸುನಂದೆ ನಡುಗಿದಳು. ರಾಧಮ್ಮ ತನ್ನ ಪಕ್ಷವಹಿಸಿ ಮಾತನಾಡಿದರಲ್ಲಾ ಎಂಬ ಸಂತೋಷದ ಭಾವನೆಯನ್ನು ಮುಂದೇನಾಗುವುದೋ ಎಂಬ ಭಯ ಹಿಸುಕಿಬಿಟ್ಟಿತು.

ಪುಟ್ಟಣ್ಣ ಗುಡುಗು ಧ್ವನಿಯಲ್ಲಿ ಕೇಳಿದ:

"ಏನಂದಿರಿ?"

ಸೆರಗನ್ನು ಬಲಗೈಯಲ್ಲಿ ಮತ್ತೂ ಗಟ್ಟಿಯಾಗಿ ಎದೆಯ ಮೇಲಕ್ಕೆ ಎಳೆದು ಕೊಳ್ಳುತ್ತ ರಾಧಮ್ಮ ಹೇಳಿದರು:

"ಸಾಕು ಗಂಡಸ್ತನ ತೋರಿಸೋದು! ಮನೇಲಿ ಮಗು ಕಾಹಿಲೆ ಮಲಗಿ ಪ್ರಾಣ ಬಿಡ್ತಾ ಇದ್ದರೂ ಮನೆಬಿಟ್ಟು ನಿಶಾಚರನ ಹಾಗೆ ಅಲೀತಾ ಇದೀರಲ್ಲಾ, ನೀವೇನು ಮನುಷ್ಯನೋ ಅಥವಾ—"

ರಾಧಮ್ಮನ ಮಾತು ಒಮ್ಮೆಲೆ ನಿಂತು ಹೋಯಿತು; ಮೇರೆಮೀರಿ ತಾನು ಆಡುತ್ತಿರುವೆನೆಂಬ ಭಯ ಹದ್ದಿನ ಹಾಗೆ ಇಳಿದು ಬಂದು ಉಳಿದ ಮಾತನ್ನು ಕುಟುಕಿ ತೆಗೆಯಿತು.

ಪುಟ್ಟಣ್ಣ ಮಾತನಾಡಲಿಲ್ಲ. ಅನಂತ ಕಾಲವೋ ಎನ್ನುವಹಾಗೆ ಒಂದು ನಿಮಿಷ ಕಳೆಯಿತು.

ಕೋಟು ಬಿಚ್ಚಿ ಕುರ್ಚಿಯ ಮೇಲೆಸೆದು ಪುಟ್ಟಣ್ಣ, ಆಶ್ಚರ್ಯಕರವೆನ್ನಿಸುವಷ್ಟು ಶಾಂತವಾದ ಧ್ವನಿಯಲ್ಲಿ ಹೇಳಿದ:

"ರಾಧಮ್ಮ. ನಿಮ್ಮ ಯಜಮಾನರು ರಾಮಯ್ನೋರು ಕರೀತಿದಾರೆ, ಹೋಗೀಮ್ಮ."

ಕಠಿನವಾದ ಬೇರೇನಾದರೂ ಮಾತನ್ನು ಆತ ಆಡಿದ್ದರೆ ರಾಧಮ್ಮನಿಗೆ ಅಷ್ಟು ಸಂಕಟವಾಗುತ್ತಿರಲಿಲ್ಲ. ಆದರೆ ಈ ವ್ಯಂಗ್ಯ ಮಾತಿನಿಂದ ಆಕೆಗೆ ಅವಮಾನವಾಯಿತು.

ಅವಮಾನಿತರಾದ ರಾಧಮ್ಮನ ಕಣ್ಣುಗಳಲ್ಲಿ ಹನಿಯಾಡಿತು.

ಅವರು ದಡದಡನೆ ಮೆಟ್ಟಲಿಳಿದು ತಮ್ಮ ಮನೆಗೆ ಹೊರಟುಹೋದರು.

ಪುಟ್ಟಣ್ಣ ಹೊರಗಿನ ಬಾಗಿಲು ಮುಚ್ಚಿ ಅಗಣಿ ಹಾಕಿ ಹೆಂಡತಿಯತ್ತ ತಿರುಗಿದ. ಅಲ್ಲೇ ನಿಂತಿದ್ದ ಆಕೆಯನ್ನು ತನ್ನ ಕೊಠಡಿಗೆಳೆದ. ಆಕೆಯ ಕೈಯ ಮಣಿಗಂಟನ್ನು ಹಿಡಿದು ತಿರುವಿ, ಮಂಚದಮೇಲೆ ಕುಕ್ಕರಿಸಿ ಬೀಳುವಂತೆ ಮಾಡಿದ. ಒಮ್ಮೆ ನೋವಿನಿಂದ "ಆಯ್!" ಎಂದಳು ಸುನಂದಾ. ಒಮ್ಮೆ ಮಾತ್ರ. ಮತ್ತೆ ಆಕೆ ರೋದಿಸಲಿಲ್ಲ. ಔಡುಗಚ್ಚಿ, ತನ್ನ ದಾಂಪತ್ಯ ಜೀವನದಲ್ಲಿ ಮೊದಲ ಬಾರಿಗೆ, ಗಂಡನ ಕೈಯಲ್ಲಿ ಹೊಡೆತ ತಿಂದಳು; ಪಾದಗಳಿಂದ ಒದೆಸಿಕೊಂಡಳು.

ಪಶುವಾಗಿದ್ದ ಆ ಗಂಡಸು ಹೊಲಸು ಮಾತುಗಳನ್ನಾಡಿದ. ಅವಾಚ್ಯ ಪದಗಳು. ಆತನದೊಂದೇ ಆಕ್ರೋಶ–ತನ್ನ ಮಾನ ಕಳೆಯಲು ಆ ಹೆಂಡತಿ ಯತ್ನಿಸಿದಳೆಂದು. "ಬೊಗಳು ಬೋ–ಮಗಳೇ! ಏನು ಹೇಳ್ದೆ ನಿನ್ನ ಸ್ನೇಹಿತೆಗೆ?" ಇಷ್ಟು ಶಿಕ್ಷೆ ಸಾಲದೆಂದು ಮತ್ತೆ ಬೆದರಿಕೆ: "ಬಾಯಿ ತೆರೆದರೆ ನಿನ್ನ ಚರ್ಮ ಸುಲಿದೇನು! ಈ ಮನೇಲಿರಬೇಕಾದರೆ ನೀನು ನಾಯಿಯ ಹಾಗೆ ಬಿದ್ದಿರಬೇಕು! ಇಲ್ದೇ ಹೋದರೆ ಒದ್ದು ಹೊರ ಹಾಕ್ತೀನಿ!"

ಏಟುಗಳ ಹಿಂಸೆ ಸಹಿಸುವುದಾಗದೇ ಹೋದಾಗ ಸುನಂದಾ ಆತನ ಹಾಸಿಗೆಯ ಮೇಲೆ ಬಿದ್ದುಕೊಂಡಳು. ಆತ, ಆಕೆಯನ್ನೆಳೆದು ನೆಲಕ್ಕೆ ಕೆಡವಿದ.

ದಂಡಿಸಿ ಶಕ್ತಿಗುಂದಿ ಆ ಗಂಡಸು ಸುಮ್ಮನಾಗಲು ಸ್ವಲ್ಪಹೊತ್ತು ಹಿಡಿಯಿತು.

ಕೊನೆಗೆ ಆತ ಕಿರಿಚಿದ:

"ಹೊರಟು ಹೋಗು ಆಚೆಗೆ!"

ಬಲು ಪ್ರಯಾಸ ಪಟ್ಟು ಸುನಂದಾ ಮೆಲ್ಲನೆದ್ದು ಒಳ ಹಜಾರಕ್ಕೆ ನಡೆದು ತನ್ನ ಹಾಸಿಗೆಯ ಮೇಲೆ ಒರಗಿಕೊಂಡಳು. ದಿಂಬನ್ನು ಬಾಯಲ್ಲಿ ಕಚ್ಚಿ ಆಕೆ ಅಳಲು ಯತ್ನಿಸಿದಳು. ಆದರೆ ಅಳು ಸುಲಭವಾಗಿ ಬರಲಿಲ್ಲ.

* * * *

....ಮನೆ ಸೇರಿದ ರಾಧಮ್ಮ ಕಿಟಿಕಿಯ ಬಳಿ ನಿಂತು ಸುನಂದೆಯ ಮನೆಯತ್ತ ನೋಡುತ್ತಲೇ ಇದ್ದರು. ಆ ಕೊಠಡಿಯಲ್ಲಿ ಏನಾಗುತ್ತಿತ್ತೆಂಬುದನ್ನು ಊಹಿಸುವುದು ಆಕೆಗೆ ಕಷ್ಟವಾಗಲಿಲ್ಲ. ಕೇಳಿಸುತ್ತಿದ್ದುದು ಆತ ಹೊಡೆಯುತ್ತಿದ್ದ ಸದ್ದುಮಾತ್ರ. ಆಕೆಯ ರೋದನವೇ ಇಲ್ಲ. 'ಪಾಪಿ ಉಸಿರು ಕಟ್ಟಿಸಿ ಸಾಯಿಸಿಯೇ ಬಿಟ್ಟನೇನೋ' ಎಂದು ಅವರಿಗೆ ಭಯವಾಯಿತು.

"ನೋಡೀಂದ್ರೆ ಆತ ಮಾಡ್ತಿರೋದು"

—ಎಂದು ಗಂಡನನ್ನು ಆಕೆ ಕರೆದರು.

ಆತನೂ ಬಂದು ಕಿಟಿಕಿಯ ಬಳಿ ನಿಂತರು.

ಆದರೆ ಸ್ವಲ್ಪ ಹೊತ್ತಿನಲ್ಲೇ ಪುಟ್ಟಣ್ಣನ ಕೊಠಡಿಯ ದೀಪ ಆರಿತು.

"ಹೊಡೆದು ಸಾಕಾಗಿ ಮಲಕೊಂಡನೇನೋ"

–ಎಂದರು ರಾಧಮ್ಮ.

"ಹಾಳಾಗಲಿ ಬಿಡು, ಅವರವರ ಪಾಪ ಅವರವರ ತಲೆಯ ಮೇಲೆ."

–ಎಂದು ಹೇಳಿ ರಾಮಯ್ಯನವರು ಮತ್ತೆ ಹಾಸಿಗೆಗೆ, ಮುಸುಕಿನ ರಕ್ಷಣೆಗೆ, ನಡೆದರು.

ಮತ್ತೂ ಕಿಟಿಕಿಯ ಬಳಿಯೇ ನಿಂತಿದ್ದ ಹೆಂಡತಿಗೆ ಅವರು ಹೇಳಿದರು:

"ಬಾ ರಾಧಾ. ಎಷ್ಟು ಹೊತ್ತೂಂತ ಅಲ್ಲೇ ನಿಂತಿರ್‍ತೀಯಾ? ಬಾ ಮಲಕೋ."

೯

ರಾಧಮ್ಮನ ಮನೆಯ ಮುಂದೆ, ಹರಕಲು ಬಟ್ಟೆ ತೊಟ್ಟಿದ್ದ, ಕರಿಯ ಮೈಯ, ಗಂಟುಮೂಟೆ ಸಹಿತವಾದ ಸಂಸಾರವೊಂದು ಬಂದು ನಿಂತಿತ್ತು. ಆ ಮಾತು ಗದ್ದಲ ಕೇಳಿ ಸುನಂದಾ ಮಗುವನ್ನೆತ್ತಿಕೊಂಡು ಹೊರಬಂದಳು. ಗುಣಹೊಂದಿ ಹಸನ್ಮುಖಿಯಾಗಿದ್ದ ಮಗುವೂ ಅಂಗಳದಲ್ಲಿ ನೆರೆದಿದ್ದವರ ಬಗೆಗೆ ಕುತೂಹಲ ತೋರಿತು.

ರಾಧಮ್ಮ ಕರೆದರು:

"ಇಲ್ಲಿಗ್ಬನ್ನಿ ಸುನಂದಾ. ಇವರೇನು ಮಾತಾಡ್ತಿದಾರೋ ಸರಿಯಾಗಿ ಅರ್ಥವೇ ಆಗೊಲ್ಲ."

ಸುನಂದಾ ಹತ್ತಿರ ಬಂದಳು. ಆ ಜನರೆಲ್ಲ ತಮಿಳು ಮಾತನಾಡುತಿದ್ದರು.

"ನನಗಾದರೂ ಎಲ್ಲಿ ಬರುತ್ತೇಂತ ಅವರ ಭಾಷೆ?"

"ಸರಿ ಹೋಯ್ತು!"

ಭಾಷೆ ತಿಳಿಯದೇ ಹೋಯಿತೆಂದು ಮನುಷ್ಯರು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳದೇ ಇದ್ದ ಕಾಲ ಯಾವುದು? ಅಲ್ಲದೆ, ಇಲ್ಲಿ ಪರಸ್ಪರರಿಗೆ ಭಾಷೆ ಸ್ವಲ್ಪ ಸ್ವಲ್ಪವಾದರೂ ಅರ್ಥವಾಗುತ್ತಿತ್ತು.

ರಾಧಮ್ಮನ ಮನೆಯ ಮೆಟ್ಟಲ ಮೇಲೆ ಕುಳಿತು ಆ ಹೆಂಗಸು ಹಾವಭಾವಗಳೊಡನೆ ಆ ಎರಡೂ ಮನೆಗಳ ಎಡಮಗ್ಗುಲಿಗಿದ್ದ ಖಾಲಿ ನಿವೇಶನದತ್ತ ಬೊಟ್ಟು ಮಾಡುತ್ತ ಹೇಳಿದಳು:

"ಅಲ್ಲಿ ಗುಡಿಸಲು ಹಾಕ್ಕೊಂಡಿರ್‍ತೀವಿ ಅಮ್ಮ. ನಾನು ಬಿಟ್ಟಿಯಾಗಿ ನಿಮ್ಮನೆ ಚಾಕರಿ ಮಾಡ್ತೀನಿ. ಒಂದೆರಡು ತಿಂಗಳು ಇದ್ದು ಹೊರಟ್ಬಿಡ್ತೀವಿ."

ಅದನ್ನು ಅರ್ಥಮಾಡಿಕೊಂಡ ರಾಧಮ್ಮ ಹೇಳಿದರು:

"ನಾವು ಬಾಡಿಗೆ ಮನೆಯೋರು. ನಮ್ಮದಲ್ಲ ಆ ಸೈಟು. ಅಲ್ದೆ, ಮುನಿಸಿಪಾಲಿಟಿ

ಯವರು ಹಾಗೆಲ್ಲ ಗುಡಿಸಲು ಕಟ್ಕೋಕೆ ಬಿಡ್ತಾರಾ?"

ಸುನಂದೆಯತ್ತ ತಿರುಗಿ ಆಕೆಯೆಂದರು:

"ಬಿಡೊಲ್ಲ ಅಲ್ವೇನ್ರೀ?"

"ಇಲ್ಲಾಂತ ತೋರುತ್ತೆ"

–ಎಂದಳು ಸುನಂದಾ, ರಾಧಮ್ಮನ ಮಾತಿಗೆ ಬೆಂಬಲವಾಗಿ, ಖಂಡಿತವಾಗಿ ತನಗೆ ಗೊತ್ತಿರದೇ ಇದ್ದರೂ.

ಆದರೆ ಇಂತಹ ಎಡರುಗಳನ್ನೆಲ್ಲ ಹಿಂದೆ ಅನೇಕ ಸಲ ದಾಟಿ ಬಂದಂತಿತ್ತು ಆ ಸಂಸಾರ. ಆ ಹೆಂಗಸು ಕನ್ನಡ ಮಾತುಗಳನ್ನು ಅರ್ಥಮಾಡಿಕೊಂಡು ಅಂದಳು:

"ಮುನಿಸಿಪಾಲಿಟೀದು ದೊಡ್ಡದಲ್ಲ. ನಮ್ಮ ಜಾಗ ಕಾವಲು ಕಾಯ್ತಿದಾರೇಂತ ಯಜಮಾನರು ಹೇಳಿದರಾಯ್ತು."

ಅಂತಹ ಲೋಕಾನುಭವ ರಾಧಮ್ಮನಿಗಾಗಲೀ ಸುನಂದೆಗಾಗಲೀ ಇರಲಿಲ್ಲ. ಆ ರೀತಿಯ ಪರಿಸ್ಥಿತಿಯನ್ನು ಅವರೆಂದೂ ಎದುರಿಸಿಯೂ ಇರಲಿಲ್ಲ. ಇನ್ನೂ ಯುವತಿ ಯಂತೆಯೇ ತೋರುತ್ತಿದ್ದ ಬಲವಾದ ಮೈ ಕಟ್ಟಿದ್ದ ಆ ಹೆಣ್ಣಿನ ಧೈರ್ಯವನ್ನು ಇಬ್ಬರು ಹೆಂಗಸರೂ ಮೆಚ್ಚಿದರು.

ತನ್ನ ಮಾತನ್ನು ಅಲ್ಲಗಳೆಯುವ ಉತ್ತರ ಬರದೆ ಇದ್ದಾಗ ಆ ಹೆಂಗಸು ಕೇಳಿದಳು:

"ಅಮ್ಮಾ, ಆ ಜಾಗದ ಯಜಮಾನರು ಯಾರು?"

"ಇದೇ ಬೀದೀಲಿ ಮೇಲ್ಗಡೆ ಇದಾರೆ–ನಾಗೇಂದ್ರಪ್ಪ ಅಂತ. ಹೋಗಿ ಅಲ್ಲೇ ವಿಚಾರಿಸಿ. ಅವರು ಒಪ್ಪಿದರೆ ನಮ್ಮದೇನೂ ಆಕ್ಷೇಪವಿಲ್ಲ,"

–ಎಂದರು ರಾಧಮ್ಮ. ಆ ಸಂಸಾರ ಸಮೀಪದಲ್ಲೇ ಇದ್ದರೆ ಬಿಟ್ಟಿ ಚಾಕರಿಗೆ ಆಳು ದೊರಕಬಹುದೆಂದು ಆಕೆ ಯೋಚಿಸಿದರೆಂದಲ್ಲ. ಆ ಭಾಗ್ಯವೆಲ್ಲ ಸೈಟಿನ ಯಜ ಮಾನರಾದ ನಾಗೇಂದ್ರಪ್ಪನವರಿಗೇ ಎಂಬುದು ಆಕೆಗೆ ಗೊತ್ತಿತ್ತು.

ಆ ಹೆಂಗಸು ತನ್ನ ಸಂಸಾರದ ಕತೆ ಹೇಳಿದಳು. ನಡುನಡುವೆ "ಕುಡುಕ" ಎಂದು ತನ್ನ ಗಂಡನನ್ನು ಜರೆದಳು. ಆಕೆ ಬಯ್ದಾಗ ಆತ ಮುಖ ಊದಿಸಿಕೊಂಡು ಕುಳಿತು ಕೊಳ್ಳುತ್ತಿದ್ದ, ಆಕೆ ಅತ್ತಾಗ ಆತನೂ, "ದೇವರು ಹೀಗೆ ಮಾಡಿದ" ಎಂದು ದೂರು ಕೊಡುತ್ತಾ, ಒಂದೆರಡು ಮಾತು ಆಡುತ್ತಿದ್ದ.

ತಮಿಳುನಾಡಿನಿಂದ ಉದ್ಯೋಗವನ್ನರಸುತ್ತ ಗುಳೆ ಹೊರಟ ಹಲವು ಸಹಸ್ರ ಕುಟುಂಬಗಳಲ್ಲಿ ಅವರದೂ ಒಂದು. ಮೂಲತಃ ಹಳ್ಳಿಯ ಜನ. ಅವರು ಬೇಸಾಯ ಮಾಡುತ್ತಿದ್ದ ಹೊಲದಲ್ಲಿ ಉತ್ಪನ್ನವಾಗುತ್ತಿದ್ದುದು ಸ್ವಲ್ಪ. ಗೇಣಿ ಕೊಟ್ಟಮೇಲೆ ಏನೂ ಉಳಿಯುತ್ತಿರಲಿಲ್ಲ. ಕೊಯಮತ್ತೂರಿಗೆ ಹೋಗಿ ಕೂಲಿಕಾರರಾಗಬೇಕೆಂದು ಆ ಪ್ರದೇಶದಿಂದ ಹೊರಬಿದ್ದ ಹಲವು ಸಂಸಾರಗಳ ಜತೆ ಅವರೂ ಹೊರಟರು–ಗಂಡ, ಹೆಂಡತಿ ಮತ್ತು ಮಗ. ಬಹಳ ಕಷ್ಟಪಟ್ಟಮೇಲೆ ಕೆಲಸ ದೊರೆಯಿತು. ಹಾಗೆ ದಿನ

ತಳ್ಳುತ್ತಿದ್ದಾಗ ಒಂದು ಹೆಣ್ಣುಮಗು ಹುಟ್ಟಿತು. ಕೆಲವು ತಿಂಗಳಲ್ಲೆ ಮಿಲ್ಲುಗಳ ಒಡೆಯರು ದುಡಿಯುವವರ ಸಂಖ್ಯೆಯನ್ನು ಕಡಮೆ ಮಾಡಿದುದರಿಂದ ಆ ದಂಪತಿಯ ಕೆಲಸ ಹೋಯಿತು....ಮತ್ತೆ ಅಲೆದಾಟ...ಊರೂರು ಸುತ್ತಿದ ಮೇಲೆ ಕೋಲಾರದ ಬಂಗಾರದ ಬಯಲು ಬಂತು. ಆ ನೆಲ ಚಿನ್ನದ ಹಾಗೆ ಹೊಳೆಯುತ್ತಿರಲಿಲ್ಲ—ಬದಲು ಕಪ್ಪಗಿತ್ತು, ಅವರ ಮೈಬಣ್ಣಕಿಂತಲೂ ಕಪ್ಪು. ಅಲ್ಲದೆ, ಅಲ್ಲಿ ಕೆಲಸವಿರಲಿಲ್ಲ. ಬಳಿಕ ಆ ಊರಿನಿಂದ ಈ ಊರಿಗೆ...

ಒಂದು ವರ್ಷ ದಾಟಿದ್ದ ಪುಟಾಣಿ ಹೆಣ್ಣು ಮಗುವನ್ನು ಎತ್ತಿಕೊಂಡೇ ಇದ್ದಳು ಆ ತಾಯಿ. ಹುಡುಗನಿಗೆ ಎಂಟೊ ಹತ್ತೊ ವರ್ಷ ವಯಸ್ಸಾದ ಹಾಗಿತ್ತು. ಆಕೆಯ ಗಂಡ ಗಟ್ಟಿಮುಟ್ಟಾದ ಆಳೇ—ಮೂವತ್ತೈದರ ಒಳಗೆ...

"ಇಲ್ಲೇನು ಕೆಲಸ ಮಾಡ್ತೀರಾ?"

—ಎಂದು ಕೇಳಿದಳು ಸುನಂದಾ. "ಇಂಗೆ ಏನ್ ಕೆಲಸ ಶೆಯ್ವಿರಿ?" ತಪ್ಪು ತಪ್ಪು ತಮಿಳು. ಹಿಂದೆ ಸಿನಿಮಾ ನೋಡಿ ಕಲಿತುದು.

ಆದರೆ ದುಡಿಯುವ ಇನ್ನೊಂದು ಜೀವಕ್ಕೆ ಅದು ಅರ್ಥವಾಗಿ, ಆಕೆ ಎಂದಳು:

"ಮಿಲ್ನಲ್ಲಿ ಕೆಲಸ ಸಿಕ್ಕಿದರೆ ಇಬ್ಬರೂ ಹೋಗ್ತೀವಿ. ನಿಮ್ಮನೆ ಚಾಕರಿಯೆಲ್ಲ ಮಾಡ್ಕೊಟ್ಟು ನಾನು ಮಿಲ್ಲಿಗೆ ಹೋಗ್ತೀನಿ. ಇಲ್ದೆಹೋದ್ರೆ ಇಲ್ಲ. ಇವನಿಗೆ ಸೌದೆ ಒಡೆಯೋಕೆ ಬರ್ತದೆ. ಹಮಾಲಿ ಕೆಲಸಾನೂ ಮಾಡ್ತಾನೆ. ನನ್ನ ಮಗನೂ ಟೇಸನ್ ಗೀಸನ್‌ಗೆ ಹೋಗಿ ಸಂಪಾದಿಸ್ತಾನೆ...ದೇವರು ಏನಾದರೂ ಮಾರ್ಗ ತೋರಿಸದೆ ಇರ್ತಾನೇನಮ್ಮಾ?"

....ಆ ನಾಲ್ವರ ಸಂಸಾರ, ನಿವೇಶನದ ಒಡೆಯರಾದ ನಾಗೇಂದ್ರಪ್ಪನವರತ್ತ ಹೊರಟಿತು. ಹೋಗುತ್ತ ಆ ಹೆಂಗಸು ಹೇಳಿದಳು:

"ಅಲ್ಲಿಗೆ ಹೋಗಿ ಬರ್ತೀವಿ ಅಮ್ಮ. ಯಜಮಾನರ್ನ ಕೇಳ್ಕೊಂಡು ಬರ್ತೀವಿ."

ಸುನಂದಾ ಯೋಚಿಸಿದಳು: ಆ ಹೆಂಗಸು ವಿದ್ಯಾವತಿಯಾಗಿದ್ದರೆ ಖಂಡಿತ ರಾಗ ವೆಳೆಯುತಿದ್ದಳು—'ನಿಮಗೆ ತೊಂದರೆ ಕೊಟ್ಟೆವು, ಕ್ಷಮಿಸಿ,' ಎಂತಲೋ, 'ತುಂಬಾ ಥ್ಯಾಂಕ್ಸ್' ಎಂತಲೋ.

ರಾಧಮ್ಮನ ಮಗ ಶ್ಯಾಮ ಆವರೆಗೂ ಸುಮ್ಮನಿದ್ದವನು "ಇಸ್ಸಿಸ್ಸೀ" ಎಂದು ಮೂಗಿನಿಂದ ಸ್ವರ ಹೊರಡಿಸಿದ.

"ಏನೋ ಅದು?"

—ಎಂದು ಆತನ ತಾಯಿ ಕೇಳಿದರು.

"ಅವರು ಬರೇ ಕೊಳಕು. ಘಂ ಅಂತ ವಾಸನೆ ಹೊಡೀತಿತ್ತು ಮೂಗಿಗೆ! ಅಬ್ಬ!"

ರಾಧಮ್ಮನಿಗೆ ನಗು ಬಂತು.

"ಅಷ್ಟೇ ತಾನೆ? ಎಂಟು ದಿವಸ ಸ್ನಾನ ಮಾಡದೇ ಇದ್ದರೆ ನೀನೂ ಹಾಗೆಯೇ ಕೊಳಕನಾಗ್ತೀಯಾ."

ಆಕೆ ಸುನಂದೆಯತ್ತ ತಿರುಗಿ ಮಗುವಿನತ್ತ ಕೈ ಚಾಚಿದರು:

"ಬಾ ಸರಸ್ವತಿ...ಬಾ...."

ಮಗು ಬಂತು.

"ನನ್ಚಿನ್ನ....ನನ್ಕಂದ...."

—ಎಂದು ರಾಧಮ್ಮ 'ಗಿಲಿಗಿಲಿ' ಮಾಡಿ ಮಗುವನ್ನು ನಗಿಸಿದರು; ಅದರ ಮೇಲೆ ಮುತ್ತಿನ ಮಳೆಗರೆದರು.

ಆ ಬಳಿಕ ರಾಧಮ್ಮನೆಂದರು:

"ಇದೇನಿದು, ಅಂಗಳದಲ್ಲೇ ನಿಂತಿದೀವಲ್ಲಾ? ಒಂದೋ ನಮ್ಮನೆಗೆ ನಡೀರಿ—ಇಲ್ದಿದ್ರೆ ನಿಮ್ಮಲ್ಲಿಗೆ."

"ಬನ್ನಿ ನಮ್ಮನೇಗೇ"

—ಎಂದು ಸುನಂದಾ ಮನೆಯತ್ತ ತಿರುಗಿದಳು.

"ಎಲ್ಲಿಗೂ ಹೋಗ್ಬೇಡ ಶ್ಯಾಮೂ. ಮನೇಲೆ ಇರು. ಬಂದ್ಬಿಟ್ಟೆ..."

—ಎಂದು ರಾಧಮ್ಮ ಮಗನಿಗೆ ಆದೇಶವಿತ್ತು, ಸರಸ್ವತಿಯನ್ನೆತ್ತಿಕೊಂಡು ಸುನಂದೆಯ ಹಿಂದೆ ಬಂದರು.

* * * *

ಏಳು ದಿನಗಳಾಗಿದ್ದುವು ಆ ರಾತ್ರೆ ಕಳೆದು. ಮೂಳೆ ಮುರಿಯುವಂತೆ ದೊರೆತ ಹೊಡೆತದಿಂದ ಸುನಂದೆಯ ಮೈ ಊಕ್ಕಾಗಿತ್ತು, ಹೃದಯ ಕಲ್ಲಾಗಿತ್ತು.

ಮಾರನೆ ದಿನ ರಾಧಮ್ಮ ತಾವಾಗಿಯೇ ಬಂದಾಗ ಸುನಂದಾ ಹೇಳಿದ್ದಳು:

"ನೀವಿನ್ನು ನಮ್ಮ ಮನೆಗೆ ಬರೋದೇ ಇಲ್ಲಾಂತಿದ್ದೆ."

ರಾಧಮ್ಮ ಪ್ರಯತ್ನಪೂರ್ವಕವಾಗಿ ನಕ್ಕು ನುಡಿದಿದ್ದರು:

"ಯಾಕಮ್ಮ, ನಿಮ್ಮ ಯಜಮಾನರು ಕೋಪಿಸ್ಕೋತಾರೆ ಅಂತ್ಲೆ? 'ಪಕ್ಕದ ಮನೆಯವರಿಗೆ ಪ್ರವೇಶವಿಲ್ಲ' ಅಂತ ಬೋರ್ಡೇನೂ ಹಾಕಿಲ್ವಲ್ಲಾ!"

"ಅವರು ಅಂದದ್ದನ್ನೆಲ್ಲ ಮನಸ್ಸಿಗೆ ಹಚ್ಕೋಬೇಡಿ ರಾಧಮ್ಮ."

"ಏನಾದರೂ ಅಂದಿದ್ರೆ ಆತ? ಎಲ್ಲಿ—ಏನಂದರು? ನನಗೇನೂ ನೆನಪಿಲ್ವಲ್ಲ!"

ಸುನಂದಾ, ಕಂಠ ಬಿಗಿದು ಬಂದು ಸುಮ್ಮನಾದಾಗ, ಮೃದು ಧ್ವನಿಯಲ್ಲಿ ರಾಧಮ್ಮ ಕೇಳಿದ್ದರು:

"ತುಂಬಾ ನೋವಾಯ್ತೆ ಸುನಂದಾ?"

—ಎಡವಿ ಬಿದ್ದ ಮಗುವಿಗೆ, 'ಕಾಲಿಗೆ ಗಾಯವಾಯ್ತೇನೇ?' ಎಂದು ತಾಯಿ ಕೇಳಿದ ಹಾಗೆ.

ಉತ್ತರವಾಗಿ ಸುನಂದಾ ಒಂದು ನಿಮಿಷ ಅತ್ತಿದ್ದಳು, ಒಂದೇ ನಿಮಿಷ.

...ಅದಾದ ಮೇಲೆ ಒಂದೊಂದಾಗಿ ದಿನಗಳು ಕಳೆದಿದ್ದುವು. ಕಾಹಿಲೆ ಬಿದ್ದಿದ್ದ ಮಗುವೇನೋ ಚೇತರಿಸಿಕೊಂಡಿತು. ಆದರೆ ಸುನಂದೆಯ ಪಾಲಿಗೆ ಇದ್ದುದು, ಸಾವೂ ಅಲ್ಲ ಬದುಕೂ ಅಲ್ಲ ಎನ್ನುವಂತಹ ಜೀವನ. ಮತ್ತೆ ಗಂಡ ಆಕೆಯ ಮೇಲೆ ಕೈ ಮಾಡಲು ಬಂದಿರಲಿಲ್ಲ. ಸುನಂದೆಯೂ ಅಪ್ಪಿ ತಪ್ಪಿ ಆ ನೆನಪನ್ನು ಹುಟ್ಟಿಸುವ ಒಂದು ಮಾತನ್ನೂ ಆಡಿರಲಿಲ್ಲ. ಗಂಡ ಬಂದು ವಿಷಾದ ಸೂಚಿಸಬಹುದೆಂಬ ಭ್ರಮೆ ಇತ್ತು ಸುನಂದೆಗೆ. ಆ ಕ್ಷಮಾಯಾಚನೆಯ ಚಿತ್ರದ ಕಲ್ಪನೆ ಸುಂದರವಾಗಿತ್ತು. ಆಗ ತಾನು ಗಂಭೀರವಾಗಿ ಕಾರುಣ್ಯಮೂರ್ತಿಯಾಗಿ ಹೇಗೆ ವರ್ತಿಸಬೇಕೆಂಬುದನ್ನೂ ಅವಳು ನಿರ್ಧರಿಸಿದ್ದಳು. ಆದರೆ ಅಂತಹ ಅವಕಾಶ ಆಕೆಗೆ ದೊರಕಲಿಲ್ಲ. ಬಳಿಗೆ ಸುಳಿಯಲೇ ಇಲ್ಲ ಆತ. ಸುನಂದೆಯಲ್ಲಿ ಉಳಿದಿದ್ದ ಕಟ್ಟಕಡೆಯ ಆ ಭ್ರಮೆಯೂ ಕರಗಿ ಹೋಯಿತು.

ಮಗುವಿನೊಡನೆ ತವರು ಮನೆಗೆ ತಾನು ಹೊರಟು ಹೋಗಲೇ? ಎಂದೂ ಸುನಂದಾ ಯೋಚಿಸಿದಳು. "ಹೋಗ್ಲೇನ್ರಿ?" ಎಂದು ರಾಧಮ್ಮನನ್ನೂ ಕೇಳಿದಳು. ಅವರು ಒಪ್ಪಲಿಲ್ಲ. "ದುಡುಕ್ಬಾರದು" ಎಂದು ಸಲಹೆ ಮಾಡಿದರು.

ಸುನಂದಾ ದುಡುಕಲಿಲ್ಲ. ಅಲ್ಲದೆ, ತವರುಮನೆಯವರು ಏನೆನ್ನಬಹುದು? ಅಲ್ಲಿ ಅವಿವಾಹಿತೆಯಾದ ತಂಗಿಯಿದ್ದಳು. ತಾನು ಅಲ್ಲಿಗೆ ಹೋದರೆ ಆಕೆ, 'ಗಂಡನಮನೆ ಬಿಟ್ಟು ಬಂದವಳ ತಂಗಿ'ಯಾಗುವಳು. ಅಂತಹ ಪರಿಸ್ಥಿತಿಯಲ್ಲಿ, ತಾಯಿ ತಂದೆ ತನ್ನ ಮಾತಿಗೆ ಗೌರವವಿತ್ತು, ತನಗೂ ಮಗುವಿಗೂ ಆಶ್ರಯ ಕೊಡುವರೆಂಬ ಭರವಸೆ ಏನು? ಅವರು ತನ್ನನ್ನು ಹೊರಹಾಕಲಾರರು ನಿಜ. ಆದರೆ ತನ್ನಿಂದಾಗಿ ಅವರಿಗಾಗುವ ಮನೋವ್ಯಥೆಯೆಷ್ಟು?

ಹೀಗೆ ಯೋಚಿಸಿ ಯೋಚಿಸಿ ಸುನಂದಾ ಮೆದುಳು ಬಿಸಿ ಮಾಡಿಕೊಂಡಳು. ಅಷ್ಟೆ. ಅವಸರದಲ್ಲಿ ಕಾರ್ಯಪ್ರವೃತ್ತಳಾಗಲಿಲ್ಲ.

ಆದರೆ ತಂದೆಗೆ, ಆಕೆಯೊಂದು ದೀರ್ಘ ಕಾಗದ ಬರೆದಳು. 'ಜೀವನ ಎಂಬುದು ನಾನು ಭಾವಿಸಿದಷ್ಟು ಸುಲಭವಲ್ಲ ಅಪ್ಪಾ' ಎಂದು ಬರೆದಳೇ ಹೊರತು, ಗಂಡ ತನಗೆ ಹೊಡೆದನೆಂದು ತಿಳಿಸಲಿಲ್ಲ. ಮಗುವಿಗೆ ಪ್ರಾಣಾಂತಿಕ ಕಾಹಿಲೆಯಾಗಿದ್ದಿತು, ಎಂದು ಬರೆದಳಲ್ಲದೆ, ಅದು ಸತ್ತಿದ್ದರೆ ಆ ಸಾವಿಗೆ ತನ್ನ ಗಂಡ ಕಾರಣನಾಗುತ್ತಿದ್ದನೆಂದು ಹೇಳಲಿಲ್ಲ.

* * * *

ಈ ಸಂಜೆ ಒಳಗೆ ಬಂದು ಮಗುವನ್ನು ಕುಣಿಸುತ್ತ ಆಡಿಸುತ್ತ ರಾಧಮ್ಮ ಹೇಳಿದರು: "ನಿಮ್ಮ ಗಂಡ ದಿನಾ ಸಾಯಂಕಾಲ ಎಲ್ಲಿಗೆ ಹೋಗ್ತಾರೆ ಅನ್ನೋದನ್ನ ನಾನು ಪತ್ತೆ ಹಚ್ಚೀನಿ ಸುನಂದಾ."

ಕಾತರ ಕುತೂಹಲಗಳು ಒಂದರೊಡನೊಂದು ಬೆರೆತು ಮಾತು ಹೊರಡಿಸಿದುವು "ಹ್ಯಾಗೆ ಪತ್ತೆ ಹಚ್ಚೀರಾ?"

"ಹೇಳ್ಲೀಬೇಕೇನು? ನಮ್ಮ ಶ್ಯಾಮು ಆ ಕೆಲಸ ಮಾಡ್ತಾನೆ. ನೀವು ಸ್ವಲ್ಪ ಸುಧಾರಿಸ್ಕೊಂಡ್ಮೇಲೆ ಮಾಡೋಣಾಂತ ಸುಮ್ಮನಿದ್ದೆ."

"ಶ್ಯಾಮನೆ?"

"ಹೂಂ. ನಿಮ್ಮ ಯಜಮಾನರ ಹಿಂದೆ ಆತನನ್ನ ಛೂ ಬಿಡ್ತೀನಿ."

ಇದರಿಂದ ಒದಗಬಹುದಾದ ಅಪಾಯಗಳನ್ನು ಯೋಚಿಸುತ್ತ ಸುನಂದೆಯ ಮುಖ ಸಪ್ಪಗಾಯಿತು.

"ಬೇಡಿ ರಾಧಮ್ನೋರೆ. ಶ್ಯಾಮ ಸಿಕ್ಕಿಬಿದ್ದರೆ ಅವರೇನಾದರೂ ಮಾಡ್ಬಹುದು."

ರಾಧಮ್ಮ ನಕ್ಕರು:

"ನಮ್ಮ ಶ್ಯಾಮನೇ ಸಿಕ್ಕಿ ಬೀಳೋದು? ಸರಿ ಹೇಳಿದಿರಿ!"

ಗಾಢವಾಗಿದ್ದ ಆ ಸ್ವವಿಷಯ ಅಷ್ಟಕ್ಕೆ ನಿಂತು, ಆಗಲೆ ಬಂದು ಹೋಗಿದ್ದ ಬಡವರ ಕಡೆಗೆ ಮಾತು ತಿರುಗಿತು.

"ಅವರನ್ನೆಲ್ಲ ನೋಡಿದಾಗ ನಾವೇ ಎಷ್ಟೋ ಪುಣ್ಯವಂತರೂಂತ ಅನಿಸುತ್ತೆ ರಾಧಮ್ಮ."

"ಕಷ್ಟವಮ್ಮಾ ಕಷ್ಟ. ಬದುಕೋದೇ ಕಷ್ಟ. ಸ್ಟೇಷನ್ನು, ಮಾರ್ಕೆಟು, ಅಂಗಡಿ ಬೀದಿ–ಎಷ್ಟೊಂದು ಜನ ಇಂಥವರು ಇದಾರೇಂತ. ಇನ್ನು ಭಿಕ್ಷುಕರೋ–ಅರ್ಧಕ್ಕರ್ಧ ಇವರೇ, ಆಚೆ ಕಡೇ ಜನ...."

ಮಾತು ಆಚೆಗೆ ಹೊರಳಿತು, ಆ ನಾಡಿಗೆ–ಇನ್ನೊಂದಕ್ಕೆ. ಮತ್ತೆ ಹುಟ್ಟೂರಿಗೆ. ಅವರ ತಾಯಿ ತಂದೆ, ಇವರ ತಾಯಿ ತಂದೆ........ಅವರ ಸಂಬಂಧಿಕರು... ....ಇವರ ಸಂಬಂಧಿಕರು...

ಅದೆಷ್ಟು ಹೊತ್ತು ಹಾಗೆ ಮಾತನಾಡುತ್ತ ಕುಳಿತಿದ್ದರೊ.

* * * *

ಗೆಳೆಯನೊಬ್ಬನನ್ನು ಕರೆದು ಮನೆಯಂಗಳದಲ್ಲೆ ಗೋಲಿಯಾಡುತಿದ್ದ ಶಾಮ್ಯ, ಒಳಕ್ಕೆ ಓಡಿ ಬಂದು, ಅವರ ಮಾತುಕತೆಗೆ ಭಂಗತಂದ.

"ಅಮ್ಮಾ, ಅವರೆಲ್ಲಾ ಬಂದ್ಬಿಟ್ರು. ಇಲ್ಲೇ ಮನೆ ಕಟ್ಕೋತಾರಂತೆ. ಹೌದಾ?"

ರಾಧಮ್ಮ ಎದ್ದು ನಿಲ್ಲುತ್ತ ಅಂದರು:

"ಇರಲಿ ಬಿಡೋ. ಬಡವರು. ಇನ್ನೇನ್ಮಾಡ್ತಾರೆ ಪಾಪ?"

ಆದರೆ ಶ್ಯಾಮನ ಆಕ್ಷೇಪಕ್ಕಿದ್ದ ಕಾರಣವೇ ಬೇರೆ.

"ಅಲ್ಲಿ ಕ್ರಿಕೆಟ್ ಆಟಕ್ಕೆ ಗ್ರೌಂಡ್ ಸರಿಮಾಡ್ಬೇಕೂಂತ ಇದ್ವಿ."

ಸುನಂದಾ ಸಾಂತ್ವನದ ನುಡಿಯನ್ನಾಡಿದಳು:

"ಆಚೆಗಿರೋ ಮೈದಾನದಲ್ಲಿ ಆಡಿದರಾಯ್ತು."

"ಊ...ಅಲ್ಲಿ ದೊಡ್ಡ ಹುಡುಗರು ಆಡ್ತಾರೆ."

ಮಗನನ್ನು ನೋಡುತ್ತ ರಾಧಮ್ಮ ಅಂದರು:

"ಇವರೇನೂ ಬಹಳ ದಿವಸ ಇಲ್ಲಿ ಇರೋಲ್ಲ ಶ್ಯಾಮೂ. ಬೇಗ್ನೆ ಹೊರಟ್ಹೋಗ್ತಾರೆ."

೧೦

ಆ ವಾರವೆ ಒಂದು ಸಂಜೆ ಪುಟ್ಟಣ್ಣ ಹೊಟ್ಟೆ ಸರಿಯಾಗಿರಲಿಲ್ಲವೆಂದು ಮನೆಗೆ ಬರಬೇಕಾಯಿತು. ನೈಸರ್ಗಿಕ ಕ್ರಿಯೆಯನ್ನು ಮುಗಿಸಿಯೇ ಸ್ನೇಹಿತರ ಮನೆಗೆ ಹೊರಡೋಣವೆಂದು ಆತ ಯೋಚಿಸಿದ.

ಆತ ಬಂದುದನ್ನು ಕಂಡೊಡನೆಯೇ ರಾಧಮ್ಮ ಕಾರ್ಯೋನ್ಮುಖರಾದರು.

ಬಂದು ಸ್ವಲ್ಪ ಹೊತ್ತಾದ ಬಳಿಕ ಪುಟ್ಟಣ್ಣ ಮನೆಯಿಂದ ಹೊರಬಿದ್ದ. ಯೋಚನೆಯ ಪಿಶಾಚಿಗಳ ಸಹವಾಸ ಸುಖದಲ್ಲಿ ತನ್ಮಯನಾಗಿದ್ದ ಆತನಿಗೆ ರಾಧಮ್ಮನ ಮಗ ಶ್ಯಾಮ ತನ್ನನ್ನು ಹಿಂಬಾಲಿಸುತ್ತಿದ್ದುದು ಕಾಣಿಸಲೇ ಇಲ್ಲ. ಆದರೆ ಒಂದು ಫರ್ಲಾಂಗಿನಾಚೆ ಸ್ನೇಹಿತರ ಮನೆಗೆ ತಿರುಗಿಕೊಂಡಾಗ ಪುಟ್ಟಣ್ಣ, ದೂರದಲ್ಲಿ ಬರುತ್ತಿದ್ದ, ಶ್ಯಾಮನನ್ನು ಗುರುತಿಸಿದ.

'ಹುಡುಗ ನನ್ನನ್ನು ನೋಡಲಿಲ್ಲವಲ್ಲ ಸದ್ಯಃ'

—ಎಂದು ಆತ, ಕ್ಷೋಭೆಗೊಂಡ ಮನಸ್ಸಿಗೆ ಸಮಾಧಾನ ಹೇಳಿದ.

'ನೋಡಿದರೂ ಏನೀಗ? ಹೋಗಿ ಹೇಳ್ತಾನೆ, ಅಷ್ಟೆ ತಾನೆ? ನಾನು ಮಾಡ್ತಿರೋದು ಎಲ್ಲರಿಗೂ ಗೊತ್ತಾಗೋದೇ ಮೇಲು. ಮುಚ್ಚಿಟ್ಟು ಆಗಬೇಕಾದ್ದೇನು?'

—ಎಂದು ಜತೆಯಲ್ಲೇ ಬಂದ ತರ್ಕಸರಣಿ ಆತನ ಮನಸ್ಸಿಗೆ ನೆಮ್ಮದಿ ನೀಡಿತು.

ನಡುವೆ ತೂರಿಬಂದ ಆ ಯೋಚನೆಯನ್ನು ಬಲು ಸುಲಭವಾಗಿ ಪುಟ್ಟಣ್ಣ ಬದಿಗೆ ತಳ್ಳಿದ.

...ರಾತ್ರಿ ಮನೆಗೆ ಹಿಂತಿರುಗಿದ ಮೇಲೆಯಷ್ಟೇ ಮತ್ತೆ ಆತನಿಗೆ ಅದರ ನೆನಪಾದುದು. ಉದ್ದೇಶಪೂರ್ವಕವಾಗಿಯೇ ಶ್ಯಾಮ ತನ್ನನ್ನು ಹಿಂಬಾಲಿಸಿದ್ದರೆ, ಮನೆಗೆ ಬಂದು ವರದಿ ಕೊಡುತ್ತಿದ್ದ. ವರದಿ ಕೊಟ್ಟಿದ್ದರೆ, ಅದರ ಪ್ರತಿಕ್ರಿಯೆಗಳನ್ನು ಸುನಂದೆಯ ಮುಖದ ಮೇಲೆ ಕಾಣುವುದು ಸಾಧ್ಯವಿತ್ತು. ಆದರೆ ಅಲ್ಲೇನೂ ಇರಲಿಲ್ಲ.

...ಮಾರನೆಯ ದಿನ ಬೆಳಗ್ಗೆ ಕೆಲಸಕ್ಕೆ ಹೊರಡುತ್ತಿದ್ದಂತೆ, ಪುಟ್ಟಣ್ಣನ ದೃಷ್ಟಿ ನೆರೆಮನೆಯತ್ತ ಸರಿಯಿತು. ಆತನೆದುರಿನಲ್ಲೇ ಶ್ಯಾಮ, ಬೌಲ್ ಮಾಡುವವನಂತೆ ತೋಳು ಬೀಸುತ್ತ ಹೊರಟು ಹೋದ.

'ಆ ಮಗೂಗೆಲ್ಲಾ ಇದೇನು ಅರ್ಥವಾಗುತ್ತೆ? ಸುಮ್ಮನೆ ಇಲ್ಲದ ಯೋಚನೆಯನ್ನೆಲ್ಲ ತಲೆಗೆ ತುಂಬಿಕೊಂಡು ಬೇಸ್ತು ಬಿದ್ದೆ'

—ಎಂದು ತನ್ನೊಳಗೇ ನಕ್ಕ.

'ಅಲ್ಲದೆ, ಒಂದು ವೇಳೆ ಆ ಹುಡುಗ ಮನೇನ ಗುರುತಿಟ್ಟುಕೊಂಡ ಅಂದರೂ ಅದರಿಂದಾಗೋ ನಷ್ಟವೇನು? ಸ್ನೇಹಿತರ ಮನೆಗೆ ತಾನು ಹೋಗ್ತಿರೋದು ಅಂತ ಸುನಂದೆಗೆ ಗೊತ್ತಿಲ್ಲವೇ? ಆ ರಾಧಮ್ಮನಿಗೆ ಗೊತ್ತಿಲ್ಲವೆ?'

—ಎಂಬ ಪ್ರಶ್ನೆಗಳು ಒಳಗಿನಿಂದ ಕೇಳಿಸಿದುವು.

'ಇದೊಳ್ಳೇ ತಮಾಷೆ. ಪುನಃ ಮಹಾಪರಾಧಿಯ ಮನೋವೃತ್ತಿ ಬಂತೆ! ಇಷ್ಟೂ ಪುಕ್ಕಲೆ ನಾನು?'

—ಎಂದು ಈ ಸಲ ಸ್ವಲ್ಪ ಗಟ್ಟಿಯಾಗಿಯೇ ಪುಟ್ಟಣ್ಣ ನಕ್ಕ.

...ಆ ದಿನ ಸಂಜೆ ಮನೆಗೆ ಹೋಗದೆ ನೇರವಾಗಿಯೇ ಆತ ಸ್ನೇಹಿತರಲ್ಲಿಗೆ ನಡೆದ.

'ಶ್ಯಾಮು ಹಿಂಬಾಲಿಸಬಹುದೂಂತ ಹೆದರಿಕೊಂಡು ಹೀಗೆ ಮಾಡಿಲ್ಲ ತಾನೆ?'

—ಎಂದು ಒಳದನಿ ಕುಹಕದ ಪ್ರಶ್ನೆ ಕೇಳಿತು. ಪುಟ್ಟಣ್ಣ ಹುಬ್ಬು ಗಂಟಿಕ್ಕಿ ಸುಮ್ಮನಾದ. ಮನಸ್ಸಿಗೆ ಉತ್ತರ ಕೊಡುವ ಗೊಡವೆಗೆ ಹೋಗಲಿಲ್ಲ.

ಅಲ್ಲೆಲ್ಲೂ ಶ್ಯಾಮು ಕಾಣಿಸಲಿಲ್ಲ. ಹಾಗೆ ಅದುದು ಮೊದಲ ದೃಷ್ಟಿಗೆ. ಆದರೆ ಮತ್ತೊಮ್ಮೆ ನೋಡಿದಾಗ–

ಅಲ್ಲೆ ಸ್ವಲ್ಪ ದೂರದಲ್ಲೆ ಗೆಳೆಯರೊಡನೆ ಬೆರೆತು ಗೋಲಿಯಾಡುತ್ತಿದ್ದ ಶ್ಯಾಮು. ಆತ ತನ್ನನ್ನು ಗುರುತಿಸಿದಂತೆಯೂ ಕಂಡಿತು.

ಆತನ ಮನಸ್ಸು ರೋಸಿ ಹೋಯಿತು. ತನ್ನನ್ನು ಹಿಂಬಾಲಿಸಲು ಸುನಂದಾ ಆ ಹುಡುಗನನ್ನು ಕಳುಹಿರಬಹುದೆ? ಇದೆಲ್ಲ ಆ ರಾಧಮ್ಮನ ಫಿತೂರಿಯಾಗಿದ್ದೀತೇ? ಅಷ್ಟೂ ಧೈರ್ಯ ಬಂತೆ ಆ ಹೆಂಗಸರಿಗೆ?

—ಅಥವಾ ತನ್ನ ಈ ಯೋಚನೆಯೆಲ್ಲ ಬರಿಯ ಭ್ರಮೆಯೆ? ಬೀದಿ ಬೀದಿ ಅಲೆಯುವ ಬಾಲ ಬುದ್ಧಿಯ ಶ್ಯಾಮು ಇಲ್ಲಿರುವುದು ಸ್ವಾಭಾವಿಕವಲ್ಲವೆ?

ಮತ್ತೆ ಆ ಯೋಚನೆಗಳನ್ನೆಲ್ಲ ಮರೆಯಲೆತ್ನಿಸುತ್ತ, "ಇವರ ಮನೆ ಸುಟ್ಟಿತು" ಎಂದು ಗೊಣಗಿ, ಪುಟ್ಟಣ್ಣ ಆ ಮನೆಯೊಳಕ್ಕೆ ಹೋದ.

ಕತ್ತಲಾದ ಮೇಲೊಮ್ಮೆ ಹೊರಕ್ಕೆ ಬಂದು, ಇನ್ನೂ ಶ್ಯಾಮು ಅಲ್ಲೇ ನಿಂತಿರಬಹುದೇನೋ ಎಂದು ಇಣಿಕಿ ನೋಡಿದ. ಆ ಕತ್ತಲಲ್ಲಿ ಅಲ್ಲಲ್ಲಿ ಬೆಳಕಿರುತ್ತಿತ್ತು—ಅಲ್ಲಲ್ಲಿ ನೆರಳು. ಜನರು ಓಡಾಡುತ್ತಿದ್ದರು–ಚಿಕ್ಕವರು ಮತ್ತು ದೊಡ್ಡವರು. ಆದರೆ, ಇಂಥದು ಇಂಥದೇ ಮನುಷ್ಯಾಕೃತಿ ಎಂದು ಗುರುತು ಹಿಡಿಯುವುದು ಸಾಧ್ಯವಿರಲಿಲ್ಲ.

...ಅದರ ಮಾರನೇ ದಿನ ಶ್ಯಾಮು ಅಲ್ಲಿರಲಿಲ್ಲ. ಅದರಿಂದ ಪುಟ್ಟಣ್ಣನಿಗೆ ಸಮಾಧಾನವೆನಿಸಿತು.

ಆದರೆ ಸ್ವಲ್ಪ ಹೊತ್ತಾದ ಮೇಲೆ, 'ಆ ಹೆಂಗಸರು ಬುದ್ಧಿವಂತರೇ ಇರಬಹುದು. ನನಗೆ ಸುಳಿವು ಸಿಗಬಾರದೆಂದೇ ಈ ದಿನ ಆತನನ್ನು ಕಳಿಸಿಲ್ಲ'

–ಎಂಬ ಸಂದೇಹ ಮೂಡಿತು.

'ಕತ್ತಲಾದಮೇಲೆ ಆ ಹುಡುಗ ಬಂದು ನೋಡಿ ಹೋದರೂ ಹೋಗಬಹುದು'

–ಎಂಬ ಅಭಿಪ್ರಾಯ ಬಲಗೊಂಡಿತು.

ಹೀಗೆ, ಅಸಮಾಧಾನದಿಂದ ಕುದಿಯುತ್ತಿದ್ದ ಮನಸ್ಸಿನೊಡನೆ, ಆ ರಾತ್ರೆ ಪುಟ್ಟಣ್ಣ ಮನೆ ಸೇರಿದ.

ಅದರ ಅನಂತರದ ಸಂಜೆ, ಮುಳ್ಳಿನಮೇಲೆಯೆ ತಾನು ನಡೆಯುತ್ತಿದ್ದಂತೆ ಪುಟ್ಟಣ್ಣನಿಗೆ ಭಾಸವಾಯಿತು. ಆ ಬೀದಿಯಲ್ಲೇ ಇದ್ದ ಶ್ಯಾಮ. ಆತನನ್ನು ಕಂಡೊಡನೆ ಪುಟ್ಟಣ್ಣನ ಮೈಯೆಲ್ಲ ಉರಿಯೆದ್ದಿತು. ಹುಡುಗನನ್ನು ಹಿಡಿದುಕೊಂಡು ಚೆನ್ನಾಗಿ ಥಳಿಸಿ ಕಳಿಸಬೇಕೆಂದು ತೋರಿತು.

ಆದರೆ ಮರುಕ್ಷಣವೆ, ಅಂತಹ ಯೋಚನೆ ಮೂಡಿದುದಕ್ಕಾಗಿ ಪುಟ್ಟಣ್ಣ ತನ್ನಲ್ಲೇ ನಕ್ಕ.

ಶ್ಯಾಮನ ಮೇಲೆಯೇ ನೋಟವಿಟ್ಟಿದ್ದು, ಆತನೊಮ್ಮೆ ತನ್ನನ್ನು ನೋಡಿದಾಗ, ಸನ್ನೆಮಾಡಿ ಕರೆದ. ಹುಡುಗ ಅಳುಕಿದಂತೆ ತೋರಿತು. ಆದರೂ ಧೈರ್ಯಶಾಲಿಯಂತೆ ಶ್ಯಾಮ ತನ್ನೆಡೆಗೆ ಬಂದುದನ್ನು ಪುಟ್ಟಣ್ಣ ಕಂಡ.

ಹುಡುಗ ಹತ್ತಿರ ಬರುತ್ತಲೆ ಪುಟ್ಟಣ್ಣನೆಂದ:

"ಶ್ಯಾಮೂ, ಒಂದು ಕೆಲಸ ಮಾಡ್ತೀಯೇನಪ್ಪ?"

"ಏನು?"

"ನಾನು ಬರೋದು ತಡವಾಗುತ್ತೇಂತ ನಮ್ಮನೇಲಿ ಹೇಳ್ತೀಯಾ?"

"ಹೇಳ್ತೀನಿ."

"ಒಳ್ಳೆಯವನು. ಅಷ್ಟು ಮಾಡಪ್ಪ."

ಹುಡುಗನಿಗೆ ಕೊಡಲೆಂದು ಪುಟ್ಟಣ್ಣ ಚಿಲ್ಲರೆದುಡ್ಡಿಗೆ ಕೈ ಹಾಕಿದ.

"ಆಚೆ ಬೀದೀಲಿ ಅಂಗಡಿ ಇದೆ. ಪೆಪ್ಪರಮೆಂಟು ತಗೊಂಡು ತಿಂದ್ಕೊಂಡು ಹೋಗು ಶ್ಯಾಮೂ."

"ಪೆಪ್ಪರಮೆಂಟೆ? ಬೇಡಿ. ಏನೂ ಬೇಡಿ,"

–ಎನ್ನುತ್ತ ಶ್ಯಾಮ ಹೊರಟುಹೋದ.

ಹಲ್ಲುಕಡಿದು 'ಥೂ' ಎಂದು ಉಗುಳಬೇಕೆಂದು ತೋರಿತು ಪುಟ್ಟಣ್ಣನಿಗೆ.

...ಆ ರಾತ್ರೆ ಆಟದಲ್ಲಿ ಬಾರಿ ಬಾರಿಗೂ ಪುಟ್ಟಣ್ಣ ಸೋತ. ರೋಸಿದ ಮನಸ್ಸನ್ನು ತಣ್ಣಗಿಡಲೆಂದು ಆತ ಕುಡಿದ.

ಒಮ್ಮೆ ಆ ಮನೆಗೆ ತೀರಸಮೀಪದಲ್ಲೆ, ಕಿಟಿಕಿ ದಾಟಿ, ಹುಡುಗನೊಬ್ಬ ಚಲಿಸುತ್ತಿದ್ದಂತೆ ತೋರಿತು, 'ಶ್ಯಾಮನಿರಬಹುದು' ಎಂದಿತು ಪ್ರಕ್ಷುಬ್ಧವಾಗಿದ್ದ ಮನಸ್ಸು.

ತನ್ನನ್ನು ಹಿಡಿತದೊಳಗಿಟ್ಟು ಕೊಂಡೇ ಪುಟ್ಟಣ್ಣ ಮನಸ್ಸಿನೊಳಗೇ ಅಂದ:

'ನಾನು ಎಂಥವನು ಅನ್ನೋದನ್ನ ಇವತ್ತು ತೋರಿಸಿಕೊಡ್ತೀನಿ.'

* * * *

ತಾಯಿಯ ಅಪೇಕ್ಷೆಯಂತೆ ಅತ್ಯಂತ ದಕ್ಷತೆಯಿಂದ ಪುಟ್ಟಣ್ಣನನ್ನು ಸಂಜೆ ಹಿಂಬಾಲಿಸುತ್ತಿದ್ದ ಶ್ಯಾಮು, ಪ್ರತಿ ದಿನವೂ ಮನೆಯಲ್ಲಿ ವರದಿಯೊಪ್ಪಿಸುತ್ತಿದ್ದ– ಇದ್ದುದು ಇದ್ದಂತೆ.

ಆ ಸುದ್ದಿಯನ್ನೆಲ್ಲ ರಾಧಮ್ಮ ಸುನಂದೆಗೆ ತಿಳಿಸುತ್ತಿದ್ದರು.

ಬಳಿಕ, ಸುನಂದಾ ಶ್ಯಾಮನೊಬ್ಬನನ್ನೇ ಕರೆದು, ಆತನ ಬಾಯಿಯಿಂದಲೇ ಮತ್ತೊಮ್ಮೆ ಅದನ್ನೆಲ್ಲ ಕೇಳುತ್ತಿದ್ದಳು.

–ಅದು ವೇಶ್ಯೆಯರ ಮನೆಯಾಗಿರಲಿಲ್ಲ. ಪುಟ್ಟಣ್ಣನ ಸ್ನೇಹಿತರೊಬ್ಬರ, ಸಂಭಾವಿತರ, ಮನೆಯೇ. ಅಲ್ಲಿ ದೊಡ್ಡ ದೊಡ್ಡವರೇ ನಾಲ್ಕಾರು ಜನ ಕಲೆತು, ಇಸ್ಪೀಟು ಎಲೆಗಳ ಆಟವಾಡುತ್ತಿದ್ದರು–ದುಡ್ಡಿಟ್ಟು ಆಡುತ್ತಿದ್ದರು. ಆ ಆಟದ ಜತೆ ಯಲ್ಲೇ ಕುಡಿತ. ಅಷ್ಟೆ.

ಗಂಡ, ಹೆಣ್ಣಿನ ಮೋಹಕ್ಕೆ ಬಲಿ ಬಿದ್ದಿಲ್ಲವೆಂದು ತಿಳಿದು ಸುನಂದಾ ಸ್ವಲ್ಪ ಸಮಾಧಾನಗೊಂಡಳು.

ಆದರೆ ರಾಧಮ್ಮನೆಂದರು:

"ಇದು ಇಂಥಲ್ಲೇ ನಿಲ್ಲುತ್ತೆ ಅಂತ ಹೇಳೋಕಾಗಲ್ಲ ಸುನಂದಾ. ಇದು ಜಾರು ಗುಂಡಿ. ಒಮ್ಮೆ ಜಾರಿದರೆ ಜಾರ್ತಾನೇ ಇರೋದೇ."

ಆ ಮಾತು ಕೇಳಿ ಸುನಂದೆಯ ಮುಖ ಕಪ್ಪಿಟ್ಟಿತು. ಆಕೆಯ ಮನಸ್ಸು ನೋಯಿ ಸಿದೆನೆಂದು ವ್ಯಸನಪಡುತ್ತ ರಾಧಮ್ಮ ಅಂದರು:

"ಹೆದರಬೇಡಿ ಸುನಂದಾ. ನಿಮ್ಮ ಗಂಡನನ್ನ ಉಳಿಸ್ಕೊಳ್ಳೋದು ಸಾಧ್ಯ."

ಆದರೆ, ಆ ಧೈರ್ಯದ ಮಾತಿನ ಹಿಂದೆಯೇ ಆಕೆಗರಿಯದಂತೆಯೇ ಬೇರೆ ಮಾತು ಹೊರಟಿತು.

"ಆದರೂ ನಿಮ್ಮ ಗಂಡ ವಿಚಿತ್ರ ಮನುಷ್ಯ ಕಣ್ರೀ. ಗಂಡಸು ಜಾತಿ ಹೀಗೂ ಬದಲಾಗೋದನ್ನ ನಾನು ಈವರೆಗೂ ಕಂಡಿಲ್ಲವಮ್ಮ."

....ಆ ಸಂಜೆ, ಸುನಂದಾ–ರಾಧಮ್ಮ ಮಾತನಾಡುತ್ತಾ ಕುಳಿತಿದ್ದಾಗಲೇ ಶ್ಯಾಮು ಓಡುತ್ತಾ ಬಂದ.

"ಅಮ್ಮಾ, ಅಮ್ಮಾ, ಅವರು ನನ್ನ ಕರೆದು ಮಾತನಾಡಿಸಿದರು ಇವತ್ತು."

ಸುನಂದಾ ಕಾತರಗೊಂಡು ಕೇಳಿದಳು:

"ಏನಂದರು ಶ್ಯಾಮು?"

"ತಡವಾಗಿ ಬರ್ತೀನೀಂತ ಮನೇಲಿ ಹೇಳು ಅಂದ್ರು. ಪೆಪ್ಪರ್‌ಮಿಂಟ್ ಕೊಡಿ ಸೋಕೆ ಬಂದ್ರು. ಬೇಡ ಅಂದ್ಬಿಟ್ಟೆ."

"ಅಷ್ಟೇನಾ?"

"ಹೂಂ."

ರಾಧಮ್ಮ ಮಗನ ಬೆನ್ನು ತಟ್ಟಿದರು:

"ಜಾಣಮರಿ. ಇನ್ನೂ ಸ್ವಲ್ಪ ಹೊತ್ತು ಅಲ್ಲೇ ಇದ್ಬಿಟ್ಟು ಮನೆಗೆ ಬಂದ್ಬಿಡು."

"ಹೂಂ."

ಬಲು ಗಹನವಾದೊಂದು ಕಾರ್ಯದಲ್ಲಿ ಪಾಲುದಾರ ತಾನು ಎಂದು ತಿಳಿದಿದ್ದ ಶ್ಯಾಮು, ಹೆಮ್ಮೆಯಿಂದಲೆ ಮತ್ತೆ ಅದೇ ಜಾಗಕ್ಕೆ ಆಡಲು ಹೋದ.

ಸುನಂದಾ ಮನಸ್ಸಿನೊಳಗಿದ್ದುದನ್ನು ಗಟ್ಟಿಯಾಗಿ ಹೇಳಿದಳು:

"ಬಹುಶಃ ಇಷ್ಟು ದಿವಸ ಶ್ಯಾಮೂನ ಅವರು ಅಲ್ಲಿ ಕಂಡೇ ಇಲ್ವೇನೊ?"

ರಾಧಮ್ಮ ಹಾಗೆಂದು ಸುಲಭವಾಗಿ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ.

"ಹೇಳೋಕಾಗಲ್ಲ ಸುನಂದಾ. ಆತ ಏನಾದರೂ ನಾಟಕ ಹೂಡಿದ್ದರೂ ಇರಬಹುದು."

* * * *

ಹೊಸತೇನೂ ಅಲ್ಲ. ಆ ರಾತ್ರೆ ನಡೆದುದು ಬರಿಯ ಜೀವನ ನಾಟಕ. ಎಷ್ಟೋ ಸಾರೆ ನಡೆದುದೇ ಈಗಲೂ. ಕಥೆ ಹಳೆಯದೇ. ನಟವರ್ಗ ಮಾತ್ರ ಬೇರೆ.

ಪುಟ್ಟಣ್ಣ ತಡವಾಗಿ ಮನೆಗೆ ಬರಲಿಲ್ಲ; ಬೇಗನೆ ಬಂದ. ಊಟಕ್ಕೇಳಲಿಲ್ಲ. ಹೆಂಡತಿಯನ್ನು ತನ್ನ ಕೊಠಡಿಗೆ ಕರೆದು ಕೇಳಿದ:

"ನಿಮ್ಮೂರಿನಿಂದ ಕಾಗದ ಏನಾದರೂ ಬಂದಿತ್ತೆ?"

"ಇಲ್ಲ. ಯಾಕೆ ಕೇಳಿದಿರಿ?"

"ನಾಳೆ ನೀನು ತಾಯ್ಮನೆಗೆ ಹೊರಟ್ಹೋಗ್ಬೇಕು."

"ಏನು ಹಾಗಂದರೆ?"

"ಕನ್ನಡ ಅರ್ಥವಾಗೊಲ್ವೇನು? ನಾಳೆ ನೀನು ಈ ಮನೆ ಬಿಡ್ಬೇಕು ಅಂದೆ."

ಸುನಂದೆಗೆ ರೇಗಿತು.

"ಮಲಕೊಳ್ಳಿ ಈಗ. ನಿಮಗೆ ಮೈ ಸರಿಯಾಗಿಲ್ಲ. ನಾಳೆ ಬೆಳಗ್ಗೆ ಮಾತಾಡುವಿರಂತೆ."

ಕೋಟು ಬಿಚ್ಚಿ ಪ್ಯಾಂಟು ಸಡಿಲಿಸಲೆಂದು ಸೊಂಟಕ್ಕೆ ಕೈ ಹಾಕುತ್ತ ಪುಟ್ಟಣ್ಣ ಕೇಳಿದ:

"ಮೈ ಸರಿಯಾಗಿಲ್ವಾ ನನಗೆ?"

"ಅಲ್ದೆ ಇನ್ನೇನು? ಕುಡಿದು ಮಾತಾಡ್ತಾ ಇದೀರಲ್ಲ ಬಾಯಿಗೆ ಬಂದದ್ನ, ನಿಮಗೆ–"

ಸೊಂಟದಿಂದ ಚರ್ಮದ ಬೆಲ್ಟನ್ನೆಳೆದು ಬೀಸಿ ಹೊಡೆದ ಏಟಿಗೆ ಸುನಂದೆಯ

ಬಾಯಿ ಮುಚ್ಚಿಹೋಯಿತು. ಏಟುಗಳು ಒಂದರ ಮೇಲೊಂದಾಗಿ ಬಂದುವು. ಬೈಗಳು ಕೂಡ. "ನನ್ನ ಮೇಲೆ ಸಿ.ಐ.ಡಿ. ಗಳನ್ನ ಕಳಿಸ್ತಾಳೆ ಬಜಾರಿ!"

—"ಈ ಮನೆ ಅನ್ನ ತಿಂದು ಕೊಬ್ಬಿ ಹೋಗಿದೀ, ಅಲ್ಲ?"

—"ಇವತ್ತು ಇಳಿಸ್ತೀನಿ ನಿನ್ನ ಸೊಕ್ಕು."

ರಪ್–ರಪ್–ರಪ್.

ಸುನಂದಾ ಬೆಲ್ಟನ್ನು ಕಸಿದುಕೊಳ್ಳಲು ಯತ್ನಿಸಿದಳು, ಪ್ರತಿಭಟಿಸಿದಳು. ಪರಿಣಾಮವಾಗಿ ಮತ್ತಷ್ಟು ಏಟು ತಿಂದಳು.

ಪುಟ್ಟಣ್ಣ ಆವೇಶಗೊಂಡು ಸುನಂದೆಯನ್ನು ಎಳೆದು ಉರುಳಿಸಿದ. ಒಂದು ಕಾಲದಲ್ಲಿ, ತಾನು ಪ್ರೀತಿಯಿಂದ ಮುಟ್ಟುತ್ತಿದ್ದ ಮುದ್ದಿಸುತಿದ್ದ ಆ ದೇಹದ ತುಂಬಾ ಚುಚ್ಚಿ ಕಚ್ಚಿ ಪರಚಿ ಗಾಯಮಾಡಿದ.

ಒಳಗೆ ಮಗು ಎದ್ದು ಗಟ್ಟಿಯಾಗಿ ಅಳತೊಡಗಿತು.

ಸುನಂದಾ ನೋವು ತಡೆಯಲಾರದೆ, "ಅಮ್ಮಾ, ಅಮ್ಮಾ" ಎಂದಳು.

## ೧೧

ಮಾರನೆಯ ಬೆಳಗ್ಗೆ ಸುನಂದಾ ಏಳಲಿಲ್ಲ. ಮೈ ಕೆಂಡವಾಗಿತ್ತು. ಎಚ್ಚರವಾಗಿದ್ದರೂ ಮಲಗಿದಲ್ಲೆ ಆಕೆ ಯೋಚಿಸಿದಳು:

ಯಾಕಾದರೂ ಬೆಳಗಾಯಿತೊ? ಎಷ್ಟೊಂದು ಮೇಲಾಗುತಿತ್ತು ಹೀಗೆಯೇ ಸಾವು ಬಂದಿದ್ದರೆ! ಯಾವ ಪುಣ್ಯ ಸಂಚಯಕ್ಕೋಸ್ಕರ ತಾನು ಬದುಕಬೇಕು? ಮಗುವಿಗೋಸ್ಕರವೆ? ಮಗು ತನ್ನದು ಎಷ್ಟೋ, ಹಾಗೆಯೇ ಆತನದೂ ಅಲ್ಲವೆ? ಆತನಿಗೆ ಕೂಸಿನ ಯೋಚನೆಯೇ ಇಲ್ಲವೆಂದಾದ ಮೇಲೆ, ತಾನು ಯಾತಕ್ಕೆ ಗೋಳಾಡಬೇಕು?...

....ಇತ್ತ ಪುಟ್ಟಣ್ಣ ಎದ್ದ. ತಲೆ ಸಿಡಿಯುತ್ತಿತ್ತು. ಹೆಂಡತಿಯನ್ನು ದಂಡಿಸಿದ್ದ ಅವನ ಕೈ–ತೋಳುಗಳು ನೋಯುತ್ತಿದ್ದುವು.

ಎಚ್ಚರಗೊಂಡ ಅವನ ಕಿವಿಗಳು ಸದ್ದಿಗಾಗಿ ನಿಮಿರಿ ನಿಂತುವು. ಬಚ್ಚಲು ಮನೆಯ ಕೊಳಾಯಿಯಿಂದ ನೀರು ಸುರಿಯುವ ಸದ್ದಾಗಬೇಕು. ಅಡುಗೆ ಮನೆಯ ಬಾಗಿಲು ತೆರೆಯುವ ಸಪ್ಪಳ, –ಒಂದೂ ಇರಲಿಲ್ಲ ಇವತ್ತು.

ಇವಳೇನು—ರಾತ್ರೆಯೇ ಮಗುವನ್ನೆತ್ತಿಕೊಂಡು ಎಲ್ಲಿಗಾದರೂ ಓಡಿ ಹೋದಳೊ? ಎಂಬ ಸಂಶಯವೂ ಆತನ ತಲೆಯನ್ನು ಹೊಕ್ಕಿತು. ಆ ಯೋಚನೆಯಿಂದ ಒಮ್ಮೆ ಎದೆ ಬಡಿತ ತೀವ್ರವಾದರೂ 'ಹಾಗೇನಾದರೂ ಆದರೆ ಸ್ವಾರಸ್ಯವಾಗಿರುತ್ತೆ' ಎಂಬ ವಿಚಾರ ತಲೆದೋರಿ, ಕೊಂಕು ನಗೆ ತುಟಿಗಳ ಮೇಲೆ ಸುಳಿಯಿತು.

ಮತ್ತೂ ಕೆಲವು ನಿಮಿಷಗಳ ಕಾಲ ಪುಟ್ಟಣ್ಣ ಮೌನವಾಗಿಯೇ ಇದ್ದ. ಬಲು ದೀರ್ಘವೆಂದು ತೋರಿದ ಆ ಕಾಲಾವಧಿಯ ಕೊನೆಯಲ್ಲಿ, ಗೋಡೆಯ ಆಚೆಯಿಂದ ಸುನಂದೆ ನರಳಿದ ಸದ್ದಾಯಿತು.

ಮಲಗಿದ್ದಲ್ಲೆ ಪುಟ್ಟಣ್ಣ ಹುಬ್ಬು ಗಂಟಿಕ್ಕಿದ. ತನ್ನನ್ನು ಪರೀಕ್ಷಿಸಲು ನಟನೆ ಮಾಡುತ್ತಿರುವಳೇನೊ ಎಂದುಕೊಂಡ. ನೋಡಿಯೇ ಬಿಡೋಣ ಇದೂ ಒಂದು ನಾಟಕ—ಎಂದು ಮನಸ್ಸು ಗಟ್ಟಿ ಮಾಡಿದ.

ಅಷ್ಟರಲ್ಲೆ ಬಾಗಿಲು ಬಡಿದ ಸಪ್ಪಳವಾಯಿತು. ಒಂದು ಸಾರೆ, ಎರಡು ಸಾರೆ. ಹಾಲಿನವಳು ಬಂದಿದ್ದಳು. ಈಗಲಾದರೂ ಏಳಬಹುದು—ಎಂದು ಪುಟ್ಟಣ್ಣ ಸುಮ್ಮನಿದ್ದ.

ಆದರೆ ಸುನಂದಾ ಏಳುವ ಲಕ್ಷಣವೇ ಕಾಣಿಸಲಿಲ್ಲ. ಬಾಗಿಲು ಬಡೆಯುವ ಸದ್ದು ಮಾತ್ರ ಹೆಚ್ಚಾಯಿತು. ಹಾಲಿನವಳ ಕೂಗು ಕಿಟಕಿಯ ಎಡೆಯಿಂದ ನುಸುಳಿ ಕೊಠಡಿ ಗಿಳಿಯಿತು.

"ಯವ್ವಾ, ಆಲು ಆಕಿಸ್ಕೊಳ್ರೆವ್ವಾ..."

ಹಾಲಿನವಳು ಹೊರಟಾದರೂ ಹೋಗಬಾರದೆ?–ಎಂದು ಪುಟ್ಟಣ್ಣ ಗೊಣಗಿದ.

ಅವಳು ಹಾಲು ಕೊಡದೆ ಹೋಗುವುದುಂಟೆ?

ಕೊನೆಗೆ, ಬಾಗಿಲು ತಟ್ಟುವ ಸದ್ದಾದರೂ ನಿಲ್ಲಲೆಂದು, ಪುಟ್ಟಣ್ಣ ಎದ್ದು ಬಂದು ಕದ ತೆರೆದ. ಎದುರಿಗಿದ್ದ ಹಾಲಿನವಳಿಗಿಂತಲೂ ಎದುರು ಮನೆಯ ಬಾಗಿಲಲ್ಲಿದ್ದ ರಾಧಮ್ಮ ಆತನ ಕಣ್ಣಿಗೆ ಮೊದಲು ಬಿದ್ದರು. ಹಾಲಿನವಳ ಸದ್ದು ಕೇಳಿ ಆಕೆ ಹೊರ ಬಂದಿದ್ದರೆಂಬುದು ಸ್ಪಷ್ಟವಾಗಿತ್ತು. ಆಕೆಯನ್ನು ನುಂಗಿ ಬಿಡುವವನಂತೆ ನೆಟ್ಟ ದೃಷ್ಟಿ ಯಿಂದ ಪುಟ್ಟಣ್ಣ ನೋಡಿದ.

ಹಜಾರದಿಂದಲಂತೂ ಸುನಂದೆಯ ಸುಳಿವಿರಲಿಲ್ಲ.

"ಇವತ್ತು ಹಾಲು ಬೇಡ ಹೋಗವ್ವ"

—ಎಂದು ಪುಟ್ಟಣ್ಣ ಹಾಲಿನವಳಿಗೆ ಹೇಳಿದ.

"ಆಲು ಬೇಡ ಅಂದರೆ ನಾನೇನು ಮಾಡ್ಲಿ ಸಾಮಿ? ಆಕಿಸ್ಕೊಳ್ಳಿ. ಆಗೆಲ್ಲ ವರ್ತನೆ ಆಲ್ನ ಬೇಡ ಅನ್ನೋಕಾಗ್ತದಾ?"

ಸಂಸಾರಕ್ಕೆ ಸಂಬಂಧಿಸಿದ, ಹಾಲು ಹಾಕಿಸಿಕೊಳ್ಳುವ, ಈ ಪುಟ್ಟ ವಿಷಯದಲ್ಲಿ ಏನು ಮಾಡಬೇಕೆಂದು ತಿಳಿಯದೆ ಪುಟ್ಟಣ್ಣ ತಬ್ಬಿಬ್ಬಾದ.

ಆತನ ಅವಸ್ಥೆಯನ್ನು ಗಮನಿಸಿ ಹಾಲವ್ವನೇ ಕೇಳಿದಳು:

"ಯಾಕ್ಸಾಮಿ, ಅಮ್ಮಾವ್ರು ಊರಿಗೆ ಒಂಟೋದ್ರಾ?"

ಹೊರಟು ಹೋಗಿದ್ದರಾದರೂ ಚೆನ್ನಾಗಿತ್ತು. 'ಒಂಟೋದ್ರಾ?' ಅಂತೆ. ಎಂಥ ಅಧಿಕ ಪ್ರಸಂಗತನ!

"ಆ ಪಾತ್ರೆಲಿರೋ ಹಾಲ್ನ ಹಾಗೇ ಇಟ್ಬಿಡು. ನಾಳೆ ಬಂದಾಗ ಪಾತ್ರೆ

ತಗೊಂಡು ಹೋಗು."

ಅವನ ಸ್ವರದ ಕಠೋರತೆಯನ್ನು ಕೇಳಿ ಬೆಚ್ಚಿಬಿದ್ದು, ಬುಟ್ಟಿಯಲ್ಲಿದ್ದ ಪಾತ್ರೆಗಳಲ್ಲಿ ಅದೇನೋ ಅದಲುಬದಲು ಮಾಡಿ, ಹಾಲು ತುಂಬಿದ್ದ ಒಂದನ್ನು ತೆಗೆದಿರಿಸಿ, ಆ ಹೆಂಗಸು ಹೊರಟು ಹೋದಳು. ಪುಟ್ಟಣ್ಣ ಧಡಾರನೆ ಸದ್ದು ಮಾಡುತ್ತ ಬಾಗಿಲು ಮುಚ್ಚಿದ—ಆ ಸದ್ದಿನಿಂದಾದರೂ ಸುನಂದಾ ಎಚ್ಚರಗೊಳ್ಳಲಿ, ಎಂದು.

ಮಲಗಿದ್ದ ಸುನಂದೆಗೆ ಇದೆಲ್ಲವೂ ಕೇಳಿಸುತ್ತಿದ್ದರೂ ಆಕೆ ಏಳಲಿಲ್ಲ.

ಮತ್ತೆ ಮಲಗಿ ಪ್ರಯೋಜನವಿಲ್ಲವೆಂದು ಪುಟ್ಟಣ್ಣ ಬಚ್ಚಲು ಮನೆಗೆ ಹೋದ. 'ಪ್ರಾತರ್ವಿಧಿ'ಗಳನ್ನು ತೀರಿಸಿದ. ಆದರೂ ಮರದ ಕೊರಡಿನ ಹಾಗೆ ಮಲಗಿಯೇ ಇದ್ದಳು ಸುನಂದಾ, ಅತ್ತಿತ್ತ ಮಿಸುಕದೆ.

ಅಷ್ಟರಲ್ಲೆ ಮಗು ಎಚ್ಚರಗೊಂಡು ತೊಟ್ಟಿಲಲ್ಲಿ ಎದ್ದು ಕುಳಿತು ಅಳತೊಡಗಿತು. ಈಗಲಾದರೂ ಆಕೆ ಏಳಬಹುದು ಎಂದುಕೊಂಡ ಪುಟ್ಟಣ್ಣ. ಆದರೆ ಆಗಲೂ ಆಕೆ ಏಳಲಿಲ್ಲ. ತಾಯಿ ಮಲಗಿಯೇ ಇದ್ದುದನ್ನು ಕಂಡು ಮಗು ಮತ್ತೂ ಗಟ್ಟಿಯಾಗಿ ಅತ್ತಿತು.

ಹಜಾರವನ್ನು ಹಾದು ಕೊಠಡಿಗೆ ಬರುತ್ತ ಪುಟ್ಟಣ್ಣ ಮಗುವನ್ನೊಮ್ಮೆ ದುರದುರನೆ ನೋಡಿದ. ಆ ನೋಟಕ್ಕೆ ಬೆದರಿ ಮಗು ಒಂದು ಕ್ಷಣ ಅಳು ನಿಲ್ಲಿಸಿತು. ಆದರೆ ತಂದೆಯ ಬಳಿ ಬರುವೆನೆಂದು ಕೈ ಚಾಚಲಿಲ್ಲ. ಆತ ಪರಕೀಯನೇನೋ ಎನ್ನುವ ಹಾಗೆ ಬಿರುಗಣ್ಣು ಬಿಟ್ಟು ನೋಡಿತು. ಮಗುವಿನ ಆ ನೋಟವನ್ನು ಕಂಡಾಗ, ಎವೆ ತೆರೆದು ಮುಚ್ಚುವುದರೊಳಗೆ ಯಾರೋ ತನ್ನನ್ನು ತಿವಿದ ಹಾಗಾಯಿತು ಪುಟ್ಟಣ್ಣನಿಗೆ. 'ಇದೇನು, ಅಳುತ್ತಿರೋ ಮಗೂನ ನೋಡಿ ಕರಗ್ತಿದೀನಲ್ಲ?' ಎಂದು ಮನಸ್ಸಿನಲ್ಲೇ ಅಂದುಕೊಂಡು, ಭುಜ ಕುಪ್ಪಳಿಸಿ, ಮಗುವಿನಿಂದ ಮರೆಯಾಗಿ ಆತ ಬಟ್ಟೆ ಹಾಕಿಕೊಂಡ.

ಉಸಿರು ಕಟ್ಟಿಸುವ ಹಾಗೆ ಭಾಸವಾಗುತ್ತಿದ್ದ ಆ ಮನೆಯನ್ನು ಬಿಟ್ಟು ಪುಟ್ಟಣ್ಣ ಬೀದಿಗಿಳಿದ. ಪಕ್ಕದ ಮನೆಯವರೂ ಅದರಾಚೆಗಿನವರೂ ಎಲ್ಲರೂ ತನ್ನನ್ನೇ ನೋಡುತ್ತಿದ್ದಂತೆ ಆತನಿಗೆ ಅನಿಸಿತು.

* * * *

ಗಂಡ ಬಾಗಿಲೆಳೆದು ಮೆಟ್ಟಲು ಇಳಿದ ಸದ್ದು ಸುನಂದೆಗೂ ಕೇಳಿಸಿತು. ತನಗೂ ಮನೆಗೂ ಯಾವ ಸಂಬಂಧವೂ ಇಲ್ಲ ಎನ್ನುವಂತೆ ಆ ಗಂಡಸು ಹೊರಟೇ ಹೋಗಿದ್ದ!

ಮುಖದ ಮೇಲಿನ ಹೊದಿಕೆ ಸರಿಸಿ ಸುನಂದಾ, ಅಳುತ್ತಿದ್ದ ಮಗುವನ್ನು ನೋಡಿದಳು. ತಾಯಿಯ ಮುಖದರ್ಶನವಾಯಿತೆಂದು ಮಗು ಮತ್ತೂ ಗಟ್ಟಿಯಾಗಿ ಅತ್ತಿತು. ಸುನಂದಾ ಪ್ರಯಾಸದಿಂದ ಮಗ್ಗುಲು ಹೊರಳಿ, ಮಗುವನ್ನು ತೊಟ್ಟಿಲಿನಿಂದೆತ್ತಿ ತನ್ನೆದೆಗೆ ಎಳೆದುಕೊಂಡಳು. ಅಲ್ಲಿ ಮತ್ತೊಮ್ಮೆ ಅದು ನಿದ್ದೆ ಹೋಯಿತು.

ಮಗುವಿಗಡ್ಡವಾಗಿ ಬಲಗೈಯನ್ನು ಇಳಿಬಿಟ್ಟು ಸುನಂದಾ ಯೋಚಿಸಿದಳು:

ಇದೇ ಏನು ಅಂತ್ಯ? ಇಲ್ಲಿಗೆ ಎಲ್ಲವೂ ಆಗಿಯೇ ಹೋಯಿತೆ ಹಾಗಾದರೆ? ಒಡೆದ ಗಡಿಗೆಯಾಯಿತೆ ತನ್ನ ಸಂಸಾರ?

ಒಂದು ಪ್ರಶ್ನೆ ಪದೇ ಪದೇ ಕಾಡುತ್ತ ಬೃಹದಾಕಾರ ತಳೆಯಿತು:

ಇನ್ನೇನು ಮಾಡಬೇಕು ತಾನು? ಇನ್ನೇನು ಮಾಡಬೇಕು?

ಆ ಪ್ರಶ್ನೆಗೆ ಉತ್ತರವೇ ಇದ್ದಂತೆ ತೋರಲಿಲ್ಲ.

ಹೊರಗಿನಿಂದ ರಾಧಮ್ಮನ ಸ್ವರ ಕೇಳಿಸಿತು:

"ಸುನಂದಾ! ಸುನಂದಾ!"

ರಾಧಮ್ಮ ಒಳಗೆ ಬರದಿದ್ದರೇ ಮೇಲು. ಅವರಿಗೆ ಏನೆಂದು ಮುಖ ತೋರಿಸ ಬೇಕು? ತನ್ನ ರೌರವ ನರಕದ ಬಾಳ್ವೆಗೆ ಅವರೊಬ್ಬರ ಸಾಕ್ಷ್ಯ ಬೇರೆ ಬೇಕೆ?

...ಕರೆಗೆ ಉತ್ತರವಾಗಿ 'ಓ' ಎನ್ನಲು ಆಕೆ ಯತ್ನಿಸಲಿಲ್ಲ. ಏಳಲೂ ಪ್ರಯ ತ್ನಿಸಲಿಲ್ಲ.

ಬಲು ಮೆಲ್ಲನೆ ಬಾಗಿಲನ್ನು ತಳ್ಳಿದ ಸದ್ದು.... ರಾಧಮ್ಮನ ನಡಿಗೆ...

ರಾಧಮ್ಮ ಬರುತ್ತಿದ್ದಂತೆಯೇ ಸುನಂದಾ ಮುಖದ ಮೇಲಿನ ಹೊದಿಕೆ ಎಳೆದು ಕೊಂಡಳು.

ಏನಾಗಿತ್ತು ಎಂಬ ವಿವರ ಒಂದೂ ರಾಧಮ್ಮನಿಗೆ ಬೇಕಾಗಿರಲಿಲ್ಲ. ಅಲ್ಲಿ ಬುಸು ಗುಟ್ಟುತ್ತ ನೆಲೆಸಿದ್ದ ವಿಶಿಷ್ಟ ಮೌನವೇ ಎಲ್ಲ ಕಥೆ ಹೇಳುತ್ತಿತ್ತು.

ರಾಧಮ್ಮ ಸುನಂದೆಯ ಹಾಸಿಗೆಯ ಬಳಿ ಕುಳಿತು ಹೊದಿಕೆ ಸರಿಸಲು ಯತ್ನಿಸಿ ದರು. ದಿಂಬಿಗೆ ಮುಖ ತಗಲಿಸಿ ಮರೆಮಾಡಿಕೊಂಡಳು ಸುನಂದಾ. ರಾಧಮ್ಮ ಆಕೆಯ ಕೈ ಹಿಡಿದರು. ಬೆಚ್ಚಗಿತ್ತು. ಗಾಬರಿಯಿಂದ ಹಣೆ ಮುಟ್ಟಿ ನೋಡಿದರು. ಹಣೆಯೂ ಬೆಚ್ಚಗಿತ್ತು....

"ಸುನಂದಾ..."

ಮೌನವನ್ನು ಭೇದಿಸಲೆಂದು ಮತ್ತೊಮ್ಮೆ ಮಾತು.

"ಸುನಂದಾ, ಇಲ್ನೋಡಿ...."

ಆಗಲೂ ಸುನಂದಾ ಸುಮ್ಮನಿದ್ದಳು.

"ನಾನು ಹೊರಟ್ಹೋಗ್ತೀನಿ ಹಾಗಾದರೆ."

ಅದು ಬಲು ಕ್ರೂರವಾದ ಬೆದರಿಕೆ. ಆಕೆಯೂ ಹೊರಟುಹೋದರೆ ಯಾರು ಗತಿ ತನಗೆ?

ಸುನಂದಾ ಮತ್ತೆ ಮೆಲ್ಲನೆ ಮಗ್ಗುಲು ಹೊರಳಿ, ಶೂನ್ಯ ನೋಟದಿಂದ ರಾಧಮ್ಮ ನನ್ನು ದಿಟ್ಟಿಸಿದಳು.

ಗಂಡಸಿನ ಕೈ ಉಗುರು, ಕೂರಲಗಿನ ಹಾಗೆ ಆ ಹೆಣ್ಣಿನ ಮೂಗನ್ನು ಗಾಯ ಗೊಳಿಸಿತ್ತು; ಕೆನ್ನೆಗಳನ್ನು ತಿವಿದಿತ್ತು. ನೀರು ಬತ್ತಿದ ಬಾವಿಗಳಂತೆ ಆಳಕ್ಕೆ ಇಳಿ ದಿದ್ದುವು ಕಣ್ಣುಗಳು.

ರಾಧಮ್ಮನಿಗೆ, ಸುನಂದೆಯ ಆ ದುಸ್ಥಿತಿಯನ್ನು ಕಂಡು, ಸಹಾನುಭೂತಿ ದುಃಖ ವಾಗಿಯೂ ದುಃಖ ಆಕ್ರೋಶವಾಗಿಯೂ ಮಾರ್ಪಟ್ಟು, ಗಂಟಲು ಒತ್ತರಿಸಿ ಬಂತು. ಕೆಟ್ಟ ಗಂಡಂದಿರ ವಿಷಯ ಆಕೆ ಎಷ್ಟೋ ಕೇಳಿದ್ದರು, ಕಲ್ಪಿಸಿಕೊಂಡಿದ್ದರು. ವಿದ್ಯಾ ವಿಹೀನನಾದರೇ ಮನುಷ್ಯ ಹಾಗಾಗುತ್ತಾನೆ ಎಂದೂ ಅವರು ಭಾವಿಸಿದ್ದರು. ಆದರೆ ಅವರ ಆ ಪೂರ್ವ ಕಲ್ಪನೆಗಳನ್ನೆಲ್ಲ ನಗೆಗೀಡು ಮಾಡಿತ್ತು, ಈ ನಿದರ್ಶನ.

ರಾಧಮ್ಮನ ಸಂತಾಪ ಹೆಚ್ಚಲು ಇನ್ನೂ ಒಂದು ಕಾರಣವಿತ್ತು. ಅದು, ಶ್ಯಾಮು ತನ್ನನ್ನು ಹಿಂಬಾಲಿಸುತ್ತಿರುವನೆಂಬುದನ್ನು ತಿಳಿದು ಪುಟ್ಟಣ್ಣ ಹೆಂಡತಿಗೆ ಹಿಂಸೆಕೊಟ್ಟಿರ ಬೇಕೆಂಬ ಊಹೆ. ಸುನಂದೆ ಏನಾದರೂ ಹಾಗೆ ಯೋಚಿಸುತ್ತಿರಬಹುದೇ ಎಂದು ಅವರು ಕಾತರಗೊಂಡಿದ್ದರು.

ಆ ಮಾತು ಸ್ಪಷ್ಟವಾಗಬೇಕೆಂದೇ ಅವರು ಕೇಳಿದರು:

"ನನ್ನಿಂದಾಗಿ ನಿಮಗೆ ಇಷ್ಟೆಲ್ಲ ಹಿಂಸೆಯಾಯ್ತು ಅಲ್ವೆ ಸುನಂದಾ?"

ಅಲ್ಲ ಎನ್ನುವಂತೆ ಸುನಂದಾ ತಲೆಯಾಡಿಸಿದಳು. ಮತ್ತೆ ಮುಖವನ್ನು ಪಕ್ಕಕ್ಕೆ ಹೊರಳಿಸಿದಳು.

ಸಮಾಧಾನದ ಮಾತು ಎನ್ನುವಂತೆ ರಾಧಮ್ಮ ಹೇಳಿದರು:

"ಹೆಣ್ಣಿನ ಜನ್ಮವೇ ಇಷ್ಟು ಸುನಂದಾ. ಕಷ್ಟ ಅನುಭವಿಸೋಕೇ ನಾವು ಹುಟ್ಟಿ ದೋರು."

'ಸುಳ್ಳು!' ಎಂದಿತು ಸುನಂದೆಯ ಮನಸ್ಸು. ತನ್ನನ್ನು ಸಂತೈಸುವುದಕ್ಕೋಸ್ಕರ ಹೀಗಾಡುತ್ತಾರೆ; ಎಲ್ಲಾ ಹೆಂಗಸರ ಜನ್ಮವೂ ಇಂಥದೇ ಎನ್ನುವುದು ಸುಳ್ಳು; ಸ್ವತಃ ರಾಧಮ್ಮ ಹಾಗಿದಾರೇನು?–ಎಂದು ಆ ಮನಸ್ಸು ಗೋಗರೆದುಕೊಂಡಿತು.

ಮಲಗಿದ್ದವಳು ಮೌನವಾಗಿದ್ದರೂ ರಾಧಮ್ಮ ಅಂದರು:

"ಏಳಿ. ಮೈಗಿಷ್ಟು ಎಣ್ಣೆ ಹಚ್ಚಿಕೊಳ್ಳಿ."

ಮೈಗೆ ಎಣ್ಣೆ...! ತಾನು ಮುಸುಕೆಳೆದು ಮಲಗಿದ್ದರೂ ಒಳಗಿನ ದೇಹ ಜರ್ಜ ರಿತವಾಗಿತ್ತೆಂದು ಆಕೆ ತಿಳಿದಿದ್ದರಲ್ಲವೆ?

ಆಗಲೂ ಮಾತನಾಡಲಿಲ್ಲ ಸುನಂದಾ.

"ನನ್ನ ಮೇಲೆ ಸಿಟ್ಟಾಗಿದೀರಾ? ಹಾಗಿದ್ದರೆ ಹೇಳಿ. ಹೊರಟು ಹೋಗ್ತೀನಿ."

ಇಲ್ಲ–ಬೇಡ–ಎನ್ನುವಂತೆ ಸುನಂದಾ ಮತ್ತೊಮ್ಮೆ ತಲೆಯಾಡಿಸಿದರು.

"ಎದ್ದು ಕೂತ್ಕೊಳ್ಳಿ ಹಾಗಾದರೆ."

ಮಗುವನ್ನು ಪಕ್ಕಕ್ಕೆ ಸೇರಿಸಿ, ರಾಧಮ್ಮನ ಸಹಾಯದಿಂದ ಸುನಂದಾ ಎದ್ದು ಕುಳಿತುಕೊಂಡಳು. ರಾಧಮ್ಮನ ಮುಖ ನೋಡಿದರೆ ತನಗೆಲ್ಲಿ ಅಳುಬರುವುದೋ ಎಂದು ಆಕೆ ತಲೆ ಬಾಗಿಸಿಯೇ ಕುಳಿತಳು.

ರಾಧಮ್ಮ ಅಡುಗೆ ಮನೆಯತ್ತ ಇಣಿಕಿ ನೋಡಿ, ಬಚ್ಚಲು ಮನೆಗೂ ಹೋಗಿ ಬಂದು, ಹೇಳಿದರು:

"ಸುನಂದಾ, ಎದ್ದು ಹೋಗಿ ಮುಖ ತೊಳ್ಕೊಳ್ಳೋಕೆ ಆಗುತ್ತಾ?"

ಮೆಲ್ಲಮೆಲ್ಲನೆ ಒಸರುತ್ತಿದ್ದ ಕಂಬನಿಯನ್ನು ಹಿಂದಕ್ಕೆ ತಡೆಹಿಡಿಯುತ್ತ ಸುನಂದಾ ಅಂದಳು:

"ಹೂಂ."

"ಸರಿ. ನೀವು ಒಲೆ ಹಚ್ಬೇಡಿ ಇವತ್ತು. ಹಾಲೂ ನಮ್ಮಲ್ಲೇ ಬಿಸಿ ಮಾಡ್ತೀನಿ. ಸ್ನಾನ ಬೇಕಾದರೆ ಆಮೇಲೆ ಮಾಡುವಿರಂತೆ. ಇದು ಜ್ವರವೋ ಏನೂಂತ ನೋಡ್ಬೇಕು. ಊಟ ನಮ್ಮಲ್ಲೇ ಮಾಡಿ... ಸರಿ ತಾನೆ?"

ಉತ್ತರಕ್ಕೆ ಮೊದಲು ಅಶ್ರು ತುಂಬಿದ ಕಣ್ಣುಗಳು ರಾಧಮ್ಮನನ್ನು ನೋಡಿದುವು.

"ನಾನೇನು ಹೇಳಲಿ ರಾಧಮ್ಮ? ಹೇಗೆ ಬೇಕೋ ಹಾಗೆ ಮಾಡಿ."

ರಾಧಮ್ಮ, ಬಾಗಿಲ ಬಳಿಯಲ್ಲಿ ಇದ್ದ ಹಾಲನ್ನೆತ್ತಿಕೊಂಡರು.

"ಮುಖ ತೊಳಕೊಳ್ಳಿ ಸುನಂದಾ, ಕಾಫಿ ತರ್ತೀನಿ."

ಹಾಗೆ ಹೇಳಿ ಅವರು ತಮ್ಮ ಮನೆಗೆ ಹೋದರು....

....ಸುನಂದಾ ಪ್ರಯತ್ನ ಪಟ್ಟು ಗೋಡೆಗೊರಗಿಕೊಂಡು ಎದ್ದು ನಿಂತಳು. ಬವಳಿ ಬಂದಂತಾಯಿತು. ಆದರೆ ಕ್ರಮೇಣ ದೇಹಕ್ಕೆ ಶಕ್ತಿ ಹಿಂತಿರುಗಿ ಬಂತು. ಮೆಲ್ಲನೆ ಆಕೆ ಬಚ್ಚಲು ಮನೆಗೆ ನಡೆದಳು.

ಮೈಗೆ ಎಣ್ಣೆ ಸವರಬೇಕೆಂದು ಹೇಳಿದ್ದರು ರಾಧಮ್ಮ. ಮೈಗೆ ಎಂದರೆ, ಮೈಮೇಲಿನ ಗಾಯಗಳಿಗೆ. ಆ ಗಾಯಗಳಿಗೆಲ್ಲ ಅಂತಹ ಲೇಪನ ಸಾಧ್ಯವಿತ್ತು. ಆದರೆ ಹೃದಯಕ್ಕೆ ಆಗಿದ್ದ ಹಿರಿಯ ಗಾಯಕ್ಕೆ ಎಣ್ಣೆ ಸವರುವ ಹಾಗಿತ್ತೆ?

ಆಂ—ಊಂ—ಎಂದು ಸುನಂದಾ ನರಳಿದಳು. ದೇಹದ ಮತ್ತು ಹೃದಯದ ಎರಡೂ ನೋವಿನಿಂದ ಆ ನರಳಾಟ ಹೊರಟಿತ್ತು.

....ಆಕೆ ಹಜಾರಕ್ಕೆ ಹಿಂತಿರುಗಿ ಬಂದಾಗ, ಎಚ್ಚರಗೊಂಡು ತಾಯಿಯನ್ನು ಕಾಣದೆ ಅಳತೊಡಗಿತ್ತು ಮಗು. ಅದನ್ನು ಸುನಂದಾ ಎತ್ತಿಕೊಂಡಳು. ಮಗು ಎದೆಯತ್ತ ಮುಖಮಾಡಿತು. ಆಕೆ ಹಾಸಿಗೆಯ ಮೇಲೆಯೇ ಮೆಲ್ಲನೆ ಕುಳಿತು ಹಾಲುಣಿಸಲು ಯತ್ನಿಸಿದಳು. ಚೀಪಲೆಂದು ಮಗು ಬಾಯಿ ಇರಿಸಿದಾಗ ನೋವಾಯಿತು. ಎದೆಯ ಮೇಲೆಯೂ ಆತ ಬರೆಗಳನ್ನೆಳೆದಿದ್ದ. ಉಗುರುಗಳಿಂದ ಮಾಂಸವನ್ನು ಕಿತ್ತು ತೆಗೆಯಲು ಬಯಸಿದ್ದ...

ರಾಧಮ್ಮ ಲೋಟ ತುಂಬಾ ಕಾಫಿ ತೆಗೆದುಕೊಂಡು ಬಂದರು.

"ಕುಡೀರಿ ಸುನಂದಾ."

ರಾಧಮ್ಮನ ಹಿಂದೆಯೇ ಕೆಲಸದಾಕೆ ಬಂದಳು. ಖಾಲಿ ನಿವೇಶನದಲ್ಲಿ ಹಟ್ಟಿ ಕಟ್ಟಿಕೊಂಡಿದ್ದ ಕೂಲಿಸಂಸಾರದ ಒಡತಿ—ತಮಿಳುನಾಡಿನವಳು. ಗುಡಿಸಲೆಂದು ಆಕೆ ಪೊರಕೆ ಎತ್ತಿಕೊಂಡಾಗ, ಈ ದಿನ ಅದೊಂದೂ ಬೇಕಾಗಿಲ್ಲ ಎನ್ನುವಂತೆ ಸುನಂದಾ

ನೋಡಿದಳು.

ರಾಧಮ್ಮನೇ ಕೆಲಸದವಳಿಗೆ ಅಂದರು:

"ಈಗೇನೂ ಗುಡಿಸ್ಬೇಡ. ಮುಸುರೆ ಪಾತ್ರೆ ಹೊರಗೆಹಾಕ್ತೀನಿ. ಬೆಳಗಿ ಇಟ್ಬಿಟ್ಟು ಹೋಗು."

ಆಕೆ ರಾಧಮ್ಮನನ್ನು ನೋಡಿದಳು. ಮಗುವನ್ನು ಪಕ್ಕಕ್ಕೆ ಇಳಿಸಿ ಸೆರಗು ಸರಿ ಪಡಿಸಿಕೊಳ್ಳುತ್ತಿದ್ದ ಸುನಂದೆಯನ್ನೂ ನೋಡಿದಳು.

"ಯಾಕಮ್ಮಾ? ಅಮ್ಮಾವರಿಗೆ ಮೈಸರಿಯಾಗಿಲ್ವಾ?"

ಆ ತಮಿಳು ಪ್ರಶ್ನೆಯ ಜತೆಯಲ್ಲೇ ಆಕೆಯ ನೋಟ, ಪರೀಕ್ಷಿಸುವಂತೆ ಆ ಹೆಂಗಸರನ್ನು ಕಾಡಿತು.

"ಇಲ್ಲ, ಅಮ್ಮಾವರಿಗೆ ಮೈಚೆನ್ನಾಗಿಲ್ಲ. ಪಾತ್ರೆ ತೊಳೆದಿಟ್ಟು ನೀನು ಹೊರ ಟ್ಹೋಗು. ಇವತ್ತು ಬೇರೇನೂ ಮಾಡ್ಬೇಡ"

—ಎಂದು ರಾಧಮ್ಮ ಸಂಜ್ಞೆಗಳ ನೆರವಿನಿಂದ ಕನ್ನಡದಲ್ಲೇ ಉತ್ತರವಿತ್ತರು.

ಹಾಗೆಯೇ, ಅಡುಗೆ ಮನೆಗೆ ಹೋಗಿ ಮುಸುರೆ ಪಾತ್ರೆಗಳನ್ನು ತಂದು ಹೊರ ಹಾಕಿದರು.

"ಕಾಫಿ ಕುಡೀರಿ ಸುನಂದಾ. ಆರ್ಹೋಗ್ತಿದೆ"

—ಎಂದು ಒತ್ತಾಯಿಸುವ ಧ್ವನಿಯಲ್ಲಿ ಹೇಳಿ, ಸುನಂದೆ ಕಾಫಿಯ ಲೋಟ ವನ್ನು ಕೈಗೆತ್ತಿಕೊಳ್ಳುವಂತೆ ಮಾಡಿದರು.

* * * *

ಬೆಳಗು ಮಧ್ಯಾಹ್ನವಾಯಿತು. ಸೂರ್ಯ ಮೇಲೇರಲು ಹಿಡಿದ ಹೊತ್ತು ಎಂದಿನಷ್ಟೇ. ಆದರೆ ಸುನಂದೆಯ ಪಾಲಿಗೇನೋ ಅದು ದೀರ್ಘಕಾಲ ಎನ್ನುವಂತೆ, ಈ ದಿನ ಎಂದಿಗಿಂತ ಹೆಚ್ಚು ನಿಧಾನವಾಗಿ ಹೊತ್ತು ಹೋಗುತ್ತಿದೆ ಎನ್ನುವಂತೆ, ಭಾಸ ವಾಯಿತು.

ರಾಧಮ್ಮನ ಸ್ನೇಹದ ತಣುಪಿನಲ್ಲಿ ಸುನಂದೆಯ ಮೈ ಬಿಸಿ ಏರಲಿಲ್ಲ. ಶ್ಯಾಮು ಬಂದು ಮಗುವನ್ನೆತ್ತಿಕೊಂಡು ಹೋದ. ರಾಧಮ್ಮ ಒತ್ತಾಯ ಪಡಿಸಿ, ಸುನಂದೆ ಯನ್ನು ತಮ್ಮ ಮನೆಗೆ ಕರೆದೊಯ್ದರು.

ಬಾಣಂತಿತನ ಮುಗಿಸಿಕೊಂಡು ಹಿಂತಿರುಗಿದ ಮೇಲೆ ಆ ರೀತಿ ಆಕೆ ಮನೆಯಿಂದ ಹೊರಬಿದ್ದಿರಲೇ ಇಲ್ಲ. ಏಳೆಂಟು ತಿಂಗಳ ಕಾಲವೂ ಒಂದೇ ಸಮನೆ ಮನೆಯೊಳಗೇ ಇದ್ದ ಹೆಂಗಸು...ವಿದ್ಯಾವತಿಯಾಗಿದ್ದ ಸುನಂದೆಗೆ ಆ ಯೋಚನೆ ವಿಚಿತ್ರವಾಗಿತ್ತು. ಹೆಣ್ಣು ಯಾವಾಗಲೂ ನಾಲ್ಕು ಗೋಡೆಗಳ ನಡುವಿನ ಸೆರೆಯಾಳು ಎಂದು, ಹಿಂದೆ ಆವಳು ಭಾವಿಸಿರಲಿಲ್ಲ. ಒಂದು ದಿನ ತನಗೆ ಅಂತಹ ಬಾಳ್ವೆ ಲಭಿಸಬಹುದೆಂದು ಯೋಚಿಸಿಯೂ ಇರಲಿಲ್ಲ. ಆದರೆ ಈಗಿನ ಪರಿಸ್ಥಿತಿಯೊ? ಯೋಚಿಸಿ ಬಯಸಿದ್ದುದು ದೊರೆತಿರಲಿಲ್ಲ. ಯೋಚಿಸದೆ ಇದ್ದುದು—ಬಯಸದೇ ಇದ್ದುದು—ದೊರೆತಿತ್ತು,

ಹೇರಳವಾಗಿ.

ರಾಧಮ್ಮನ ಮನೆಯಲ್ಲಿ ಅವರ ಆಗ್ರಹಕ್ಕೆ ಕಟ್ಟು ಬಿದ್ದು ಸುನಂದಾ ಮೈಗೆ ಎಣ್ಣೆ ಸವರಿಕೊಂಡಳು. ಅವರ ಸ್ನಾನದ ಮನೆಯಲ್ಲಿ ಒಲೆಯ ಉರಿ ಸರಿಮಾಡುತ್ತಾ ಕುಳಿತಾಗ ಸುನಂದೆಗೆ ದುಃಖ ಉಮ್ಮಳಿಸಿ ಬಂತು. ಹಿಂದೆ, ಗಂಡನ ಶರೀರ ಸೌಷ್ಠವಕ್ಕಾಗಿ ತಾನು ಹೆಮ್ಮೆ ಪಟ್ಟಿದ್ದಳು. ಆ ಬಾಹುಗಳು, ಎದೆ...ಆತನ ತೋಳ ತೆಕ್ಕೆಯಲ್ಲಿ ಮೃದುವಾಗಿ ಕರಗುತ್ತ 'ಎಂತಹ ಸುಖ!' ಎಂದುಕೊಂಡಿದ್ದಳು. ಈಗಲೊ? ಶಕ್ತಿ ಸಾಮರ್ಥ್ಯವಿದ್ದ ಆ ಗಂಡು ಶರೀರವೆ ತನ್ನನ್ನು ದಂಡಿಸಿತ್ತು. ಆಕೆ ಪ್ರತಿಭಟಿಸಿದ್ದಳು. ಆದರೆ ಆತನಿಗೆ ಸರಿ ಸಾಟಿಯಾಗದೆ, ಆಕೆಗೆ ಸೋಲಾಗಿತ್ತು. ಪ್ರತಿಭಟಿಸಿದ ತಪ್ಪಿಗಾಗಿ ಉಗ್ರತರವಾಗಿತ್ತು ದಂಡನೆ. ಹಿಂದೆ ಮೃದುವಾಗಿ ಮುಟ್ಟುತ್ತಿದ್ದ ಆತನ ಬೆರಳುಗಳು ಈಗ ಮುಷ್ಟಿ ಕಟ್ಟಿ ಕೊರಕಲು ಬೆಣಚು ಕಲ್ಲಾಗಿದ್ದುವು; ಅಥವಾ ನೀಳವಾಗಿ ವೇಗವಾಗಿ ಬೀಸಿ ಕತ್ತಿಯ ಅಲಗಾಗಿದ್ದುವು...

ಸ್ನಾನವಾದ ಮೇಲೆ ಆಕೆಗೆ ಸ್ವಲ್ಪ ಹಾಯೆನಿಸಿತು. ರಾಧಮ್ಮನ ಗಂಡ ಕೆಲಸಕ್ಕೂ ಹಿರಿಯ ಮಗ ಶಾಲೆಗೂ ಹೋಗಿದ್ದುದರಿಂದ ಮನೆಯಲ್ಲಿ ಯಾರೂ ಇರಲಿಲ್ಲ. ಶ್ಯಾಮನಿಗೆ ಅಂಟಿಕೊಂಡು ಮಗು ತಾಯಿಯನ್ನೂ ಮರೆಯಿತು. ಸುನಂದಾ ಒಂದು ತುತ್ತು ಉಂಡಳು. ಊಟವಾದ ಮೇಲೆ, ರಾಧಮ್ಮನ ಮನೆಯ ಮಂಚದ ಮೇಲೆಯೇ ಒರಗಿದಳು. ಜೊಂಪು ಹತ್ತಿತು.

ನಿದ್ದೆ ಬಂದವಳಿಗೆ ಕೆಟ್ಟ ಕನಸು ಬಿದ್ದಂತಾಗಿ ಆಕೆ ಗಡಬಡಿಸಿ ಎದ್ದಳು.

"ರಾಧಮ್ಮ, ಮಗು ಎಲ್ಲಿ?"

ರಾಧಮ್ಮ ಮುಗುಳು ನಕ್ಕರು:

"ಯಾಕೆ, ಏನಾಯ್ತು?"

"ಏನೋ ಕನಸು ಬಿತ್ತು ರಾಧಮ್ಮ....ಮಗು ಅತ್ತ ಹಾಗೆ ಕೇಳಿಸ್ತು. ಅದಕ್ಕೆ ಹಸಿವಾಗಿದೆಯೋ ಏನೋ."

"ಅಷ್ಟೇ ತಾನೆ? ಸ್ವಲ್ಪ ಆಗ ಮಗು ಅತ್ತದ್ದು ನಿಜ. ಶ್ಯಾಮ ಹಸುವಿನ ಹಾಲು ಕುಡಿಸ್ದ. ಸುಮ್ಮಗಾಯಿತು. ಆಗ ಅತ್ತದ್ದು ಕನಸಿನಲ್ಲಿ ಈಗ ಕೇಳಿಸ್ತೇನೊ?"

ರಾಧಮ್ಮನ ಪರಿಹಾಸ್ಯದ ಧ್ವನಿ ಸುನಂದೆಯಲ್ಲಿ ಲವಲವಿಕೆಯನ್ನುಂಟುಮಾಡಿತು. ಆಕೆಯೂ ಮುಗುಳುನಕ್ಕಳು.

"ಮಗೂಗೆ ಹಸುವಿನ ಹಾಲು ಅಭ್ಯಾಸ ಮಾಡಿಸ್ಬೇಕು ಸುನಂದಾ. ಎಷ್ಟು ದಿವಸ ಅಂತ ನೀವೇ ಕೊಡ್ತೀರಾ? ಅಲ್ಲದೆ ಈ ಸ್ಥಿತೀಲಿ ನಿಮಗೆ ಎದೆ ಹಾಲಿರೋದೂ ಅಷ್ಟರಲ್ಲೇ ಇದೆ."

ಅನುಭವದ ಮಾತುಗಳು. ರಾಧಮ್ಮನೆದುರಲ್ಲಿ ತಾನಿನ್ನೂ ಚಿಕ್ಕ ಹುಡುಗಿ ಎನಿಸಿತು ಸುನಂದೆಗೆ.

"ಹೂಂ"

—ಎಂದಳು ಆಕೆ, ರಾಧಮ್ಮ ಹೇಳಿದುದು ಸರಿ ಎನ್ನುವಂತೆ.

ರಾಧಮ್ಮ ಕಾಫಿ ಮಾಡಿದರು.

'ಈ ಕಾಫಿ ನಮ್ಮವರಿಂದ ನನಗೆ ಅಂಟಿಕೊಂಡಿರೋ ಚಟ'

—ಎಂದು ನಗೆ ಮಾತು ರಾಧಮ್ಮನ ನಾಲಿಗೆಯ ತುದಿಯವರೆಗೂ ಬಂತು. ಆದರೆ ಸುನಂದೆಯ ಆಗಿನ ಇರುವಿಕೆಯನ್ನು ಗಮನಿಸಿ, ಹೊರಬರಲು ತಾನು ಬಯಸಿದ್ದೇ ತಪ್ಪಾಯಿತೆನ್ನುವಂತೆ ಅದು ಹಿಂದಕ್ಕೆ ಸರಿಯಿತು.

ಸ್ವಲ್ಪ ಹೊತ್ತಿನಲ್ಲೆ ಶ್ಯಾಮು, ಮಗುವನ್ನು ತಂದು ಅದರ ತಾಯಿಯ ಬಳಿ ಬಿಟ್ಟು ಹೋದ.

ರಾಧಮ್ಮನ ದೊಡ್ಡ ಮಗ, ಶಾಲೆಯಿಂದ ಬಂದು ತಿಂಡಿ ತಿಂದು ಹೊರಬಿದ್ದ.

'ಆಗಲೇ ಸಂಜೆಯಾಯ್ತು'

—ಎಂದು ಸುನಂದಾ ಮನಸಿನೊಳಗೇ ಅಂದಳು.

...ರಾಧಮ್ಮ ಬಹಳ ಹೊತ್ತಿನಿಂದ ಯೋಚಿಸುತ್ತಲೇ ಇದ್ದವರು ಕೇಳಿದರು:

"ನಾನೊಂದು ಕೇಳ್ತೀನಿ ಸುನಂದಾ. ಕೋಪಿಸ್ಕೋಬೇಡಿ."

ಆ ಮಾತಿನಿಂದ ಸುನಂದೆಗೆ ನೋವಾಯಿತು.

"ನೀವು ಕೇಳಿದರೆ ನನಗೆ ಕೋಪವೆ ರಾಧಮ್ಮ? ಸರಿ ಹೋಯ್ತು. ಕೇಳಿ."

ನೇರವಾಗಿ ಸುನಂದೆಯನ್ನು ನೋಡದೆಯೇ ರಾಧಮ್ಮ ಕೇಳಿದರು:

"ನೀವು ಆತನಿಗೆ ಅಡ್ಡಿ ಮಾಡ್ತೀರಾ?"

ತಾನು ಆತನಿಗೆ ಅಡ್ಡಿಯಾಗುವುದು......ಪ್ರಶ್ನೆ ಅರ್ಥವಾಯಿತು ಸುನಂದೆಗೆ. ಅದು ಕಹಿಯಾಗಿತ್ತು. ತನ್ನ ಮನಸಿನ ಸಂಕಟವನ್ನು ಹೊರಕ್ಕೆ ತೋರಿಸದೆಯೇ ತಲೆ ಬಾಗಿಸಿ ಆಕೆ ಹೇಳಿದಳು:

"ಇಲ್ಲ ರಾಧಮ್ಮ. ನನಗೇನು ಹುಚ್ಚೆ?"

"ಹಾಗಲ್ಲ ಸುನಂದಾ ಏನೋ ಲೆಕ್ಕಹಾಕಿ ಈ ರೀತಿ ಕೇಳ್ದೆ. ಆತ ಮಾಡ್ತಿರೋದಕ್ಕೆ ಕಾರಣವಾದರೂ ಬೇಡ್ವೆ?"

"ಸರಸ್ವತಿ ಹುಟ್ಟಿದ ಮೇಲೆ ಅವರು ನನ್ನ ಹತ್ತಿರಕ್ಕೇ ಬಂದಿಲ್ಲ."

ರಾಧಮ್ಮನಿಗೆ ಆ ಮಾತು ಕೇಳಿ ಆಶ್ಚರ್ಯವಾಯಿತು.

"ವಿಚಿತ್ರ ಮನುಷ್ಯ!"

—ಎಂದು ಅವರು ಉದ್ಗಾರವೆತ್ತಿದರು.

ಸುನಂದಾ ನೊಂದುಕೊಂಡ ಧ್ವನಿಯಲ್ಲಿ ಹೇಳಿದಳು:

"ಓದಿದ ಹುಡುಗಿ; ಮಗು ಬೇಡಾಂತ ನಾನು ಗಲಾಟೆ ಮಾಡಿರಬಹುದೇನೋ—ಅಂತ ಸಂಶಯ ಬಂತೆ ರಾಧಮ್ಮ ?"

ಅದು ನಿಜವಾಗಿದ್ದರೂ ಒಪ್ಪಿಕೊಳ್ಳಲು ಇಷ್ಟವಿಲ್ಲದೆ ರಾಧಮ್ಮನೆಂದರು:

"ಹಾಗಲ್ಲ ಸುನಂದಾ....ಆದರೂ ಒಪ್ಮೊಮ್ಮೆ ಯಾರಿಗಾದರೂ ಹಾಗಾಗೋ ದಿಲ್ವೆ? ಸಣ್ಣ ಕಾರಣಕ್ಕೇನೆ ವಿರಸ ಶುರುವಾಗಿ ಬಲಿತುಕೊಳ್ಳುತ್ತೆ."

"ಅದು ನಿಜ. ನಮ್ಮ ವಿಷಯದಲ್ಲಿ ಹಾಗಾಗಿಲ್ಲ ರಾಧಮ್ಮ. ನಾನು ಸರಿಯಾಗೇ ನಡಕೊಂಡಿದೀನಿ. ಮಗುವಾಗೋದು ಅವರಿಗೇ ಇಷ್ಟವಿಲ್ಲ."

ವಿಚಿತ್ರ ಮನುಷ್ಯ–ಎಂಬ ಪದ ಮತ್ತೊಮ್ಮೆ ರೂಪುಗೊಂಡರೂ ಅದನ್ನು ಆಡದೆ ರಾಧಮ್ಮನೆಂದರು:

"ಹಾಗೂ ಇರಬಹುದು. ಗಂಡಸರ ಮನಸ್ಸು ತಿಳಿಯೋದೇ ಕಷ್ಟ."

ಕ್ಷಣಕಾಲ ಮೌನವಾಗಿದ್ದು, ನೇರವಾಗಿ ರಾಧಮ್ಮನನ್ನು ದಿಟ್ಟಿಸಿ ನೋಡಿ, ಸುನಂದಾ ಕೇಳಿದಳು:

"ನಿಮ್ಮ ಗಂಡಸರ ಮನಸ್ಸು ತಿಳಿಯೋದು ನಿಮಗೆ ಕಷ್ಟವಾಗಿದೆಯೆ ರಾಧಮ್ಮ?"

ಆ ಪ್ರಶ್ನೆ ಕೇಳಿ ರಾಧಮ್ಮ ನಕ್ಕರು. ಮತ್ತೆ ಗಂಭೀರವಾಗಿ ಅವರೆಂದರು:

"ಆ ವಿಷಯದಲ್ಲಿ ನಾನು ಪುಣ್ಯವಂತೆ. ಒಪ್ತೀನಿ."

ಸಂಭಾಷಣೆಗೆ ಮತ್ತೊಮ್ಮೆ ಮೌನದ ಕೊಂಡಿ ಬಿತ್ತು.

ಯೋಚಿಸುತ್ತ ಕುಳಿತ ರಾಧಮ್ಮ ಕೇಳಿದರು:

"ಈಗ ಏನ್ಮಾಡ್ಬೇಕೂಂತಿದೀರಾ?"

"ಏನು ಮಾಡ್ಲಿ ಹೇಳಿ?"

"ತವರು ಮನೆಗೆ ಹೋಗಿ ಸ್ವಲ್ಪ ದಿವಸ ಇರ್‍ತೀರೇನು?"

ಆ ಯೋಚನೆಯನ್ನು ತಾನೂ ಎಷ್ಟೋ ಸಾರೆ ಮಾಡಿದ್ದ ಸುನಂದಾ ಮೆಲು ಧ್ವನಿಯಲ್ಲಿ ಉತ್ಸಾಹವಿಲ್ಲದೆ ಅಂದಳು:

"ಹೋಗಬಹುದು. ಆದರೆ ಏನು ಪ್ರಯೋಜನ? ಎಷ್ಟು ದಿನಾಂತ ಅಲ್ಲಿ ಇರೋಕಾಗ್ತದೆ? ಇಲ್ಲೇ ಇದ್ದರೆ, ಈ ಮಹಾನುಭಾವನಿಗೆ ಏನಾಗ್ತಿದೆ ಅನ್ನೋದನ್ನಾದರೂ ನೋಡಬಹುದು. ಅಲ್ಲಿದ್ದರೆ, ಒಂದೂ ತಿಳೀದೆ ಮನಸ್ಸಿನ ಸಂಕಟ ಹೆಚ್ಚಾಗುತ್ತೆ."

"ಅದು ನಿಜ."

"ಅಲ್ದೆ, ನನ್ನ ತಂಗಿಗಿನ್ನೂ ವರ ಗೊತ್ತಾಗಿಲ್ಲ. ನಾನೂ ಅಲ್ಲಿಗೆ ಹೋಗಿ ನಿಂತು ಕೊಂಡರೆ ಏನಾದರೂ ಕಿಂವದಂತಿ ಹುಟ್ಟಿ, ಅವರಿಗೆಲ್ಲ ಹಿಂಸೆಯಾಗೋದು ಖಂಡಿತ."

ತನ್ನ ಸಂಕಟದ ಸಮಯದಲ್ಲೂ ಇನ್ನೊಬ್ಬರ ಯೋಚನೆ ಮಾಡುವ ಆ ಮನೋವೃತ್ತಿ ಕಂಡು ರಾಧಮ್ಮ ಮೂಕರಾದರು.

ಸುನಂದೆಯೇ ಮಾತು ಮುಂದುವರಿಸಿದಳು:

"ಮೊದಲ್ನೇ ಸಾರೆ ಹೀಗೆ ಆದಾಗ ತವರುಮನೆಗೆ ಹೋಗ್ತೀನೀಂತ ನಾನೇ ನಿಮ್ಜತೇಲಿ ಪ್ರಸ್ತಾಪಿಸಿದ್ದೆ. ಆಗ 'ದುಡುಕಬಾರ್‍ದೂ'ಂತ ನೀವು ಹೇಳಿದ್ರಿ. ಈ ಸಲ ನಾನೇ, ಹೋಗೋದಿಲ್ಲ–ಅನ್ತಾ ಇದೀನಿ. ಇಷ್ಟರಲ್ಲೆ ತುಂಬಾ ವಯಸ್ಸಾದೋಳ ಹಾಗೆ ಮಾತಾಡ್ತಿದೀನಿ, ಅಲ್ಲ?"

ಆ ಮಾತಿಗೆ ಅರ್ಧವಿರಾಮವಾಗಿತ್ತು ನೋವಿನ ನಗೆ.

"ಬದುಕಿನಲ್ಲಿ ಹೀಗೆಲ್ಲಾ ಆಗ್ತಾ ಇದ್ರೆ, ಯಾರಿಗೂ ಬೇಗನೆ ವಯಸ್ಸಾಗ್ತದೆ ಸುನಂದಾ."

ಸುನಂದೆ ನಿಟ್ಟುಸಿರು ಬಿಟ್ಟು ಬೀದಿಯತ್ತ ನೋಡಿದಳು.

"ನಿಮ್ಮ ಯಜಮಾನರು ಬರೋಹೊತ್ತಾಯ್ತು ಅಲ್ವೆ ರಾಧಮ್ನೋರೆ?"

"ಹೂಂ ಇನ್ನು ಮನೆಗೆ ಹೊರಟ್ಬಿಡೋಣಾಂತ ಯೋಚಿಸ್ತಿದೀರೊ?"

"ಹೌದು ಕಣ್ರೀ. ನನಗೂ ಒಂದು ಮನೆ ಇದೆಯಲ್ಲ, ಹೋಗ್ತೀನಿ."

ಸುನಂದಾ ಎದ್ದು ನಿಂತಾಗ ರಾಧಮ್ಮನೆಂದರು:

"ಇವತ್ತು ನೀವು ಅಡುಗೆ ಮಾಡ್ಬೇಡಿ ಸುನಂದಾ. ಸುಮ್ನೆ ಮಲಕೊಂಡ್ಬಿಡಿ. ಆತ ಬರ್ತಾರೋ ಇಲ್ವೋ. ಬಂದರೆ ಆತನಿಗೂ ಇಲ್ಲೇ ಬಡಿಸಿದರಾಯ್ತು. ಎಂಟೊಂಭತ್ತು ಘಂಟೆ ಹೊತ್ತಿಗೆ ಬಂದು ನಿಮ್ಮನ್ನ ಊಟಕ್ಕೆಬ್ಬಿಸ್ತೀನಿ."

"ಬೇಡಿ ರಾಧಮ್ಮ. ಇವತ್ತೇನೂ ಬೇಡಿ ಇನ್ನು. ನನ್ನಿಂದಾಗಿ ಎಷ್ಟೊಂದು ಕಷ್ಟ ನಿಮಗೆ."

"ಇನ್ನೊಮ್ಮೆ ಆ ಮಾತಾಡ್ಬೇಡಿ. ಇವತ್ತು ನೀವು ನನ್ನ ಮಾತು ಮೀರ ಕೂಡ್ದು."

ಸುನಂದಾ ನಕ್ಕು, ಹೊರಕ್ಕಿಳಿದಳು.

ಹೋಗುತಿದ್ದ ಆಕೆಗೆ ರಾಧಮ್ಮನೆಂದರು:

"ಹಾಲಿಗೆ ಇಲ್ಲೇ ಹೆಪ್ಪು ಹಾಕಲಾ ಸುನಂದಾ?"

ಕ್ಷೀಣವಾಗಿ ದೀರ್ಘವಾಗಿ ಉತ್ತರ ಬಂತು:

"ಹೂಂ."

* * * *

ಸುನಂದಾ ಮನೆಯ ಬೀಗ ತೆಗೆದು ಒಳಗೆ ಬಂದಳು. ಬಿಕೋ ಎನ್ನುತಿದ್ದ ಮನೆಯನ್ನು ಕಂಡು, 'ನನ್ನ ಹಾಗೆಯೇ ಇದೆ ಈ ಮನೆಯೂ' ಎಂದುಕೊಂಡಳು. ಮಗುವನ್ನು ಇಳಿಬಿಟ್ಟು, ಹಾಸಿಗೆಯನ್ನು ಸುರುಳಿ ಸುತ್ತಿ, ಕಸ ಗುಡಿಸಿದಳು. ಮತ್ತೆ ಹಾಸಿಗೆ ಹಾಸಿದಳು. ಮಗುವಿನ ತೊಟ್ಟಿಲು ಸರಿಪಡಿಸಿದಳು.

ಕತ್ತಲಾಯಿತೆಂದು ದೀಪ ಹಾಕಿದಳು.

ಅಡುಗೆ ಮನೆ ಆಕೆಯನ್ನು ಕರೆಯುತ್ತಿತ್ತು.

ತನಗೇನೋ ಹಸಿವೆ ಇಲ್ಲ. ಆದರೆ ಆತನಿಗೋಸ್ಕರ ಏನನ್ನಾದರೂ—? ರಾಧಮ್ಮ ನೇನೋ ಅಂದಿದ್ದರು. ಆತನೂ ಅಲ್ಲಿಗೇ ಊಟಕ್ಕೆ ಬರಲೆಂದು. ಅದು ದುಸ್ಸಾಧ್ಯ ಎಂದು ಅವರಿಗೆ ಗೊತ್ತಿರಲಿಲ್ಲವೆ? ಗೊತ್ತಿತ್ತು. ನಿಷ್ಕರುಣಿಯಾದ ಆ ಗಂಡ ಒಂದು ರಾತ್ರಿ ಉಪವಾಸವಿದ್ದರೆ ತಪ್ಪೇನೂ ಇಲ್ಲ–ಎಂದು ಸ್ಪಷ್ಟವಾಗಿ ಹೇಳಲಾರದೆ, 'ಆತ ನಿಗೂ ಇಲ್ಲೇ ಬಡಿಸಿದರಾಯಿತು' ಎಂದಿದ್ದರು.

ಹಾಗೆ ಮಾಡುವುದರಲ್ಲಿ ತಪ್ಪೇನೂ ಇಲ್ಲ—ಎಂದುಕೊಂಡಳು ಸುನಂದಾ.

ಅಲ್ಲದೆ, ರಾಧಮ್ಮ ಹೇಳಿದ್ದ ಹಾಗೆ ಆತ ಬರುವನೆಂಬ ಭರವಸೆಯಾದರೂ ಏನು?

ಸುಮ್ಮನಿರುವುದೇ ಸರಿ ಎಂದು, ಬಹಳ ಹೊತ್ತು ಗೋಡೆಗೊರಗಿ ಸುನಂದಾ ಕುಳಿತಳು.

ತಣ್ಣನೆ ಗಾಳಿ ಹೊರಗಿಂದ ಬೀಸಿತು.

ಆಕೆಯ ಮನೋನಿರ್ಧಾರವೂ ಮೆಲ್ಲಮೆಲ್ಲನೆ ಸಡಿಲಿತು.

ಎದ್ದು, ಅಡುಗೆ ಮನೆಯೊಳ ಹೊಕ್ಕು, ಇಜ್ಜಲು ಒಲೆಯಲ್ಲಿ ಆಕೆ ಉರಿಮಾಡಿ, ಗಂಡನಿಗೋಸ್ಕರ—ಆತನೊಬ್ಬನಿಗೋಸ್ಕರ—ಅನ್ನಕ್ಕೆ ನೀರಿಟ್ಟಳು. ಅನ್ನ ಬೆಂದಾಗ ಅದನ್ನಿಳಿಸಿ ಒಂದಿಷ್ಟು ಸಾರು ಮಾಡಿದಳು.

ಆ ಕೆಲಸ ಮುಗಿಸಿ ಆಕೆ ಬೆಂಕಿ ಆರಿಸುತ್ತಿದ್ದಾಗ, ಹೆಪ್ಪು ಹಾಕಿದ ಹಾಲಿನೊಡನೆ ಬಂದು ಬಿಟ್ಟರು ರಾಧಮ್ಮ. ಆವಿಯೇಳುತ್ತಿದ್ದ ಅಡುಗೆಯನ್ನು ಕಂಡು ಅವರು ಅವಾಕ್ಕಾದರು.

ಕೆಂಡಗಳ ಕೊನೆಯ ಹೊಗೆ ಚಿಮಿಣಿಯ ಮೇಲಕ್ಕೆ ಹೋದಾಗ ರಾಧಮ್ಮ ಕೇಳಿದರು:

"ನಮ್ಮನೆ ಅಡುಗೆ ಹಿಡಿಸಲಿಲ್ವೆ ಸುನಂದಾ?"

"ಹಾಗೆ ಹೇಳ್ಬೇಡಿ ರಾಧಮ್ಮ. ನನಗೆ ಹಸಿವಿಲ್ಲ, ನಿಜವಾಗಿಯೂ ಹಸಿವಿಲ್ಲ."

ರಾಧಮ್ಮ ಆಶ್ಚರ್ಯದಿಂದ ಸುನಂದೆಯನ್ನ ನೋಡಿದರು. ಹಾಗಾದರೆ ಗಂಡನಿಗೋಸ್ಕರ ಅಡುಗೆ ಮಾಡಿದೀರಾ? ಎಂದು ಕೇಳಬೇಕೆನ್ನಿಸಿತು. ಆದರೆ ಹಾಗೆ ಕೇಳುವುದು ಔಚಿತ್ಯವಲ್ಲವೆಂದು ಸುಮ್ಮನಾದರು.

"ಆಗಲಮ್ಮ. ನಿಮ್ಮಿಷ್ಟ"

—ಎಂದಷ್ಟೆ ಹೇಳಿ ತಮ್ಮ ಮನೆಗೆ ಹೋದರು.

....ಸುನಂದಾ ಹೊರಗಿನ ಬಾಗಿಲಿಗೆ ಅಗಣಿಹಾಕಿ ಮಲಗಿಕೊಂಡಳು. ಆಕೆಯ ಅಂಗಾಂಗಗಳೆಲ್ಲ 'ನಿದ್ದೆ ಬೇಕು' ಎಂದುವು.

ದೀಪ ಉರಿಯುತ್ತಿದ್ದಂತೆಯೇ ಸುನಂದಾ ನಿದ್ದೆ ಹೋದಳು.

* * * *

ಬಾಗಿಲು ತಟ್ಟಿದ ಸದ್ದು. ಕರೆದ ಸ್ವರ.

ಸುನಂದಾ ಕಣ್ಣು ತೆರೆದಳು. ಗಂಡ ಬಂದನೇನೋ ಎಂದು ಆಕೆ ಏಳಬಯಸಿದಳು. ಆದರೆ ಮೈ ಕೈ, ಅಲುಗಿಸುವುದೂ ಸಾಧ್ಯವಾಗದ ಹಾಗೆ ನೋಯುತ್ತಿದ್ದುವು.

ಮತ್ತೆ ಬಾಗಿಲಿಗೆ ಬಡಿತ.

"ಅವ್ವಾ! ಆಲು ಆಕಿಸ್ಕೊಳ್ರಿವ್ವಾ..."

ಹಾಲವ್ವ ಬಂದಿದ್ದಳು—ಗಂಡನಲ್ಲ. ಇದು ರಾತ್ರೆಯಲ್ಲ ಹಾಗಾದರೆ—ಇದು

ಬೆಳಗು.

ಸುನಂದಾ ಪಕ್ಕಕ್ಕೆ ದೃಷ್ಟಿ ಹೊರಳಿಸಿದಳು. ಹೊರಗಿನಿಂದ ಬೆಳಕು ಒಳಗಿನ ವಿದ್ಯುದ್ದೀಪಕ್ಕೆ ಸವಾಲು ಹಾಕುತ್ತ ತೂರಿ ಬರುತ್ತಿತ್ತು.

ಗಂಡ ರಾತ್ರೆ ಮನೆಗೆ ಬಂದೇ ಇರಲಿಲ್ಲ.

## ೧೨

ಎದುರು ಭಾಗದಲ್ಲಿ ಆ ಬೀದಿಯ ಆಚೆಗೆ ಖಾಲಿಯಾಗಿದ್ದ ಮನೆಗೆ ಹೊಸ ಬಿಡಾರ ಬಂತು—ಶ್ರೀಮಂತರದು. ಯುವಕ ದಂಪತಿ ಹಿರಿಯರು ಮತ್ತು ಬಳಗ. ಮನೆ ತುಂಬ ಊಳಿಗದವರು.

ನಿರ್ವಿಕಾರವಾದ ಸಹಜ ಕುತೂಹಲದಿಂದ ರಾಧಮ್ಮ ಆ ಸಂಸಾರವನ್ನು ನೋಡಿದರು.

ತನ್ನ ಮೌನಸಂಕಟದಲ್ಲೆ ದಿನ ಕಳೆಯುತಿದ್ದ ಸುನಂದೆಯೂ ಹೊರಗೆ ನೋಡಲು ದೊರೆತ ಹೊಸ ಆಕರ್ಷಣೆಯತ್ತ ದೃಷ್ಟಿ ಬೀರಿದಳು.

ಆ ಮನೆ ಅಲಂಕೃತವಾಯಿತು. ಕಿಟಿಕಿ ಬಾಗಿಲುಗಳಿಗೆ ತೆಳುವಾದ ನೀಲಿ ಪರದೆ; ಮಹಡಿಯ ಗೋಪುರದಲ್ಲಿ ಕುಳಿತುಕೊಳ್ಳಲು ಆಸನಗಳು; ವಿದ್ಯುತ್ ದೀಪಗಳು—ಆ ದೀಪಗಳಿಗೆ ಮೃದುವರ್ಣದ ಆವರಣ; ಇದೆಯೋ ಇಲ್ಲವೋ ಎನ್ನುವಷ್ಟು ಮಧುರ ವಾಗಿ ಸದ್ದು ಮಾಡುತ್ತಿದ್ದ ರೇಡಿಯೋ; ಗದ್ದಲ ಮಾಡುವುದೇ ಈ ಜನರಿಗೆ ತಿಳಿಯ ದೇನೋ ಎನ್ನುವಂತಹ ವಾತಾವರಣ... ಆ ವಿಶಿಷ್ಟತೆಯಿಂದಲೇ ಮನೆ ಯಾರ ಗಮನ ವನ್ನಾದರೂ ಒಂದು ಕ್ಷಣ ಸೆಳೆಯುವಂತಾಯಿತು.

ಹಿಂದೆ ಅಲ್ಲಿ ಬಿಡಾರವಿದ್ದವರಿಗೆ ಕಾರಿರಲಿಲ್ಲ. ಗ್ಯಾರೇಜು, ಸೌದೆ ಇಜ್ಜಲು ಮೂಟೆಗಳಿಗೆ ಆವಾಸವಾಗಿತ್ತು. ಈಗ ಆ ಜಾಗದಲ್ಲಿ ಮನೆಯವರ ಫಿಯೆಟ್ ಕಾರು ಬಂದು ನಿಂತಿತು.

ಮೊದಲ ದಿನವೇ ರಾಧಮ್ಮ ಹೇಳಿದರು:

"ಸುನಂದಾ, ಆಕೆ ಗರ್ಭಿಣಿ."

ಸುನಂದೆಯ ನೋಟಕ್ಕೆ ಅದು ಸ್ಪಷ್ಟವಾಗಲಿಲ್ಲ.

"ಇರಲಾರದು ರಾಧಮ್ಮ."

"ನನಗೆ ಹೇಳ್ತೀರಾ! ಸರಿ, ಸರಿ. ಇನ್ನೂ ಸ್ವಲ್ಪ ದಿವಸ ಹೋಗಲಿ, ನಿಮಗೆ ಗೊತ್ತಾಗುತ್ತೆ."

"ಏನೋಮ್ಮ, ಇದ್ದರೂ ಇರಬಹುದು."

"ಹಾಗೆ ಹಾದಿಗ್ಬನ್ನಿ. ಓದಿರೋದು ಲೋಯರ್ ಸೆಕೆಂಡರಿ ಆದರೂನೂ ಇಂಥಾದ್ದರಲ್ಲೆಲ್ಲ ನಾನೇ ಹೆಚ್ಚು ಬುದ್ಧಿವಂತೆ. ನೆನಪಿರ್ಲಿ‌ಮ್ಮಾ!"

"ಆಕೆ ಎಷ್ಟು ಓದಿದಾಳೋ?"

"ತಿಳಿಯೋದು ಕಷ್ಟವೇ. ಕಾಲೇಜು ಗೀಲೇಜು ಎಲ್ಲಾ ಆಗಿರುತ್ತೆ, ಅಲ್ವೇನ್ರೀ?"

"ಆಗದೆ ಏನಮ್ಮಾ, ಶ್ರೀಮಂತರಿಗೆ?"

"ಮನೇಮಾತು ಯಾವುದೋ ತಿಳೀದು. ಕನ್ನಡವಲ್ದೆ ಹೋದರೆ ಅವರ ಜತೇಲಿ ಮಾತಾಡೋ ಪುಣ್ಯ ಇರೋದು ನಿಮಗೊಬ್ಬರಿಗೇನೇ!"

ಸುನಂದೆ ಹೆಚ್ಚು ಹಸನ್ಮುಖಿಯಾಗಲೆಂದೇ, ಈ ನಡುವೆ ರಾಧಮ್ಮ ಹೆಚ್ಚಾಗಿ ತಮಾಷೆಯ ಮಾತುಗಳನ್ನಾಡುತ್ತಿದ್ದರು.

ಆದರೆ ಸುನಂದೆಯ ಹೃದಯದೊಳಗಿನ ಗಾಯ, ಎಂದಿಗೂ ಮಾಯಲಾರ ದೇನೋ ಎನ್ನುವಷ್ಟು ಹಸುರಾಗಿತ್ತು. ಆ ಕಾರಣದಿಂದಲೇ, ರಾಧಮ್ಮನ ಲಘು ಹಾಸ್ಯಕ್ಕೆ ಪ್ರತಿಯಾಗಿ ಆಕೆಯಲ್ಲಿ ಮೂಡುತ್ತಿದ್ದುದು ಒಣನಗೆ ಮಾತ್ರ.

ಸುನಂದೆಯ ಮನಸ್ಸಿನ ಮೇಲೆ ಅಚ್ಚೊತ್ತಿದ್ದುದು, ಹೊಸದಾಗಿ ಬಂದ ಆ ಹೆಣ್ಣು ಜೀವ ಸುಖಿ ಎಂಬ ಅಂಶ. ಆ ತಿಳಿವಳಿಕೆಯಿಂದ ಆಕೆಯ ಹೃದಯ, ನೋವಿನ ದಾರಗಳಲ್ಲಿ ಬಿಗಿದಿದ್ದ ಸಂತೋಷದ ಅರಳೆಯಾಯಿತು. ಆಕೆ ಗರ್ಭಿಣಿ ಎಂದು ರಾಧಮ್ಮ ನೆಂದಿದ್ದರು. 'ಇರಲಾರದು' ಎಂದು ತಾನು ಹೇಳಿದಾಗ, ಆ ಉತ್ತರದ ಹಿಂದೆ ಇದ್ದ ಯೋಚನೆ ಯಾವುದು? ಆಕೆ ಗರ್ಭಿಣಿಯಾದರೆ, ತಾಯಿಯಾದರೆ, ತನ್ನ ಹಾಗೆಯೇ ಆಕೆಯ ಸುಖವೂ ಮಣ್ಣುಗೂಡಬಹುದೆಂಬ ಭಯವೆ? ಮಣ್ಣುಗೂಡಬಾರದೆಂಬ ಆಶೆಯೆ? ಸುನಂದೆಗೆ ಗೊತ್ತಿತ್ತು—ಅದೊಂದು ಅರ್ಥವಿಲ್ಲದ ಹೆದರಿಕೆ, ಎಂದು. ಸಾಮಾನ್ಯವಾಗಿ ಮಕ್ಕಳಿಲ್ಲದಿದ್ದಾಗಲೇ ಕೊರಗು. ಮಕ್ಕಳಾದಾಗ ಸಂಸಾರ ಸುಖ ಹೆಚ್ಚು ಮಧುರವಾಗುತ್ತಿತ್ತು... ತನ್ನ ಪಾಲಿಗೆ ಮಾತ್ರ ಹಾಗಾಗಿರಲಿಲ್ಲ, ಅಷ್ಟೆ...

ರಾಧಮ್ಮ ಇನ್ನೊಂದು ಸುದ್ದಿ ತಂದರು:

"ಇವರು ಬಂದಿರೋದು ಬಾಡಿಗೆಗಲ್ಲ ಸುನಂದಾ. ಅದೆಷ್ಟೋ ಸಾವಿರ ಕೊಟ್ಟು ಈ ಮನೇನ ಕೊಂಡುಕೊಂಡೇ ಬಿಟ್ಟಿದಾರಂತೆ."

"ಹಾಗೇನು?"

"ಆತ ದಂಡಿನಲ್ಲೆಲ್ಲೋ ದೊಡ್ಡ ಔಷಧಿ ಅಂಗಡಿ ಇಟ್ಟಿದಾನಂತೆ—ಕೆಮಿಸ್ಟ್ ಅಂತಾರಲ್ಲಾ? ಇಲ್ಲಿಗೆ ಬರೋದಕ್ಮುಂಚೆ ಮಲ್ಲೇಶ್ವರದಲ್ಲಿದ್ದರಂತೆ."

"ಇದೆಲ್ಲಾ ಹ್ಯಾಗ್ರೀ ತಿಳೀತು ನಿಮಗೆ?"

"ಆ ಕೊಯಮತ್ತೂರು ಕಡೆಯೋಳು ಅವರ ಮನೆ ಕೆಲಸದವಳ ಜತೇಲಿ ಮಾತಾಡಿ ಇಷ್ಟು ತಿಳಕೊಂಡು ಬಂದಿದಾಳೆ."

"ಪರವಾಗಿಲ್ಲ ಆಕೆ!"

"ಇನ್ನೊಂದು ಬೇಸರದ ಸುದ್ದಿ ಸುನಂದಾ. ಅವರ ಮನೆಮಾತು ಕನ್ನಡ

ಅಲ್ವಂತೆ....ಅದೇನೋ ರಾಗವಾಗಿರುತ್ತಲ್ಲ–ಕೊಂಕಣಿ ಅಂತಾನೋ—"

"ತಿಳೀತು ರಾಧಮ್ಮ. ಅವರು ಸಾರಸ್ವತರಿರಬೇಕು ಹಾಗಾದರೆ. ಆವತ್ತು ನೋಡಿದಾಗಲೇ ಸಂಶಯ ಬಂದಿತ್ತು. ಅವರಿಗೆಲ್ಲ ಕನ್ನಡವೂ ಬರುತ್ತೆ."

"ಆಹಾ? ಹಾಗಾದರೆ ಯಾವತ್ತು ದಾಳಿ ಮಾಡೋಣ?"

ಸುನಂದೆಯ ಮುಖ ಬಾಡಿತು. ಹಾಗೆ ಸ್ನೇಹಿತರನ್ನು ಸಂಪಾದಿಸಿಕೊಳ್ಳುವ, ತನ್ನ ಮನೆಗೆ ಬೇರೆಯವರನ್ನು ಕರೆಯುವ, ಕಾಫಿ ಕೊಡುವ ಭಾಗ್ಯ ಆಕೆಗಿತ್ತೆ?

ಸುನಂದಾ ಉಲ್ಲಾಸವಾಗಿರಲೆಂದೇ ರಾಧಮ್ಮ ಆ ಪ್ರಶ್ನೆಯನ್ನು ಕೇಳಿದ್ದಳು. ಆದರೆ ಅದು ಗುರಿ ತಪ್ಪಿತು.

"ನೀವು ಬೇಕಾದರೆ ಪರಿಚಯ ಮಾಡ್ಕೊಳ್ಳಿ ರಾಧಮ್ಮ. ನನಗೊಂದೂ ಬೇಡ."

ಆ ಕುಟುಂಬ ಜೀವನಕ್ಕೋಸ್ಕರ ಎಷ್ಟೊಂದು ಬೆಲೆ ಕೊಟ್ಟಿದ್ದಳು ಆಕೆ–ಎಷ್ಟೊಂದು ಬೆಲೆ! ಆ ಯಜ್ಞದಲ್ಲಿ ಆಕೆಯ ಆಸೆ ಆಕಾಂಕ್ಷೆಗಳೆಲ್ಲ ಸುಟ್ಟುಹೋಗಿದ್ದವು. ಎಲ್ಲ ಬಣ್ಣವನ್ನೂ ಮಸಿ ನುಂಗಿದ ಹಾಗೆ, ಆವರೆಗಿನ ಆಕೆಯ ಬೆಳವಣಿಗೆಯನ್ನೆಲ್ಲ ಇಲ್ಲವೆನಿಸಿತ್ತು ಆಗಿನ ಬದುಕು. ಈಗ ಆಕೆ, ಸ್ವಂತ ವ್ಯಕ್ತಿತ್ವವೇ ಇಲ್ಲದ ಗುಟುಕುಜೀವನವನ್ನಷ್ಟೆ ಹಿಡಿದಿದ್ದ ಮನುಷ್ಯಪ್ರಾಣಿ–ಈಯದ ಸಾಯದ ಹಸುವಿದ್ದ ಹಾಗೆ.

ಮನೆಯ ಬಾಗಿಲಿಗೆ ಬಂದರೆ ಸಾಕು, ಎದುರಿನ ದೊಡ್ಡ ಮನೆಯ ಸುಖಸಂಸಾರ ತನ್ನ ಅರ್ಥಹೀನ ಇರುವಿಕೆಯನ್ನು ಆಕೆಗೆ ನೆನಪು ಮಾಡಿ ಕೊಡುತ್ತಿತ್ತು. ಮನಸಿನೊಳಗೇ ಕೇಳಿಸಿಕೊಂಡು ಸುನಂದಾ ಉತ್ತರಿಸುತ್ತಿದ್ದಳು: ತಾನು ಬಯಸುವುದೇನನ್ನು ಹಾಗಾದರೆ? ಶ್ರೀಮಂತಿಕೆಯನ್ನೆ? ಅಲ್ಲ–ಖಂಡಿತ ಅಲ್ಲ. ತನಗೆ ಬೇಕಾದುದು ದಾಂಪತ್ಯ ಸುಖ, ಗಂಡು ಹೆಣ್ಣು ಅನ್ಯೋನ್ಯವಾಗಿರುವ ಬದುಕು. ಎದುರು ಮನೆಯ ಸಂಸಾರದಲ್ಲಿ ಅದು ಇದೆ ಎನ್ನುವ ಭರವಸೆ ಏನು? ನೋಡಿದರೆ ಗೊತ್ತಾಗುವುದಿಲ್ಲವೇನೋ? ....ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ. ಅದು ನಿಜ, ಆದರೂ ತಾನು ಕುರುಡಿ ಅಲ್ಲವಲ್ಲ. ತಾನು ತಾಯಿಯಾಗುವುದಕ್ಕೆ ಮೊದಲು ಒಂದು ರೀತಿಯಲ್ಲಿ ಅಂತಹ ಸುಖ ತನಗೂ ಇತ್ತು. ತಾಯಿಯಾದ ಮೇಲೆ ಆ ಹೆಣ್ಣು ಕೂಡ—....

ಆ ಯೋಚನೆಯೆ ಕ್ರೂರವಾಗಿತ್ತು, ಮೈ ಮುಳ್ಳಾಗುವಷ್ಟು. 'ಹಾಗಾಗದಿರಲಿ, ಹಾಗಾಗದಿರಲಿ!' ಎಂದು ಸುನಂದಾ ತನ್ನಷ್ಟಕ್ಕೆ ಅಂದುಕೊಂಡಳು.

ತನ್ನ ಗಂಡ ರಾತ್ರೆ ತಡವಾಗಿ, ಮನುಷ್ಯನಲ್ಲದ ಮನುಷ್ಯನಾಗಿ ಮನೆಗೆ ಬರುತ್ತಿದ್ದ. ಆ ಹೆಣ್ಣಿನ ಗಂಡ ಸಂಜೆಯೇ ಹಿಂತಿರುಗಿ, ಮನೆಯ ಸುತ್ತಲಿನ–ಮಹಡಿಯ ಮೇಲಿನ–ಪುಟ್ಟ ಉದ್ಯಾನದ ಆರೈಕೆ ಮಾಡುತ್ತಿದ್ದ, ಹೆಂಡತಿಯೊಡಗೂಡಿ. ಅಂಗಡಿಯ ಉಸ್ತುವಾರಿಯನ್ನು ಕೆಳನೌಕರರ ವಶಕ್ಕೊಪ್ಪಿಸಿ ಬರುತ್ತಿದ್ದನೇನೋ....ಒಂದೊಂದು ಸಂಜೆ ಇಬ್ಬರೂ ನಡೆದು ಹೋಗುತ್ತಿದ್ದರು, ವಿಹಾರಕ್ಕೆ. ಒಮ್ಮೊಮ್ಮೆ ಕಾರಿನಲ್ಲಿ, ನೆಲಕ್ಕೆ ಮುಟ್ಟಿಕೊಂಡೇ ಇರುವರೇನೋ ಎನ್ನುವಂತೆ, ಜತೆಯಾಗಿ ಹೊರಡುತ್ತಿದ್ದರು: ಪ್ರಾಯಶಃ ಸಿನಿಮಾ ನೋಡಲು, ಇಲ್ಲವೆ ಸಂಗೀತಕ್ಕೆ, ಅಥವಾ ಗೆಳೆಯರ ಮನೆಗಳಿಗೆ.

ಅವರನ್ನು ಹಾಗೆ ಕಂಡಾಗಲೆಲ್ಲಾ ಚೇಳು ಕುಟುಕಿದ ಹಾಗಾಗುತಿದ್ದರೂ ಸುನಂದೆಯ ಒಳಧ್ವನಿ ಪ್ರಾರ್ಥಿಸುತ್ತಿತ್ತು:

'ದೇವರೇ! ಅವರಿಬ್ಬರನ್ನು ಸದಾ ಕಾಲವೂ ಹಾಗೆಯೇ ಸುಖವಾಗಿಡಪ್ಪ!"

* * * *

ಒಂದು ಸಂಜೆ ರಾಮಯ್ಯನವರು ರಾಧಮ್ಮನನ್ನೂ ಮಕ್ಕಳನ್ನೂ ಕರೆದುಕೊಂಡು 'ನಳ-ದಮಯಂತಿ' ಚಲಚ್ಚಿತ್ರ ನೋಡಲು ನಿರ್ಧಾರ ಮಾಡಿದರು. ಸುನಂದೆಯನ್ನೂ ಕರೆದುದಾಯಿತು.

"ನಿಮ್ಮವರು ಬರೋದರೊಳಗೇ ಮನೆಗೆ ವಾಪಸು ಬಂದುಬಿಡಬಹುದು ಸುನಂದಾ"

—ಎಂದು ರಾಧಮ್ಮ ಆಗ್ರಹಪೂರ್ವಕವಾಗಿ ಹೇಳಿದರು.

ಗಂಡ ರೇಗಿದರೂ ಸರಿಯೆ, ಹೋಗಬೇಕು-ಎಂದು ಸುನಂದೆಗೆ ಒಮ್ಮೆ ತೋರಿತು. ಆದರೆ ಚಲಚ್ಚಿತ್ರ ನೋಡಲು ಆಕೆಗೆ ಏನೇನೂ ಮನಸ್ಸಿರಲಿಲ್ಲ. ಯಾವ ಮನೋರಂಜನೆಗೂ ಆಕೆ ಸಿದ್ಧವಿರಲಿಲ್ಲ.

ಹೊರಹೋಗಿ ಬಂದರೆ ಸುನಂದೆಯ ಹೃದಯ ಹಗುರವಾಗಬಹುದೆಂಬುದು ರಾಧಮ್ಮನ ಎಣಿಕೆಯಾಗಿತ್ತು. ಆದರೆ ಸುನಂದಾ ಹೊರಡಲೇ ಇಲ್ಲ.

ಕಳೆದ ಕೆಲ ಮಾಸಗಳ ಘಟನೆಗಳ ಕಾರಣದಿಂದ ಸುನಂದೆಗೆ ಹೆಚ್ಚು ಆತ್ಮೀಯನಾಗಿದ್ದ ಶ್ಯಾಮನೂ ಕರೆದ:

"ಬನ್ರೀ...ಬನ್ರೀ...!"

ಆಗಲೂ ಸುನಂದಾ ಬರಲು ಒಪ್ಪಲಿಲ್ಲ. ಕೊನೆಗೆ, ರಾಧಮ್ಮನ ಮನೆಯವರು ಮಾತ್ರ ಹೋದರು.

ಅವರೆಲ್ಲ ಹೋದೊಡನೆ ಸುನಂದೆಗೆ ತುಂಬಾ ಬೇಸರವಾಯಿತು. ಅಳು ಬರುವ ಹಾಗಾಯಿತು. ತಾನೂ ಹೊರಟು ಬಿಡಬೇಕಾಗಿತ್ತು-ಎಂದುಕೊಂಡಳು...

ಆಕೆ ಮಗುವನ್ನೆತ್ತಿಕೊಂಡು ಬೀದಿ ನೋಡುತ್ತ ಬಾಗಿಲ ಬಳಿ ನಿಂತಳು. ಆ ಬೀದಿಯನ್ನು ದಾಟಿದ ನಾಯಿಯನ್ನೋ ಅತ್ತ ಓಡಿದ ಮೋಟಾರನ್ನೋ ನಡೆದು ಹೋದ ಮನುಷ್ಯನನ್ನೋ ನೋಡಿದಾಗಲೆಲ್ಲ, ಪುಟ್ಟ ಮಗು ಸರಸ್ವತಿ 'ಏಯ್ ಆಯ್' ಎಂದು ಸದ್ದು ಮಾಡುತ್ತಿದ್ದಳು. ನಗುತ್ತಿದ್ದಳು. ಕೇಕೆ ಹಾಕುತ್ತಿದ್ದಳು. ತಾಯಿಯ ಎದೆಯನ್ನು ತುಳಿಯುತ್ತಿದ್ದಳು. ಕೆಳಕ್ಕಿಳಿದು ಲೋಕ ಸಂಚಾರ ಮಾಡಬೇಕೆನ್ನುವ ಆತುರ ತೋರುತ್ತಿದ್ದಳು.

ಸ್ವಲ್ಪ ಹೊತ್ತು ಮೌನವಾಗಿದ್ದಳು ಸರಸ್ವತಿ. ಒಮ್ಮೆಲೆ ಆಕೆ ತಾಯಿಯನ್ನು ನೋಡಿ ನಕ್ಕಳು. ಮತ್ತೆತ್ತಲೋ ದೃಷ್ಟಿ ಬೀರಿದಳು. ಪುನಃ ತಾಯಿಯ ಎದೆಯಲ್ಲಿ ಮುಖ ಮರೆಸಿದಳು. ಮತ್ತೆ ಕಳ್ಳ ನೋಟ ಮಗಳನ್ನು ಆಕರ್ಷಿಸಿದುದು ಯಾರೆಂದು

ಸುನಂದಾ ದೃಷ್ಟಿ ತಿರುಗಿಸಿ ನೋಡಿದಳು. ಎದುರುಮನೆಯಾಕೆ ಮಹಡಿಯ ಮೇಲೆ ನಿಂತಿದ್ದವಳು ಕೈ ಚಾಚಿ ಸರಸ್ವತಿಯನ್ನು 'ಬಾ ಬಾ' ಎಂದು ಸನ್ನೆ ಮಾಡಿ ಕರೆಯುತ್ತಿದ್ದಳು. ಸುನಂದೆಯನ್ನು ಕಂಡಾಗ ಆಕೆ ನಕ್ಕಳು. ಪ್ರತಿಯಾಗಿ ಸುನಂದೆಯೂ ಮುಗುಳುನಗಬೇಕಾಯಿತು.

ಅದು ಪೀಠಿಕೆ.

ಆಕೆ, ತಾಯಿ ಮಗಳಿಬ್ಬರನ್ನೂ ಕರೆದಳು. ಸುನಂದಾ ಮಗುವಿನ ಕಡೆಗೂ ಮನೆಯೊಳಕ್ಕೂ ಬೊಟ್ಟು ಮಾಡಿ, 'ಕೆಲಸವಿದೆ' ಎಂದು ಸಂಜ್ಞೆಯ ಭಾಷೆಯಲ್ಲಿ ತಿಳಿಸಿದಳು.

'ಬನ್ನಿ' ಎಂದು ಒತ್ತಾಯದ ಪ್ರತಿಸಂಜ್ಞೆ ಮತ್ತೂ ಬಂತು.

'ಒಲ್ಲೆ' ಎಂದೇನೋ ತಲೆಯಾಡಿಸಿ ತಿಳಿಸಿದಳು ಸುನಂದಾ. ಆದರೆ 'ಕ್ಷಮಿಸಿ' ಎಂಬ ಪದಕ್ಕೆ ಸಂಕೇತ ತಿಳಿಯಲಿಲ್ಲ.

ಆಕೆ ಮಹಡಿಯ ಮೇಲೆ ನಿಂತಿದ್ದವಳು ಒಳಹೋದಂತೆ ಕಂಡಿತು. ಸದ್ಯಃ ತಪ್ಪಿಸಿಕೊಂಡೆ—ಎಂದು ಸುನಂದೆಗೆ ಅನಿಸಿದರೂ ಬೇಸರ ಹೆಚ್ಚಿತು.

ಆದರೆ ಆ ಕ್ಷಣವೆ ಎದುರು ಮನೆಯಾಕೆ ಬೀದಿಗಿಳಿದು ಬಂದುದನ್ನು ಸುನಂದಾ ಕಂಡಳು. ತನ್ನ ಮನೆಯ ಕಡೆಗೇ ಆಕೆ ಹೊರಟಿದ್ದಂತೆ ತೋರಿತು. ಏನು ಮಾಡಬೇಕೆಂದು ತೋಚದೆ ಸುನಂದಾ ಅತ್ತಿತ್ತ ನೋಡಿ ಬಾಗಿಲೆಳೆದುಕೊಂಡು ತಾನೂ ಬೀದಿಯ ಕಡೆಗೆ ನಡೆದಳು. ಹಿತ್ತಿಲ ಗೋಡೆಯಾಚೆ ಅವರು ಸಂಧಿಸಿದರು.

ಆಕೆ ಕೈಯಲ್ಲಿದ್ದ ಪೊಟ್ಟಣದಿಂದ ಪುಟ್ಟ ಬಿಸ್ಕತ್ತನ್ನೆತ್ತಿ ಮಗುವಿನ ಬಾಯಿಗೆ ಇಡಹೋದಳು. ತಾಯಿಯತ್ತ ಒಮ್ಮೆ ನೋಡಿ ಸರಸ್ವತಿ ಬಾಯಿ ತೆರೆದಳು. ಆಕೆ ಪೊಟ್ಟಣವನ್ನು ಗೋಡೆಯ ಮೇಲಿಟ್ಟು, ಕೈ ಚಾಚಿ ಮಗುವನ್ನೆತ್ತಿಕೊಂಡಳು.

"ಸೀರೆ ಕೊಳೆಯಾಗುತ್ತೆ"

—ಎಂದಳು ಸುನಂದಾ.

"ಪರವಾಗಿಲ್ಲರೀ."

ವಿಶಿಷ್ಟ ಪದೋಚ್ಚಾರದ ಕನ್ನಡ. ಮಧುರ ಕಂಠ.

ಸುನಂದಾ ಆಕೆಯನ್ನೇ ವಾತ್ಸಲ್ಯದ ದೃಷ್ಟಿಯಿಂದ ನೋಡಿದಳು. ಆ ಸ್ವರ ಮತ್ತೂ ಕೇಳಿಸಿತು.

"ನಿಮ್ಮ ಮಗು ತುಂಬಾ ಮುದ್ದಾಗಿದೆ."

ಸುನಂದಾ ಮುಗುಳು ನಕ್ಕಳು.

"ಎಷ್ಟು ತಿಂಗಳು?"

"ಒಂಭತ್ತು ನಡೀತಿದೆ."

"ಎಷ್ಟು ಪೌಂಡು?"

ಭಾರ. ಸುನಂದೆಗೆ ಅದು ಗೊತ್ತಿರಲಿಲ್ಲ. ಅವರು ಆಗಾಗ್ಗೆ ಮಗುವಿನ ತೂಕ ನೋಡುವಷ್ಟು ಶ್ರೀಮಂತರಾಗಿರಲಿಲ್ಲ.

"ತೂಗಿಸಿ ನೋಡಿಲ್ಲವಮ್ಮ."

ಹಾಗೆ ಹೇಳಿದಾಗ ಸುನಂದೆಯ ಮುಖ ವಿವರ್ಣವಾಯಿತು. ಪ್ರಶ್ನೆ ಕೇಳಿದವಳಿಗೂ ನಿಜಸ್ಥಿತಿಯ ಅರಿವಾಗಿ, ತಾನು ಹಾಗೆ ಕೇಳಬಾರದಿತ್ತು ಎನಿಸಿತು. ಆದರೆ, ಮಾಡಿದ್ದ ಪ್ರಸ್ತಾಪವನ್ನು ಮರೆಸುವುದಕ್ಕೋ ಎಂಬಂತೆ, ಒಂದೇ ಸಮನೆ ಬೇಗ ಬೇಗನೆ ಆಕೆ ಅಂದಳು:

"ಬಹಳ ದಿವಸದಿಂದ ನಿಮ್ಮನ್ನ ಮಾತನಾಡಿಸಬೇಕೂಂತ ಇದ್ದೆ. ನೀವು ಮಾತನಾಡ್ತೀರೋ ಇಲ್ಲವೋಂತ ಸಂಶಯವಿತ್ತು. ಇವತ್ತು ನಿಮ್ಮ ಮಗುವಿನಿಂದಾಗಿ ಸಾಧ್ಯವಾಯ್ತು. ನನ್ನ ಹೆಸರು ಕುಸುಮ್. ನಿಮ್ಮ ಹೆಸರು?"

"ಸುನಂದಾ ಅಂತ."

"ಪರಿಚಯವಾದದ್ದು ಬಹಳ ಸಂತೋಷ."

ಒಂದು ಇಂಗ್ಲಿಷ್ ಪದವನ್ನೂ ಬೆರೆಸದೆ ಪ್ರಯಾಸ ಪಟ್ಟು ಆಕೆ ಮಾತನಾಡುತ್ತಿದ್ದಳು. ತನಗೆ ಇಂಗ್ಲಿಷ್ ತಿಳಿಯದೆಂದು ಹಾಗೆ ಮಾಡುತ್ತಿರಬಹುದು—ಎಂದು ಸುನಂದೆಗೆ ಅನಿಸಿತು.

"ನಿಮ್ಮ ಮಗೂಗೆ ಏನು ಹೆಸರಿಟ್ಟಿದ್ದೀರ್ರೀ?"

"ಸರಸ್ವತೀಂತ."

"ಸರಸ್ವತಿ—ಸರಸ್ವತಿ"

—ಎಂದು ಆಕೆ ಮಗುವನ್ನು ಆಡಿಸಿ ತಾಯಿಗೆ ಕೊಟ್ಟಳು. ಪೊಟ್ಟಣವನ್ನೂ ಎತ್ತಿ ಸುನಂದೆಯ ಕೈಗೆ ತುರುಕಿದಳು.

"ಛೆ! ಛೆ! ಇದೇನು ಮಾಡ್ತಿದೀರಾ?"

"ಮಗೂಗೆ. ಅದರಲ್ಲಿ ತಪ್ಪೇನು? ತಗೊಳ್ಳಿ."

ಸುನಂದೆ ಸುಮ್ಮನಿರಬೇಕಾಯಿತು.

ಕುಸುಮ ಕೇಳಿದಳು:

"ನಿಮ್ಮ ಮನೇಲಿ ಬೇರೆ ಹೆಂಗಸರು ಯಾರೂ ಇಲ್ಲಾಂತ ಕಾಣುತ್ತೆ."

"ಇಲ್ಲ."

"ಪಕ್ಕದ ಮನೆಯವರು ಎಲ್ಲಿಗೆ ಹೋಗಿದ್ದಾರೆ?"

"ಸಿನಿಮಾಕ್ಕೆ ಹೋದರು."

"ಓ! ಅವರ ಹೆಸರು?"

"ರಾಧಮ್ಮ ಅಂತ."

"ಆಗಲಿ ಸುನಂದಮ್ಮ. ಇವತ್ತಿಗಿಷ್ಟು ಸಾಕು... ಹಗಲು ಹೊತ್ತು ಒಬ್ಬರೇ ಇರ್ತೀರಲ್ಲ—ನಮ್ಮನೆಗೆ ಬನ್ನಿ."

ಆ ಮನೆಗಳಲ್ಲಿ ರೇಡಿಯೋ ಇರಲಿಲ್ಲವೆಂದು ಕುಸುಮಳಿಗೆ ಗೊತ್ತಿತ್ತು. 'ನಮ್ಮನೇಲಿ ರೇಡಿಯೋ ಇದೆ, ಸಂಗೀತ ಕೇಳಬಹುದು' ಎಂದು ಹೇಳುವುದರಲ್ಲಿದ್ದಳು ಆಕೆ.

ಆದರೆ ಅದು ಔಚಿತ್ಯವಲ್ಲವೆಂದು ಸುಮ್ಮನಾದಳು.

"ಆಗಲಿ ಯಾವಾಗಲಾದರೂ ಬರ್ತೀನಿ."

"ಅವರನ್ನೂ–ರಾಧಮ್ಮನವರನ್ನೂ–ಕರಕೊಂಡು ಬನ್ನಿ."

"ಆಗಲಿ ಆಗಲಿ."

"ಮಗೂನ ಮನೇಲೆ ಬಿಟ್ಟು ಬರಿ ಕೈಯಲ್ಲೆ ಬರಬೇಡಿ, ಹಾಂ!"

ಸುನಂದೆಗೆ ನಗುಬಂತು. ಕುಸುಮಳೂ ಕುಲುಕುಲು ನಕ್ಕಳು.

ಮತ್ತೆ ಯೋಚನೆ ಆ ಸಂಸಾರದತ್ತ ಸುಳಿದು, ಸುನಂದಾ ಕೇಳಿದಳು:

"ಇವತ್ತೇನು ಎಲ್ಲಿಗೂ ಹೋಗಲ್ವೆ?"

ತಾನು ಗಂಡನ ಜತೆ ಹೊರಡುವುದನ್ನೆಲ್ಲ ಇವರು ನೋಡುತ್ತಿರುತ್ತಾರೆ —ಎಂಬುದು ಕುಸುಮಳಿಗೆ ಸ್ಪಷ್ಟವಾಯಿತು. ಅದರಿಂದ ಸಂತೋಷವೆನಿಸಿತು.

"ಇಲ್ಲರೀ. ಅವರು ಇವತ್ತು ಬರುವಾಗ ತುಂಬಾ ತಡವಾಗ್ತದೇಂತ ಹೇಳಿ ಹೋಗಿದ್ದಾರೆ."

ಮುಂದೆ ತನ್ನ ಗಂಡನ ವಿಷಯ ಕೇಳದೆ, ಅಷ್ಟರಲ್ಲೆ ಮೌನತಳೆದ ಸುನಂದೆಯನ್ನು ಕಂಡು, ಆಕೆಗೆ ಆಶ್ಚರ್ಯವೆನಿಸಿತು. ಆಕೆಯೇ ಮುಂದುವರಿಸಿದಳು:

"ನಿಮ್ಮ ಮನೆಯವರು ಬರುವಾಗ ಯಾವಾಗಲೂ ತಡವಾಗ್ತದೆ, ಅಲ್ಲ?"

ಸುನಂದಾ ಮಾತು ಮುಗಿಸಲು ಆತುರ ತೋರಿದಳು.

"ಹೌದು ಕಣ್ರೀ. ಅವರಿಗೆ ಬಹಳ ಕೆಲಸ...ಕತ್ತಲಾಗ್ತಾ ಬಂತು. ಬರ್ತೀನಿ..."

ಹೀಗೆ ಹೇಳಿ ಸುನಂದಾ ಆಕೆಗೆ ನಮಿಸಿ ಹೊರಟೇ ಬಿಟ್ಟಳು.

ಆ ಅವಸರ ಅರ್ಥವಾಗದೇ ಇದ್ದರೂ 'ಇಷ್ಟಾದರೂ ಮಾತನಾಡಿದಳಲ್ಲ, ಒಳ್ಳೆಯವಳು' ಎನ್ನುತ್ತಾ ಕುಸುಮ ತನ್ನ ಮನೆಯತ್ತ ನಡೆದಳು.

* * * *

ಸುನಂದಾ ಅಡುಗೆ ಮನೆಗೆ ಹೋಗಿ ದೀಪ ಹಚ್ಚಿದಳು. ಕಿಟಿಕಿ ಮುಚ್ಚೋಣವೆಂದು ಹೊರಟಾಗ, ಅದರಾಚೆ ಆ ಭಾಗದಲ್ಲಿ ಖಾಲಿ ಜಾಗದಲ್ಲಿ ಕೊಯಮತ್ತೂರು ಕಡೆಯವರು ಕಟ್ಟಿಕೊಂಡಿದ್ದ ಹಟ್ಟಿಯಿಂದ ಆ ಹೆಂಗಸಿನ ರೋದನ ಕೇಳಿಸಿತು: "ಅಯ್ಯಯ್ಯೋ! ಅಯ್ಯಯ್ಯೋ" ಕರುಳು ಕತ್ತರಿಸುವ ಹಾಗೆ, ಕಿವಿಯೊಡೆಯುವ ಹಾಗೆ. "ಸಾಯಿ! ಸಾಯಿ!" ಎನ್ನುತ್ತ ಆಕೆಯ ಗಂಡ ಸೌದೆಯ ತುಂಡೊಂದನ್ನೆತ್ತಿಕೊಂಡು ಆಕೆಗೆ ಹೊಡೆಯುತಿದ್ದ. "ಕುಡಿದು ಬಂದು ನನಗೆ ಹೊಡೀತೀಯಾ ಬೋಳೀ ಮಗನೆ!" ಎಂದು ಆಕೆ ಬಯ್ದಳು. ಆ ಬಯ್ಗುಳಿಗೆ ದೊರೆತ ಪ್ರತಿಫಲಕ್ಕೆ ಪ್ರತಿಕ್ರಿಯೆಯಾಗಿ, "ಕೊಂದ್ಹಾಕ್ತಾನಲ್ಲಪ್ಪಾ–ಯಾರಾದರೂ ಬಂದು ಬಿಡಿಸೀಪ್ಪಾ ಪರಮಾತ್ಮಾ!" ಎಂಬ ಆರ್ತನಾದ.

ಸುನಂದಾ ಅಸಹಾಯಳಾಗಿ ಉಸಿರುಬಿಗಿಹಿಡಿದು ಕಿಟಿಕಿಯ ಎಡೆಯಿಂದ ನೋಡಿದಳು. ಆಕೆಯ ರಕ್ಷಣೆಗೆ ಪರಮಾತ್ಮನೂ ಬರಲಿಲ್ಲ; ಪರಮಾತ್ಮನ ಸಂತಾನಗಳಾದ

ಮನುಷ್ಯರೂ ಬರಲಿಲ್ಲ. ಕುಡಿದ ಗಂಡನೇ ಕೈ ಸೋತು ಸುಮ್ಮನಾಗಿ, ಸೌದೆಯನ್ನೆಸೆದು, ಹೆಂಡತಿಯನ್ನು ಗಟ್ಟಿಯಾಗಿ ಬಯ್ಯುತ್ತ ಬೀದಿಗಿಳಿದು ಹೊರಟು ಹೋದ.

ಆಕೆಯೂ ಬಹಳ ಹೊತ್ತು ಆತನನ್ನು ಶಪಿಸುತ್ತ ಕೂಗಾಡಿದಳು. ಅವರ ಹೆಣ್ಣು ಮಗು, ಹೆದರಿ ಅವಿತಿದ್ದ ಮೂಲೆಯಿಂದ ಹೊರಬರಲೇ ಇಲ್ಲ.

ಮೈಯ ರಕ್ತ ಸಂಚಾರವೆಲ್ಲ ಸ್ವಲ್ಪ ಹೊತ್ತು ಹೆಪ್ಪು ಕಟ್ಟಿದಂತಾಯಿತು ಸುನಂದೆಗೆ.

## ೧೩

ಒಂದು ಬೆಳಗ್ಗೆ ಇದ್ದಕ್ಕಿದ್ದಂತೆ ಸುನಂದೆಯ ತಂದೆ ಬಂದಿಳಿದರು. ಆಫೀಸಿಗೆ ಹೊರಡುವ ಸನ್ನಾಹದಲ್ಲಿದ್ದ ಪುಟ್ಟಣ್ಣ. ಮಾವನನ್ನು ಕಂಡವನೇ ಹುಬ್ಬು ಗಂಟಿಕ್ಕಿದ.

ಅವರು ಅಂತಹ ಸ್ವಾಗತವನ್ನು ನಿರೀಕ್ಷಿಸಿರಲಿಲ್ಲ. ಆದರೂ ಹಿರಿಯನಾದ ತನ್ನ ಮೇಲೆಯೇ ಹೆಚ್ಚಿನ ಜವಾಬ್ದಾರಿ ಎಂದು ಭಾವಿಸಿ, ಅಳಿಯನನ್ನು ನೋಡಿ ಮುಗುಳ್ನಕ್ಕರು.

"ಚೆನ್ನಾಗಿದೀರೇನಪ್ಪ?"

—ಎಂದು ಅವರೇ ಅಳಿಯ ದೇವರನ್ನು ಕೇಳಿದರು.

"ಹೂಂ"

—ಎಂದು ತುಟಿ ತೆರೆಯದೆಯೇ ಸ್ವರ ಹೊರಡಿಸಿದ ಪುಟ್ಟಣ್ಣ.

ಮಾವ ಈಗ ಯಾಕೆ ಬಂದಿರಬಹುದು? ಎಂಬ ಪ್ರಶ್ನೆಗೆ ಆತನ ಮನಸ್ಸಿನಲ್ಲಿ ದೊರೆತ ಉತ್ತರ ಒಂದೇ:

ಸುನಂದಾ ಕಾಗದ ಬರೆದು ತನ್ನ ಮೇಲೆ ಚಾಡಿ ಹೇಳಿ ಕರೆಸಿಕೊಂಡಿರಬೇಕು.

ಹಿಂದೆಯೇ, ಆಕೆ ತಂದೆಗೆ ಕಾಗದ ಬರೆದಿರಬಹುದೆಂಬ ಬಗ್ಗೆ ಆತನಿಗೆ ಸಂದೇಹವಿರಲಿಲ್ಲ. ಉತ್ತರವೇನಾದರೂ ಬಂದಿದೆಯೇನೋ ಎಂದು ಆತ ಹುಡುಕಿಯೂ ಇದ್ದ. ಆದರೆ ಯಾವುದೂ ದೊರೆತಿರಲಿಲ್ಲ. ಅಂತೂ ಮಾವ ಇಷ್ಟು ತಡವಾಗಿ ಬಂದುದು ಸ್ವಲ್ಪ ಮಟ್ಟಿಗೆ ಆಶ್ಚರ್ಯವೇ ಆಗಿತ್ತು.

ಆತನಿಗೆ ತನ್ನ ಹೆಂಡತಿಯ ತಂದೆಯನ್ನು ಅವಮಾನಿಸುವ ಮನಸ್ಸಾಯಿತು.

"ಬೆಳಗ್ಗಿನ ರೈಲಲ್ಲಿ ಬಂದಿರಾ?"

'ಬಂದಿರಾ ಮಾವ?' ಎಂದು ಕೇಳಿರಲಿಲ್ಲ. ಅದನ್ನು ಆತನ ಮಾವ ಗಮನಿಸಿ ಅಂದರು:

"ಹೌದು. ಈಗ ತಾನೇ ಬಂದೆ."

"ನಿಮ್ಮ ಮಗಳು–ಮೊಮ್ಮಗಳನ್ನು ನೋಡ್ಕೊಂಡು ಹೋಗೋಕೆ ಬಂದಿರಾ?"

ಆ ಪ್ರಶ್ನೆ ಕೇಳಿ ಸುನಂದೆಯ ತಂದೆಗೆ ದಂಗು ಬಡಿದ ಹಾಗಾಯಿತು. ಅವರು ಬಿರುನೋಟದಿಂದ ಪುಟ್ಟಣ್ಣನನ್ನು ನೋಡುತ್ತ ಹೇಳಿದರು:

"ಹೂಂ. ಹಾಗೆಯೇ ಅಳಿಯನನ್ನೂ ನೋಡ್ಕೊಂಡು ಹೋಗೋಣಾಂತ ಬಂದೆನಪ್ಪ. ಫಾಧರ್-ಇನ್-ಲಾ ನೋಡಿ. ಕಾನೂನು ಪ್ರಕಾರ ಮಾವನಿಗೊಂದು ಅಧಿಕಾರವಿದೆಯಲ್ಲ ಅಳಿಯನ ಮೇಲೆ!"

ಅಷ್ಟು ಹೇಳಿ ಪರಿಸ್ಥಿತಿಯನ್ನು ಹಗುರಗೊಳಿಸೋಣವೆಂದು ಅವರು ನಕ್ಕರು.

ಆದರೆ ಪುಟ್ಟಣ್ಣ ನಗಲಿಲ್ಲ. ಮುದುಕ ವಿಚಾರಣೆಗೆ ಬಂದಿರುವನೆಂಬ ಆತನ ಸಂದೇಹ ಮಾವನ ಮಾತು ಕೇಳಿದಾಗ ಬಲವಾಯಿತು.

ಬೂಟ್ಸಿನ ದಾರ ಬಿಗಿದು, ಎರಡು ಸಾರೆ ಡಬಡಬೆಂದು ನೆಲಕ್ಕೆ ಮೆಟ್ಟಿ ಪುಟ್ಟಣ್ಣ ಹೇಳಿದ:

"ಧಾರಾಳವಾಗಿ ಚಲಾಯಿಸಿ ಅಧಿಕಾರಾನ!"

ಇಷ್ಟು ಹೇಳಿ ಆತ ಬಾಗಿಲಿನತ್ತ ನಡೆದ.

"ಇವತ್ತು ಊಟ ಕಳಿಸ್ಬೇಕಾದ್ದಿಲ್ಲ"

—ಎಂದು, ಪ್ರಾಜ್ಞಾಶೂನ್ಯಳಾಗಿ ಈ ದೃಶ್ಯವನ್ನು ನೋಡುತ್ತ ನಿಂತಿದ್ದ ಹೆಂಡತಿಯತ್ತ ತಿರುಗಿ ಹೇಳಿ, ಹೊರಕ್ಕೆ ಹೊರಟೇ ಹೋದ.

ಸುನಂದಾ ಸಂಕಟ ದುಃಖ ತಡೆಯಲಾರದೆ ಅಡುಗೆ ಮನೆಗೆ ನಡೆದಳು. ತಮ್ಮ ಕಣ್ಣುಗಳನ್ನು ತಾವೇ ನಂಬಲಾರದೆ ಹೋದ ಆಕೆಯ ತಂದೆ, ಮಗಳನ್ನು ಹಿಂಬಾಲಿಸಿದರು. ಕಾಲುಗಳಲ್ಲಿದ್ದ ಚಪ್ಪಲಿ ಕಳಚುತ್ತ ಜತೆಯಲ್ಲೇ ತೊಟ್ಟಿಲಲ್ಲಿದ್ದ ಮಗುವನ್ನು ನೋಡುತ್ತ, ತಾವೂ ಅಡುಗೆ ಮನೆಯನ್ನು ಹೊಕ್ಕರು.

"ಸುನಂದಾ! ಸುನಂದಾ!"

ಸುನಂದೆ, ಗೋಳೋ ಎಂದು, ತಾಯಿ ತಂದೆಗೋಸ್ಕರ ಕೂಡಿಟ್ಟಿದ್ದ ಕಂಬನಿಯನ್ನೆಲ್ಲ ಹರಿಯಗೊಟ್ಟಳು.

ತಂದೆ ಮಗಳ ಬಳಿಸಾರಿ ತಲೆ ನೇವರಿಸಿದರು.

"ಸುಂದಾ, ಸುಂದಾ..."

ಅದು, ಹಿರಿಯ ಮಗಳು ಎಂಬ ಪ್ರೀತಿಯಿಂದ ತಂದೆಯೇ ಇಟ್ಟಿದ್ದ ಹೆಸರು. ಗಂಡನಿಗೆ ಅದರ ಉಪಯೋಗವೇ ಬಿದ್ದಿರಲಿಲ್ಲ. ಈಗ ಮಮತೆಯ ಮಧುರ ನೆನಪುಗಳು ಮರುಕಳಿಸುವಂತೆ ಮಾಡುವ ಆ ಪದ ಆಕೆಯ ಕರ್ಣರಂಧ್ರಗಳೆದುರು ಕುಣಿಯಿತು. ಪರಿಣಾಮವಾಗಿ ಹೃದಯದ ಸಂಕಟ ಇಮ್ಮಡಿಯಾಯಿತು. ಕಣ್ಣೀರಿನ ಪಾತ್ರೆಯಲ್ಲಿ ಇನ್ನೂ ಉಳಿದಿದ್ದುದನ್ನು ಹೊರಕ್ಕೆ ಚೆಲ್ಲಲೆಂದು ಸುನಂದಾ, ಮತ್ತೂ ಗಟ್ಟಿಯಾಗಿ ಅತ್ತಳು.

ಆ ಮಹಾಪೂರ ಇಳಿಯಲು ಹೆಚ್ಚು ಹೊತ್ತು ಹಿಡಿಯಲಿಲ್ಲ.

ತಂದೆ ಶೋಕಪೂರ್ಣ ಧ್ವನಿಯಲ್ಲಿ ಕೇಳಿದರು:

"ನಾವೇನು ಸತ್ತು ಹೋಗಿದೀವಾ ಸುಂದಾ? ವಿಷಯ ಬರೀಬಾರದಾಗಿತ್ತಾ? ಏನಾಯ್ತಮ್ಮ?"

ಏನು–ಎಂದು ಹೇಳಬೇಕು ಆಕೆ? ಹೇಳುವುದಾದರೂ ಯಾವುದನ್ನು? ಬೆನ್ನು ಎದೆ ತೊಡೆಗಳಲ್ಲಿ ಗಾಯದ ಕಲೆಗಳು ಇನ್ನೂ ಇದ್ದುವು. ಅವುಗಳನ್ನು ಆತನಿಗೆ ತೋರಿಸಬೇಕೆ? ಬೆನ್ನನ್ನಷ್ಟು ತೋರಿಸಿದರಾಯಿತು; ಹೆತ್ತವನಲ್ಲವೆ?–ಎಂದಿತು ಮನಸ್ಸು. ಹೇಡಿಯಾಗಿ ಅಬಲೆಯಾಗಿ ಏಟು ತಿಂದ ಮೇಲೆ ಅದನ್ನು ಹೇಳುವುದಾದರೂ ಯಾಕೆ?–ಎಂದು ಅದೇ ಮನಸ್ಸು ಮರು ಪ್ರಶ್ನೆಯನ್ನೂ ಕೇಳಿತು. ಈ ವಿಚಾರಗೊಂದಲದ ಫಲವಾಗಿ ಆಕೆ ಏನನ್ನೂ ಹೇಳಲಿಲ್ಲ.

ಹೆತ್ತ ತಂದೆಗೆ, ಮಗಳು ಬರೆದಿದ್ದ ಕಾಗದಗಳು ನೆನಪಾದುವು. ಮೊಮ್ಮಗಳ ಕಾಹಿಲೆಯ ವಿಷಯ ಒಮ್ಮೆ ಬಂದಿತ್ತು. ಅದರಲ್ಲೊಂದು ಮಾತಿತ್ತು–'ಜೀವನ ಎಂಬುದು ನಾನು ಭಾವಿಸಿದ್ದಷ್ಟು ಸುಲಭವಲ್ಲ' ಎಂದು. 'ಯಾವುದೋ ಮಾತಿನ ವಿರಸವಾಗಿರಬೇಕು; ಅದಕ್ಕೋಸ್ಕರ ಹೀಗೆ ಬರೆದಿದ್ದಾಳೆ—' ಎಂದು ಅವರು ಸುಮ್ಮನಾಗಿದ್ದರು. ಅನಂತರ ಸುನಂದಾ ತನ್ನ ತಂಗಿಗೆ ಕಾಗದ ಬರೆದಿದ್ದಳು. ಅದು ತನಗೆ ಓದಲು ದೊರೆತಿರಲಿಲ್ಲ. 'ಅಕ್ಕ ಏನೋ ಬೇಸರದಲ್ಲಿದಾಳೆ ಅಪ್ಪಾ' ಎಂದಷ್ಟೆ ಕಿರಿಯ ಮಗಳು ಹೇಳಿದ್ದಳು. ಆ ಬೇಸರದ ಸ್ವರೂಪ ಇಂತಹದಿರಬಹುದೆಂದು ಅವರು ಕನಸಿನಲ್ಲೂ ಎಣಿಸಿರಲಿಲ್ಲ.

ಕಿರಿಯ ಮಗಳಿಗೆ 'ವರ ಸಂಧಾನ' ನಡೆಸುವುದಕ್ಕೋಸ್ಕರ ಅವರು ಬೆಂಗಳೂರಿಗೆ ಹೊರಟು ಬಂದಿದ್ದರು–ಹೊಸ ಅಳಿಯನನ್ನು ಹುಡುಕಿಕೊಂಡು. ಆದರೆ ಹಳೆಯ ಅಳಿಯ ಎಂದೂ ಮರೆಯಲಾಗದಂತಹ ಅದ್ಭುತ ಸ್ವಾಗತವನ್ನು ಅವರಿಗೆ ನೀಡಿದ್ದ.

ಅವರು ಆಳವಾಗಿ ನಿಟ್ಟುಸಿರು ಬಿಟ್ಟರು. ಒದಗಿ ಬಂದುದು ಎಂತಹ ಗಂಡಾಂತರವೆಂದು ತಿಳಿಯುವ ಕುದಿತ ಶಮನವಾಗಿರಲಿಲ್ಲ.

ಸುನಂದಾ ಮೆಲ್ಲನೆ ಸುಧಾರಿಸಿಕೊಂಡು ತಂದೆಗೋಸ್ಕರ ಕಾಫಿ ಮಾಡಲು ಒಲೆಯ ಬಳಿಗೆ ಸರಿದಳು.

ನಡುಗುತ್ತಿದ್ದ ಸ್ವರದಲ್ಲಿ ತಂದೆಯೆಂದರು:

"ನನಗೆ ಕಾಫೀನೂ ಬೇಡ, ಏನೂ ಬೇಡ. ಅದೇನು ಸುಡುಗಾಡೋ ಬಾಯಿ ಬಿಟ್ಟು ಹೇಳಮ್ಮ ಸದ್ಯಃ."

ಸುನಂದಾ, ಒಲೆಯ ಉರಿ ಸರಿಪಡಿಸುತ್ತ ಕಾಫಿ ಮಾಡುತ್ತಲೇ, ತನ್ನ ಕಥೆಯನ್ನು ಹೇಳಿದಳು–ಚುಟುಕಾಗಿ, ಮೊಟಕಾಗಿ. ಆತ ತಡವಾಗಿ ಮನೆಗೆ ಬರುವುದು ದುಡ್ಡಿಟ್ಟು ಆಡುವುದು, ವಿನಾಕಾರಣ ರೇಗುವುದು–ಇಷ್ಟೆ.

"ಪೂರ್ತಿ ಹೇಳು ಸುಂದಾ. ಬಚ್ಚಿಡ್ಬೇಡ. ಆತ ನಿನಗೆ ಗಂಡನಾದರೆ, ನಾನು ನಿನಗೆ ತಂದೆ. ಇದ್ದುದನ್ನ ಇದ್ದ ಹಾಗೆಯೇ ಹೇಳು"

—ಎಂದು ಅವರು ಉಗುಳು ನುಂಗುತ್ತ ಅಂದರು.

ಆ ಬಳಿಕ, ಕುಡಿಯುವ ಚಟ—

"ಕುಡಿಯೋದು ಮಾತ್ರಾನೊ? ಹೊಡಿಯೊಲ್ವೊ?"

ಅದಕ್ಕೆ ಉತ್ತರ, ಒಂದೇಸಲ ಬಿಕ್ಕಿದ ಅಳು.

"ಸೂಳೇಮನೆಗೂ ಹೋಗ್ತಾನೆ ಅನ್ನು."

ಈಗ ಸುನಂದಾ ಎಚ್ಚರಗೊಂಡಳು.

"ಇಲ್ಲವಪ್ಪಾ, ಅದಿಲ್ಲವಪ್ಪಾ—"

"ನನಗೆ ಹೇಳ್ತೀಯೇ ನೀನು? ಗಂಡಸರ ವಿಷಯ ನನಗೆ ಹೇಳ್ಕೊಡ್ತೀಯೇನಮ್ಮ?"

"ಅಷ್ಟೂ ನನಗೆ ಗೊತ್ತಾಗಲ್ವೆ ಅಪ್ಪಾ?"

"ಅದೇನು ಗೊತ್ತಾಗುತ್ತೊ? ಅಂತೂ ಇಲ್ಲಿ ತನಕ ಬಂತು ನಮ್ಮ ರಾಮಾಯಣ. ಹೂಂ....ನನಗೂ ಬರೀದೆ, ನೀನೂ ಏನೂ ಮಾಡ್ದೆ, ಒಟ್ಟು ಹಾಳಾಗಿ ಹೋಯ್ತು."

ಒಂದು ಕ್ಷಣ, ತಂದೆಗೆ ತಾನು ಬರೆಯದೆ ಇದ್ದುದು ತಪ್ಪಾಯಿತೇನೊ ಎನ್ನಿಸಿತು ಸುನಂದೆಗೆ. ....ಆದರೆ, ಬರೆದು ತಿಳಿಸಿದ್ದರೂ ಅವರು ಬಂದು ಏನು ಮಾಡುವುದು ಸಾಧ್ಯವಿತ್ತು?

"ಮಗೂಗೋಸ್ಕರ ಸಹಿಸ್ಕೊಂಡೆ ಅಪ್ಪಾ....ನಮ್ಮ ಸಂಸಾರದ ವಿಷಯ ಬೀದಿ ಮಾತಾಗ್ಬಾರದು, ನಾನು ಹುಟ್ಟಿದ ಮನೆಗೆ ಕೆಟ್ಟ ಹೆಸರು ಬರಬಾರದು, ಅಂತ ಸಹಿಸ್ಕೊಂಡೆ."

ಅಳಿಯನ ಮೇಲಿನ ಸಿಟ್ಟಿನಿಂದ ಹಲ್ಲು ಕಡಿಯುತ್ತಿದ್ದ ಆಕೆಯ ತಂದೆ, ಮಗಳ ಈ ಮಾತು ಕೇಳಿ ಅಪ್ರತಿಭರಾದರು. ಏನೂ ತಿಳಿಯದ ಹುಡುಗಿಯಾಗಿರಲಿಲ್ಲ ಆ ಮಗಳು. ಲೋಕಾನುಭವ ಸಂಸ್ಕಾರ, ಆ ಮಾತಿಗೆ ಹಿನ್ನೆಲೆಯಾಗಿದ್ದುವು.

ಮಗಳು ಒಪ್ಪಿಸಿದ ವೃತ್ತಾಂತವನ್ನೆಲ್ಲ ಕೇಳಿ ಅವರ ಹೃದಯ ಭಾರವಾಯಿತು.

"ಎಲ್ಲಾ ನಮ್ಮ ಕರ್ಮ"

—ಎಂದು ಅಸಹಾಯತೆಯಿಂದ ಅವರು ಬಿಸುಸುಯ್ದರು.

ತಂದೆಗೆ ಇಷ್ಟೆಲ್ಲ ಹೇಳಿದ ಮೇಲೆ ಸುನಂದೆಯ ಹೃದಯ ಹಗುರವಾಯಿತು. ತಂದೆಗೆ ಆಕೆ ಕಾಫಿ ಕೊಟ್ಟಳು. ಎಚ್ಚರಗೊಂಡು ತಾಯಿಯನ್ನು ಹುಡುಕುತ್ತ ಅಂಬೆಗಾಲಿಡುತ್ತ ಅಡುಗೆಮನೆಗೆ ಬಂದ ಮಗಳನ್ನು, 'ತಾತ ಬಂದಿದಾರೆ ಕಣೇ' ಎಂದು, ತನ್ನ ತಂದೆಯ ವಶಕ್ಕೊಪ್ಪಿಸಿದಳು. ರೈಲು ಪ್ರಯಾಣದಿಂದ ಬಳಲಿ ಬಂದಿದ್ದವರಿಗೆ ಸ್ನಾನಕ್ಕಾಗಿ ಸಿದ್ಧತೆಮಾಡಿದಳು.

....ಊಟ ಸೇರದೆ ಇದ್ದರೂ ಮಗಳು ಪ್ರೀತಿಯಿಟ್ಟು ಬಡಿಸಿದುದನ್ನು ಅವರು ನಿರಾಕರಿಸಲಿಲ್ಲ.

ಅವರು ಬಂದ ಮುಖ್ಯ ಕೆಲಸ ಹಾಗೆಯೇ ಉಳಿದಿತ್ತು. ಮಗಳಿಗೆ ಅವರೆಂದರು:

"ಕೂಡಿಬರುತ್ತೋ ಇಲ್ವೋ ನನಗೆ ಗೊತ್ತಿಲ್ಲ. ಹುಡುಗೀನ ನೋಡಬೇಕೂಂತ ಅವರು ಅಂದರೆ, ಮುಂದಿನ ವಾರ ವಿಜಯಾನ್ನ ಕರಕೊಂಡು ಬರ್ತ್ತೀನಿ. ...ಅದಕ್ಕಿಂತ ಮುಖ್ಯವಾಗಿ, ನಿನ್ನ ಗಂಡನ್ನ ಕಂಡು ಮಾತಾಡ್ತೀನಿ."

ಸುನಂದಾ ಕೇಳಿದಳು:

"ಏನು ಮಾತಾಡ್ತೀಯ ಅಪ್ಪಾ?"

"ಭಗವಂತ ಅದೇನು ಬುದ್ಧಿ ಕೊಡ್ತಾನೋ ಅದನ್ನ ಮಾತಾಡ್ತೀನಿ ಸುಂದಾ. ಹೆದರಬೇಡ. ನಿನ್ನ ಮತ್ತು ಈ ಕಂದಮ್ಮನ ಸುಖ ಮರೆತು ಯಾವತ್ತೂ ಮಾತಾಡೊಲ್ಲ."

"ಊರಿಗೆ ಇವತ್ತೇ ಹೊರಡ್ತೀಯಾ?"

"ಹೂಂ. ರಾತ್ರೆ ಗಾಡೀಲೆ ಹೊರಡ್ತೀನಿ. ಅದಕ್ಕುಂಚೆ ಇಲ್ಲಿಗೆ ಬಂದು ಹೋಗ್ತೀನಿ."

* * * *

ಅವರು ಹೊರಟುಹೋದ ಸ್ವಲ್ಪ ಹೊತ್ತಿನಲ್ಲೆ ರಾಧಮ್ಮ ಬಂದರು. ಪ್ರಸನ್ನ ಚಿತ್ತಳಾಗಿ ಕುಳಿತಿದ್ದ ಸುನಂದೆಯನ್ನು ಕಂಡು ಅವರಿಗೆ ಸಂತೋಷವಾಯ್ತು. ರಾಧಮ್ಮ ಪ್ರಶ್ನೆ ಕೇಳುವುದಕ್ಕೆ ಮುಂಚಿತವಾಗಿ ಸುನಂದೆಯೇ ಅಂದಳು:

"ನಮ್ಮ ತಂದೆ ಬಂದಿದ್ರು ರಾಧಮ್ಮ."

"ನೋಡ್ದೆ. ಅವರಿಗೆಲ್ಲ ಹೇಳಿದಿರಾ?"

"ಸ್ವಲ್ಪ ಹೇಳ್ದೆ. ಸ್ವಲ್ಪ ಊಹಿಸ್ಕೊಂಡ್ರು......ಸಾಮಾನ್ಯವಾಗಿ ಹುಡುಗೀನ ಮದುವೆಮಾಡಿ ಕೊಟ್ಮೇಲೆ ಹೆತ್ತವರ ಭಾರ ಇಳಿಯುತ್ತೆ; ನಾನು ಮಾತ್ರ ಇನ್ನೂ ಹೊರೆಯಾಗಿಯೇ ಇದೀನಿ. ಅಲ್ವೆ ರಾಧಮ್ಮ?"

ಅಳಿಯ–ಮಾವನ ಭೇಟಿಯಿಂದ ಸುನಂದೆಗೆ ಹಿತವಾಗುವಂಥದು ಏನಾದರೂ ಇದೆಯೇ ಎಂದು ರಾಧಮ್ಮ ಲೆಕ್ಕ ಹಾಕಿದರು.

"ನಿಮ್ಮವರ್ನ ನೋಡ್ಕೊಂಡು ಹೋಗ್ತಾರಾ?"

"ಹೂಂ ರಾಧಮ್ಮ. ನನ್ನ ತಂಗಿಗೆ ವರ ನೋಡೋಕೆ ಅಂತ ಬಂದ್ರು. ಬಂದವರಿಗೆ ಈ ಕೆಲಸಾನೂ ಕೊಟ್ಟೆ."

## ೧೪

ಸುನಂದೆಯ ತಂಗಿ ವಿಜಯಾಗೆ ವರ ಗೊತ್ತುಮಾಡುವ ಕೆಲಸ ಕೈಗೂಡಲಿಲ್ಲ. ಹುಡುಗಿಯುನ್ನು ನೋಡುವ ಮಾತಿಗೆ ಮುಂಚೆಯೇ ವರನ ಕಡೆಯಿಂದ ಸವಾಲು ಬಂದಿತ್ತು.

"ಅಳಿಯನನ್ನ ಉಚ್ಚೆ ವ್ಯಾಸಂಗಕ್ಕೆ ಅಮೆರಿಕಾಕ್ಕೆ ಕಳುಹಿಸೋಕೆ ಸಿದ್ಧವಾಗಿದ್ದೀರೇನು?"

ಅವರು ಸಿದ್ಧವಾಗಿರಲಿಲ್ಲ. ತಾನು ಬಡವ ಎಂದು ಆ ಜನರೆದುರು ಗೋಗರೆಯಲು ಬಯಸದೆ, ಎದ್ದು ಬಂದರು.

ಅಲ್ಲಿಂದ ಅವರು ಪುಟ್ಟಣ್ಣನ ಆಫೀಸಿಗೆ ನಡೆದರು. ಆಫೀಸು ಮುಗಿಯಲು ಇನ್ನೂ ಹೊತ್ತಿತ್ತು. ನ್ಯಾಯಸ್ಥಾನದ ಆವರಣದಲ್ಲಿ ಕಕ್ಷಿಗಾರರು ಕಾದಿರುವಂತೆ, ಅಲ್ಲೆ ಸ್ವಲ್ಪ ದೂರದಲ್ಲಿದ್ದ ಮರದ ನೆರಳಿನಲ್ಲಿ ಕಲ್ಲು ಬೆಂಚಿನ ಮೇಲೆ ಕುಳಿತರು.

ಐದು ಘಂಟೆಗೆ ಸರಿಯಾಗಿ ಕುಳಿತಲ್ಲಿಂದೆದ್ದು ಆ ಕಟ್ಟಡದ ಹೆಬ್ಬಾಗಿಲ ಬಳಿ, ಅಳಿಯನಿಗಾಗಿ ಮಾವ ಕಾದು ನಿಂತರು.

ಮೆಟ್ಟಲಿಳಿಯುತ್ತಿದ್ದಾಗಲೆ ಅವರನ್ನು ನೋಡಿದ ಪುಟ್ಟಣ್ಣನಿಗೆ 'ಈ ಪೀಡೆಯಿಂದ ತಪ್ಪಿಸಿಕೊಂಡರಾದೀತು' ಎಂದು ತೋರಿತು. ತಪ್ಪಿಸಿಕೊಳ್ಳುವ ಹಾದಿಯನ್ನೂ ಆತ ಯೋಚಿಸಿದ. ಆದರೆ, ತಮ್ಮ ಮಗಳ ಪರವಾಗಿ ಮಾವ ಏನು ಹೇಳುವರೆಂಬುದನ್ನು ತಿಳಿಯುವ ಕುತೂಹಲವೂ ಆತನಿಗಿತ್ತು. ಹೀಗಾಗಿ, ಮಾವನೊಡನೆ ಮಾತನಾಡಿಯೇ ಬಿಡುವುದೆಂದು ಪುಟ್ಟಣ್ಣ ತೀರ್ಮಾನಿಸಿದ.

ಅಳಿಯ ಬಳಿಗೆ ಬಂದಾಗಲೂ ಅವರು ಗಂಭೀರವಾಗಿಯೆ ಇದ್ದರು. ಪುಟ್ಟಣ್ಣನೇ ಕೇಳಿದ:

"ಬಹಳ ಹೊತ್ತಾಯ್ತೇನು ನೀವು ಬಂದು?"

"ಇಲ್ಲ, ಈಗ್ತಾನೇ ಬಂದೆ"

—ಎಂದು ಮಾವ ಸುಳ್ಳಾಡಿದರು.

ಹೇಗೆ ಮಾತು ಮುಂದುವರಿಸಬೇಕೆಂದು ತಿಳಿಯದೆ ಸ್ವಲ್ಪ ತಡವರಿಸುತ್ತ ಪುಟ್ಟಣ್ಣ ಹೇಳಿದ:

"ಊರಿಗೆ ಯಾವತ್ತು ಹೊರಡ್ತೀರಾ?"

"ರಾತ್ರೆ ಹೊರಡ್ತೀನಿ. ಹೋಗೋಕ್ಮುಂಚೆ ನಿಮ್ಜತೇಲಿ ಮಾತಾಡ್ಬಿಟ್ಟು ಹೋಗೋಣ ಅಂತ ಬಂದೆ."

ಬೀದಿಯ ಮೇಲಕ್ಕೂ ಕೆಳಕ್ಕೂ ನೋಡುತ್ತ ಪುಟ್ಟಣ್ಣ ಹೇಳಿದ.

"ಆಗಬಹುದು. ಎಲ್ಲಿ ಮಾತಾಡೋಣ?"

"ಮೊದಲು ಒಂದಿಷ್ಟು ಕಾಫಿ ತಗೊಂಡರಾದೀತು."

ಮಾತುಕತೆಯಲ್ಲಿ ಮುದುಕನಿಗೇ ಮೇಲುಗೈ ಆಗುತ್ತಿದೆ, ಎಂದು ಪುಟ್ಟಣ್ಣನಿಗೆ ಕಸಿವಿಸಿಯಾಯಿತು. ಆದರೂ ಅದನ್ನು ತೋರಗೊಡದೆ, ಎಚ್ಚರದ ರಕ್ಷಣೆಯ ಮುಖವಾಡ ಧರಿಸಿ, ಮಾವನನ್ನು ಆತ ಸಮೀಪದಲ್ಲೆ ಇದ್ದ ಒಳ್ಳೆಯದೊಂದು ಹೋಟೆಲಿಗೆ ಕರೆದೊಯ್ದ.

"ತಿಂಡಿ ಏನು ತರಿಸೋಣ?"

—ಎಂದು ಪುಟ್ಟಣ್ಣ ಕೇಳಿದ.

"ನಿಮಗೆ ಇಷ್ಟವಿರೋದು ಏನಾದರೂ ಸ್ವಲ್ಪ ತರಿಸಿ."

....ತಿಂಡಿ ಕಾಫಿಗಳ ಸೇವನೆ ಮೌನವಾಗಿಯೆ ನಡೆಯಿತು.

ಹೊರಬಿದ್ದಾಗ ಮಾವ ಕೇಳಿದರು:

"ನೀವು ಮನೆ ಕಡೆ ತಾನೆ ಹೊರಟಿರೋದು?"

ಈ ದಿನವಾದರೂ ಆತ ಮನೆಗೆ ಬೇಗನೆ ಬರಬಹುದೆಂದು ಮಾವ ಭಾವಿಸಿದ್ದರು. ಆದರೆ ಆತನ ಉತ್ತರ ಅವರ ಭಾವನೆಯನ್ನು ಸುಳ್ಳು ಮಾಡಿತು.

"ಇಲ್ಲ. ಬೇರೆ ಸ್ವಲ್ಪ ಕೆಲಸ ಇದೆ."

ಇಷ್ಟು ಹೇಳಿದ ಪುಟ್ಟಣ್ಣನಿಗೆ ಸಂತೋಷವೆನಿಸಿತು. 'ಇನ್ನು ಮಾತಿನಲ್ಲಿ ಬಿಟ್ಟು ಕೊಡೋದಿಲ್ಲ' ಎಂದು ತೀರ್ಮಾನ ಮಾಡಿದ.

"ಹಾಗಾದರೆ ಸ್ವಲ್ಪದೂರ ಈ ರಸ್ತೇಲೆ ಮಾತನಾಡ್ತಾ ನಡಕೊಂಡು ಹೋಗೋಣವೇ?"

"ಆಗಲಿ."

ಅವರು ನಡೆಯತೊಡಗಿದಂತೆ ಮಾವ ಹೇಳಿದರು:

"ಅದೇ ನಿಮ್ಮ ಗೃಹಕೃತ್ಯದ ವಿಷಯ—"

ಪುಟ್ಟಣ್ಣ ನಾಲಗೆಯನ್ನು ಮೊನಚುಗೊಳಿಸಿ ಸಿದ್ಧನಾದ.

"ಆ ವಿಷಯವೆಲ್ಲ ತಿಳಿಸಿ ಸುನಂದಾ ಆಗಲೇ ನಿಮಗೆ ಕಾಗದ ಬರೆದಿರ್ಬೇಕು, ಅಲ್ವೆ?"

"ಇಲ್ಲ. ಅವಳೇನೂ ಬರೆದಿಲ್ಲ."

"ಇಲ್ಲಿ ಬಂದ ಮೇಲೆ ಹೇಳಿದ್ಲೋ?"

"ಸ್ವಲ್ಪ ಅವಳು ಹೇಳಿದ್ಲು. ಸ್ವಲ್ಪ ನಾನೇ ಊಹಿಸ್ಕೊಂಡೆ."

"ಸಂತೋಷ. ಏನು ಹೇಳ್ಬೇಕೊಂತಿದೀರಾ ಈಗ?"

ತೀವ್ರ ಖಂಡನೆಯ ಮಾತನ್ನು ಪುಟ್ಟಣ್ಣ ನಿರೀಕ್ಷಿಸಿದ್ದ. ಆದರೆ ಬಂದ ಉತ್ತರ ಬೇರೆಯೇ.

"ಸುನಂದಾಗೆ ಯಾವಾಗಲೂ ಸ್ವಲ್ಪ ದುಡುಕು ಜಾಸ್ತಿ. ಅಪ್ಪಿ ತಪ್ಪಿ ಏನಾದರೂ ಮಾಡೋದು ಅವಳ ಸ್ವಭಾವ. ಅದನ್ನೆಲ್ಲ ನೀವು ಮನಸ್ಸಿಗೆ ಹಚ್ಕೋಬಾರದು."

ಮನಸ್ಸಾಕ್ಷಿಗೆ ವಿರುದ್ಧವಾಗಿ ಮಗಳನ್ನೆ ಟೀಕಿಸುತಿದ್ದರು ತಂದೆ. ಈ ಮಾತು ಸಹಜವೆ, ವ್ಯಂಗ್ಯವೆ, ಎಂದು ನಿರ್ಧರಿಸುವುದು ಪುಟ್ಟಣ್ಣನಿಗೆ ಕಷ್ಟವಾಯಿತು.

"ಅಂಥಾದ್ದೇನೂ ಆಗಿಲ್ವಲ್ಲಾ!"

"ಗಂಡ ಹೆಂಡಿರ ಜಗಳ ಅನ್ನೋದು ಯಾವಾಗಲೂ ಅಷ್ಟೆ. ಯಾವುದೋ ಸಣ್ಣ ವಿಷಯದಿಂದಲೆ ಮಹಾ ರಾದ್ಧಾಂತವಾಗುತ್ತೆ. ನನಗೆ ವಯಸ್ಸಾಯ್ತು. ಸಂಸಾರ ಸುಖ ಅನುಭವಿಸಿ, ಲೋಕದ ಅವಸ್ಥೆಯನ್ನೆಲ್ಲ ನೋಡಿ ನೋಡಿ, ನನ್ನ ಕೂದಲು

ನರೆತಿದೆ. ನನ್ನ ಆಪ್ತ ಸ್ನೇಹಿತರು ಇಬ್ಬರ ಸಂಸಾರಗಳೇ ಮಣ್ಣುಪಾಲಾದ್ದನ್ನ ನಾನು ನೋಡಿದೀನಿ ಪುಟ್ಟಣ್ಣ. ಯಾಕಾಯಿತು ಅಂತಿರೋ? ಕ್ಷುಲ್ಲಕ ಕಾರಣದಿಂದ—ಮನೆ ಹೆಂಗಸರ ಹಟಮಾರಿತನದಿಂದ."

ಮುದುಕ ನೀತಿ ಕತೆ ಆರಂಭ ಮಾಡಿದಂತೆ ತೋರಿತು ಪುಟ್ಟಣ್ಣನಿಗೆ. ಆತನ ಮುಖದ ನರಗಳು ಅಸ್ಥಿರವಾದುವು. ಪ್ಯಾಂಟಿನ ಜೇಬಿನೊಳಕ್ಕೆ ತುರುಕಿದ್ದ ಕೈ ಬೆರಳು ಗಳನ್ನು ಅಲ್ಲಿಯೇ ಆತ ಒಂದಕ್ಕೊಂದು ತೀಡಿಕೊಂಡ.

ಪುಟ್ಟಣ್ಣನನ್ನು ಸಂಜೆ ನೋಡುವವರೆಗೂ ಯಾವ ರೀತಿ ಮಾತನಾಡಬೇಕೆಂಬು ದನ್ನು ಆತನ ಮಾವ ನಿರ್ಧರಿಸಿರಲಿಲ್ಲ. ಅಳಿಯ ಒರಟಾಗಿ ವರ್ತಿಸಿದರೆ ಮಾತ್ರ, ತಾನೂ ಸ್ಪಷ್ಟವಾಗಿ ಆಡಬೇಕು; ಆದರೆ ಆದಷ್ಟು ಮಟ್ಟಿಗೆ ಸಾಮೋಪಾಯದಿಂದ ನಡೆದುಕೊಳ್ಳಬೇಕು—ಎಂಬುದು ಅವರ ಅಭಿಪ್ರಾಯವಾಗಿತ್ತು. ಈಗ ಸಾಮೋ ಪಾಯದ ಹಾದಿಯಲ್ಲಿ ಹೊರಟಿದ್ದ ಅವರು, ಅದರಲ್ಲೇ ಮುಂದುವರಿದರು:

"ಗಂಡಸನ್ನ ಯಾವಾಗಲೂ ಸಮಾಜ ಸಂಶಯದಿಂದಲೆ ನೋಡುತ್ತೆ— ಆತ ಅನೀತಿವಂತನೇ ಅಂತ. ಆದರೆ ಗಂಡಸು ಹಾಗಾಗೋದಕ್ಕೆ ಎಷ್ಟೋ ಸಂಸಾರಗಳಲ್ಲಿ ಹೆಂಗಸೇ ಕಾರಣವಾಗ್ತಾಳೆ. ಆಕೆಗೆ ಒಳ್ಳೆಯ ಮಾತು ಆಡೋಕೆ ಬರದಿದ್ದರೆ, ಗಂಡ ಹೊರಗೆ ಸ್ನೇಹಿತರ ಜತೇಲೇ ಹೆಚ್ಚಾಗಿರ್ತಾನೆ. ಮನೆಯ ಕಿರುಕುಳ ಜಾಸ್ತಿ ಆದರೆ, ಕುಡಿದು ಮರೆಯೋಕೆ ಪ್ರಯತ್ನಿಸ್ತಾನೆ. ಮನೆ ಹೆಂಡತಿ ಆತನನ್ನು ದೂರವಿಟ್ಟರೆ, ಬೇರೆ ಮನೆಗೆ ಹೋಗ್ತಾನೆ—"

ಇನ್ನು ತಡೆಯುವುದಾಗದೆ ಪುಟ್ಟಣ್ಣ ಗೊಗ್ಗರ ಧ್ವನಿಯಲ್ಲಿ ಕೇಳಿದ.

"ನಾನು ಹೀಗೆಲ್ಲಾ ಮಾಡ್ತಿದೀನಿ ಅಂತ ನಿಮ್ಮ ಅಭಿಪ್ರಾಯವೊ?"

"ಇಲ್ಲ ಪುಟ್ಟಣ್ಣ. ಖಂಡಿತ ಇಲ್ಲ. ನನ್ನ ಮಗಳು ಅಂಥ ಭಾಗ್ಯಹೀನೇಂತ ನಾನು ಭಾವಿಸೋದಿಲ್ಲ. ಲೋಕವಿಚಾರ ಹೇಳ್ದೆ. ನಿಮಗಿನ್ನೂ ಚಿಕ್ಕ ವಯಸ್ಸು. ಈಗ ಶ್ರದ್ಧೆ ಇಟ್ಟು ಕೆಲಸ ಮಾಡಿದರೆ, ಪ್ರಯತ್ನ ಪಟ್ಟರೆ, ದೊಡ್ಡ ಹುದ್ದೆಗೆ ಬಂದೇ ಬರ್‍ತೀರಾ. ನಿಮಗೊಂದು ಗಂಡು ಮಗುವೂ ಹುಟ್ಟಿ—"

"ನೀವು ಏನು ಹೇಳಬೇಕೂಂತಿದೀರೋ ಸ್ಪಷ್ಟವಾಗಲಿಲ್ಲ."

ಅಳಿಯನ ಸ್ವರದಲ್ಲಿದ್ದ ಅಸಹನೆಯನ್ನು ಗುರುತಿಸಿ, ಮಾವ ಸ್ವಲ್ಪ ಸ್ವರವೇರಿಸಿ ನುಡಿದರು:

"ನಾನು ಹೇಳಬೇಕೂಂತಿರೋದು ಇಷ್ಟೆ ಪುಟ್ಟಣ್ಣ. ಒಳ್ಳೇದಾಗೋದೂ ಕೆಟ್ಟ ದಾಗೋದೂ ಬಹಳಮಟ್ಟಿಗೆಲ್ಲ ಮನುಷ್ಯನ ಕೈಲೇ ಇದೆ. ಸುನಂದೆಯೂ ವಿದ್ಯಾವತಿ. ನೀವೂ ವಿದ್ಯಾವಂತರು. ನನ್ನ ಮಗಳು ನಿಮ್ಮ ಕೈ ಹಿಡಿದಿದಾಳೇಂತ ನನಗೆ ಸಂತೋಷವೇ."

ಈ ಮಾತು ಸಾಕೆನ್ನುವಂತೆ ಪುಟ್ಟಣ್ಣ ಮತ್ತೆ ಚಡಪಡಿಸಿದ. ಆತನ ಮಾವ ಅದನ್ನು ಲೆಕ್ಕಿಸದೆ ಹೇಳಿದರು:

"ಸುನಂದಾ ದೂರು ಕೊಟ್ಟು ನನ್ನನ್ನ ಕರೆಸಿಕೊಳ್ಳಿಲ್ಲ ಪುಟ್ಟಣ್ಣ. ಹಾಗೇನಾದರೂ ಆಕೆ ಮಾಡಿದ್ದರೆ, ಹಾಗೆ ದೂರು ಕೊಟ್ಟ ತಪ್ಪಿಗೆ ತಕ್ಕ ಶಿಕ್ಷೆ ಕೊಡೀಂತ ನಿಮಗೇ ಹೇಳ್ತಿದ್ದೆ. ನಾನು ಬಂದದ್ದು ನನ್ನ ಎರಡನೇ ಮಗಳಿಗೆ ವರ ಹುಡುಕಿಕೊಂಡು. ಬಂದು ನೋಡೀಂತ ಒಂದು ಕಡೆಯವರು ಕಾಗದ ಬರೆದಿದ್ದರು. ಅದಕ್ಕೋಸ್ಕರ ಬಂದೆ."

ಆತ ಸತ್ಯವನ್ನೆ ಆಡುತ್ತಿದ್ದರೆಂಬುದು ಪುಟ್ಟಣ್ಣನಿಗೆ ಸ್ಪಷ್ಟವಾಯಿತು. ಅವನು ಸುಮ್ಮನಿದ್ದ.

ಆತನ ಮಾವ, ಮಾತುಗಳನ್ನೆಲ್ಲ ಸುರಿದು ತನ್ನ ನೋವಿನ ಬರಿದಾದ ಆಳವನ್ನು ಮುಚ್ಚಲು ಬಯಸಿದರು.

"ಬಂದದ್ದು ವ್ಯರ್ಥವಾಯ್ತು, ಆ ವರ ನನಗೆ ಹಿಡಿಸಲಿಲ್ಲ. ಮದುವೆ ಅನ್ನೋದು ತುಂಬಾ ಯೋಚಿಸಿ ಮಾಡಬೇಕಾದ ಕೆಲಸ ನೋಡಿ. ಶುದ್ಧ ಅಯೋಗ್ಯನಿಗೆಲ್ಲ ಮಗಳನ್ನ ಕೊಡೋಕಾಗುತ್ಯೆ?"

ತಮ್ಮ ವರಾನ್ವೇಷಣದ ಅನುಭವವನ್ನೇ ಸ್ವಲ್ಪ ರೂಪಾಂತರಗೊಳಿಸಿ ಈ ಸಂಭಾಷಣೆಯ ಉದ್ದೇಶ ಸಾಧನೆಗೋಸ್ಕರ ಬಳಸಿದ್ದರು ಸುನಂದೆಯ ತಂದೆ.

ತಾನು ಬಿಟ್ಟುಕೊಡಬಾರದು; ವ್ಯಗ್ರನಾಗಿ ಮಾತನಾಡಬೇಕು; 'ನಿಮ್ಮ ಮಗಳನ್ನೂ ಮೊಮ್ಮಗಳನ್ನೂ ಇವತ್ತೇ ಕರಕೊಂಡು ಹೊರಟು ಹೋಗಿ' ಎನ್ನಬೇಕು-ಎಂದೆಲ್ಲ ಪುಟ್ಟಣ್ಣ ಯೋಚಿಸಿದ್ದ. ಅದಕ್ಕೆ ಅವಕಾಶವೇ ಸಿಗಲಿಲ್ಲ. ಬದಲು, "ಶುದ್ಧ ಅಯೋಗ್ಯನಿಗೆಲ್ಲ ಮಗಳನ್ನ ಕೊಡೋಕಾಗುತ್ಯೆ?" ಎಂದು ಮಾವ ಕೇಳಿದ್ದರು. 'ಒಬ್ಬ ಮಗಳನ್ನ ಈಗಾಗಲೇ ಅಯೋಗ್ಯನಿಗೆ ಕೊಟ್ಟು ತಪ್ಪು ಮಾಡಿದ್ದೇನೆ; ಇನ್ನೊಬ್ಬ ಮಗಳನ್ನೂ ಹಾಗೆಯೇ ಕೊಡೋದಕ್ಕಾಗುತ್ಯೆ?'–ಎಂದು ಕೇಳಿದ ಹಾಗಿತ್ತು ಅವರ ಮಾತಿನ ಧ್ವನಿ.

ಬೀದಿ ಕವಲೊಡೆದ ಕಡೆ ಪುಟ್ಟಣ್ಣ ನಿಂತ.

"ನಾನು ಈ ಹಾದೀಲಿ ಹೋಗ್ಬೇಕು. ಗೃಹಕೃತ್ಯದ ವಿಷಯ ಮಾತಾಡೋಕೆ ಇದ್ದದ್ದು ಇಷ್ಟೆ ತಾನೆ?"

ಆತನ ಮಾವನೂ ಅಲ್ಲೇ ನಿಂತರು.

"ನಾವು ಏನು ಮಾಡಿದರೂ ನಮ್ಮನ್ನೆಲ್ಲ ನೋಡೋ ದೇವರೊಬ್ಬ ಮೇಲಿದಾನಲ್ವೆ ಪುಟ್ಟಣ್ಣ?"

ದೇವರ ಹೆಸರು ಹೇಳಿ ಮುದುಕ ಹೆದರಿಕೆ ಹುಟ್ಟಿಸುತ್ತಿದ್ದಾನೆ–ಎಂದುಕೊಂಡ ಪುಟ್ಟಣ್ಣ.

ಅಳಿಯ ನಿರುತ್ತರನಾದುದನ್ನು ಕಂಡು ಮಾವ ಹೇಳಿದರು:

"ಆಗಲಿ. ನಾನೀಗ ಹೋಗ್ತೀನಿ. ಹಿರಿಯರ ಆಶೀರ್ವಾದಕ್ಕೆಲ್ಲ ಈಗ ಬೆಲೆಯುಂಟೋ ಇಲ್ವೋ? ಆದರೂ ಆಶೀರ್ವಾದ ಮಾಡೋದು ನನ್ನ ಕರ್ತವ್ಯ.

ಸುನಂದಾ ಏನು ತಪ್ಪು ಮಾಡಿದರೂ ಕ್ಷಮಿಸಿ. ನೀವೇ ತನ್ನ ಪರದೈವ ಅಂತ ಆಕೆ ನಂಬಿದ್ದಾಳೆ. ಅಲ್ಲದೆ ಆ ಎಳೇ ಮಗುವಂತೂ ನಿಮ್ಮ ಪ್ರೀತಿಯ ಪೋಷಣೆಯಿಂದಲ್ಲವೆ ಬೆಳೀಬೇಕು? ಎಲ್ಲರೂ ಸುಖವಾಗಿರಿ. ದೇವರು ನಿಮಗೆ ಒಳ್ಳೇದು ಮಾಡಲಿ."

ಅವರ ಕಣ್ಣು ಮಂಜಾಯಿತು. ಹೊದ್ದುಕೊಂಡಿದ್ದ ಶಾಲಿನಿಂದ ಕಣ್ಣುಗಳನ್ನು ಒತ್ತಿಕೊಳ್ಳಲು ಬಯಸಿದರೂ ಅಳಿಯನೆದುರು ಹಾಗೆ ಮಾಡಬಾರದೆಂದು ಸುಮ್ಮ ನಿದ್ದರು.

ಪುಟ್ಟಣ್ಣ ಬಲಕ್ಕೆ ತಿರುಗಿ ಹೊರಟೇ ಹೋದ. ಹೋದಾಗ ಅವನಾಡಿದು ದೊಂದೇ ಮಾತು:

"ಬರ್ತೀನಿ."

ಆಗಲೂ 'ಬರ್ತೀನಿ ಮಾವ' ಎನ್ನಲಿಲ್ಲ. ಆ ರೀತಿಯ ಆತನ ವರ್ತನೆಯಿಂದ ತುಂಬಾ ನೊಂದುಕೊಂಡು, ಸುನಂದೆಯ ತಂದೆ ಉಗುಳು ನುಂಗಿದರು.

...ಅವರು ಹಾದಿ ಜ್ಞಾಪಿಸಿಕೊಂಡು ಮಾರ್ಕೆಟಿನ ಕಡೆಗೆ ನಡೆದರು. ಅದನ್ನು ತಲಪಿದಾಗ ಮಾತ್ರ ಏನನ್ನೂ ಕೊಳ್ಳಲು ಅವರಿಗೆ ಮನಸಾಗಲಿಲ್ಲ. ಊರಿಗೇನಾದರೂ ಒಯ್ಯಬೇಕೆಂದು ಅವರು ಬರುತ್ತ ಯೋಚಿಸಿದ್ದರೂ ಈಗ ಸುಮ್ಮನಾದರು. ಕೊನೆಯು ದಾಗಿ ಸುನಂದೆಯನ್ನು ಕಾಣುವ ಕೆಲಸ ಉಳಿದಿತ್ತು. ಸುನಂದೆಯ ಮಗುವಿಗಾಗಿ ಬೆಣ್ಣೆ ಬಿಸ್ಕತ್ತು ಕೊಂಡರು. ಚಿಕ್ಕವಳಾಗಿದ್ದಾಗಿಂದಲೂ ಸಂಪಿಗೆ ಹೂ ಎಂದರೆ ಸುನಂದೆಗೆ ಬಹಳ ಇಷ್ಟ. ಅದನ್ನು ಕೊಳ್ಳೋಣವೆನಿಸಿತು. ಆದರೆ, ಈ ವಿರಸದ ವಾತಾವರಣ ದಲ್ಲಿ ಅದನ್ನೊಯ್ದು ಕೊಟ್ಟರೆ ಪುಟ್ಟಣ್ಣನಿಗೆ ಅದು ಒಪ್ಪಿಗೆಯಾಗದೇ ಹೋಗಬಹು ದೆಂದು ಭಾವಿಸಿ, ಕೊಳ್ಳಲಿಲ್ಲ.

* * * *

ತಂದೆಯೂ ಗಂಡನೂ ಜತೆಯಲ್ಲೇ ಬರಬಹುದೆಂದು ನಿರೀಕ್ಷಿಸುತ್ತ ಸುನಂದಾ ಬಾಗಿಲಲ್ಲೆ ನಿಂತಿದ್ದಳು. ತಂದೆಯೊಬ್ಬರನ್ನೇ ಕಂಡಾಗ ಆಕೆಗೆ ನಿರಾಶೆಯಾಯಿತು.

'ಅವರು ಬರಲಿಲ್ವಾ?' ಎಂದು ಕೇಳಬೇಕೆಂದಿದ್ದಳು ಸುನಂದಾ. ಪ್ರಾಯಶಃ ತನ್ನ ಗಂಡ ಕಾಣಲು ಸಿಗಲೇ ಇಲ್ಲವೇನೋ—ಎಂಬ ಶಂಕೆ ತಲೆದೋರಿ, ಸುಮ್ಮ ನಾದಳು.

ವಿಜಯಾಳ ಮದುವೆಯ ವಿಷಯ ಏನಾಯಿತೆಂದು ತಿಳಿಯಬಯಸಿ ಆಕೆ ಕೇಳಿದಳು:

"ಬಂದ ಕೆಲಸ ಆಯ್ತಾ?"

"ಇಲ್ಲ ಸುಂದಾ. ಅದು ನಮಗೆ ಸರಿಹೋಗುವಂಥ ಸಂಬಂಧವಲ್ಲ..."

—ಎಂದು ಹೇಳುತ್ತಾ ಅವರು ಕೊಠಡಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತು, ಮಗುವನ್ನು ನೋಡಿ, ತಾನು ನಕ್ಕು ಅದನ್ನು ನಗಿಸಲೆತ್ನಿಸಿದರು. ಮೊಮ್ಮಗಳನ್ನು ಕರೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ತಾವು ತಂದಿದ್ದ ಬಿಸ್ಕತ್ತುಗಳಲ್ಲಿ ಒಂದನ್ನು

ಆಕೆಗೆ ತಿನ್ನಿಸಿದರು.

ಯಾರೋ ಬೇರೆಯವರಿಗೆ ಸಂಬಂಧಿಸಿದ ಯಾವುದೋ ಹಳೆಯ ಕತೆ ಎಂಬಂತೆ, ಹುಡುಗನ ಕಡೆಯವರು ಕೇಳಿದುದನ್ನೆಲ್ಲ ಅವರು ಮಗಳಿಗೆ ತಿಳಿಸಿದರು.

"ಹೋಗಲಿ, ನಮಗೆ ಭಾಗ್ಯವಿಲ್ಲ"

—ಎಂದಳು ಸುನಂದಾ, ಆ ಮಾತು ಮುಕ್ತಾಯವಾಗಲೆಂದು.

"ಭಾಗ್ಯವಿಲ್ಲವೋ ದೌರ್ಭಾಗ್ಯವಿಲ್ಲವೋ ಯಾರಿಗೆ ಗೊತ್ತು? ಆ ಹುಡುಗ ಎಂಥ ವನೋ ಯಾರು ಬಲ್ಲ?"

—ಎಂದು ತಂದೆ ಕಹಿ ಮಾತನ್ನಾಡಿದರು.

ಆ ಮಾತೇ ತನಗೆ ಸಂಬಂಧಿಸಿದ ಪ್ರಸ್ತಾಪಕ್ಕೆ ಪೀಠಿಕೆಯಾಯಿತು.

"ಅವರು ಸಿಕ್ಕಿದರಾ?"

"ಸಿಕ್ಕಿದ್ದ."

ಏನು ಮಾತುಕತೆಯಾಯಿತೆಂದು ತಿಳಿಯಲು ಸುನಂದಾ ಕುತೂಹಲಿಯಾಗಿದ್ದಳು. ಆದರೆ, ತನ್ನ ಕೊರಗು ಹೆಚ್ಚಿಸುವ ಉತ್ತರವೇ ಬರಬಹುದು ಎಂಬ ಭಯದಿಂದ, ಮುಂದೆ ಪ್ರಶ್ನೆ ಕೇಳಲಿಲ್ಲ.

ಆ ವಿಷಯವನ್ನು ಸ್ವಲ್ಪ ಹೊತ್ತಿನ ಮಟ್ಟಿಗಾದರೂ ಮುಂದಕ್ಕೆ ತಳ್ಳಲೆಂದು ಆಕೆಯೆಂದಳು:

"ಊಟಕ್ಕೆ ಎದ್ಬಿಡು ಅಪ್ಪಾ. ಅಡುಗೆ ಮಾಡಿಟ್ಟಿದೀನಿ."

"ಏನೂ ಹಸಿವಿಲ್ಲ ಸುಂದಾ. ಒಮ್ಮೆ ಮನೆ ಸೇರಿದರೆ ಸಾಕಾಗಿದೆ ಸದ್ಯಃ."

"ಜಾಸ್ತಿ ಬಡಿಸೊಲ್ಲ....ನಿನ್ನೆ ರಾತ್ರೆಯೂ ನಿನಗೆ ನಿದ್ದೆ ಇಲ್ಲ. ಇವತ್ತು ರಾತ್ರೇನೂ ಇರೋದಿಲ್ಲ....ಬರೀ ಹೊಟ್ಟೇಲಿ ಹೋಗ್ಬೇಡ."

"ನಿನ್ನಿಷ್ಟ. ಒಂದು ತುತ್ತು ಬಡಿಸ್ಬಿಡು ಹಾಗಾದರೆ."

ಆಗಲೆ ಕತ್ತಲಾಗಿತ್ತು. ಸುನಂದಾ ದೀಪ ಹಾಕಿ ಅಡುಗೆ ಮನೆಗೆ ನಡೆದಳು...

...ಮಗಳು ಬಡಿಸಿದುದನ್ನು ಉಣ್ಣುತ್ತಲಿದ್ದಂತೆ ತಂದೆ, ಅಳಿಯನೊಡನೆ ತಾನು ನಡೆಸಿದ ಮಾತುಕತೆಯನ್ನು ವಿವರಿಸಿದರು.

ತಂದೆ ತನ್ನ ಪಕ್ಷವಹಿಸಿ ಗಂಡನಿಗೆ ಛೀಮಾರಿ ಹಾಕಬಹುದೆಂದು ಸುನಂದಾ ಭಾವಿಸಿದ್ದಳು. ಹಾಗೆ ಆಗಿರಲಿಲ್ಲ. ಹಾಗೆಂದು ಆಕೆಗೆ ನಿರಾಸೆಯಾದರೂ ಸಂಭಾಷಣೆ ಶಾಂತ ರೀತಿಯಲ್ಲೇ ಮುಕ್ತಾಯವಾಯಿತಲ್ಲ—ಎಂಬ ಸಮಾಧಾನ ಮೂಡಿತು.

ತಂದೆ ಹೇಳಿದರು:

"ಸಂಸಾರದ ವಿರಸ ಬಹಳ ಕ್ಲಿಷ್ಟವಾದದ್ದು ಸುಂದಾ. ಸ್ವಲ್ಪ ಹೆಚ್ಚು ಒತ್ತಿದರೆ ಮುರಿಯುತ್ತೆ. ತಾಳಿಕೊಂಡು ನಡೆದಷ್ಟೂ ಮೇಲು. ಗಂಡಸು ಏನು ತಪ್ಪು ಮಾಡಿದರೂ ನಡೆದು ಹೋಗುತ್ತೆ. ನರಕ ಅನುಭವಿಸ್ಬೇಕಾದ್ದು ಹೆಂಗಸೊಬ್ಬಳೇ. ನೀನು ತುಂಬಾ ಹುಷಾರಾಗಿರ್ಬೇಕಮ್ಮಾ."

ತಂದೆ ಹೇಳುತ್ತಿರುವುದು ಎಷ್ಟೊಂದು ನಿಜ–ಎಂದು ತೋರಿತು ಸುನಂದೆಗೆ.

ಹೊರಡುತ್ತ ತಂದೆಯೆಂದರು:

"ಸುಮ್ಮನೆ ಕೊರಗ್ತಾ ಇರಬೇಡ ಸುಂದಾ. ಧೈರ್ಯವಾಗಿರು. ನಗುನಗ್ತಾ ಇರು. ಈತ ಹಾದಿಗೆ ಬಂದೇ ಬರ್‍ತಾನೆ. ಹಾಗಾದರೆ ಅನಾಹುತವೇನಾದರೂ ಆದರೆ, ನಾವೆಲ್ಲ ಇನ್ನೂ ಇದೀವಿ ಅನ್ನೋದನ್ನ ಮರೀಬೇಡ. ಕಾಗದ ಬರಿ....ಬರೀತಿ ತಾನೆ?"

ಆಕೆ ಮೆಲ್ಲನೆ ಉತ್ತರವಿತ್ತಳು:

"ಬರೀತೀನಿ."

## ೧೫

ಸುನಂದಾ ತನ್ನ ಮಾಂಗಲ್ಯ ಸೂತ್ರದ ರಕ್ಷಣೆಗೆ ಟೊಂಕ ಕಟ್ಟಿದಳು. ಒಳಗಿನ ಮನಸ್ಸು ಏನೇ ಇದ್ದರೂ ಹೊರಗೆ ನಗೆಯ ಮುಖವಾಡ ಧರಿಸಲು ಆಕೆ ಕಲಿತಳು.

"ಹೀಗೇ ಇರೀಮ್ಮ ಯಾವಾಗಲೂ"

—ಎಂದರು ರಾಧಮ್ಮ.

ಎಂದಾದರೊಮ್ಮೆ ಹಿತ್ತಿಲು ಗೋಡೆಗಳ ಆಚೆ ಈಚೆಯಿಂದ ಸುನಂದೆಗೂ ಕುಸುಮಳಿಗೂ ಸಂಭಾಷಣೆಯಾಗುತ್ತಿತ್ತು. ಆ ಕುಸುಮಳೂ ಒಂದು ದಿನ ಅಂದಳು:

"ನೀವು ಬೈತಲೆ ತೆಗೆದು, ಹೆರಳು ಹಾಕಿ, ಕೊಂಡೆ ಕಟ್ಟಿದರೆ ತುಂಬಾ ಚೆನ್ನಾಗಿ ಕಾಣ್ತೀರಿ."

"ಹೌದೆ!"

—ಎಂದು ಸುನಂದಾ ನಕ್ಕು ಬಿಟ್ಟಳು. ಕುಸುಮ ತನಗಿಂತಲೂ ಸುಂದರಿ ಎಂದು ಸುನಂದೆಗೆ ಗೊತ್ತಿತ್ತು. ಆದರೂ ಸರಿಯಾಗಿ ಅಲಂಕಾರ ಮಾಡಿಕೊಂಡಾಗ ತಾನೂ ಕುಸುಮಳ ಎದುರಲ್ಲಿ ಸೋಲುವುದಿಲ್ಲ ಎಂಬುದೂ ಆಕೆಗೆ ತಿಳಿದಿತ್ತು.

* * * *

ಅಂತಹ ಒಂದು ಸಂಜೆ–ರಾತ್ರೆ–ಸುನಂದೆ ನಿರೀಕ್ಷಿಸದೇ ಇದ್ದ ಘಟನೆಯೊಂದು ನಡೆಯಿತು.

ಆ ದಿನ ಸುನಂದಾ ಶ್ರಮವಹಿಸಿ ತನ್ನನ್ನು ಸಿಂಗರಿಸಿಕೊಂಡಿದ್ದಳು. ಉಲ್ಲಾಸವಾಗಿರಲು ಆಕೆ ಯತ್ನಿಸುತ್ತಿದ್ದುದರ ಪರಿಣಾಮ ದೇಹದ ಮೇಲೆಯೂ ಆಗಿತ್ತು. ಆ ಸ್ಪಷ್ಟ ಬದಲಾವಣೆಯನ್ನು ಗುರುತಿಸದೆ ಇರುವುದು ಯಾರಿಂದಲೂ ಸಾಧ್ಯವಿರಲಿಲ್ಲ.

ಮಧ್ಯಾಹ್ನ ಮಾತನಾಡಿಸಲೆಂದು ಬಂದ ರಾಧಮ್ಮ ಮೂಗಿನ ಮೇಲೆ ಬೆರಳಿಟ್ಟು ನೋಡಿ ಕತ್ತು ಕೊಂಕಿಸಿ ಹೇಳಿದರು:

“ಖುಶಿಯಾಗಿದೀರಲ್ಲಾ ಸುನಂದಾ? ಈಗೆಲ್ಲಾ ಸರಿಹೋಯ್ತು, ಅಲ್ವೆ?”

ಒಳಗಿನ ಆಸೆಗಳು ಸಭ್ಯತನದ ಉಡುಗೆ ತೊಟ್ಟು ಹೊರಬಂದುವು:

“ಇನ್ನೂ ಯಾವುದೂ ಸರಿಹೋಗಿಲ್ಲ ರಾಧಮ್ನೋರೆ. ಆದರೆ, ಅಳು ಮೋರೆ ಯಿಂದಿರೋ ಬದಲು ಹೀಗಿರೋದು ಮೇಲಲ್ವೆ?”

“ಓಹೋ. ಸಂಶಯವೇನು? ನಿಮ್ಮ ಸಾಹಸಕ್ಕೆ ಪ್ರತಿಫಲ ಸಿಗದೇ ಇರಲಾರದು!”

ಹಾಗೆ ರಾಧಮ್ಮ ಹಾರೈಸಿ ಹೋದರೂ, ಅಂತಹ ಯತ್ನಗಳಿಗೆಲ್ಲ ಯಶಸ್ಸು ಸುಲಭವೆಂದು ಸುನಂದಾ ನಂಬಲಿಲ್ಲ.

...ಈಗ ಸ್ವಲ್ಪ ಸಮಯದಿಂದ ಪುಟ್ಟಣ್ಣ, ಒಮ್ಮೊಮ್ಮೆ ಆಫೀಸು ಬಿಟ್ಟೊಡ ನೆಯೆ ಬಂದು, ಬಟ್ಟೆ ಬದಲಾಯಿಸಿ ಹೊರಹೋಗುತ್ತಿದ್ದ. ಉಳಿದ ದಿನಗಳಲ್ಲಿ ತಡ ವಾಗಿ ಬರುತ್ತಿದ್ದ.

ಹಿಂದಿನ ಎರಡು ದಿನಗಳಲ್ಲೂ ಆತ ತಡವಾಗಿ ಬಂದಿದ್ದುದರಿಂದ ಈ ಸಂಜೆ ಬೇಗನೆ ಬರಬಹುದೆಂದು ಸುನಂದಾ ನಿರೀಕ್ಷಿಸಿದ್ದಳು.

ನಿರೀಕ್ಷೆ ನಿಜವಾಯಿತು.

ಆತ ಬರುತ್ತಿದ್ದುದನ್ನು ದೂರದಿಂದಲೆ ನೋಡಿ ಸುನಂದಾ, ಬಾಗಿಲು ತೆರೆದಿಟ್ಟು ಒಳಹೋದಳು. ಪುಟ್ಟಣ್ಣ ಒಳಕ್ಕೆ ಬಂದು ಕೊಠಡಿಗೆ ನಡೆದ.

ಆತ ಕನ್ನಡಿಯಲ್ಲಿ ಮುಖ ನೋಡುತ್ತಿದ್ದಂತೆಯೆ ಸುನಂದಾ ಕಾಫಿಯ ಲೋಟ ದೊಡನೆ ಬಂದು ಬಾಗಿಲಲ್ಲಿ ನಿಂತು, ಕೈ ಬಳೆಗಳ ಸದ್ದುಮಾಡಿದಳು.

ಪುಟ್ಟಣ್ಣ ತಿರುಗಿ ನೋಡಿ, ಒಂದು ನಿಮಿಷ ದಂಗಾದ. ಮಾಟಗಾತಿಯಂತೆ ಮೋಡಿಯ ಬಲೆ ಬೀಸಿ ನಿಂತಿದ್ದ ಆ ಹೆಣ್ಣು ತನ್ನ ಹೆಂಡತಿಯೆಂದು ನಂಬುವುದೇ ಆತನಿಗೆ ಕಷ್ಟವಾಯಿತು.

ಆಕೆ ಲೋಟವನ್ನು ಮೇಜಿನ ಮೇಲಿಡಲಿಲ್ಲ. ಬೇಕೆಂದೇ ಕೈಯಲ್ಲೇ ಹಿಡಿದು ನಿಂತಳು. ಆ ಗುರುತ್ವ ಆಕರ್ಷಣೆಗೆ ಬಲಿಯಾಗಿ, ಪುಟ್ಟಣ್ಣನೇ ಆಕೆಯ ಬಳಿಗೆ ಹೋಗಿ, ಲೋಟಕ್ಕೋಸ್ಕರ ಕೈ ಚಾಚಿದ. ಲೋಟವನ್ನು ಆಕೆ ಕೊಟ್ಟಾಗ ಕೈಗೆ ಕೈತಾಕಿತು. ಒಲಿದ ಹೆಣ್ಣಿನ ಮೊದಲ ಸ್ಪರ್ಶವೇನೋ ಎನ್ನುವ ಭ್ರಮೆಯಾಯಿತು ಪುಟ್ಟಣ್ಣನಿಗೆ. ಅವನ ಮನಸ್ಸು ಮಂಕಾಯಿತು. ಎದೆ ಬಡಿತ ತೀವ್ರವಾಯಿತು. ಆತ ಸುನಂದೆಗೆ ಬೆನ್ನು ಹಾಕಿ, ಕಿಟಕಿಯತ್ತ ತಿರುಗಿ, ಕಾಫಿ ಕುಡಿದ.

ಸುನಂದಾ ತನಗೆ ಸೋಲಾಯಿತೆಂದುಕೊಂಡಳು. ಅಲ್ಲಿ ನಿಲ್ಲಲಾಗದೆ ಒಳಗೆ ನಡೆದಳು.

ಇದೇನು ಹೀಗಾಯಿತು? ಎಂದು ಖತಿಗೊಂಡು ಪುಟ್ಟಣ್ಣ, ತನ್ನ ದೌರ್ಬಲ್ಯ ಕ್ಕಾಗಿ ತನ್ನನ್ನೇ ಜರೆದ. ಹೊರ ಹೊರಡಲೆಂದು ಉಡುಪು ಬದಲಾಯಿಸಿದ. ಆದರೆ ಕಾಲುಗಳು ಮಾತ್ರ ಆ ಕೊಠಡಿಯಲ್ಲೇ ಸುತ್ತುಸುತ್ತಿದುವು.

ಗಂಡ ಇನ್ನೂ ಹೊರಡದೇ ಇದ್ದುದನ್ನು ಕಂಡು ಸುನಂದೆಗೆ ಆಶ್ಚರ್ಯವಾಯಿತು. ಆಸೆ ಮತ್ತೊಮ್ಮೆ ಚಿಗುರಿಕೊಂಡು ಆಕೆ ಬಾಗಿಲಿನತ್ತ ಬಂದಳು.

ಸುನಂದೆಯನ್ನು ನೋಡಿದೊಡನೆಯೇ ಪುಟ್ಟಣ್ಣ ಹೊರಡಲೆಂದು ಚಪ್ಪಲಿ ಹಾಕಿದ.

ಮತ್ತೊಮ್ಮೆ ನಿರಾಸೆ ಆ ಹೆಣ್ಣು ಜೀವಕ್ಕೆ. ಆದರೂ ಆ ಗಂಡಸಿನ ಮನಸ್ಸಿನೊಳಗೆ ಹೊಯ್ದಾಟವಾಗುತ್ತಿದೆ ಎಂದು ಆಕೆ ಊಹಿಸಿದಳು.

ಪುಟ್ಟಣ್ಣ ಬಾಗಿಲು ಸಮೀಪಿಸಿದಾಗ ಆಕೆಯೆಂದಳು:

"ಇಲ್ನೋಡಿ—"

ಗಂಡ ತಡೆದು ನಿಂತ. ಕಣ್ಣಿನ ಕೊನೆಯಿಂದೊಮ್ಮೆ ಹೆಂಡತಿಯನ್ನು ನೋಡಿದ.

"ಏನು?"

ಸ್ವರ ಒರಟಾಗಿತ್ತು ಎಂದಿನಂತೆ. ಆದರೆ ಎಂದಿನಂತೆ ಸ್ಥಿರವಾಗಿರಲಿಲ್ಲ.

ಸುನಂದಾ ಮಾತನಾಡಿದ್ದಳು. ಉತ್ತರವಾಗಿ—ಏನು, ಎಂಬ ಪ್ರಶ್ನೆಯೂ ಬಂದಿತ್ತು. ಆದರೆ ಮುಂದೇನು ಹೇಳಬೇಕೆಂಬುದೇ ತೋಚಲಿಲ್ಲ.

ಆ ಮನಸ್ಸು ಗೋಳಾಡಿತು: ಯಾಕೆ ಮಾತಾಡಿದೆ? ಯಾಕೆ ತಡೆದು ನಿಲ್ಲಿಸಿದೆ? ಈಗ ಹೇಳಬೇಕಾದ್ದೇನನ್ನು?

"ಇವತ್ತು ಬೇಗ್ನೆ ಮನೆಗೆ ಬರ್‍ತೀರಾ?"

ಮೆದುಳು ಮಾತನಾಡಿತ್ತೋ ಹೃದಯ ಮಾತನಾಡಿತ್ತೋ ಸ್ಪಷ್ಟವಾಗಿರಲಿಲ್ಲ. ಅಂತೂ ಆ ಪ್ರಶ್ನೆಯನ್ನು ಆಕೆ ಕೇಳಿಬಿಟ್ಟಿದ್ದಳು. ಕೇಳಿದ ಮೇಲೆ ಭಯವಾಯಿತು. ತನ್ನ ಭವಿಷ್ಯತ್ತೆಲ್ಲ ಆತ ಕೊಡುವ ಉತ್ತರವನ್ನೇ ಅವಲಂಬಿಸಿದೆಯೇನೋ ಎನ್ನುವಂತೆ ಆಕೆ, ಆತ ಬಾಯಿ ತೆರೆಯುವುದನ್ನೇ ಈಕ್ಷಿಸಿದಳು.

"ಯಾಕೆ?"

ಒಂದೇ ಪದ. ಒಂದೇ ಪ್ರಶ್ನೆ.

ಗಂಡ ಉತ್ತರವನ್ನು ನಿರೀಕ್ಷಿಸಿದ್ದ. ಬೇಗನೆ ಬರುವಿರಾ—ಎಂದು ಆಕೆ ಯಾಕೆ ಕೇಳಿದ್ದಳು?

"ಸುಮ್ನೆ ಕೇಳ್ದೆ."

ಅದು ಕ್ಷೀಣ ಸ್ವರದಿಂದ ಕೊಟ್ಟ ಉತ್ತರ.

ಪುಟ್ಟಣ್ಣ ಮಾತನಾಡದೆ ಹೊರಟು ಹೋದ.

ಸುನಂದೆಗೆ ಅಳು ಬರುವಂತಾಗಿ, ತನಗೆ ಹುಚ್ಚು, ತನಗೆ ಬುದ್ಧಿ ಇಲ್ಲ—ಎಂದು ತನ್ನನ್ನೇ ಜರೆದುಕೊಂಡಳು.

....ಮೆಲ್ಲನೆ ಹೊತ್ತು ಕಳೆಯಿತು. ಮೃದುವಾಗಿ ಹಾಲನ್ನ ಕಲಸಿ ಮಗುವಿಗಷ್ಟು ಉಣಿಸಿದಳು....ಮಗು ನಿದ್ದೆ ಹೋಯಿತು...ಬೀದಿಯ ಕಡೆ ಹೋದರೆ ರಾಧಮ್ಮ ಸಿಗುವರು. ಮತ್ತೆ ಗಂಡನನ್ನು ತಾನು ಒಲಿಸಿಕೊಂಡಿಗುವೆನೆಂದೇ ನಂಬಿ, ಆಕೆ

ಮುಗುಳು ನಗುವರು. ಆ ಯೋಚನೆ ಕ್ರೂರವಾಗಿತ್ತು. ಅದಕ್ಕೋಸ್ಕರ ಸುನಂದಾ ಅತ್ತ ಹೋಗಲಿಲ್ಲ. ಪುಟ್ಟಣ್ಣ ಹೋದಾಗ ತೆರೆದಿದ್ದ ಬಾಗಿಲನ್ನು ಹಾಗೆಯೇ ಇರಗೊಟ್ಟು, ಆಕೆ ಮನೆಯೊಳಗೆ ಗೊತ್ತು ಗುರಿ ಇಲ್ಲದೆ ನಡೆದಳು... ಉಟ್ಟುದನ್ನು ಬದಲಿಸಿ, ಕೊಳಕಾದುದನ್ನೆ ಉಡಬೇಕು; ತಲೆಕೂದಲು ಕೆದರಿಕೊಂಡು ಹಾಸಿಗೆಯಮೇಲೆ ಉರುಳಿಕೊಳ್ಳಬೇಕು—ಎಂದೆಲ್ಲ ಆಕೆಗೆ ಮನಸಾಯಿತು. ಆದರೆ ಹಾಗೆ ಮಾಡಲಿಲ್ಲ.

ಕತ್ತಲು... ದೀಪಗಳು...

ಸುನಂದಾ ಕೊಠಡಿಗೆ ಹೋಗಿ, ಬಹಳ ಕಾಲದ ಬಳಿಕ ಪುಟ್ಟಣ್ಣನ ಬಟ್ಟೆ ಬರೆಗಳನ್ನು ಆಸೆಯಿಂದ ಮುಟ್ಟಿದಳು. ಅಲ್ಲಿದ್ದ ಒಂದೊಂದು ವಸ್ತುವನ್ನೂ ದಿಟ್ಟಿಸಿ ದಿಟ್ಟಿಸಿ ನೋಡಿ ಮಂಚದ ಮೇಲೆ ಕುಳಿತಳು. ಹಾಗೆಯೇ ಆ ಹಾಸಿಗೆಯ ಮೇಲೆ ಒರಗಿಕೊಂಡಳು...

ಒಂದು ದಿನ—ಎಷ್ಟೋ ಯುಗಗಳಿಗೆ ಹಿಂದೆ—ಪುಟ್ಟಣ್ಣ ಕೇಳಿದ್ದ:

"ನಿನಗೂ ಒಂದು ಮಂಚ ಬೇಕಾ?"

ಆ ಪ್ರಶ್ನೆ ಬಂದಾಗ ಸುನಂದೆ ಆತನ ತೋಳ ತೆಕ್ಕೆಯಲ್ಲಿದ್ದಳು. ಆಗ ಆಕೆ ಕೊಟ್ಟ ಉತ್ತರ:

"ಬೇಡಿ, ಇದೊಂದೇ ಸಾಕು."

ಅದೊಂದೇ ಉಳಿದಿತ್ತು ಈಗಲೂ.

ಆ ತಲೆದಿಂಬಿಗೆ ಮುಖ ಸೋಂಕಿದಾಗ ಎದೆ ಕುದಿಯಿತು. ಬಿಸಿಯಾದುದೇನೋ ದೇಹವನ್ನು ಬಿಟ್ಟುಹೋಗಿ, ಒಂದು ಕ್ಷಣ ಚಳಿಯಾದಂತಾಯಿತು. ಮತ್ತೆ ಮೈ ಬಿಸಿಯಾಗಿ, ಬಯಕೆಗಳು ಬಾಯ್ಬಿಟ್ಟುವು.

ಹೊಡೆತದ ಹಿಂಸೆಯ ಎರಡು ರಾತ್ರೆಗಳು... ಅತ್ಯಂತ ಕ್ರೂರವಾದ ಆ ನೆನಪುಗಳು ಆಕೆಗೆ ಮರೆತುಹೋಗಿರಲಿಲ್ಲ.

ಆದರೂ ಮೇಲಕ್ಕೆ ಮುಖಮಾಡಿ ತಾರಸಿ ಛಾವಣಿ ನೋಡುತ್ತ ಮಲಗಿಕೊಂಡಾಗ, ಕಳೆದ ಯುಗದ ರಸ ನಿಮಿಷಗಳ ಸವಿನೆನಪನ್ನೆ ಆಕೆ ಮತ್ತೆ ಮತ್ತೆ ಸವಿದಳು.

....ಹೊರಗೆ ಸದ್ದಾಯಿತು. ಗಂಡನ ನಡಿಗೆಯ ಸಪ್ಪಳ. ಬಾಗಿಲು ಮುಚ್ಚಿ ಅಗಣಿ ಹಾಕಿದ ಸದ್ದು. ಮತ್ತೆ ಕೊಠಡಿಯತ್ತ ನಡಿಗೆ....

ಎವೆ ಮುಚ್ಚಿ ತೆರೆಯುವುದರೊಳಗೆ ಸುನಂದಾ ಅಂಗೈಗಳನ್ನು ತಲೆಯ ಕೆಳಗಿರಿಸಿ, ಮೈಚಾಚಿ ಮಲಗಿದಳು. ನಿದ್ದೆ ಬಂದವರಂತೆ ನಟಿಸುತ್ತ ಕಣ್ಣು ಮುಚ್ಚಿಕೊಂಡಳು.

ಪುಟ್ಟಣ್ಣ ಆಕೆಯ ಮೇಲಿನಿಂದ ದೃಷ್ಟಿ ಕೀಳಲಾರದೆ ಹಾಗೆಯೇ ನಿಂತ.

—ಇವತ್ತು ಬೇಗ್ನೆ ಮನೆಗೆ ಬರ್‍ತೀರಾ?

—ಯಾಕೆ?

....ತನ್ನನ್ನು ಮೀರಿಸಿದಂತೆ ತೋರಿದ ಶಕ್ತಿಗೆ ಅಧೀನನಾಗಿ ಪುಟ್ಟಣ್ಣ ಚಲಿಸಿದ.

ಆತ ಒಳಕ್ಕೆ ಬಂದು ಬಾಗಿಲು ಮುಚ್ಚಿದ ಸದ್ದು. ಟಿಕ್–ಆರಿಸಿದ ಸ್ವಿಚ್. ಡವಡವನೆ ಹೊಡೆದುಕೊಳ್ಳುತಿದ್ದ ಎದೆಗುಂಡಿಗೆಯೊಡನೆ ಸುನಂದಾ ಕಾದಳು.

ಗಂಡ[ಸು] ತನ್ನ ಬಳಿಯಲ್ಲೇ ನಿಂತಿದ್ದಂತೆ ಆಕೆಗೆ ಭಾಸವಾಯಿತು:

ಬಿಗಿದುಕೊಳ್ಳುವ ತೋಳುಗಳೇ? ಅಥವಾ ಹೊಡೆದು ಹಿಂಸಿಸುವ ಬಿಗಿ ಮುಷ್ಟಿಯೇ?

ಆಕೆ ಮೆಲ್ಲಮೆಲ್ಲನೆ ಕಣ್ಣು ತೆರೆದಳು. ದೃಷ್ಟಿಯನ್ನು ಬಲಗೊಳಿಸುತ್ತ ಆತನನ್ನು ನೋಡಿದಳು.

ಆ ದೃಷ್ಟಿಯಲ್ಲಿ ಆಹ್ವಾನವನ್ನು ಪುಟ್ಟಣ್ಣ ಕಂಡ.

* * * *

ಪ್ರವಾಹ ಹರಿಯುತ್ತಿತ್ತು–ಅನಂತ ಕಾಲದಿಂದ, ಅಂತ್ಯವೇ ಇಲ್ಲ ಎನ್ನುವಂತೆ. ಬೇರೆ ಬೇರೆ ಕಡೆಗಳಿಂದ ನೀರು ಸೇರಿ ತೇಲಿಬರುತ್ತಿದ್ದ ಮರದ ಕೊಂಬೆಗಳೆರಡು. ಪ್ರವಾಹ ಶಾಂತವಾಗಿದ್ದಾಗ ಅವು ಕೂಡಿಯೇ ತೇಲುತ್ತಿದ್ದುವು. ಆದರೆ, ಮಹಾಪೂರ ಬಂದು ನೀರು ಹುಚ್ಚೆದ್ದು ಕುಣಿದಾಗ, ಬೇರೆ ಬೇರೆಯಾದುವು–ಬಹಳ ಕಾಲ. ಕ್ರಮೇಣ, ಬಿರುಗಾಳಿ ಆ ಎರಡನ್ನೂ ಮತ್ತೊಮ್ಮೆ ಒಂದುಗೂಡಿಸಿತು–ಮತ್ತೊಮ್ಮೆ.

* * * *

ಬಹಳ ದಿನಗಳಿಂದ ಆ ಹೆಣ್ಣು ಜೀವ ತಡೆಹಿಡಿದಿದ್ದ ಕಾವಿನೆದುರು, ತಾನು ಕಲ್ಲು ಎಂದು ಭ್ರಮೆಗೊಂಡಿದ್ದ ಪುಟ್ಟಣ್ಣ ಕರಗಿದ. ಆತ ಈಗ ಯೋಚಿಸಲಿಲ್ಲ. ಮಿದುಳಿಗೆ ಅಲ್ಲಿ ಕೆಲಸವಿರಲಿಲ್ಲ. ಅಷ್ಟು ದಿನವೂ ಅದುಮಿ ಹಿಡಿದು ವಿಚಿತ್ರ ರೀತಿಯಲ್ಲಿ ನೀಗಿಸಿ ಕೊಳ್ಳುತ್ತಿದ್ದ ಹಸಿವು, ಹೆಚ್ಚು ಆಹಾರವನ್ನು ಈಗ ಕೇಳಿತು.

ಆ ದೇಹದ ಮೇಲೆ ಕೈ ಇಟ್ಟಾಗ ಪುಟ್ಟಣ್ಣನಿಗೆ, ಹಿಂದೆ ತಾನೇ ಕಾರಣನಾಗಿದ್ದ ಗಾಯದ ಕಲೆಗಳು ಸಿಗುವವೇನೋ ಎಂದು ಭಯವಾಯಿತು. ಆದರೆ ಅದು ಕ್ಷಣಕಾಲ ಮಾತ್ರ. ಮರುಕ್ಷಣದಲ್ಲಿ ಯಾವುದೂ ಆತನಿಗೆ ನೆನಪಿರಲಿಲ್ಲ, ಯಾವುದೂ.

ಸುನಂದಾ ಮಾತ್ರ ಮೈ ಮರೆಯಲಿಲ್ಲ. ದೇಹಕ್ಕೆ ದೊರೆತ ಆ ಸುಖದೆದುರಲ್ಲೂ ಅವಳ ಕಣ್ಣುಗಳು ತೇವವಾದುವು. ಅವನ ಎದೆಯಲ್ಲಿ ಮುಖವಿಟ್ಟು, ಅಳಬೇಕೆಂದು ಆಕೆಗೆ ತೋರಿತು. ಆತನನ್ನು ಬಿಗಿಯಾಗಿ ಸುನಂದಾ ಅಪ್ಪಿಕೊಂಡಳು. ತನಗೆ ಮರಳಿ ದೊರೆತ ಈ ಒಡವೆ ಮತ್ತೆ ತನ್ನನ್ನೆಂದೂ ಬಿಟ್ಟು ಹೋಗಬಾರದು, ಅದು ತನ್ನದಾಗಿಯೇ ಉಳಿಯಬೇಕು–ಎಂಬ ಆಸೆಯಿಂದ.

ಹಿಂದೆ, ಮೃದುವಾಗಿ ಮುದ್ದಿನ ಮಾತುಗಳನ್ನು ಆತ ಹೇಳುವುದಿತ್ತು. ಈ ಹೊತ್ತು ಮಾತ್ರ ಅಂತಹ ಮಾತಿರಲಿಲ್ಲ. ಅದೆಲ್ಲವನ್ನೂ ಮರೆತೇ ಇದ್ದನೇನೊ?

ಸ್ತಬ್ಧವಾದಂತಿದ್ದ ಹೊತ್ತು, ಚಲಿಸಿದಂತೆ ತೋರಿತು.

ಸುನಂದಾ, ಕೇಳಿಸುತ್ತಿತ್ತೋ ಇಲ್ಲವೋ ಎನ್ನುವ ಸ್ವರದಲ್ಲಿ ಹೇಳಿದಳು:

"ಇಷ್ಟು ದಿವಸ ಯಾಕೆ ಹೀಗೆ ಮಾಡಿದಿರಿ ನನ್ನ ದೇವರೇ...ಇನ್ನು ಮೊದಲಿನ

ಹಾಗೇ ಇರ್ತೀನೀಂತ ಮಾತುಕೊಡಿ."

ಕಾವು ಆರಿದ್ದ ಪುಟ್ಟಣ್ಣನಿಗೆ ಒಮ್ಮೆಲೆ ಎಚ್ಚರವಾಯಿತು. ಕೆಟ್ಟ ಕನಸು ಬಿದ್ದವನಂತೆ ಆತ ಮೈಕೊಡವಿದ. ಸುನಂದಾ ಭಯಗೊಂಡಳು. ಹಿಡಿತ ತಪ್ಪಿತು. ಮತ್ತೆ ತನ್ನ ಒಡವೆಯನ್ನು ತಬ್ಬಿಕೊಂಡಳು. ಆತ ಒರಟಾಗಿ ಕ್ರೂರವಾಗಿ ಆ ಎರಡೂ ಕೈಗಳನ್ನು ತಳ್ಳಿ ಹಾಕಿದ.

...ಪುಟ್ಟಣ್ಣ ಮಂಚದಿಂದೆದ್ದು, ಕಿಟಿಕಿಯ ಬಳಿ ಹೋಗಿ, ಹೊರಗಿನ ಆಕಾಶವನ್ನು ನೋಡುತ್ತ ನಿಂತ...

ಸುನಂದಾ ದಿಂಬನ್ನು ಬಾಯಿಗೊತ್ತಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು.

ಪುಟ್ಟಣ್ಣನಿಗೆ ತನ್ನ ಬಗೆಗೆ ಹೇಸಿಕೆ ಎನಿಸಿತು. ತನಗೆ ಅವಮಾನವಾಗಿತ್ತು. ತಾನು ದುರ್ಬಲನಾಗಿ ಹೋದ ಆ ವಿಷಘಳಿಗೆ...ಥೂ...

ಅಳುತ್ತಲೇ ಇದ್ದಳು ಸುನಂದಾ. ಗಂಡ ಬಂದು, ಅಳಬೇಡವೆಂದು ಬೆನ್ನಿನ ಮೇಲೆ ಕೈಯಾಡಿಸುವನೆಂಬ ಆಸೆಯೇನೂ ಆಕೆಗೆ ಈಗ ಇರಲಿಲ್ಲ. ಆದರೂ ಆಕೆ ಅತ್ತಳು.

"ಎದ್ದು ಒಳಗೆ ಹೋಗು..."

—ಹಿಮದ ಗಡ್ಡೆಯಂತಹ ಮೂರು ಪದಗಳು ಬಂದು ಆಕೆಯ ಕಿವಿಗೆ ಬಡೆದುವು.

ತಣ್ಣಗಾಗಿ ಆಕೆ ಮುದುಡಿ ಬಿದ್ದಳೇ ಹೊರತು ಏಳಲಿಲ್ಲ.

ಮತ್ತೆ ಹಿಮಗಡ್ಡೆಯ ನಾಲ್ಕು ತುಣುಕುಗಳು—ಬಂದುವು:

"ಎದ್ದು ಒಳಗೆ ಹೋಗು ಅಂದೆ."

ಸುನಂದಾ ನಿಧಾನವಾಗಿ ಎದ್ದು, ಬಿಕ್ಕಿ ಬಿಕ್ಕಿ ಅಳುತ್ತ, ಕೊಠಡಿಯಿಂದ ಹೊರಕ್ಕೆ ಹಜಾರದೊಳಕ್ಕೆ ಹೋದಳು.

ಮರದ ಕೊರಡುಗಳು ಜತೆಯಾಗಿದ್ದುವು. ಆದರೆ ಬಿರುಗಾಳಿ ನಿಂತಿರಲಿಲ್ಲ. ಅದು ಬೀಸಿತು—ಮತ್ತೂ ಬಲವಾಗಿ. ಆ ಒತ್ತಡಕ್ಕೆ ಸಿಲುಕಿ ಕೊರಡುಗಳು ಮತ್ತೊಮ್ಮೆ ಬೇರೆಯಾದುವು—ಮತ್ತೊಮ್ಮೆ.

## ೧೬

ಮಾರನೆಯ ದಿನ ಬೆಳಿಗ್ಗೆ ಸುನಂದಾ ಬೇಗನೆ ಎದ್ದು, ಗಂಡನ ಮುಖ ನೋಡಬೇಕೆಂದು ಬಾರಿ ಬಾರಿಗೂ ಯತ್ನಿಸಿದಳು. ಕಾಫಿ ಮಾಡಿ ವಿನೀತಳಾಗಿ ಕೊಂಡೊಯ್ದಳು. ಸ್ನಾನದ ಮನೆಗೆ ಆತನನ್ನು ಹಿಂಬಾಲಿಸಿ ಟವೆಲು ಒಯ್ದಿಟ್ಟಳು.

ಆದರೆ ಆತ ಒಮ್ಮೆಯೂ ಆಕೆಯನ್ನು ಸರಿಯಾಗಿ ದಿಟ್ಟಿಸಿ ನೋಡಲಿಲ್ಲ.

ಯಾವ ಆಸೆಯೂ ಉಳಿಯದೆ ಸುನಂದಾ ಮೌನವಾಗಿ ತನ್ನ ವಿಧಿಯನ್ನು ಹಳಿದಳು.

* * * *

ಪುಟ್ಟಣ್ಣ ಆಫೀಸಿಗೆಂದು ಹೊರಟ. ಆತನ ಮೆದುಳು ಸಿಡಿಮಿಡಿ ಗುಟ್ಟುತಿತ್ತು. ಸುನಂದಾ ತನ್ನನ್ನೆ ನೋಡುತ್ತಿದ್ದಳೆಂಬುದು ಗೊತ್ತಿತ್ತು ಆತನಿಗೆ. ಆ ಕಾರಣದಿಂದಲೇ ಆತ ಆಕೆಯ ಕಣ್ಣುಗಳನ್ನು ಅಪ್ಪಿತಪ್ಪಿಯೂ ಸಂಧಿಸದಂತೆ ಎಚ್ಚರ ವಹಿಸಿದ.

ಆಫೀಸು ಸೇರಿದಾಗ ಅಲ್ಲಿ ಕೆಲಸ ಮಾಡಲು ಮನಸ್ಸಾಗಲಿಲ್ಲ. ಆರೋಗ್ಯ ಸರಿಯಾಗಿಲ್ಲವೆಂದು ಚೀಟಿ ಬರೆದಿಟ್ಟು, ಊಟ ಬಂದಾಗ ಮನೆಗೆ ವಾಪಸು ಕಳುಹಲು ಜವಾನನಿಗೆ ಹೇಳಿ, ಹೊರಬಂದ.

ಆತ ಸಾಮಾನ್ಯವಾಗಿ ಹೆಚ್ಚಾಗಿ ಸಿಗರೇಟು ಸೇದುತ್ತಿರಲಿಲ್ಲ. ಆಪ್ತ ಕೋಟಿಯ ಸಂಸರ್ಗದಲ್ಲಿದ್ದಾಗ ಎಷ್ಟೋ ಅಷ್ಟೆ. ಈ ದಿನ ಒಬ್ಬನೇ ಸೇದಬೇಕೆಂದು ಆಸೆಯಾಯಿತು. ಒಂದು ಪ್ಯಾಕೆಟು ಪ್ಲೇಯರ್ಸ್ ಸಿಗರೇಟನ್ನೂ ಬೆಂಕಿ ಪೊಟ್ಟಣವನ್ನೂ ಕೊಂಡುಕೊಂಡು ಒಂದರ ಮೇಲೊಂದಾಗಿ ಸೇದತೊಡಗಿದ.

ಬೀದಿ ನಡೆದುದಾಯಿತು. ಕಾಲುಗಳು ಲಾಲ್‌ಬಾಗ್ ಸೇರಿದುವು. ರಜಾ ದಿನವಲ್ಲದ ಹೆಚ್ಚಿನ ಜನಸಂಚಾರವಿಲ್ಲದ ಮಧ್ಯಾಹ್ನದ ಆ ಹೊತ್ತು, ಮರಗಿಡ ಹೂ ಹುಲ್ಲುಗಳೆಲ್ಲ ತಮ್ಮೊಳಗೇ ಸರಸ ಸಲ್ಲಾಪ ನಡೆಸುತ್ತಿದ್ದುವು. ಪುಟ್ಟಣ್ಣ ಒಂದು ಶಿಲಾಸನದ ಮೇಲೆ ಕುಳಿತ. ಕುಳಿತು ಸಿಗರೇಟು ಸೇದುತ್ತ ಯೋಚಿಸಿದ.

ತಾನು ದುರ್ಬಲ ಮನುಷ್ಯ. ಎಲ್ಲರ ಹಾಗೆಯೇ. ಅದರಲ್ಲಿ ಸಂದೇಹವಿರಲಿಲ್ಲ. ತಾನು ಯೋಚಿಸಿದ್ದೇನು? ಆದದ್ದೇನು?

ಈ ಸಂಸಾರದ ಬಂಧನಗಳನ್ನೆಲ್ಲ ಹೇಗಾದರೂ ಮಾಡಿ ಕಡಿದು ಹಾಕಬೇಕೆಂಬುದು ಆತನ ಅಪೇಕ್ಷೆಯಾಗಿತ್ತು. ಜಗಳವಾಡಿ, ಹೆಂಡತಿ ತಂದೆ ಮನೆಗೆ ಹೊರಟುಹೋದರೆ, ಈ ಸಮಸ್ಯೆ ಬಗೆಹರಿಯುತ್ತದೆಂದು ಆತ ಎಷ್ಟು ಸಾರೆ ಯೋಚಿಸಿರಲಿಲ್ಲ? ಆ ಪರಿಸ್ಥಿತಿಯನ್ನು ಉಂಟುಮಾಡುವುದಕ್ಕೋಸ್ಕರವೇ ಅಲ್ಲವೆ ಮನೆಯಲ್ಲಿ ಆ ರೀತಿ ವರ್ತಿಸುತಿದ್ದುದು?

ಇಸ್ಪೀಟು ಆಟದಲ್ಲಿ, ದುಡ್ಡು ಬರುತ್ತಿತ್ತು–ಹೋಗುತ್ತಿತ್ತು. ಅದು ಚಿಲ್ಲರೆ ವಿಷಯ. ತನಗೆ ಕಣ್ಣಿದ್ದುದು ದೊಡ್ಡ ರೀತಿಯ, ಕೊಂಡು ಮಾರುವ, ಸುಲಭ ಲಾಭದ ವ್ಯಾಪಾರದ ಮೇಲೆ. ಆ ಸಂಬಂಧದಲ್ಲಿ ತಾನು ಊರೂರು ಸಂಚಾರ ಮಾಡಬೇಕು, ಜಗತ್ತನ್ನು ನೋಡಬೇಕು, ತನ್ನನ್ನು ಹಿಂದಕ್ಕೆ ಬಿಗಿಹಿಡಿಯುವ ಯಾವ ಅಡಚಣೆಯೂ ಇರಬಾರದು–ಎಂದೆಲ್ಲ ಆತ ಅಂದುಕೊಂಡಿದ್ದ. ಮೊದಮೊದಲು ಕುಡಿತವೂ ಆತನಿಗೆ ಇಷ್ಟವಿರಲಿಲ್ಲ. ಅಭ್ಯಾಸವಾದ ಮೇಲೆ ಪ್ರಿಯವೆನಿಸಿತು....ಅದೇ ಸಂದರ್ಭದಲ್ಲಿ ಹೆಣ್ಣಿನ ಪ್ರಸ್ತಾಪ ಬಂದಿತ್ತು ಎಷ್ಟೋ ಸಾರೆ. ಜತೆಗಾರನೊಬ್ಬ ತನ್ನ

ಸಾಹಸಗಳನ್ನೆಲ್ಲ ಚಿತ್ರವಿಚಿತ್ರವಾಗಿ ಬಣ್ಣಿಸುತ್ತಿದ್ದ. ಪುಟ್ಟಣ್ಣ ಅದನ್ನು ಕೇಳಿ ನಗುತ್ತಿದ್ದನೇ ಹೊರತು, ಹೆಚ್ಚಿನ ಆಸಕ್ತಿ ತೋರುತ್ತಿರಲಿಲ್ಲ.

"ನಿಮ್ಮ ಮನೇ ಆಕರ್ಷಣೆ ಭಾರೀಂತ ತೋರುತ್ತೆ!"

—ಎಂದಿದ್ದ ಒಬ್ಬ ಜತೆಗಾರ ಒಮ್ಮೆ.

ಆ ವಿಷಯದಲ್ಲಿ ಇತರರ ತಿಳಿವಳಿಕೆ ತಪ್ಪಾಗಿತ್ತು. ಹಾಗಿತ್ತೆಂದು ಒಂದು ರೀತಿಯ ಸಂತೋಷ ಪುಟ್ಟಣ್ಣನಿಗೆ. ತಾನು ಇತರರಿಗಿಂತ ಭಿನ್ನನಾಗಬೇಕು; ಇತರರಿಗೆ ತಾನು ಒಗಟಾಗಬೇಕು; ತಾನೆಂದಿಗೂ ಸಾಮಾನ್ಯನಾಗಬಾರದು—ಇದು ಆತನಿಗಿದ್ದ ಆಸೆ.

ದೇಹಕ್ಕೆ ಸಂಬಂಧಿಸಿದ ಅವಶ್ಯಕತೆಯನ್ನು ಸದಾ ಕಾಲವೂ ತಡೆಗಟ್ಟಬೇಕೆಂದು ಆತ ಯೋಚಿಸಿದ್ದನೆಂದಲ್ಲ. ಅದರ ಪೂರೈಕೆ ಆತನಿಗೆ ಕಷ್ಟವಾಗಿರಲಿಲ್ಲ. ಆದರೆ, ಸುನಂದೆಯನ್ನು ಮಾತ್ರ ಹಾಸಿಗೆಯ ಒಡನಾಡಿಯಾಗಿ ಮತ್ತೆ ಒಪ್ಪಿಕೊಳ್ಳಲು ಆತ ಸಿದ್ಧನಿರಲಿಲ್ಲ. ಅದಕ್ಕೆ ಕಾರಣ, ಸಂಸಾರದ ಸಂಕೋಲೆ ಮತ್ತೆ ತನ್ನನ್ನು ಬಲವಾಗಿ ಬಿಗಿಯಬಹುದೆಂಬ ಭೀತಿ. ಹಾಗೆಯೇ, ತನ್ನ ಜೀವನದ ಮೇಲೆ ಮನೆಯಾಕೆಗೆ ಯಾವ ಹಿಡಿತವೂ ಇರಬಾರದೆಂಬ ಆಸೆ.

...ಅಂಥಾದ್ದರಲ್ಲಿ ನಿನ್ನೆ ರಾತ್ರೆ ಎಂತಹ ಪ್ರಮಾದವಾಗಿ ಹೋಯಿತು!

ಪುಟ್ಟಣ್ಣನೆಂದುಕೊಂಡ:

'ಈ ದೌರ್ಬಲ್ಯವೇ ನನ್ನ ಪಾಲಿನ ಶನಿ. ನಾನಿದನ್ನು ಜಯಿಸಲೇಬೇಕು. ಮತ್ತೊಮ್ಮೆ ಹೀಗಾಗಬಾರದು.'

ಒಳದನಿ ನಕ್ಕಿತು.

'ಮತ್ತೊಮ್ಮೆಯ ಮಾತು! ನಿನ್ನೆಯದೇ ಸಾಲದೇನೋ? ಅಂತೂ ನಿನ್ನ ಸಂಸಾರದಲ್ಲಿ ಚಿಳ್ಳೆ ಪಿಳ್ಳೆಗಳು ಹೆಚ್ಚುತ್ತವೆ!'

ಆತನ ಕೋಪಕ್ಕೆ ಅದೇ ಕಾರಣ—ತಾನು ಮತ್ತೊಮ್ಮೆ ತಂದೆಯಾಗಬಹುದು ಎಂಬ ಭೀತಿ.

ಹೀಗೆ ಕೈಗೊಂದು ಕಾಲಿಗೊಂದು ಬೇಡಿ ಹಾಕಿಕೊಳ್ಳುತ್ತಲೇ ಹೋದರೆ, ತಾನೂ ಪ್ರತಿ ತಿಂಗಳ ಸಂಪಾದನೆಯಿಂದ ಸಂಸಾರ ಸಾಗಿಸುವ ಬಡ ಗುಮಾಸ್ತೆಯಾಗಿಯೇ ಸಾಯುವುದು ಖಂಡಿತ.

....ಕುಳಿತು ಬೇಸರವಾಗಿ ಪುಟ್ಟಣ್ಣ ಹೊರಬಂದ. ದಂಡಿನ ಕಡೆಯಿಂದೊಂದು ಬಸ್ಸು ಬಂತು. ಅದನ್ನೇರಿ ಗಾಂಧಿ ಬಜಾರಿಗೆ ಹೋಗಿ, ಊಟದ ಬದಲಾಗಿ ತಿಂಡಿ ತಿಂದು ಕಾಫಿ ಕುಡಿದ. ಬೇರೊಂದು ಬಸ್ಸು ಹತ್ತಿ ಮಾರ್ಕೆಟು ತಲಪಿದ.

ಸಂಜೆಯವರೆಗೆ ಹೇಗೆ ಹೊತ್ತು ಕಳೆಯಬೇಕೆನ್ನುವುದೇ ಆತನಿಗೆ ಸಮಸ್ಯೆಯಾಯಿತು. ಅಲ್ಲೇ ಸಮೀಪದಲ್ಲಿದ್ದ ಒಂದೇ ಒಂದಾದ ಚಲಚ್ಚಿತ್ರ ಮಂದಿರವನ್ನು ಹೊಕ್ಕು ಯಾವುದೋ ಮ್ಯಾಟಿನಿ ನೋಡಿದ. ಪ್ರಣಯ—ಶೋಕ ಸಂತಾಪ—ಪ್ರತೀಕಾರ—ಹಾಡು-ಮತ್ತೆ ಪ್ರಣಯ...ನೋಡುವುದನ್ನು ಬಿಟ್ಟುಕೊಟ್ಟು, ಕುಳಿತಲ್ಲೆ ಎವೆ

ಮುಚ್ಚಿ ಪುಟ್ಟಣ್ಣ ಯೋಚಿಸಿದ:

ಮತ್ತೆ ಹಿಂದಿನ ರಾತ್ರೆಯ ನೆನಪು. ಒಂದೊಂದೇ. ಆಕೆ ಮಾತನಾಡಿದವರೆಗೆ. 'ಇನ್ನು ಮೊದಲಿನ ಹಾಗೇ ಇರ್ತೀನೀಂತ ಮಾತು ಕೊಡಿ' ಎಂದು ಆಕೆ ಅಂಗಲಾಚಿದುವರೆಗೆ...

ಮೊದಲಿನ ಹಾಗಿರುವುದು—ಅದು ಸಾಧ್ಯವೇ ಇರಲಿಲ್ಲ.

ಆದರೆ ಮತ್ತೆ ತಾನು ಸುನಂದೆಯು ಮೈಮುಟ್ಟದೇ ಇರುವುದು ನಿಜವೇ? ಆ ಸುಖ—

....ಚಿತ್ರ ಮುಕ್ತಾಯವಾಗುವುದಕ್ಕೆ ಮುಂಚೆಯೇ ಪುಟ್ಟಣ್ಣ ಹೊರ ಬಿದ್ದು, ಹೋಗುತ್ತ ಬರುತ್ತಲಿದ್ದ ನೂರಾರು ಜನರನ್ನು ಮಾರ್ಕೆಟಿನ ಬಳಿ ಒಂದೈದು ನಿಮಿಷ ಸುಮ್ಮನೆ ನೋಡುತ್ತಿದ್ದು, ತನ್ನ ಸ್ನೇಹಿತನ ಮನೆಯ ಕಡೆಗೆ ನಡೆದ.

ಅಲ್ಲಿ ಸ್ವಲ್ಪ ಹೊತ್ತು ಆಡುತ್ತ ಕುಳಿತಿದ್ದು, ಕತ್ತಲಾದ ಮೇಲೆ ಒಬ್ಬ ಜತೆಗಾರನಿಗೆ ಹೇಳಿದ:

"ಒಂದು ದಿವಸ ನೀನು ಹೇಳಿದ್ದೆ ನೋಡು—ಕರಕೊಂಡು ಹೋಗ್ತೀನೀಂತ. ನಡಿ, ಬರ್ತೀನಿ."

ಆಟವನ್ನು ಅಲ್ಲೆ ಬಿಟ್ಟು ಆ ಇನ್ನೊಬ್ಬ ನುಡಿದ:

"ಕೊನೆಗೂ ಮನೆ ಬೇಸರ ಬಂತು ಅಲ್ವೇನೊ? ಏಳು. ನೀನು ಪುನಃ ಮನಸ್ಸು ಬದಲಾಯಿಸೋಕ್ಮುಂಚೆಯೇಕರಕೊಂಡು ಹೋಗ್ತೀನಿ."

* * * *

'ಡಬ್ಬಾವಾಲಾ' ಊಟದ ಚೀಲವನ್ನು ಹಿಂತಿರುಗಿ ತಂದಾಗ ಸುನಂದಾ ಕೇಳಿದಳು:

"ಯಾಕಪ್ಪಾ?"

"ರಾಯರು ಆಫೀಸ್ನಲ್ಲಿಲ್ಲಾಂತ ಜವಾನ ಹೇಳ್ದ ತಾಯಿ."

ಸುನಂದೆಯ ಪಾಲಿಗೆ ಪರಿಸ್ಥಿತಿ ಮತ್ತಷ್ಟು ಜಟಿಲವಾಯಿತು. ತನ್ನ ಗಂಡನ ಮನಸ್ಸಿನಲ್ಲಿ ಏನಿದೆಯೆಂಬುದನ್ನೇ ಆಕೆ ತಿಳಿಯದೇ ಹೋದಳು.

ಎಂದಿನಂತೆ ರಾಧಮ್ಮ, "ಅಡುಗೆ ಏನ್ಮಾಡಿದೀರಾ?" ಎಂದೆಲ್ಲ ಕೇಳಿದ್ದರು. ಪರೀಕ್ಷಿಸುವ ದೃಷ್ಟಿಯಿಂದ ಆಕೆಯನ್ನು ಅವರು ನೋಡಿದ್ದರೇ ಹೊರತು, ಬಾಯಿ ಬಿಟ್ಟು ಬೇರೇನನ್ನೂ ಕೇಳಿರಲಿಲ್ಲ.

ಆದರೆ, ಸುನಂದೆ ಗಂಡನಿಗೆ ಕಳುಹಿದ್ದ ಊಟ ಹಿಂತಿರುಗಿ ಬಂದುದನ್ನು ಕಂಡ ಮೇಲೆ, ರಾಧಮ್ಮ ಮತ್ತೊಮ್ಮೆ ಬಂದರು.

"ಅದ್ಯಾಕ್ರೀ ಊಟ ವಾಪ್ಸು ಬಂತು?"

ಸುನಂದಾ ಯಾವುದೋ ಕೆಲಸ ಮಾಡುತ್ತಿದ್ದವಳಂತೆ ನಟಿಸುತ್ತಾ, ತಲೆಯೆತ್ತದೆಯೇ ಹೇಳಿದಳು:

"ಅವರು ಆಫೀಸ್ನಲ್ಲಿಲ್ಲವಂತೆ ಕಣ್ರೀ..."

ಗಂಡನನ್ನು ಒಲಿಸಿಕೊಳ್ಳುವ ವಿಷಯದಲ್ಲಿ ಸುನಂದಾ ಭಾಗ್ಯಶಾಲಿಯಾಗಲಿಲ್ಲ ಎಂದು ರಾಧಮ್ಮನಿಗೆ ತೋರಿತು. 'ಪಾಪ!' ಎಂದು ನಿಟ್ಟುಸಿರು ಬಿಟ್ಟು ಅವರು ಮನೆಗೆ ಮರಳಿದರು.

ಹೀಗೆ, ಹಿಂದಿನ ದಿನದ ಘಟನೆ ವೈಯಕ್ತಿಕ ಪ್ರಕರಣವಾಗಿ ಸುನಂದೆಯೊಬ್ಬ ಳಲ್ಲೇ ಉಳಿಯಿತು. ಆ ಅನುಭವವೂ ಅವಮಾನವೂ ಆ ವಿಜಯವೂ ಸೋಲೂ ಆಕೆ ಯೊಬ್ಬಳಲ್ಲೇ ಉಳಿದ ರಹಸ್ಯವಾಯಿತು.

ಸಂಜೆಯಾದಾಗ, ತನಗೆ ಹಸಿವಿಲ್ಲದೇ ಇದ್ದರೂ ಗಂಡನಿಗೋಸ್ಕರ ಸುನಂದಾ ಒಂದಿಷ್ಟು ಅಡುಗೆ ಮಾಡಿದಳು.

ಅಭ್ಯಾಸ ಬಲದಿಂದ ಆಕೆಯ ಕಾಲುಗಳು ಬಾಗಿಲ ಬಳಿ ಹೋದಾಗ, ಕುಸು ಮಳೂ ಆಕೆಯ ಗಂಡನೂ ಸಂಜೆಯ ವಾಯು ವಿಹಾರ ಮುಗಿಸಿ ಹಿಂತಿರುಗುತ್ತಿದ್ದು ದನ್ನು ಸುನಂದಾ ಕಂಡಳು. ಆ ದಂಪತಿ ಬೀದಿಯುದ್ದಕ್ಕೂ ಗಟ್ಟಿಯಾಗಿ ನಗುತ್ತ ಮಾತನಾಡುತ್ತ ಬರುತ್ತಿರಲಿಲ್ಲ. ಹಸನ್ಮುಖಿಗಳಾಗಿದ್ದರೂ ಅವರ ನಡಿಗೆಯಲ್ಲಿ ಗಾಂಭೀರ್ಯವಿತ್ತು. ಅವರಿಬ್ಬರ ನಡುವೆ, ಮಾತಿಲ್ಲದೆಯೇ ಪರಸ್ಪರ ತಿಳಿವಳಿಕೆ ನೀಡು ತ್ತಿದ್ದ ಮೌನ ನೆಲೆಸಿತ್ತು.

ಮರೆಯಾಗಿ ನಿಂತು ಅವರನ್ನು ಕಣ್ಣುತುಂಬ ನೋಡಿ, ತನ್ನೊಳಗಿನ ನೋವೂ ಹಚ್ಚ ಹಸುರಾಗಿಯೇ ಇದೆ ಎಂಬುದನ್ನು ಮನಗಂಡು, ಸುನಂದಾ ಒಳಕ್ಕೆ ಬಂದಳು.

ಹಗಲು ಮುಗಿದು ಮತ್ತೆ ಕತ್ತಲು...

ನಿನ್ನೆ ಇಷ್ಟು ಹೊತ್ತಿಗೆ–

ಆಕೆ ಬಲು ನಿಧಾನವಾಗಿ ತನ್ನ ಹಾಸಿಗೆ ಹಾಸಿದಳು.

ಅಷ್ಟರಲ್ಲೇ–

* * * *

ಪಕ್ಕದಲ್ಲಿದ್ದ ಖಾಲಿ ನಿವೇಶನದ ಗುಡಿಸಲಿನಿಂದ, ದೀರ್ಘವಾಗಿ ಅಳುವ ಸ್ವರ ಕೇಳಿಸಿತು. ಪರಿಚಿತವಾದ ಹೆಣ್ಣು ಧ್ವನಿ. ಅದು ಕೂಗಳತೆಯ ದೂರಕ್ಕೆಲ್ಲ ಕೇಳಿಸು ವಂತಹ ರೋದನ.

ಆತ ಕುಡಿದ–ತೊದಲುತ್ತಿದ್ದ–ಧ್ವನಿಯಲ್ಲಿ ರೇಗಾಡುತ್ತಿದ್ದ:

"ಮುಂಡೆ! ನನಗ್ಗೊತ್ತು, ಯಾರನ್ನೋ ಮಡಿಕ್ಕೊಂಡಿದೀಯಾ."

"ಈ ಸೈತಾನ ನನ್ನ ಹೊಡೆದು ಕೊಲ್ತಾನಪ್ಪೋ ಕೊಲ್ತಾನೆ!"

"ಅವನು ಯಾರು? ನಿಜ ಹೇಳು. ಇಬ್ಬರನ್ನೂ ಒಟ್ಟಿಗೇ ಖೂನಿ ಮಾಡ್ತೀನಿ."

ಆಗ ಆಕೆಯ ಉತ್ತರದಲ್ಲಿ ಬೆದರಿಕೆಯನ್ನು ಇದಿರಿಸುವ ಲಕ್ಷಣ ಕಂಡಿತು:

"ಬಹಳ ನೋಡಿದೀನಿ ಖೂನಿ ಮಾಡೋರ್ನ! ಗೂಬೆ! ಸಂಪಾದಿಸಿದ್ದನ್ನೆಲ್ಲ

ಯಾವಳೋ ಸೂಳೆಗೆ ಕೊಟ್ಟು, ಕುಡಿದು ತೂರಾಡ್ಕೊಂಡು ಹಟ್ಟಿಗೆ ಬಂದು, ನನ್ನ ಮೇಲೆ ಅಧಿಕಾರ ತೋರಿಸ್ತಾನೆ. ಹೋಗಲೇ..."

ಮರದ ಕೊರಡಿನಿಂದ ಹೊಡೆತ–ಮಗುವಿನ ಅಳು–ಗಡಿಗೆ ಒಡೆದ ಸದ್ದು...

ಮತ್ತೆ ಆ ಹೆಂಗಸಿನ ರೋದನ.

ಅಲ್ಲಿ ರಹಸ್ಯವಿರಲಿಲ್ಲ; ನಾಚಿಕೆ ಇರಲಿಲ್ಲ ಆಕೆಗೆ; ಹೊರಗಿನ ಜನ ಕೇಳುವರು, ನಗುವರು, ಎಂಬ ಭಯವಿರಲಿಲ್ಲ.

....ಸುನಂದಾ ಅಡುಗೆಮನೆಯಲ್ಲಿ ಕಿಟಿಕಿಯ ಬಳಿನಿಂತು ಅದನ್ನೆಲ್ಲ ನೋಡು ತ್ತಿದ್ದವಳು, ತುಂಬಾ ಬೇಸರಪಟ್ಟು, ಆ ರೋದನ ಕೇಳಿಸದಿರಲೆಂದು ಕಿಟಿಕಿ ಮುಚ್ಚಿದಳು.

ಹಾಗೆ ಮುಚ್ಚಿದರೂ ಸ್ವರ ಮಾತ್ರ ಹೇಗೋ ನುಸುಳಿ ಒಳಕ್ಕೆ ಸಂಚರಿಸಿತು.

ಸುನಂದಾ ಹಾಸಿಗೆಯ ಮೇಲೆ ಮಲಗಿಕೊಂಡಳು. ಉಸಿರು ಕಟ್ಟಿದ ಹಾಗಾ ಯಿತು. ಸ್ವಲ್ಪ ಹೊತ್ತು ಬಾಯಿ ತೆರೆದೇ ಆಕೆ ಮಲಗಿದಳು.

ಆದರೆ ಕಿವಿಗಳೂ ತೆರೆದಿದ್ದುವು. ಹೊರಗಿನಿಂದ ಬರುತ್ತಿದ್ದ ಹೆಣ್ಣಿನ ರೋದನದ ಧ್ವನಿ ಒಳಗೆಲ್ಲ ಸುತ್ತಾಡಿ ಆಕೆಯ ಕಿವಿಗಳನ್ನು ಹೊಕ್ಕಿತು.

## ೧೭

ಸರಸ್ವತಿಯ ಹುಟ್ಟುಹಬ್ಬ ಸಮೀಪ ಬಂದಂತೆ ಸುನಂದಾ, ಬದುಕಿನಲ್ಲಿ ಹೆಚ್ಚು ಉತ್ಸಾಹ ತೋರಿದಳು. ಪುಟ್ಟ ಸರಸ್ವತಿ ಈಗ ತೊದಲು ಮಾತನಾಡುತ್ತಿದ್ದಳು. ತನ್ನಿಂದ ದೂರವಾಗಿಯೇ ಇರುತ್ತಿದ್ದ ಅಪ್ಪನಿಗಿಂತಲೂ 'ಅಮ್ಮಾ' ಪದವೇ ಹೆಚ್ಚು ಇಷ್ಟವಾದುದು ಆಕೆಗೆ. ತಲೆಗೂದಲು ಗುಂಗುರು ಗುಂಗುರಾಗಿ ಬೆಳೆಯುತ್ತಿತ್ತು. ಮುಖ ದುಂಡಗೆ ಮುದ್ದಾಗಿತ್ತು.

ಇನ್ನು ಕೆಲ ತಿಂಗಳಲ್ಲೇ ತಾನೂ ತಾಯಿಯಾಗುವ ನಿರೀಕ್ಷೆಯಲ್ಲಿದ್ದ ಕುಸುಮಾ ಹೇಳುತ್ತಿದ್ದಳು:

"ಈ ಮೂಗು ಕಣ್ಣು ಎಲ್ಲಾ ನಿಮ್ಮ ಹಾಗೆಯೇ ಕಣ್ರೀ...."

ತನ್ನ ಹಾಗೆಯೇ ಮಗು. ಹೆಣ್ಣು–ತನ್ನ ಹಾಗೆಯೇ.

ಆದರೆ ಅದರ ಬಾಳ್ವೆ ಮಾತ್ರ ತನ್ನದರ ಹಾಗಾಗಬಾರದು.

...ರಾಧಮ್ಮನ ಸಖ್ಯ, ಮನುಷ್ಯತ್ವವನ್ನು ಅವಳಲ್ಲಿ ಜಾಗೃತಗೊಳಿಸುತ್ತಿತ್ತು; ಕುಸುಮಳ ಸ್ನೇಹ, ತಾನೂ ವಿದ್ಯಾವತಿ ಎಂಬ ಅರಿವನ್ನು.

ತನಗಿಂತಲೂ ಹೆಚ್ಚು ಓದಿದ್ದಳು ಕುಸುಮಾ. ಆ ಓದು ಆಕೆಯನ್ನು ಮತ್ತಷ್ಟು

ವಿನಯಶೀಲಳಾಗಿ ಮಾಡಿತ್ತು. ಒಳ್ಳೆಯ ಪುಸ್ತಕ ಸಂಗ್ರಹವಿತ್ತು ಅವರ ಮನೆಯಲ್ಲಿ. ಇಂಗ್ಲಿಷ್ ಪುಸ್ತಕಗಳೇ ಹೆಚ್ಚು-ಕೆಲವು ಕನ್ನಡ. ಸುನಂದಾ ಒಂದೊಂದಾಗಿ ಅವುಗಳನ್ನು ಓದಲು ತಂದಳು. ಮಗು ನಿದ್ದೆ ಹೋಗಿದ್ದಾಗ ತಾನು ಒಬ್ಬಳೇ ಉಳಿದಾಗ ಆಕೆ ಓದಿದಳು. ಬರೆಹಗಾರ ಸೃಷ್ಟಿಸಿದ್ದ ಪಾತ್ರಗಳಲ್ಲಿ ತನ್ನ ಪಡಿನೆಳಲನ್ನು ಕಾಣಲೆತ್ನಿಸುವುದು, ಕಾಲ್ಪನಿಕ ವ್ಯಕ್ತಿಗಳು ವಾಸ್ತವವೇ ಎನ್ನುವಂತೆ ತೋರುತ್ತಿದ್ದ ಲೋಕದಲ್ಲಿ ವಿಹರಿಸುವುದು, ಆಕೆಗೆ ಇಷ್ಟವಾಯಿತು. 'ಒಂಟಿ ಜೀವಕ್ಕೆ ಪುಸ್ತಕದಂತಹ ಸ್ನೇಹಿತ ಇನ್ನೊಂದಿಲ್ಲ'-ಎಂಬ ಮಾತಿನ ಸತ್ಯತೆಯನ್ನು ಕಾಣಲು ಆಕೆಗೆ ಕಷ್ಟವಾಗಲಿಲ್ಲ. ಆದರೆ, ಗಂಡನ ಕೆಂಗಣ್ಣಿನ ಶಾಖ ಪುಸ್ತಕಕ್ಕೆ ತಗಲದಂತೆ ಮಾತ್ರ, ಆಕೆ ಎಚ್ಚರ ವಹಿಸಿದಳು.

ಕನ್ನಡ ಕಥೆ ಪುಸ್ತಕಗಳನ್ನು ರಾಧಮ್ಮನೂ ಕೊಂಡೊಯ್ದು ಓದಿದರು. ಆದರೆ ಆ ಓದು ವಿಲಂಬವಾಗುತ್ತಿತ್ತು. ತಿಂಗಳಿಗೆ ಮೂರು ದಿನಗಳ ರಜಾ ಪಡೆದಾಗ ಮಾತ್ರ, ಆ ಅವಧಿಯಲ್ಲಿ ಒಂದು ಇಡೀ ಕಥೆ ಪುಸ್ತಕವನ್ನು ಅವರು ಓದುತ್ತಿದ್ದರು.

ಸುನಂದೆಯ ಬದುಕೂ ಒಂದು ಸ್ವರೂಪ ಪಡೆದಿತ್ತು ಈಗ. ಗಂಡನ ದುರ್ಲಕ್ಷ್ಯ ವರ್ತನೆ, ಬದಲಾಗುವುದು ಸಾಧ್ಯವೇ ಇಲ್ಲವೆನ್ನುವಷ್ಟು ಬಲವಾಗಿತ್ತು. ಆತ ತಿಂಗಳ ವೆಚ್ಚಕ್ಕೆ ಬೇಕಾದ ಹಣವನ್ನೆಲ್ಲ ಒಂದೇ ಸಲ ಆಕೆಗೆ ಕೊಟ್ಟುಬಿಡುತ್ತಿದ್ದ. ಬಟ್ಟೆಬರೆ ಎಂದು ಮಾತೆತ್ತಿದರೆ ಎಂದಾದರೊಮ್ಮೆ ಹೆಚ್ಚು ಹಣ. ಆತ ತಾನಾಗಿಯೇ ಏನನ್ನೂ ಕೊಂಡು ತರುತ್ತಿರಲಿಲ್ಲ. ಮಾತು, ಕೆಲಸದವಳೊಡನೆ ಆಡುವಂತೆ. ಆತ ಎಷ್ಟೋ ಸಾರೆ ಊಟಕ್ಕೆ ಬರುತ್ತಿರಲಿಲ್ಲ. ಹೆಂಡತಿ ಹೊರಗಾದ ದಿನಗಳಲ್ಲಂತೂ ಮನೆಯ ಕಡೆ ತಿರುಗಿ ನೋಡುತ್ತಿರಲಿಲ್ಲ. ಆಗ ರಾಧಮ್ಮನ ಆಸರೆ ಪಡೆಯುತ್ತಿದ್ದಳು ಸುನಂದಾ.

ಬೇರೆ ಹೆಣ್ಣಿನ ಸಹವಾಸ ಸುಖ ತನ್ನ ಗಂಡನಿಗೆ ಲಭಿಸುತ್ತಿದೆಯೆಂಬ ಸಂದೇಹ ಆಕೆಯಲ್ಲಿ ಮೂಡಿ ಬಲಗೊಂಡಿತು.

ಅಷ್ಟಿದ್ದರೂ ಆಕೆ ಸರಸ್ವತಿಯ ಬಾಲಲೀಲೆಗಳನ್ನು ನೋಡುತ್ತ, ಉಳಿದೆಲ್ಲ ಕೊರಗನ್ನು ಮರೆಯಲು ಯತ್ನಿಸಿದಳು.

ಸರಸ್ವತಿಯ ಹುಟ್ಟುಹಬ್ಬಕ್ಕೆ ಪೂರ್ವಸಿದ್ಧತೆಯಾಗಿ ಆಕೆ, ತಾನು ಮಿತವ್ಯಯ ಮಾಡಿ ಉಳಿಸಿದ್ದ ಹಣದ ಸಹಾಯದಿಂದ, ರೇಶಿಮೆಯ ಬಣ್ಣಬಣ್ಣದ ಉಡುಪನ್ನು ಹೊಲಿಸಿದಳು. ಆ ದಿನಕ್ಕೆ ಹಿಂದಿನ ಸಂಜೆ ಮನೆಯನ್ನೆಲ್ಲ ಗುಡಿಸಿ ಸಾರಿಸಿ ಓರಣಗೊಳಿಸಿದಳು. ಈ ಸಿದ್ಧತೆ ಯಾಕೆ? ಎಂದು ಪುಟ್ಟಣ್ಣ ಕೇಳಬಹುದು. ಆಗ, ನಾಳೆ ನಿಮ್ಮ ಮಗಳು ಹುಟ್ಟಿದ ಹಬ್ಬ-ಎನ್ನಬೇಕು, ಎಂದುಕೊಂಡಿದ್ದಳು ಸುನಂದಾ. ಆದರೆ ಆತ ಕೇಳಲೇ ಇಲ್ಲ. ಆ ದಿನ ಗಂಡನಿಗೂ ನೆನಪಿರಬಹುದು ಎಂಬ ಆಸೆಯೂ ಒಂದಿತ್ತು. ಅದೂ ಸುಳ್ಳಾಯಿತು. ಆತನ ನಡೆನುಡಿಯಲ್ಲಿ, ಆ ನೆನಪಿನ ಯಾವ ಚಿಹ್ನೆಯೂ ಕಾಣಲಿಲ್ಲ. 'ನೆನಪಿದ್ದೂ ಈ ರೀತಿ ವರ್ತಿಸುತ್ತಿದ್ದಾರೇನೋ' ಎಂಬ ಶಂಕೆಯೂ ಮೂಡಿತು.

ಮನಸ್ಸನ್ನು ಕದಡಿದ ಯೋಚನೆಗಳ ಫಲವಾಗಿ ಆ ರಾತ್ರೆ ಬಹಳ ಹೊತ್ತು ಆಕೆಗೆ ನಿದ್ದೆ ಬರಲಿಲ್ಲ.

* * * *

ಬೆಳಿಗ್ಗೆ ಪುಟ್ಟಣ್ಣ ಆಫೀಸಿಗೆ ಹೊರಟಾಗ ಸುನಂದಾ ಆತನನ್ನು ಸಮೀಪಿಸಿ, ಸ್ವರವನ್ನು ಆದಷ್ಟು ಮೃದುಗೊಳಿಸಿ ಹೇಳಿದಳು:

"ಮಧ್ಯಾಹ್ನ ರಜಾ ತಗೊಂಡು ಇಲ್ಲಿಗೇ ಊಟಕ್ಕೆ ಬಂದ್ಬಿಡ್ತೀರಾ?"

ಹುಬ್ಬುಗಳನ್ನು ಮೇಲಕ್ಕೇರಿಸಿ ಗಂಡ ಹೆಂಡತಿಯನ್ನು ನೋಡಿದ:

"ಯಾಕೆ?"

"ಇವತ್ತು ಸರಸ್ವತಿ ಹುಟ್ಟಿದಹಬ್ಬ ನೆನಪಿಲ್ವೆ?"

ಆಶ್ಚರ್ಯವನ್ನಾಗಲೀ ಸಂತೋಷವನ್ನಾಗಲೀ ಪುಟ್ಟಣ್ಣ ಸೂಚಿಸಲಿಲ್ಲ.

"ಹಬ್ಬ ಏನ್ಬಂತು? ಹುಟ್ಟಿದ ದಿನ–ಅನ್ನು..."

ಸುನಂದೆಯ ತಲೆಗೆ ಒಂದು ಕೊಡ ತಣ್ಣೀರು ಸುರಿದ ಹಾಗಾಯಿತು.

"ಹೇಳ್ದೆ. ಸಾಧ್ಯವಾದರೆ ಬನ್ನಿ. ಅಷ್ಟೆ."

ಆತ ಉತ್ತರ ಕೊಡದೆ ಭುಜಕುಣಿಸಿ ಹೊರಟುಹೋದ.

ಹಬ್ಬದ ಅಡುಗೆಗೆ ಸಿದ್ಧತೆಮಾಡಿಕೊಂಡಿದ್ದಳು ಸುನಂದಾ. ಗಂಡನ ವರ್ತನೆ ನೋಡಿದ ಮೇಲೆ 'ಈಗ ಏನೂ ಬೇಡ'–ಎನಿಸಿತು.

ಆದರೆ ಈ ಸಂಭ್ರಮದ ವಿಷಯ ತಿಳಿದಿದ್ದ ರಾಧಮ್ಮ ಒಳಗೆ ಬಂದು ಕೇಳಿದರು:

"ಅಡುಗೆ ಕೆಲಸದಲ್ಲಿ ನಾನೂ ಸಹಾಯ ಮಾಡ್ಬೇಕೇನ್ರೀ?"

ಸುನಂದಾ ಪ್ರಯತ್ನಪೂರ್ವಕವಾಗಿ ನಕ್ಕಳು.

"ಏನೂ ಬೇಡಿ ರಾಧಮ್ಮ. ಇದೇನು ಮಹಾ ಅಡುಗೆ?"

ಸುನಂದೆಯ ಓಡಾಟದ ಬಗೆಗೆ ಆಕೆಯ ಗಂಡನ ಅಭಿಪ್ರಾಯವೇನೋ–ಎಂದು ತಿಳಿಯುವ ಕುತೂಹಲ ರಾಧಮ್ಮನಿಗಿತ್ತು. ಆದರೆ ಮುರಿದ ಮನೆಯನ್ನು ಸರಿಪಡಿಸುವ ಮಹಾ ಸಾಹಸದಲ್ಲಿ ನಿರತಳಾಗಿದ್ದ ಸುನಂದೆಯ ಧ್ಯಾನಕ್ಕೆ ಭಂಗ ಬರಬಾರದೆಂದು, ಅವರು ಆ ವಿಷಯ ಪ್ರಸ್ತಾಪಿಸಲಿಲ್ಲ. ಬದಲು, ಸಂತೋಷವಾಗಿಯೇ ಇದ್ದ ಸರಸ್ವತಿಯನ್ನೆತ್ತಿಕೊಂಡರು. "ಛುತ್ ಕಳ್ಳಿ!" ಎಂದು ಹೊಗಳಿಕೆಯ ಮಾತನ್ನಾಡಿದರು. ಹುಟ್ಟುಹಬ್ಬದ ಮುತ್ತು ಕೊಟ್ಟರು.

'ಡಬ್ಬಾವಾಲಾ' ಬರುವ ಹೊತ್ತಾಯಿತೆಂದು ಸುನಂದಾ ಅವಸರ ಅವಸರವಾಗಿ ಅಡುಗೆ ಮಾಡಿ, ಗಂಡನ ಬುತ್ತಿ ಸಿದ್ಧಪಡಿಸಿದಳು. ಸರಸ್ವತಿಗೆ ಸ್ನಾನ ಅಲಂಕಾರಗಳಾದುವು. ತಾನು ಒಳ್ಳೆಯ ಸೀರೆಯುಟ್ಟುಕೊಂಡಳು.

ರಾಧಮ್ಮ ಅಡುಗೆಯ ಕೆಲಸದಲ್ಲಿ ನೆರವಾಗದೇ ಇದ್ದರೂ ತಮ್ಮ ಮನೆಯದನ್ನು ಬೇಗನೆ ಮುಗಿಸಿ ಬಂದು, ಕೆಲಸ ಮಾಡುತ್ತಿದ್ದ ಸುನಂದೆಯೊಡನೆ ಸಣ್ಣ ಪುಟ್ಟ ತಮಾಷೆಯ ಆ ಮಾತು ಈ ಮಾತು ಆಡುತ್ತ ಕುಳಿತರು.

ಅಂಚೆಯುವನು ಒಂದು ಪೊಟ್ಟಣ ತಂದ. ಸಹಿ ಹಾಕಿ ಸುನಂದಾ ಅದನ್ನು ಪಡೆದಳು. ಜತೆಯಲ್ಲೊಂದು ಕಾಗದವೂ ಇತ್ತು. ರಾಧಮ್ಮನೂ ಅವರ ತೊಡೆಯ ಮೇಲೆ ಕುಳಿತಿದ್ದ ಸರಸ್ವತಿಯೂ ನೋಡುತಿದ್ದಂತೆ ಸುನಂದಾ, "ನನ್ನ ತಂಗೀದು" ಎನ್ನುತ್ತ, ಕಾಗದವನ್ನೊಡೆದಳು.

ವಿಜಯಾ ಮುದ್ದಾದ ಹಸ್ತಾಕ್ಷರದಲ್ಲಿ ಚುಟುಕಾಗಿ ಬರೆದಿದ್ದಳು:

"ಪ್ರೀತಿಯ ಅಕ್ಕಾ,

ಸರಸ್ವತಿಯ ಹುಟ್ಟು ಹಬ್ಬಕ್ಕೆ ನಮ್ಮೆಲ್ಲರ ಉಡುಗೊರೆ ಕಳಿಸಿದ್ದೇವೆ. ಹೊತ್ತಿಗೆ ಸರಿಯಾಗಿ ಇದು ತಲುಪುತ್ತದೊ ಇಲ್ಲವೋ ಗೊತ್ತಿಲ್ಲ. ಆದರೂ ತಲಪೀತೆಂಬ ನಂಬಿಕೆಯಿಂದ ಕಳಿಸಿದ್ದೇವೆ. ಹುಟ್ಟು ಹಬ್ಬದ ದಿವಸ ಸರಸ್ವತಿಯ ಫೋಟೋ ತೆಗೆಸ್ತೀಯಾ ಅಲ್ಲವೇ? ನಮಗೊಂದು ಕಳಿಸಲು ಮರೆಯಬೇಡ. ಕಂದ ಹೇಗಿದಾಳೇಂತ ನೋಡೋಕೆ ಆಸೆಯಾಗ್ತದೆ. ಇತ್ತೀಚೆಗೆ ನೀನು ಬರೆದೇ ಇಲ್ಲ. ಯಾಕೆ? ನನ್ನ ಮದುವೆಗೆ ಮುಂಚೆ ತವರುಮನೆಗೆ ಬರಲೇಬಾರದು ಅಂತ ಮಾಡಿದಿಯೇನು? ಸರಸ್ವತಿಗೆ ಎಲ್ಲರೂ ಆಶೀರ್ವಾದ ಕಳಿಸಿದ್ದಾರೆ. ನನ್ನ ಪರವಾಗಿ ಅವಳಿಗೊಂದು ಮುತ್ತು ಕೊಡು."

ಓದುತ್ತಿದ್ದಂತೆ ಸುನಂದೆಯ ಕಣ್ಣುಗಳಿಂದ ಫಳಕ್ಕನೆ ಕಂಬನಿ ಉದುರಿತು. ಅಳ ಬಾರದೆಂದು ಆಕೆ ಔಡುಗಚ್ಚಿ ನಿಂತಳು.

ಆ ಜೀವದ ಹೊಯ್ದಾಟವನ್ನು ಪೂರ್ತಿ ತಿಳಿಯಲಾಗದೆ ರಾಧಮ್ಮ, ಆ ಕಾಗದ ದಲ್ಲಿ ಅದೇನು ಕೆಟ್ಟ ಸುದ್ದಿ ಬಂತೋ ಎಂದು ಗಾಬರಿಯಾದರು.

"ತಾಯಿಮನೇಲಿ ಎಲ್ಲರೂ ಸೌಖ್ಯವಾಗಿದಾರಾ ಸುನಂದಾ?"

"ಹೂಂ."

"ಏನು ಪೊಟ್ಣ? ಸರಸ್ವತಿಗೆ ಉಡುಗೊರೆ ಕಳಿಸಿದಾರಾ?"

"ಹೂಂ"

"ಒಡೀರಿ ಮತ್ತೆ!"

ಸುನಂದಾ ಸದ್ದಾಗದಂತೆ ನಿಟ್ಟುಸಿರುಬಿಟ್ಟು, ಚಾಕು ತಂದು, ಪೊಟ್ಟಣದ ಹೊಲಿಗೆ ಬಿಚ್ಚಿದಳು. ಒಳಗೆ ಬಣ್ಣ ಬಣ್ಣದ ಹೂಗಳಿದ್ದ ಲಿನನ್ ಬಟ್ಟೆಯ ರೇಶಿಮೆಯ ಕಣ ಗಳಿದ್ದುವು. ಸರಸ್ವತಿ ಅದನ್ನು ಮುಟ್ಟಿ ನೋಡಿ "ಇಜ್ಹಿ!" ಎಂದಳು.

"ನಿನಗೇ ಅಂತ ಗೊತ್ತಾಗ್ಹೋಯ್ತೇನೇ?"

ಎಂದು ಮಗುವನ್ನು ಅಣಕಿಸಿ ರಾಧಮ್ಮನೆಂದರು:

"ಕಣ ಚೆನ್ನಾಗಿದೆ ಸುನಂದಾ.... ನಿಮ್ಮ ಮುದ್ದೂಗೆ ನನ್ನ ಪಾಲಿನ ಉಡುಗೊರೆ ಏನೂ ಇಲ್ವಲ್ಲಾ!"

"ಸುಮ್ನಿರಿ ರಾಧಮ್ಮ, ಏನೂ ಬೇಡಿ."

"ಎಲ್ಲಾ ಸೇರಿಸಿ ಒಂದೇ ಸಲ ಅವಳ ಮದುವೆ ಹೊತ್ತಿಗೆ ಕೊಟ್ಟು ಬಿಡು

ಅಂತೀರೋ?"

"ಹಾಗೇ ಮಾಡಿ."

...ಊಟ ಮುಗಿದು, ಮಧ್ಯಾಹ್ನದ ಅನಂತರ ಸುನಂದಾ ಹಾಯಾಗಿ ಕುಳಿತು, 'ಮುಂದೇನಿನ್ನು?' ಎಂದು ಯೋಚಿಸುತ್ತಿದ್ದಾಗ, ರಟ್ಟಿನದೊಂದು ಪೆಟ್ಟಿಗೆ ಹೊತ್ತು ಕೊಂಡು ಕುಸುಮಾ ಬಂದಳು. ಸುನಂದೆಗೆ ಸಂತೋಷವಾದರೂ ಸಂಕೋಚವೆನಿಸಿತು.

"ಯಾಕೆ ಬಂದೇಂತ ಕೇಳ್ಬೇಡಿ ಇನ್ನು. ಎಂಥವರ್‍ರೀ ನೀವು? ಮಗುವಿನ ಹುಟ್ಟಿದ ಹಬ್ಬ ಅಂತ ಹೇಳೋದು ಬೇಡ್ವೆ? ಆವತ್ತೊಮ್ಮೆ ಕೇಳಿದಾಗ ಉತ್ತರ ಕೊಡದೆ ಮಾತು ಹಾರಿಸಿಬಿಟ್ರಿ. ರಾಧಮ್ಮ ಹೇಳಿದ್ದರಿಂದ ತಿಳೀತು. ಅಬ್ಬ ನೀವೇ!...."

"ಈ ಹುಟ್ಟಿದ ಹಬ್ಬವೆಲ್ಲ ಏನು ಮಹಾ?"

—ಎನ್ನುತ್ತಾ ಸುನಂದಾ ಕೊಠಡಿಯಿಂದ ಕುರ್ಚಿ ತಂದು ಕುಸುಮಳಿಗಾಗಿ ಹೊರ ಗಿಟ್ಟಳು.

ಕುಸುಮಾ ಮಗುವನ್ನೆತ್ತಿಕೊಂಡು ಮುದ್ದಿಟ್ಟಳು. ತಾನು ತಂದಿದ್ದ ಪೆಟ್ಟಿಗೆ ತೆರೆದು ಅದರೊಳಗೆ ಹೇರಳವಾಗಿದ್ದ ಆಟದ ಸಾಮಾನುಗಳನ್ನೆಲ್ಲ ಒಂದೊಂದಾಗಿ ಹೊರಕ್ಕೆ ತೆಗೆದಳು. ಆ ವಿಚಿತ್ರ ಲೋಕದಲ್ಲಿ ಮಗು ಮೈ ಮರೆಯಿತು.

"ಇಷ್ಟೆಲ್ಲಾ ಯಾಕೆ ತಂದಿರಿ?"

—ಎಂಬ ಮಾತು ಸುನಂದೆಯ ಕಂಠದಿಂದ ಹೊರಬಿತ್ತು.

ಕುಸುಮಾ ಕೋಪಗೊಂಡವಳಂತೆ ನಟಿಸಿ ಅಂದಳು:

"ಇದು ನಿಮಗಲ್ಲ ಕಣ್ರೀ, ಮಗೂಗೆ."

ಹಾಗೆ ಎರಡು ನಿಮಿಷಗಳಿದ್ದು, "ಕಾಫಿ ಮಾಡ್ತೀನಿ, ಇರಿ" ಎಂದು ಸುನಂದಾ ಹೇಳಿದರೂ ಕೇಳದೆ, "ಸರಸ್ವತೀ ಕೃಪೆಯಿಂದ ನಿಮ್ಮ ಮನೆಯೊಳಗೆ ಬರೋ ಭಾಗ್ಯ ಲಭಿಸಿತು" ಎಂದು ನಕ್ಕು, ಕುಸುಮಾ ಹೊರಟಳು.

ಹೋಗುತ್ತ, ಸುನಂದೆಯ ಮನಸ್ಸು ಶ್ರೀಮಂತವಾಗಿದ್ದರೂ ಮನೆ ಎಷ್ಟೊಂದು ಬರಡಾಗಿತ್ತೆಂಬುದನ್ನು ಕುಸುಮಾ ಗಮನಿಸದೆ ಇರಲಿಲ್ಲ.

...ಸಂಜೆ ಶ್ಯಾಮು ಬಂದು ಕರ್ಪೂರದ ಕೂಸೊಂದನ್ನು ಸರಸ್ವತಿಯ ಮುಂದಿಟ್ಟ.

"ಎತ್ತಿ ಕುಕ್ಬೇಡ. ಜಜ್ಜಿ ಹೋಗುತ್ತೆ. ಪಾಪಂಗೆ ನೋವಾಗುತ್ತೆ"

—ಎಂದು ಹಿತೋಪದೇಶ ಮಾಡಿದ.

ಅಷ್ಟರಲ್ಲೇ, ಗುಡಿಸಲಿನ ಹೆಂಗಸು ಯಾರನ್ನೋ ಶಪಿಸುತ್ತ ತನ್ನಷ್ಟಕ್ಕೇ ಗೊಣ ಗುತ್ತ ಅಳುತ್ತಿದ್ದುದು ಕೇಳಿಸಿತು. ಅದೇನೆಂದು ವಿಚಾರಿಸಲು ರಾಧಮ್ಮ ಆಕೆಯನ್ನು ತಮ್ಮ ಅಂಗಳಕ್ಕೆ ಕರೆದರು.

ಆ ಹೆಂಗಸು ಗೋಳಾಡಿದಳು. ಆಕೆಯ ದೊಡ್ಡಮಗ ಮೂರು ದಿನಗಳಿಂದ ಮನೆಗೇ ಬಂದಿರಲಿಲ್ಲವಂತೆ. ಮಧ್ಯಾಹ್ನವೆಲ್ಲ ರೈಲ್ವೆ ನಿಲ್ದಾಣದ ಬಳಿಗೆ ಹೋಗಿ ಹುಡುಕಿದಳಂತೆ. ಅಲ್ಲೆಲ್ಲಿಯೂ ಆತ ಇರಲಿಲ್ಲವಂತೆ.

"ಏನಾಯ್ತೋ ನನ್ನ ಮಗನಿಗೇ...?"

"ಯಾಕೆ ಅಳ್ತೀಯಾ ಅದಕ್ಕೆಲ್ಲ? ಬರ್ತ್ತಾನೆ, ಬಿಡು..."

"ಇಲ್ಲಮ್ಮಾ. ಅವನು ಯಾವುದೋ ರೈಲು ಹತ್ತಿ ಹೊರಟ್ಬಿಟ್ಟಿದ್ದಾನೆ. ಈ ಊರು ಬಿಟ್ಟು ಹೋಗ್ತಿನೀಂತ ಅವತ್ತೇ ಹೇಳ್ತಿದ್ದ..."

ಬಾಗಿಲಲ್ಲಿ ನಿಂತು ಆ ಸಂಭಾಷಣೆಯನ್ನು ಕೇಳಿದ ಸುನಂದಾ ಒಳ ಹೋಗಿ, ತಾನು ತಯಾರಿಸಿದ್ದ ಒಂದಷ್ಟು ತಿಂಡಿಯನ್ನು ಕಾಗದದಲ್ಲಿ ಕಟ್ಟಿ, ಹೊರಗೆ ತಂದಳು.

"ತಗೋಮ್ಮ ಇದನ್ನ."

ಆ ಹೆಂಗಸು ಅಳು ನಿಲ್ಲಿಸಿ ಎರಡೂ ಕೈ ನೀಡಿದಳು.

ಸಿಂಬಳ ಸುರಿಸುತ್ತಿದ್ದ ಕೊಳಕು ಕೊಳಕಾಗಿದ್ದ ಹೆಣ್ಣು ಮಗು ತಾಯಿಗೆ ಅಂಟಿ ಕೊಂಡೇ ಬಂದು ಆ ತಿಂಡಿಯತ್ತ ದೃಷ್ಟಿಹರಿಸಿತು.

ಎರಡು ವರ್ಷವಾಗಿತ್ತೇನೋ ಆ ಮಗುವಿಗೆ? ಅದರ ಹುಟ್ಟುಹಬ್ಬ–ಹುಟ್ಟಿದ ದಿನವಾದರೂ ಆ ತಾಯಿಗೆ ನೆನಪಿದೆಯೋ ಇಲ್ಲವೋ? ನಕ್ಷತ್ರ–ಜಾತಕ....

ಸುನಂದೆಯೊಬ್ಬಳೇ ಬಾಗಿಲಿಗೆ ಅಡ್ಡವಾಗಿ ನಿಂತಳು. ಆ ಬಡವರನ್ನು ತನ್ನ ಮಗು ನೋಡಬಾರದೆಂದು, ಸರಸ್ವತಿಯನ್ನು ಆಕೆ ಹೊರಕ್ಕೆ ತರಲಿಲ್ಲ.

* * * *

ಬರಿದಾದ ಟಿಫಿನ್ ಕ್ಯಾರಿಯರಿನೊಡನೆ ಊಟದ ಚೀಲವೇನೋ ಹಿಂತಿರುಗಿ ಬಂತು. ಆದರೆ ಯಾರು ಉಂಡಿದ್ದರೋ? ಮಗಳ ಹುಟ್ಟಿದ ಹಬ್ಬದ ಅಡುಗೆ:ಅವರಿಗೆ ಹಿಡಿಸಿತೋ ಇಲ್ಲವೋ? ಅಥವಾ, ಜವಾನನೇ ಅದನ್ನು ಖಾಲಿಮಾಡಿದನೋ?

....ರಾತ್ರೆ ಬಹಳ ಹೊತ್ತಾಯಿತು. ತಾನೂ ಉಣ್ಣದೆ ಸುನಂದಾ ಗಂಡನಿಗಾಗಿ ಕಾದಳು...ಬಳಿಕ ಬರಿ ಹೊಟ್ಟೆಯಲ್ಲೇ ನಿದ್ರೆಹೋದಳು.

...ಬಹಳ ಹೊತ್ತಾದ ಮೇಲೆ ಬಾಗಿಲ ಸಪ್ಪಳವಾಗಿ ಆಕೆಗೆ ಎಚ್ಚರವಾಯಿತು. "ಅಮ್ಮಾ" ಎಂದು ಕರೆಯುತ್ತಿತ್ತು ಅಪರಿಚಿತವಾದೊಂದು ಸ್ವರ. ಬಾಗಿಲು ತೆರೆಯ ಬೇಕೇ ಬೇಡವೇ ಎಂದು ಸುನಂದಾ ಅನುಮಾನಿಸಿದಳು. ಆದರೆ ಮತ್ತೊಮ್ಮೆ "ಅಮ್ಮಾ" ಎಂದು ಕರೆ ಕೇಳಿದಾಗ, ತನ್ನ ಗಂಡನಿಗೆ ಏನಾದರೂ ಆಗಿದೆಯೇನೋ ಎಂದು ಗಾಬರಿ ಯಾಗಿ ಆಕೆ ಕದ ತೆರೆದಳು.

ಬೀದಿಯಲ್ಲೊಂದು ಜಟಕಾಗಾಡಿ ನಿಂತಿತ್ತು. ಬಾಗಿಲು ತಟ್ಟಿದವನು ಸುನಂದೆ ಯನ್ನು ಕಣ್ಣು ತುಂಬ ನೋಡುತ್ತಿದ್ದ.

"ಯಾರು? ಅವರಿನ್ನೂ ಬಂದಿಲ್ಲ."

ಅವನೆಂದ:

"ಬಂದಿದಾರೆ. ಜಟಕಾದಲ್ಲಿದಾರೆ. ನಾವು ಕರಕೊಂಡು ಬಂದಿದೀವಿ."

"ಅಯ್ಯೋ! ಏನಾಯ್ತು?"

"ಏನೂ ಇಲ್ಲ ಗಾಬರಿಯಾಗ್ಬೇಡಿ. ಸ್ವಲ್ಪ ನಿದ್ರೆ ಬಂದಿದೆ, ಅಷ್ಟೆ. ಇಳಿಸ್ಕೊಂಡು

ಬರ್ತೀವಿ."

ಗಾಡಿಯತ್ತ ಓಡಬೇಕೆಂದು ಸುನಂದಾ ಬಯಸಿದಳು. ಆದರೆ ಕಾಲುಗಳು ಕಂಪಿಸಿ ತಲೆ ಗಿರ್ರೆಂದಿತು.

ಆಕೆ ನೋಡುತ್ತಲೆ ನಿಂತಳು. ಜಟಕಾದಿಂದ ಬೇರೊಬ್ಬನೂ ಇಳಿದ. ಅವರಿಬ್ಬರೂ ಸೇರಿ ಮೂರನೆಯವನನ್ನು ಇಳಿಸಿದರು. ಪುಟ್ಟಣ್ಣ. ಒಬ್ಬೊಬ್ಬರು ಒಂದೊಂದು ತೋಳಿಗೆ ಆಸರೆಯಾಗಿ ಆತನನ್ನು ಅರ್ಧ ನಡೆಸಿಕೊಂಡು ಅರ್ಧ ಹೊತ್ತುಕೊಂಡು ಬಂದರು.

ಒಬ್ಬ ಕೇಳಿದ:

"ಎಲ್ಲಿ ಮಲಗಿಸೋಣ?"

ಸುನಂದಾ ಒಳಕ್ಕೋಡಿ ಕೊಠಡಿಯ ಬಾಗಿಲನ್ನು ಪೂರ್ತಿ ತೆರೆದಳು. ಅವರಿಬ್ಬರೂ ಆತನನ್ನು ಮಂಚದ ಮೇಲೆ ಮಲಗಿಸಿ, ಸಾಮಾನಿನ ಮೂಟೆ ಕೆಳಗಿಟ್ಟವರಂತೆ ಕೈ ಕೊಡವಿಕೊಂಡರು.

ಮೊದಲು ಮಾತನಾಡಿದವನೇ ಹೇಳಿದ:

"ಬೆಳಗಾಗೋ ಹೊತ್ತಿಗೆ ನಿಮ್ಮ ಯಜಮಾನರು ಹುಷಾರಾಗ್ತಾರೆ. ಯಾವತ್ತೂ ಅವರಿಗೆ ಹೀಗಾದದ್ದು ಅಂತಲೇ ಇಲ್ಲ. ರುಸ್ತುಂ ಜೀವ. ಇವತ್ತು ಸ್ವಲ್ಪ ಜಾಸ್ತಿಯಾಗ್ಹೋಯ್ತು. ಇಲ್ಲಿ ಬರೋವರೆಗೂ ಗಾಡೀಲಿ ಮಾತಾಡ್ತಾನೇ ಇದ್ರು. ಈಗ ನಿದ್ದೆ ಬಂದಿದೆ...."

ಆ ಮಾತುಗಳಲ್ಲೂ ತೊದಲಿಕೆ ಇತ್ತು—ಬಲು ಸ್ವಲ್ಪ. ತನ್ನ ಸುಖವನ್ನು ಕಸಿದುಕೊಂಡ ಯಮದೂತರು ಅವರೇ ಎಂಬಂತೆ, ಸುನಂದಾ ಕೆಂಗಣ್ಣಿನಿಂದ ಅವರಿಬ್ಬರನ್ನೂ ನೋಡಿ ಅಂದಳು:

"ನೀವಿನ್ನು ಹೋಗ್ಬಹುದು."

ಅವರು ಹೊರಟರು. ಅಂಗಳಕ್ಕಿಳಿಯುತ್ತ ಒಬ್ಬ ಹೇಳಿದ:

"ಎಲ್ಲಾ ಹೆಂಗಸರೂ ಒಂದೇ ಥರ. ಹುಷಾರೀಮ್ಮಾ. ಅವರ ಕೋಟಿನ ಜೇಬೆಲ್ಲ ಈಗ ತನಿಖೆ ಮಾಡ್ಬೇಡಿ. ಹಾಂ!"

ರಾಧಮ್ಮನ ಮನೆಯವರಾಗಲೀ ಕುಸುಮನ ಮನೆಯವರಾಗಲೀ ಎಚ್ಚೆತ್ತರೇನೋ ಎಂದು ಅಂಜುತ್ತ ಸುನಂದಾ ಅತ್ತ ದೃಷ್ಟಿ ಹರಿಸಿದಳು. ಅಲ್ಲೆಲ್ಲೂ ದೀಪವಿರಲಿಲ್ಲ. ಗುಡಿಸಲಿನ ಬಡ ಗಂಡಸು ಮಾತ್ರ ಇದೆಲ್ಲವನ್ನೂ ನೋಡುತ್ತ ಪಕ್ಕದಲ್ಲೆ ನಿಂತಿದ್ದ.

ಸುನಂದಾ ಧಡಾರನೆ ಬಾಗಿಲು ಮುಚ್ಚಿದಳು. ಒಳ ಬಂದು ಆತನ ಬೂಟ್ಸು ಬಿಚ್ಚಿದಳು. ಸದ್ದಾಗುವಂತೆ ಉಸಿರಾಡುತ್ತ ಮಲಗಿದ್ದ ಆತನನ್ನು ಬಹಳ ಹೊತ್ತು ವ್ಯಥೆಯಿಂದ ದಿಟ್ಟಿಸುತ್ತಲೇ ಇದ್ದು, ಬಳಿಕ ದೀಪ ಆರಿಸಿ ತನ್ನ ಹಾಸಿಗೆಯತ್ತ ಹೋಗಿ, ನಿದ್ದೆಯ ಆವರಣದೊಳಗೆ ಎಲ್ಲವನ್ನೂ ಮರೆಯಲು ಯತ್ನಿಸಿದಳು.

೧೮

ತನ್ನ ಒಡವೆ ತನಗೆ ಮರಳಿ ದೊರೆಯಿತೆಂದು ಸ್ವಲ್ಪ ಹೊತ್ತು ಸುನಂದೆ ಭಾವಿಸಿದ್ದ ರಾತ್ರೆ ಕಳೆದು, ಮೂರು ತಿಂಗಳು ದಾಟಿದುವು. ಇನ್ನೊಂದು ಜೀವದ ಅಂಶವನ್ನು ತಾನು ಹೊತ್ತಿದ್ದಳೆಂಬುದಕ್ಕೆ ಯಾವ ಚಿಹ್ನೆಯೂ ಸುನಂದೆಗೆ ತೋರಲಿಲ್ಲ. ಅದರಿಂದ ಆಕೆಗೆ ದುಃಖವೂ ಆಗಲಿಲ್ಲ, ಸಂತೋಷವೂ ಆಗಲಿಲ್ಲ.

ಹಾಗೆ ಕಾಲ ಕಳೆದುದನ್ನು ಪುಟ್ಟಣ್ಣನೂ ಗಮನಿಸಿದ.

ಹೀಗೂ ಆಗುವುದು ಅಸಂಭವವಾಗಿರಲಿಲ್ಲ. ಇನ್ನೊಂದು ಮಗುವಿಗೆ ತಂದೆಯಾಗುವ ಯೋಗ ಸದ್ಯಃ ಇಲ್ಲವೆಂದು ಆತನಿಗೆ ಒಂದು ರೀತಿಯ ಸಮಾಧಾನವಾಯಿತು. ಆ ಸಮಾಧಾನದ ಫಲವಾಗಿ ಬೇರೆಯೂ ಯೋಚನೆಗಳು ಮೂಡಿದುವು.

ಸಿಂಬಾದ ನಾವಿಕನ ಕೊರಳಿಗೆ ಆತು ಕುಳಿತಿದ್ದ ಮುದಿ ಮುದುಕನ ಹಾಗಿದ್ದಳು ಆ ಹೆಂಡತಿ. ಕೊಸರಿ ಎಸೆಯುವುದು ಸುಲಭವಾಗಿರಲಿಲ್ಲ. ಧರ್ಮದ ಕಾನೂನಿನ ಗಾರೆಯಿಂದ ಆಕೆಯನ್ನು ಆತನಿಗೆ ಅಂಟಿಸಿದ್ದರು. ಸದ್ದಿಲ್ಲದೆ ಜಾರಿಸಿಕೊಳ್ಳುವಂತಿರಲಿಲ್ಲ. ಸದ್ದುಮಾಡಿ ಬಿರುಕು ಹುಟ್ಟಿಸಿ ಒಡೆಯುವ ಅಗತ್ಯವಿತ್ತು. ಜನರ ಮಾತಿಗೆ, ಲೋಕಾಪವಾದಕ್ಕೆ, ಆತ ಹೆದರಿದನೆಂದಲ್ಲ. ಆದರೆ ಆ ಪ್ರಕರಣಕ್ಕೆ ಆಗ ಆತ ಸಿದ್ಧನಿರಲಿಲ್ಲ. ತನ್ನ ಯೋಜನೆಗಳನ್ನೆಲ್ಲ ಕಾರ್ಯಗತಗೊಳಿಸಲು, ತನಗಿಷ್ಟವಿದ್ದಂತೆ ಸ್ವೇಚ್ಛಾಚಾರಿಯಾಗಿ ಬದುಕಲು, ದೀರ್ಘವಾದ ಪೂರ್ವಸಿದ್ಧತೆಯ ಅಗತ್ಯವಿತ್ತು.

ಆತನ ದೃಷ್ಟಿಯಲ್ಲಿ ಹೆಣ್ಣು ಯಾವಾಗಲೂ ಕೀಳೇ. ಹೆಚ್ಚೆಂದರೆ ಅಡುಗೆಯ ಮನೆ ಆಕೆಯ ಆವಾಸ. ಗಂಡಸಿನ ಚರಣದಾಸಿಯಾಗಿ ಆಕೆ ಇರಬೇಕು; ಆತನನ್ನು ಅಧೀನದಲ್ಲಿಟ್ಟುಕೊಂಡು ಆಳಬಯಸುವುದಲ್ಲ.

ಆದರೆ ದೇಹ ಹೆಣ್ಣನ್ನು ಬಯಸುತ್ತಿತ್ತು. ತನ್ನನ್ನೆ ತಾನು ಪರಿವರ್ತಿಸುವ ಕಠಿನ ಶಿಸ್ತಿನಲ್ಲಿ ಶಿಥಿಲವಾದ ಅಂಶವಾಗಿತ್ತು ಹೆಣ್ಣು.

ತಾನು ಹೆಣ್ಣನ್ನು ಬಯಸಿದಾಗಲೂ ಹೊಸ ಮನುಷ್ಯ ಪುಟ್ಟಣ್ಣನಾಗಿಯೇ ಉಳಿಯಬೇಕೆಂದು ಆತ ಇಚ್ಛಿಸಿದ. ಅದಕ್ಕಾಗಿ ಬೆಲೆವೆಣ್ಣುಗಳ ಬಳಿಗೆ ಸರಿದ. ಅದೂ ಒಂದು ಪ್ರಯೋಗ. ಆದರೆ, ಒಂದೇ ಎಂಜಲು ತಟ್ಟೆಯೊಳಗೆ ಹತ್ತಾರು ಕೈಗಳನ್ನು ಕಂಡಾಗ ಆತನಿಗೆ ವಾಕರಿಕೆ ಬಂತು. ಆ ಕಾರಣದಿಂದ, ಹೆಚ್ಚು ವೆಚ್ಚಮಾಡಿ ತನಗೋಸ್ಕರವೇ ಅಲ್ಲಿ ಇಲ್ಲಿ ದೊರಕಿಸಿಕೊಳ್ಳಲು ಯತ್ನಿಸಿದ. ಆಗ ಆತನ ಬ್ಯಾಂಕ್ ಲೆಕ್ಕ ನಕ್ಕಿತು. ಸಿರಿವಂತಿಕೆಯ ಆ ಹಂತವನ್ನು ನೀನಿನ್ನೂ ಮುಟ್ಟಿಲ್ಲ—ಎಂದಿತು ಮನಸ್ಸು.

ಹೀಗಾಗಿ ಪುಟ್ಟಣ್ಣ ಮತ್ತೆ ಹೆಂಡತಿಯ ಯೋಚನೆ ಮಾಡಿದ.

ಹೃದಯಗಳು ಗಾವುದದಾಚೆ ಇದ್ದೂ ದೇಹಗಳು ಸಮೀಪವಾಗುವುದನ್ನು ಸಾಧ್ಯಗೊಳಿಸಬೇಕೆಂದು ಆತ ನಿರ್ಧರಿಸಿದ.

* * * *

ಒಂದು ರಾತ್ರೆ ಗಂಡ ತನ್ನ ಬಳಿಗೆ ಬಂದಾಗ ಸುನಂದೆಗೆ ಆಶ್ಚರ್ಯವಾಯಿತು. ಹಿಂದೆ ನಡೆದುದರ ಪುನರಾವರ್ತನೆಯಲ್ಲಿ ಆಕೆಗೆ ಆಸಕ್ತಿ ಇರಲಿಲ್ಲ. ಸ್ವಂತದ ಅಪೇಕ್ಷೆಗಳು ಈಗ ಅವಳಿಗಿರಲಿಲ್ಲ. ಆದರೂ ವಿರೋಧಿಸದೆ ಆಕೆ ಸುಮ್ಮನಿದ್ದಳು.

ದಿನಗಳ ಅಂತರದ ಬಳಿಕ ಅನಂತರವೂ ಒಮ್ಮೆ. ಆಮೇಲೂ ಎಂದಾದರೊಮ್ಮೆ ಆಗಾಗ್ಗೆ.

ಪುಟ್ಟಣ್ಣ ಆಕೆಯನ್ನು ತನ್ನ ಕೊಠಡಿಗೆ ಕರೆಯುತ್ತಿರಲಿಲ್ಲ. ಬದಲು ಅವಳಿದ್ದಲ್ಲಿಗೇ ಬಂದು ಹೋಗುತ್ತಿದ್ದ. ಆತನ ವರ್ತನೆಯಲ್ಲಿ ನಯವಿರಲಿಲ್ಲ. ಒಲವಿರಲಿಲ್ಲ. ಎಲ್ಲವೂ, ದೇಹಬಾಧೆ ತೀರಿಸಲು ಕಕ್ಕಸಿಗೆ ಹೋಗಿ ಬಂದ ಹಾಗೆ.

ಆಕೆಗೆ ಇದು ಅಸಹ್ಯವಾಗಿತ್ತು. ಗಂಡ ಬಳಿಗೆ ಬಂದಾಗ ಹೃದಯ ಮೈ ಎರಡೂ ಮುದುಡಿಕೊಳ್ಳುತ್ತಿದ್ದುವು.

ಮೆಲ್ಲಮೆಲ್ಲನೆ ಮೃಗವಾಗುತ್ತಿದ್ದ ಆ ಮನುಷ್ಯ, ಯಾವ ರಾತ್ರೆ ಎಷ್ಟು ಹೊತ್ತಿಗೆ ತನ್ನೆಡೆಗೆ ಬರುವನೋ ಎಂದು ಭಯದಿಂದಲೆ, ನಿದ್ದೆಯಿಲ್ಲದೆ ಹೊತ್ತು ಕಳೆಯುವ ಹಾಗಾಯಿತು ಸುನಂದೆಯ ಗತಿ.

ಒಂದು ರಾತ್ರೆ ಗಂಡ ತನ್ನೆಡೆಗೆ ಬಂದಾಗ ಸುನಂದಾ ಅಂದಳು:

"ನನಗೆ ತಡೆಯೋಕಾಗದ ತಲೆನೋವು. ದಯವಿಟ್ಟು ಹತ್ತಿರ ಬರಬೇಡಿ."

ಆತ, ಏನು ಮಾಡಬೇಕೆಂದು ತಿಳಿಯದೆ ಒಂದರೆ ಕ್ಷಣ ಕತ್ತಲಲ್ಲಿ ನಿಂತುದನ್ನು ಆಕೆ ಕಂಡಳು. 'ಇವತ್ತು ಪಾರಾದೆ' ಎಂದುಕೊಂಡಳು. ಆದರೆ ಹಾಗೆ ಯೋಚಿಸುತ್ತಿದ್ದಾಗಲೇ ಆತ ಮಂಡಿಯೂರಿ ಕುಳಿತು ಆಕೆಯ ಎರಡೂ ಕೈಗಳನ್ನು ಬಲವಾಗಿ ತಿರುವಿ ನೋಯಿಸಿದ.

ಆತನ ಮುಖಕ್ಕೆ ಉಗುಳಬೇಕೆಂದು ತೋರಿದರೂ ಆಕೆ ಎಂದಳು:

"ದಮ್ಮಯ್ಯ, ಬಿಟ್ಬಿಡಿ!"

ಅವನು ಬಿಡಲಿಲ್ಲ. ಸುನಂದಾ ಸೋಲನ್ನೊಪ್ಪಿಕೊಂಡು ಸುಮ್ಮನಾದಳು.

ಆತ ಏಳುತ್ತಿದ್ದಂತೆಯೇ ಆಕೆ ಕೇಳಿದಳು:

"ನಾನು ಸತ್ತು ಶವವಾದ ಮೇಲೂ ಹೀಗೇ ಮಾಡ್ತೀರಿ, ಅಲ್ಲ?"

ಆ ಮಾತು ಕೇಳಿ ಮೈ ಉರಿದಂತಾಗಿ, ಆಕೆಯನ್ನು ಹೇಗೆ ದಂಡಿಸಬೇಕೆಂದು ತೋಚದೆ, ಪುಟ್ಟಣ್ಣ ಅಲ್ಲೆ ನಿಂತ.

ಸೋಲಿನ ಅವಮಾನದ ದುಃಖವೆಲ್ಲ ಒತ್ತರಿಸಿ ಬಂದು, ಬಿಗಿದ ಹಲ್ಲುಗಳೆಡೆಯಿಂದಲೆ ಸುನಂದಾ ಅಂದಳು:

"ರಾಕ್ಷಸ!"

ಹಾಸಿಗೆಯ ಮೇಲಿದ್ದ ಆಕೆಯನ್ನು ಪುಟ್ಟಣ್ಣ ಕಾಲಿನಿಂದ ಒದ್ದ. ಹೊರಗೆ ಕೇಳಿಸುವ ಹಾಗಿರದಿದ್ದರೂ ಒಳಗಿನ ಮಟ್ಟಿಗೆ ಸಾಕಷ್ಟು ಗಟ್ಟಿಯಾಗಿಯೇ ಆತನೆಂದ:

"ಇನ್ನೊಮ್ಮೆ ಹಾಗೇನಾದರೂ ಅಂದರೆ ಹಲ್ಲು ಮುರೀತೀನಿ. ನನ್ನ ಅನ್ನ

ತಿಂದ್ಮೇಲೆ ಮರ್ಯಾದೆಯಾಗಿ ಬಾಯ್ಮುಚ್ಚಿ ಬಿದ್ದಿರ್ಬೇಕು."

ಗದ್ದಲವಾದರೆ ರಾಧಮ್ಮನ ಮನೆಯವರು ಏಳಬಹುದೆಂದು, ಪಕ್ಕದಲ್ಲಿದ್ದ ಬಡ ಸಂಸಾರಕ್ಕೆ ಕೇಳಿಸಬಹುದೆಂದು, ಸುನಂದಾ ಸುಮ್ಮನಾದಳು.

* * * *

ಆ ರಾತ್ರೆ ಮುಂಜಾವದವರೆಗೂ ಸುನಂದೆಗೆ ನಿದ್ದೆ ಬರಲಿಲ್ಲ. ತನ್ನ ಬದುಕಿನ ಕಥೆ ಅಲ್ಲಿಗೆ ಆಯಿತೆಂದೇ ಆಕೆ ತಿಳಿದಳು. ಪಿಶಾಚಿಗಳೆಲ್ಲ ಅಬಲೆಯಾದ ತನ್ನ ಸುತ್ತಲೂ ಕೈ ತಟ್ಟಿ ಕುಣಿಯುತ್ತಿದ್ದಂತೆ ಆಕೆಗೆ ಅನಿಸಿತು.

ಸಾವಿರದ ಒಂದನೆಯ ಸಾರೆ ಆಕೆ ತನ್ನನ್ನೆ ಕೇಳಿಕೊಂಡಳು:

"ಹೀಗೆ ಬದುಕುವುದಕ್ಕಿಂತ ಸಾಯುವುದಲ್ಲವೆ ಮೇಲು?"

ಅಡುಗೆಮನೆಯ ಕಿಟಿಕಿ ಎತ್ತರವಾಗಿತ್ತು. ಅದರ ಸರಳುಗಳಿಗೆ ಸೀರೆ ಕಟ್ಟಿ ತನ್ನ ಕೊರಳಿಗೆ ಬಿಗಿದು ಸುತ್ತಿದರೆ ಸಾವು ಬರುವುದು. ಆತನಿಗೆ ಯಾವ ತೊಂದರೆಯೂ ಇಲ್ಲ. ಶವವನ್ನು ಹಾಸಿಗೆಯ ಮೇಲೆ ಮಲಗಿಸಿಟ್ಟು, ಆಕೆಗೆ ಕಾಹಿಲೆಯೆಂದು ಪುಕಾರು ಹುಟ್ಟಿಸಿ, 'ಅಕಾಸ್ಮಾತ್ತಾಗಿ ಸತ್ತಳು'–ಎಂದು ಜಾಹೀರು ಮಾಡುವುದಕ್ಕೂ ಆತ ಸಮರ್ಥನೇ. ಅಥವಾ ತಾನೇ ಬರೆದಿಡಬಹುದು–ತನ್ನ ಮರಣಕ್ಕೆ ಜವಾಬ್ದಾರಳು ತಾನೇ ಎಂದು...ಆದರೆ ಹಾಗೆ ಯಾಕೆ ಬರೆಯಬೇಕು?....ಆತನ ವಿಷಯವಾಗಿ ತಾನು ಯಾಕೆ ಕನಿಕರ ತೋರಬೇಕು? ಈ ರೀತಿ ಕ್ರೂರ ಪಶುವಾಗಿ ವರ್ತಿಸಿದ ಆತ ಸಂಕಷ್ಟ ಅನುಭವಿಸಲಿ. ಜೈಲಿಗೆ ಹೋಗಲಿ ಬೇಕಾದರೆ. ಆ ವಿಷಯದಲ್ಲಿ ತಾನು ಮೃದುವಾಗಿ ಯಾಕಿರಬೇಕು?...

ಮತ್ತೆ ಮತ್ತೆ ಅದೇ ಯೋಚನೆ. ಆ ಯೋಚನೆಯೇ ಸರಿ ಎಂಬ ಅಭಿಪ್ರಾಯ. ಅದರಂತೆಯೇ ನಡೆಯಬೇಕು ಎಂಬ ಉತ್ಕಟೇಚ್ಛೆ.

...ಮಗು ತೊಟ್ಟಿಲಲ್ಲಿ ಅತ್ತಿತ್ತ ಹೊರಳಿ ಮೆಲ್ಲನೆ ಅತ್ತಿತು.

'ಮೂರು ಗಂಟೆಯಾಯ್ತು ಹಾಗಾದರೆ'

—ಎಂದು ಸುನಂದಾ ಎದ್ದು ಕುಳಿತು ತೊಟ್ಟಿಲು ತೂಗಿದಳು. ಹಿಂದೆ ಸಾಮಾನ್ಯವಾಗಿ ಮೂರು ಗಂಟೆಯ ಹೊತ್ತಿಗೆ ಮಗು ಎದ್ದಾಗಲೆಲ್ಲ ಅದಕ್ಕೆ ಹಾಲು ಕೊಡಬೇಕಾಗುತ್ತಿತ್ತು. ಈಗ ಅದರ ಅಗತ್ಯವಿರಲಿಲ್ಲ. ಅಭ್ಯಾಸ ಬಲದಿಂದ ಆ ಹೊತ್ತಿಗೇ ಎಚ್ಚರಾಗುತ್ತಿತ್ತಾದರೂ ಸ್ವಲ್ಪ ತೊಟ್ಟಿಲು ತೂಗಿದೊಡನೆ ಮತ್ತೆ ನಿದ್ದೆ ಹೋಗುತಿತ್ತು.

ಈ ಸಲವೂ ಮಗು ನಿದ್ದೆ ಹೋಯಿತು.

ಸುನಂದಾ ಹೊದಿಕೆ ಹೊದ್ದುಕೊಂಡು ಗೋಡೆಗೊರಗಿ ಹಾಗೆಯೇ ಕುಳಿತಳು.

ಈ ಮಗು ಮತ್ತು ತಾನು. ಅದು ತನ್ನದೇ ಮಾಂಸದೊಂದು ತುಣುಕು. ತಾನು ಹೊರಟು ಹೋದರೆ ಅದರ ಗತಿ ಏನಾಗುವುದು? ಅದನ್ನು ಯಾರು ಸಾಕುವರು? ಆ ಮನುಷ್ಯನೆ? ಆತ ಒಂದು ದಿನವೂ ಅದರ ಪಾಲನೆ ಮಾಡಲಾರ. ಅದನ್ನು

ಆತ ಅನಾಥಾಶ್ರಮಕ್ಕೆ ದಾಟಿಸಬಹುದು. ಇಲ್ಲವೆ, ಎಲ್ಲಿಗಾದರೂ ಒಯ್ದು ರಾತ್ರ ಹೊತ್ತು ಬೀದಿಯ ಬದಿಯಲ್ಲಿ ಬಿಟ್ಟು ಬರಬಹುದು. ತಾನಿಲ್ಲದೆ ಅದು ಕೊರಗಿ ಸಾಯು ಬಹುದು...

ಅಥವಾ, ಮಗುವನ್ನೂ ಎತ್ತಿಕೊಂಡು ಇಲ್ಲಿಂದ ತಾನು ಓಡಿಹೋಗಿ, ಅದರ ಜತೆಯಲ್ಲೇ ಯಾವುದಾದರೂ ಕೆರೆಗೋ ಬಾವಿಗೋ ಹಾರಿದರೆ?

—ಸುನಂದಾ ಮುಂದೆ ಯೋಚಿಸಲಾರದೆ, ಮೊಣಕಾಲುಗಳ ಮೇಲೆ ತಲೆ ಇಟ್ಟು ಬಲವಾಗಿ ಕಣ್ಣುಗಳನ್ನು ಮುಚ್ಚಿಕೊಂಡಳು. ಬಹಳ ಹೊತ್ತು ಹಾಗೆಯೇ ಕುಳಿತಳು.

ತಪ್ಪು—ತಾನು ಯೋಚಿಸುತ್ತಿದ್ದುದು ತಪ್ಪು. ವಿದ್ಯಾವತಿಯಾದ ತಾನು ಹೀಗೆ ಮಾಡಿದರೆ ಲೋಕ ಏನೆಂದೀತು? ಕುಸುಮ ಏನೆಂದಾಳು? ರಾಧಮ್ಮ ಏನೆಂದಾರು?

ತಾನು ಹೇಡಿಯೆ ಹಾಗಾದರೆ? ಕೈಲಾಗದ ದುರ್ಬಲಳೆ? ಹೆತ್ತ ಮಗುವನ್ನು ಕೈಯಾರೆ ಕೊಲ್ಲುವ ಪಾಪಿಯೆ? ತಾಯಿ ತಂದೆಯರು ಕೆಟ್ಟವರೆಂದು ಆ ಎಳೆಯ ಕಂದಮ್ಮ ಕಷ್ಟ ಪಡಬೇಕೇನು? ಇಷ್ಟೊಂದು ಸಾಹಿತ್ಯ ಓದಿ, ಇಷ್ಟೊಂದು ಸಂಸ್ಕಾರ ಹೊಂದಿ, ಇಷ್ಟೊಂದು ಒಳ್ಳೆಯವಳೆನ್ನಿಸಿಕೊಂಡ ತಾನು, ಇಂತಹ ಯೋಚನೆಯನ್ನು ಮಾಡಿದ್ದಾದರೂ ಹೇಗೆ?

ಮನುಷ್ಯತ್ವವೆಲ್ಲವನ್ನೂ ಕಳೆದುಕೊಂಡಿದ್ದ ಆ ಗಂಡಿನ ಭೋಗದ ಆಟಿಗೆಯಾಗು ವುದು, ಮನೆಗೆಲಸದ ತೊತ್ತಾಗುವುದು, ದುಸ್ಸಹವಾಗಿತ್ತು. ನಿಜ. ಆದರೆ ಈ ಮಗುವಿ ಗೋಸ್ಕರ, ತಾನು ಈಗ ಅದನ್ನೆಲ್ಲ ಸಹಿಸಬೇಕು. ಮಗುವೊಂದರ ಸಲುವಾಗಿಯೇ ತಾನು ಬದುಕಬೇಕು....

ಅಲ್ಲದೆ ಹೊಟ್ಟೆಯಲ್ಲೇ ತಾನು ಹೊತ್ತಿರಬಹುದಾದ ಇನ್ನೊಂದು ಸಂತಾನ? ಅದು ಅಲ್ಲಿದೆ ಎನ್ನುವುದಕ್ಕೆ ಆಧಾರವಿರಲಿಲ್ಲ. ಇಲ್ಲದಿದ್ದರೆ ಮೇಲು. ಇದ್ದರೆ ಮಾತ್ರ ಅದೂ ತನ್ನ ಜವಾಬ್ದಾರಿಯೇ....

ಇಷ್ಟೆಲ್ಲ ಇದ್ದೂ ತಾನು ಸಾವನ್ನಪ್ಪಲು ಯೋಚಿಸುವುದು ಹೇಡಿತನವಲ್ಲದೆ ಬೇರೇನು?

ತನ್ನ ಬದುಕು ಹೀಗಾಯಿತು. ಆದರೆ ನಾಳೆ—ಭವಿಷ್ಯತ್ತಿನಲ್ಲಿ—ತನ್ನ ಕಂದಮ್ಮನ ಬದುಕು ಹೀಗಾಗಬಾರದಲ್ಲವೆ? ತನ್ನ ಮೇಲಲ್ಲವೆ ಹಾಗಾಗದಂತೆ ನೋಡುವ ಭಾರ?

...ರಾತ್ರೆಯ ನೀರವತೆಯನ್ನು ಭೇದಿಸುತ್ತ ಮೋಟಾರು ಲಾರಿಯೊಂದು ಮೇಲಿನ ರಾಜಬೀದಿಯಲ್ಲಿ ಸಾಗಿತು. ಇನ್ನೂ ರಾತ್ರೆ ಇರುವಾಗ ಬೆಳಗಾಗುವುದಕ್ಕೆ ಮುಂಚೆಯೇ ವಾಹನಗಳ ಸಂಚಾರ....

ಆ ಲಾರಿಯ ಸದ್ದಿಗೆ ಮಗು ಎಚ್ಚರಗೊಂಡಿತೇನೋ ಎಂದು ಸುನಂದಾ ತೊಟ್ಟಿ ಲಿನೊಳಕ್ಕೆ ಬಾಗಿನೋಡಿದಳು. ಮಗು ಮಲಗಿಯೇ ಇತ್ತು. ಅದಕ್ಕೆ ಹೊದಿಸಿದ್ದ ತೆಳುವಾದ ಉಣ್ಣೆಯ ಬಟ್ಟೆಯ ಮೇಲೆ ಕೈ ಇಟ್ಟಳು...ಬಳಿಕ ಮೆಲ್ಲನೆ ಮಗುವನ್ನು

ತೊಟ್ಟಿಲಿನಿಂದೆತ್ತಿ ತನ್ನ ಹಾಸಿಗೆಯ ಮೇಲೆಯೆ ಮಲಗಿಸಿ, ತಾನೂ ಅದರ ಬಳಿಯಲ್ಲೆ ಕಾಲು ಚಾಚಿದಳು.

ತನ್ನ ಎದೆಗೆ ಮೈಗೆ ತಗಲಿಯೇ ಮಲಗಿದ್ದ ಮಗುವಿನ ಶಾಖ ಆಕೆಯ ದೇಹದಲ್ಲೆಲ್ಲ ಸಂಚಾರಮಾಡಿತು. ಲೋಕಕ್ಕೂ ತನಗೂ ನಡುವಿನ ಏಕಮಾತ್ರ ತಂತುವಾಗಿದ್ದ ಆ ಕಂದಮ್ಮನನ್ನು ಮತ್ತಷ್ಟು ಬಿಗಿಯಾಗಿ ಅಪ್ಪಿಕೊಂಡು, ತನ್ನ ಅಪಾರ ಪ್ರೀತಿಯ ಸಂಕೇತವಾಗಿ ಅದನ್ನು ಆಕೆ ಮುದ್ದಿಸಿದಳು.

...ನಸುಕಿನಲ್ಲಿ ಆಕೆಗೆ ಸ್ವಲ್ಪ ನಿದ್ದೆ ಬಂತು.

ಆ ನಿದ್ದೆಯಲ್ಲಿ ಕನಸು: ಯಾರೋ ಕಂಠಿಸರವನ್ನು ಕಸಿಯ ಹೊರಟಂತೆ; ಕೈ ಬಳೆಗಳನ್ನು ಕದಿಯ ಬಂದಂತೆ; ಹಣೆಯ ಕುಂಕುಮವನ್ನು ಅಳಿಸಲು ಯತ್ನಿಸಿದಂತೆ. ಮೃದುವಾಗಿ ಎದೆ ಮುಟ್ಟಿದ ಬೆರಳುಗಳು ಒರಟಾಗಿ ಕತ್ತನ್ನು ಹಿಸುಕಿದಂತೆ. ಆದರೂ ಮಗುವನ್ನು ಬಚ್ಚಿಟ್ಟುಕೊಂಡು ಸುನಂದಾ ಆ ಶಕ್ತಿಗಳಿಗಿದಿರು ಹೋರಾಡಿದಳು. ಹೋರಾಡಿ ಆಕೆಗೆ ಆಯಾಸವಾಯಿತು.

....ಕನಸಿನ ಲೋಕದಿಂದ ಹೊರಬಂದು ಕಣ್ಣು ತೆರೆದಳು ಸುನಂದಾ. ಬೆಳಗಾಗಿತ್ತು. ಬಳಲಿದ್ದ ಆಕೆಯ ದೇಹದಲ್ಲಿ ಎದ್ದು ಓಡಾಡುವ ಚೈತನ್ಯ ಇದ್ದಂತೆ ತೋರಲಿಲ್ಲ.

## ೧೯

ರಾಧಮ್ಮ ಕೂಗಿ ಕರೆದರು:

"ಸುನಂದಾ, ಬೇಗ್ಬನ್ರೀ...ಇಲ್ನೋಡಿ ಏನಾಗ್ತಿದೇಂತ."

'ಕೋತಿ ಕುಣೀತಿದೆ. ತಮಾಷೆ ನೋಡು, ಬಾ' ಎಂದು ಕರೆದ ಹಾಗಿರಲಿಲ್ಲ ಆ ಸ್ವರ. ಸಂಭವಿಸುತ್ತಿದ್ದ ಯಾವುದನ್ನೋ ನಂಬಲಾಗದೆ, 'ನೀನೂ ಒಮ್ಮೆ ನೋಡು' ಎಂದು ಒತ್ತಾಯಿಸಿದ ಹಾಗಿತ್ತು.

ಪಕ್ಕದ ಹಿತ್ತಿಲಿನ ದರಿದ್ರರ ಕಥೆಯೇ ಇರಬೇಕು, ಎಂದುಕೊಂಡೇ ಸುನಂದಾ ಹೊರಬಂದಳು. ಆ ದಿನ ಬೆಳಗಿನಿಂದಲೇ ಅಲ್ಲಿಂದ ಜಗಳದ ಮಾತುಗಳು ಕೇಳಿ ಬರುತ್ತಿದ್ದುವು. ನಮ್ಮ ಸಂಸಾರದ ಹಾಗೆಯೇ ಇವರದೂ ಒಂದು, ಎಂದು ಸುನಂದಾ ಯಾವ ಆಸಕ್ತಿಯನ್ನೂ ತೋರಿರಲಿಲ್ಲ.

ಅಂಗಳದಲ್ಲಿ ನಿಂತಿದ್ದ ರಾಧಮ್ಮನನ್ನು ನೋಡಿ ಸುನಂದಾ ಕೇಳಿದಳು:

"ಏನಾಯ್ತು ರಾಧಮ್ಮ?"

ಉತ್ತರವಾಗಿ ಅವರು ಎಡಗಡೆ ಬೊಟ್ಟು ಮಾಡಿದರು.

ಹೊಟ್ಟೆಯ ಪಾಡಿಗೋಸ್ಕರ ಊರೂರು ಅಲೆದು ಬಂದಿದ್ದ ದುಡಿಯುವ ಹೆಣ್ಣು ಜೀವ ಹಿತ್ತಿಲ ಗೋಡೆಗೊರಗಿಕೊಂಡು ಅಳುತ್ತ ನಿಂತಿತ್ತು. ಆ ಕರಿಯ ಹಣೆಗೆ ಏಟು ಬಿದ್ದು, ಮೂಗು ಮುಖಗಳ ಮೇಲಿನಿಂದ ರಕ್ತದ ಧಾರೆ ಇಳಿಯುತ್ತಿತ್ತು. ಅದರ ಜತೆಯಲ್ಲೆ ಕಣ್ಣೀರು.

ರಾಧಮ್ಮ ಹೇಳಿದರು:

"ಇವತ್ತು ಬೆಳಗಿನಿಂದಲೆ ಶುರುವಾಯ್ತು ರಾಮಾಯಣ. ಕೇಳಿಸ್ತಾ ಇತ್ತೆ ನಿಮಗೆ?"

ಕೇಳಿಸಿತ್ತು. ಆದರೆ ತನ್ನ ರಾಮಾಯಣವೂ ಅದಕ್ಕಿಂತ ಕಡಮೆಯಲ್ಲ ಎಂದು ನಂಬಿದ್ದ ಸುನಂದಾ ಅತ್ತ ಲಕ್ಷ್ಯ ಕೊಟ್ಟಿರಲಿಲ್ಲ.

"ಹೂಂ ರಾಧಮ್ಮ. ಇವರ ಗೋಳು ನಿತ್ಯ ಇದ್ದದ್ದೇ ಅಂತ ಸುಮ್ಮನಿದ್ದೆ."

"ಇವತ್ತು ನಿತ್ಯಕ್ಕಿಂತ ಸ್ವಲ್ಪ ಜಾಸ್ತಿಯಾಗಿದೆ."

"ಏನು?"

"ಮನೆ ಬಿಟ್ಟು ಹೊರಟ್ಹೋಗ್ತೀನಿಂತ ಈಕೆ ಹೇಳ್ತಿದಾಳೆ. ಆತ, ಈಗಲೇ ಹೊರಡು ಅಂತಿದಾನೆ."

ತನ್ನ ಮುಖದ ಮೇಲೊಂದು ನಿಶ್ಚಲತೆಯ ತೆರೆಯನ್ನು ಇಳಿಬಿಟ್ಟು ಸುನಂದಾ ಕೇಳಿದಳು:

"ಪಾಪ! ಎಲ್ಲಿಗೆ ಹೋಗ್ತಾಳಂತೆ?"

ಅದರ ಹಿಂದೆಯೇ, ಇನ್ನೊಂದು ಪ್ರಶ್ನೆ ಅವ್ಯಕ್ತವಾಗಿಯೆ ಉಳಿಯಿತು:

'ತವರು ಮನೆ ಇದೆಯೇನು ಆಕೆಗೆ?'

"ಎಲ್ಲಿಗೆ ಹೋದಾಳು ಪಾಪ! ಒಂದು ಸಂಸಾರವೇ—ಸಂಬಂಧಿಕರೇ? ಮನೆ ಬಿಟ್ಟು ಹೋದ ಆ ಮಗನಂತೂ ಬರಲೇ ಇಲ್ಲ. ಪರದೇಶಿ ಹುಡುಗನಾಗಿ ಹೊರಟ್ಹೋದ. ಇನ್ನು ಇವಳು ದೇಶಾಂತರ ಅಲೀತಾಳೆ."

"ಮಗು?"

"ಅದನ್ನೂ ಕಟ್ಕೊಂಡ್ಹೋಗ್ತಾಳೆ."

...ಹೆಂಗಸು ಅಳುವುದು ನಿಂತಿತು. ಗಂಡಸು ಗುಡಿಸಲಿನಿಂದ ಹೊರ ಬರಲಿಲ್ಲ. ಈಗ, ವ್ಯಥೆಯ ಬದಲು ಆಕೆಯ ಮುಖದ ಮೇಲೆ ನಿರ್ಧಾರದ ಭಾವ ಮೂಡಿತು.

ನಿಂತಲ್ಲಿಂದಲೇ, ಹೊರಬಂದ ಸುನಂದೆಯನ್ನು ಕಂಡು, ಆಕೆ ಹೇಳಿದಳು:

"ಪಾರಮ್ಮಾ ಪಾರ್."

ಅದು 'ನೋಡಮ್ಮಾ ನೋಡು. ನನ್ನ ಬದುಕು ಹ್ಯಾಗಾಗ್ತಿದೆ ಅನ್ನೋದನ್ನ ನೋಡು' ಎನ್ನುವ ಧ್ವನಿ.

ಅಷ್ಟು ಹೇಳಿದ ಹೆಂಗಸು, ಸುನಂದೆಯ ಪ್ರತಿಕ್ರಿಯೆಯೊಂದನ್ನೂ ಇದಿರು ನೋಡದೆ, ಒಳಗಿದ್ದ ಗಂಡಸಿನ ಕಿವಿಗೆ ನಾಟುವಂತೆ ಅಂದಳು:

"ನಾಚಿಕೆ ಇಲ್ದೋನೆ! ನನ್ನ ಬಟ್ಟೆಬರೇನಾದರೂ ಹೊರಗೆ ಹಾಕು. ಅದನ್ನೂ ನಿನ್ನ ರಾಣಿಗೆ ಕೊಡಬೇಕೂಂತಿದೀಯಾ?"

ತನ್ನೆದುರಿನಲ್ಲೆ ನಡೆಯುತ್ತಿದ್ದ ಆ ರುದ್ರನಾಟಕವನ್ನು ನೋಡಲಾರದೆ ಸುನಂದಾ ರಾಧಮ್ಮನಿಗೆ ಹೇಳಿದಳು:

"ನೀವಾದರೂ ಒಂದಿಷ್ಟು ಅವರಿಗೆ ಬುದ್ಧಿವಾದ ಹೇಳಬಾರ್ದೆ ರಾಧಮ್ಮ?"

"ಎಲ್ಲಾ ಆಯ್ತು ಕಣ್ರೇ...ಇನ್ನು ನಾವು ಮಾಡುವಂಥಾದ್ದೇನೂ ಉಳಿದಿಲ್ಲ."

ಬೆಳಗಿನಿಂದ ಅಲ್ಲಿ ಏನಾಯಿತೆಂಬುದನ್ನು ರಾಧಮ್ಮ ಸಂಕ್ಷಿಪ್ತವಾಗಿ ಹೇಳಿದರು:

ಆ ದಿನ ಬೆಳಗ್ಗೆ ಆತ ಕೆಲಸಕ್ಕೆ ಹೋಗಲಿಲ್ಲ. ಆಕೆ ಬಯ್ದಳು. ಆತ ಬೀಡಿಗೆ ಕಾಸು ಕೇಳಿದ. ತನ್ನ ಸಂಪಾದನೆಯನ್ನೆಲ್ಲ ಕುಡಿಯುವುದಕ್ಕೇ ಉಪಯೋಗಿಸುತ್ತಿದ್ದ ಆ ಗಂಡಸಿಗೆ ಆಕೆ ಏನನ್ನೂ ಕೊಡಲಿಲ್ಲ. "ಹೋಗಿ ಸಂಪಾದ್ಸು. ನಿಮ್ಮಪ್ಪ ಗಂಟು ಕಟ್ಟಿ ಇಲ್ಲಿ ಮಡಗಿಲ್ಲ" ಎಂದಳು. ಆತ ಹೊಡೆಯಲು ಬಂದ. ಕೈಗೆ ಕೈ ಹತ್ತಿತು... "ಎದುರು ಮನೆ ಜವಾನ ಒಂದ್ಸಲ ಹೋಗಿ ಜಗಳ ನಿಲ್ಲಿಸಿ ಬರವ ಕಣ್ರೇ..." "ಗಲಾಟೆ ಮಾಡಿದರೆ ಪೋಲೀಸರಿಗೆ ಕೊಡ್ತೀವಿ" ಎಂದು ಗದರಿಸಿದ್ದಾಯಿತು. ಆತ, "ಬಹಳ ನೋಡಿದೀನಿ ಪೋಲೀಸರ್ನ" ಎಂದು ಬಿಟ್ಟ. ಈ ದಿನ ಈಕೆ ಮುಸುರೆ ತಿಕ್ಕುವ ಕೆಲಸಕ್ಕೂ ಹೋಗಲಿಲ್ಲ. ಸೈಟಿನ ಯಜಮಾನ ನಾಗೇಂದ್ರಪ್ಪನ ಮನೆಯ ಆಳು ಬಂದು ಆಕೆಯನ್ನು "ಯಾಕೆ ಬರಲಿಲ್ಲ?" ಎಂದು ಗದರಿಸಿ ಕೇಳಿದ. ಆ ಹೆಂಗಸು ಉತ್ತರವನ್ನೇ ಕೊಡಲಿಲ್ಲ...

"ಅವಳಿಗೆ ಸಾಕಾಗಿ ಹೋಗಿದೆ ಸುನಂದಾ."

"ಅಯ್ಯೋ ಪಾಪ!"

"ಎಷ್ಟು ದಿನಾಂತ ಸಹಿಸ್ತಾಳೆ? ಆತನೋ ನಾಯಿಬಾಲ ಇದ್ದ ಹಾಗೆ. ಯಾವಾಗಲೂ ಡೊಂಕೇ. ಇವಳ ಬಾಯಿಯೂ ಸ್ವಲ್ಪ ಕೆಟ್ಟದ್ದೇ ನಿಜ. ಆದರೆ ಆತ ಶುದ್ಧ ಲಫಂಗ ಕಣ್ರೇ. ಇವಳು ಇಷ್ಟು ಜೋರಾಗಿ ಇಲ್ದೇ ಇದ್ದಿದ್ರೆ ಯಾವಾಗಲೋ ಇವಳ್ನ ಮೂರು ಕಾಸಿಗೆ ಮಾರ್ತಿದ್ದ."

ಸುನಂದೆಯ ಮೈ ನಡುಗಿತು. ಮಾತು ಹೆಪ್ಪುಗಟ್ಟಿತು.

ಅಷ್ಟರಲ್ಲೆ ಆ ಗಂಡಸು ಸುತ್ತುಮುತ್ತೆಲ್ಲ ಕೆಂಗಣ್ಣಿನಿಂದ ನೋಡುತ್ತ, ಗವಿಯಿಂದ ಹೊರಟ ಹುಲಿಯ ಹಾಗೆ ಗುಡಿಸಲಿನಿಂದ ಹೊರಬಂದ. ಅವನ ಕೈಯಲ್ಲಿ ಹೊಗೆಯಾಡುತ್ತಿದ್ದೊಂದು ಬೀಡಿಯ ತುಂಡಿತ್ತು. 'ಈಕೆ ಹೊರಗೆ ಹರಟುತ್ತಿದ್ದರೂ ನಾನು ಒಳಗೆ ಬೀಡಿ ಸೇದುತ್ತಾ ನಿರ್ಲಿಪ್ತನಾಗಿಯೆ ಇದ್ದೆ'–ಎನ್ನುವ ಹಾಗೆ.

ಅತ್ತಿತ್ತ ನೋಡುತ್ತ ಆತ ಬೀದಿಗಿಳಿದ.

ಆ ಸಂದರ್ಭವನ್ನುಪಯೋಗಿಸಿ ಆ ಹೆಂಗಸು ಹಟ್ಟಿಯೊಳಕ್ಕೆ ಧಾವಿಸಿದಳು. ಅಲ್ಲಿದ್ದ ತನ್ನ ಬಟ್ಟೆ ಬರೆಯನ್ನೆಲ್ಲ ಗಂಟು ಕಟ್ಟಿದಳು. ಮಡಿಕೆ ಕುಡಿಕೆಗಳೆಡೆಯಲ್ಲಿ ತಾನು ಬಚ್ಚಿಟ್ಟಿದ್ದ ಪುಡಿಕಾಸುಗಳನ್ನೆಲ್ಲ ಎತ್ತಿಕೊಂಡಳು. ಹೊರಕ್ಕೆ ಬಂದು, ಮೂಟೆ

ಯನ್ನು ಹೆಗಲಿಗೇರಿಸಿ, "ಬಾ" ಎಂದು ತನ್ನ ಹೆಣ್ಣು ಮಗುವನ್ನು ಕರೆದು, ಅದನ್ನು ಕಂಕುಳಲ್ಲೆತ್ತಿಕೊಂಡಳು. ತಮ್ಮ ಅಂಗಳದಲ್ಲಿ ತನ್ನನ್ನು ನೋಡುತ್ತ ನಿಂತಿದ್ದ ಹೆಂಗಸರತ್ತ ತಿರುಗಿ ಆಕೆಯೆಂದಳು:

"ಹೋಗ್ತೀನಿ ಅಮ್ಮಾ."

ವಾಡಿಕೆಯಂತೆ, 'ಹೋಗಿ ಬರ್ತೀನಿ' ಎಂದೂ ಹೇಳುವ ಹಾಗಿರಲಿಲ್ಲ ಪರಿಸ್ಥಿತಿ.

ರಾಧಮ್ಮ ಆಕೆಯನ್ನು ಕರೆದರು:

"ಇಲ್ಲಿ ಬಾರೇ. ಈ ತಿಂಗಳಲ್ಲಿ ಇಷ್ಟು ದಿವಸದ ನಿನ್ನ ಸಂಬಳ ಬಾಕಿ ಇದೆಯಲ್ಲ. ತಗೊಂಡು ಹೋಗು. ನಿನ್ನ ಋಣ ನಮ್ಮ ಮೇಲಿಟ್ಟು ಹೋಗ್ಬೇಡ."

ಆಕೆ ತಮ್ಮ ಹಿತ್ತಿಲೊಳಕ್ಕೆ ಬಂದಂತೆ ರಾಧಮ್ಮ, ಒಳಹೋಗಿ ದುಡ್ಡೆಣಿಸಿ, ಹೆಚ್ಚಾಗಿಯೇ ನಾಲ್ಕಾಣೆಯನ್ನು ಸೇರಿಸಿ, ತಂದರು.

ಯಾಂತ್ರಿಕವಾಗಿ ಸುನಂದೆಯೂ ಒಳಹೋದಳು. ದೇವರ ಪಟದ ಹಿಂದಿರಿಸಿದ್ದ ಹಣದಲ್ಲಿ ಎರಡು ರೂಪಾಯಿಯದೊಂದು ನೋಟಿತ್ತು. ಲೆಕ್ಕದಂತೆ ಆಕೆ ಆ ತಿಂಗಳ ಅಷ್ಟು ದಿನಗಳಿಗೆ ಕೊಡಬೇಕಾದುದು ಒಂದು ರೂಪಾಯಿ. ಹಾಗಿದ್ದರೂ ಎರಡರ ನೋಟನ್ನೇ ಸುನಂದಾ ಹೊರಗೆ ತಂದಳು.

ರಾಧಮ್ಮ ಕೊಟ್ಟುದನ್ನು ಹಿಡಿದುಕೊಂಡಿದ್ದ ಆ ಹೆಂಗಸು ಸುನಂದೆ ಕೊಟ್ಟ ನೋಟನ್ನೂ ಪಡೆದಳು. ಸುನಂದಾ ಎರಡು ರೂಪಾಯಿ ಕೊಟ್ಟುದನ್ನು ಕಂಡು ರಾಧಮ್ಮನಿಗೆ ಅಭಿಮಾನವೆನಿಸಿತು; ತನ್ನ ಬಳಿ ಅಷ್ಟಿಲ್ಲವಲ್ಲಾ ಎಂದು ಬೇಸರವಾಯಿತೇ ಹೊರತು, ಅಸೂಯೆ ಎನ್ನಿಸಲಿಲ್ಲ.

ಆ ಗಂಡಸು ಎಲ್ಲಿ ನೋಡುತ್ತಿರುವನೋ ಎಂದು ಅತ್ತಿತ್ತ ಅಂಜಿಕೆಯ ನೋಟ ಬೀರುತ್ತಲೆ, ಹಣವನ್ನೆಲ್ಲ ಆ ಹೆಂಗಸು ತನ್ನ ಮೂಟೆಯೊಳಗೆ ಇರಿಸಿಕೊಂಡಳು. ಹಾಗೆ ಮಾಡಿ, ರಾಧಮ್ಮ ಸುನಂದೆಯರತ್ತ ಕಣ್ಣೆತ್ತಿ ನೋಡಿದಾಗ, ಬತ್ತಿಹೋಗಿದ್ದ ಆಕೆಯಕಣ್ಣು ಕೊಳದಿಂದ ಮತ್ತೆ ಒರತೆ ಚಿಮ್ಮಿತು.

ವ್ಯಥೆಯಿಂದ ಕೂಡಿದ್ದ ಸ್ವರದಲ್ಲಿ ಸುನಂದಾ ಹೇಳಿದಳು:

"ಎಲ್ಲಿಗಮ್ಮ ಹೋಗ್ತೀಯಾ?"

"ಎಲ್ಲಿಗಾದರೂ ಹೋಗ್ತೀನಿ ತಾಯಿ. ನಿಮ್ಮಂಥ ನಾಲ್ಕು ಜನರ ಮನೇಲಿ ಕೆಲಸಮಾಡಿ ದಿನ ತಳ್ತೀನಿ. ಮಗನಂತೂ ದೊಡ್ಡೋನಾಗಿ ಹೊರಟ್ಹೋದ. ಇನ್ನು ಇದೊಂದು ಮಗು. ಅಯ್ಯೋ ಬಿಡಿ. ಹ್ಯಾಗಾದರೂ ಬೆಳೆಯುತ್ತೆ."

"ಒಬ್ಬಳೇ ಇರೋಕೆ ಕಷ್ಟ ಆಗಲ್ವೆ?"

"ಈಗ ಇಬ್ಬರೂ ಇದ್ದು ಸಿಕ್ಕಿದ ಸುಖ ಯಾವುದು ತಾಯಿ?"

ರಾಧಮ್ಮ ತಾನೂ ಮಾತು ಸೇರಿಸಿ ಅಂದರು:

"ನಿನ್ನಿಷ್ಟ, ಆದರೂ ಯೋಚ್ನೆಮಾಡಿ ನೋಡು. ಒಮ್ಮೆ ಮುರಿದ್ಮೇಲೆ ಕೂಡ್ಸೋಕಾಗಲ್ಲ. ಕೂಡಿಸಿದರೂ ಅದು ಮೊದಲಿನ ಹಾಗೆ ಭದ್ರವಾಗಿರೋಲ್ಲ........

ಒಟ್ನಲ್ಲಿ–ದುಡುಕ್ಬೇಡ. ಅಷ್ಟೆ."

ಸುನಂದೆಯ ಮನಸಿನೊಳಗೆ ಸುಳಿದು ಹೋಯಿತು, ಹಿಂದೆ ತನಗೂ ರಾಧಮ್ಮ ಕೊಟ್ಟಿದ್ದ ಉಪದೇಶ–'ದುಡುಕಬಾರದು' ಎಂದು.

ಆ ಹೆಂಗಸು ಮತ್ತೆ ಮೂಟೆಯನ್ನು ಹೆಗಲಿಗೇರಿಸಿ ಮಗುವನ್ನೆತ್ತಿಕೊಂಡು ಎದ್ದು ನಿಂತಳು:

"ಹೊರಟ್ಬಿಡೋದೂಂತ ಸಾವಿರ ಸಲ ಯೋಚ್ನೆ ಮಾಡಿದ್ದೆ ಅಮ್ಮಾ. ಆದರೂ ಹೋಗಿರ್ಲಿಲ್ಲ. ಇನ್ನು ಪ್ರಯೋಜನವಿಲ್ಲ. ಇವತ್ತೂ ಹೋಗದೆ ಇದ್ದರೆ ನನಗೆ ಬುದ್ಧಿ ಯಿಲ್ಲ ಅಂತಾರೆ, ಅಷ್ಟೆ."

ಆಕೆ ಮತ್ತೊಮ್ಮೆ ಬೀದಿಗಿಳಿದಂತೆ, ಗಂಡ ದೂರದಲ್ಲಿ ಕಾಣಿಸಿಕೊಂಡು, ಅವಳನ್ನೆ ದುರದುರನೆ ನೋಡಿದ.

ಆಕೆಯೂ ಪ್ರತಿಯಾಗಿ ಆತನನ್ನು ನೋಡಿದಳು.

ಆತ ಸುಮ್ಮನೆ ಇದ್ದ. ಆಕೆ ಅಂದಳು:

"ಇನ್ನಾದರೂ ಸುಖವಾಗಿರು!"

ಅಷ್ಟು ಹೇಳಿ ಅವಳು ಹಿಂತಿರುಗಿ ನೋಡದೆ ಹೊರಟು ಹೋದಳು. ಆತ ಗುಡಿಸಲಿನೊಳಕ್ಕೆ ಬಂದು, ಒಳಗೆಲ್ಲ ಒಮ್ಮೆ ನೋಡಿ, ಬಾಗಿಲೆಳೆದುಕೊಂಡು ಬೇರೆ ಹಾದಿ ಹಿಡಿದ.

ಆಟದ ನಡುವೆ ತಿಂಡಿಗಾಗಿ ಮನೆಗೆ ಬಂದ ಶ್ಯಾಮನನ್ನು ತಬ್ಬಿಕೊಂಡು, ಆ ಬಡಸಂಸಾರಕ್ಕೊದಗಿದ ದುರವಸ್ಥೆಯನ್ನು ಕಂಡು, ಬೇಸರದಿಂದ ರಾಧಮ್ಮ ತಲೆ ಯಾಡಿಸಿದರು.

ಸುನಂದಾ ಆಳವಾಗಿ ನಿಟ್ಟುಸಿರು ಬಿಟ್ಟಳು.

ಅಷ್ಟರಲ್ಲೇ ಎದುರು ಮನೆಯ ಕುಸುಮಾ ಇಳಿದು ಬಂದು, ಬೀದಿಯ ಆಚೆಯೇ ನಿಂತು ಕೇಳಿದಳು:

"ಕೊನೆಗೆ ಏನಾಯಿತ್ರೀ?"

ಆ ಬಡವರ ವಿಷಯವಾಗಿಯೇ ಆಕೆ ಕೇಳುತ್ತಿರಬಹುದೆಂದು ಸುನಂದಾ ಊಹಿಸಿ ದರೂ ಪ್ರಶ್ನೆ ಸ್ಪಷ್ಟವಾಗಲೆಂದು ಅಂದಳು:

"ಯಾವುದ್ರೀ?"

"ಅದೇ. ಬೆಳಗಿನಿಂದ ಗಲಾಟೆಯಾಗ್ತಾ ಇತ್ತಲ್ಲ."

"ಆಕೆ ಹೊರಟ್ಹೋದ್ಲು. ಗಂಡನ್ನ ಬಿಟ್ಬಿಟ್ಟು ಮಗೂನ ಎತ್ಕೊಂಡು ಹೊರ ಟ್ಹೋದ್ಲು."

"ಓ–ಡೈವೋರ್ಸ್ ಆಯ್ತು ಅನ್ನಿ!"

ಆ ಮಾತಿನ ಜತೆಯಲ್ಲೆ ಬಲು ಸಣ್ಣ ನಗೆಯಿತ್ತು. ಆದರೆ ಆ ನಗೆಯ ಬೆನ್ನಲ್ಲೆ

ಕನಿಕರದ ನುಡಿ:

"ಪಾಪ!"

ಅಷ್ಟು ಹೇಳಿ ಕುಸುಮಾ ಒಳಹೋದಳು.

ರಾಧಮ್ಮನಿಗೆ ಆ ಸಂಭಾಷಣೆಯ ವಿಷಯ ತಿಳಿದರೂ ಮುಖ್ಯವೆಂದು ತೋರಿದ ಒಂದು ಪದ ಅರ್ಥವಾಗಿರಲಿಲ್ಲ.

"ಆಕೆ ಅದೇನೋ ಅಂದಳಲ್ರೀ—ಇಂಗ್ಲಿಷಿನಲ್ಲಿ?"

"ಅದೇ? ಡೈವೋರ್ಸ್ ಅಂತ. ಡೈವೋರ್ಸ್ ಅಂದರೆ ವಿವಾಹ ವಿಚ್ಛೇದನ ಕಣ್ರೀ. ಗಂಡ ಹೆಂಡ್ತಿ ಬೇರೆ ಬೇರೆಯಾಗೋದು."

"ಓ—"

ಶ್ಯಾಮ ತಿಂಡಿಗಾಗಿ ತಗಾದೆ ಮಾಡಿದನೆಂದು ರಾಧಮ್ಮ ಎದ್ದರು. ಸರಸ್ವತಿಗೆ ಎಚ್ಚರವಾಯಿತೇನೋ ಎಂದು ನೋಡಲು ಸುನಂದೆಯೂ ಒಳಹೋದಳು.

* * * *

ಈಗ ಯಾವಾಗಲೂ ಬಲು ದೀರ್ಘವೆಂದು ತೋರುತ್ತಿದ್ದ ಕತ್ತಲೆ ಮತ್ತೆ ಬಂತು. ಕತ್ತಲೆ ಎಂದರೆ ಸುನಂದೆಗೀಗ ಎಲ್ಲಿಲ್ಲದ ಭಯ. ರಾತ್ರೆ ಹೊತ್ತು ತನಗಾಗಿ ಕಾದಿರುವುದೇನೆಂದು, ಹಗಲು ಊಹಿಸುವುದು ಸಾಧ್ಯವೇ ಇರಲಿಲ್ಲ.

ಈ ದಿನದ ಘಟನೆ ಆಕೆಯ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡಿತ್ತು.

ಕುಸುಮಳಿಗೆ ತನ್ನ ವಿಷಯ ಏನೂ ತಿಳಿಯದು. ಆದರೆ ರಾಧಮ್ಮನಿಗೆ ಹಾಗಲ್ಲ. ಆ ಬಡ ಸಂಸಾರ ಒಡೆದು ಹೋಳಾದ ರೀತಿಯನ್ನು ಕಂಡಾಗ, ತನ್ನ ನೆರೆಮನೆಯ ಸಂಸಾರವೂ ಒಡಕಾಗಿದೆ ಎಂಬ ಅಂಶ, ಅವರ ಮನಸ್ಸಿನಲ್ಲಿ ಖಂಡಿತ ಸುಳಿದಿರಬಹುದು.

ಕೆಟ್ಟವನಾಗಿದ್ದ ಗಂಡನನ್ನು ಆ ಬಡ ಹೆಂಗಸು ಬಿಟ್ಟು ಹೋಗಿದ್ದಳು. ಮುಂದೇನು—ಎಂಬ ಭಯದಿಂದ ಆಕೆ ಕಂಗೆಟ್ಟಿರಲಿಲ್ಲ. ದಿನದಿನವೂ ದುಡಿದು ಸಂಪಾದಿಸುವ ಆ ಜೀವಕ್ಕೆ ಬದುಕು ಈಸಲಾಗದ ಕಡಲಾಗಿ ತೋರಿರಲಿಲ್ಲ.

ಹೊರಟು ಬಿಡಬೇಕೆಂದು ಸಾವಿರ ಸಲ ಆ ಹೆಂಗಸು ಯೋಚನೆ ಮಾಡಿದ್ದಳಂತೆ. ಆದರೆ ಹೊರಟಿರಲಿಲ್ಲ. ನಿನ್ನೆಯವರೆಗೂ ಆಕೆ ಸಹನೆಯಿಂದ ದಿನ ಕಳೆದಿದ್ದಳು. ನಿನ್ನೆಯ ದಿನ ಸಹನೆಗೂ ಒಂದು ಪರಿಮಿತಿ ಇದೆ ಎಂಬುದನ್ನು ಮನಗಂಡು, ಆಕೆ ಹೊರಟಳು.

ಇಂತಹ ಬದುಕಿಗಿಂತ ಸಾವು ಮೇಲು ಎಂದು ಎಂದಾದರೂ ಆಕೆ ಯೋಚಿಸಿದ್ದಳೋ ಇಲ್ಲವೋ. ...ಸಾವು ಕೂಡ ಒಂದು ಪರಿಹಾರವೆಂಬುದನ್ನು ಆಕೆ ಪರಿಗಣಿಸಿದಂತೆಯೇ ತೋರಲಿಲ್ಲ. ಪ್ರಾಯಶಃ, ರಮ್ಯ ಬದುಕಿನ ಕನಸನ್ನು ಆಕೆ ಕಾಣದುದೇ ಇದಕ್ಕೆ ಕಾರಣವಿರಬಹುದು. ಆಕೆಯ ದೃಷ್ಟಿಯಲ್ಲಿ ಸುಖದುಃಖವೆಲ್ಲ ಸಮ್ಮಿಶ್ರಣಗೊಂಡ ಒಂದೇ ವಸ್ತುವಾಗಿರಬಹುದು....

ಆ ಹೆಂಗಸಿನ ಧೈರ್ಯವನ್ನು ಮೆಚ್ಚಬೇಕೆನಿಸಿತು ಸುನಂದೆಗೆ. ಹಾಗೆ ನಿರ್ಧಾರ ಮಾಡುವುದು ತನ್ನಿಂದ ಸಾಧ್ಯವಿತ್ತೆ? ಆ ಹೆಂಗಸು ಏನನ್ನೂ ಬಚ್ಚಿಡುತ್ತಿರಲಿಲ್ಲ. ಸಣ್ಣ ಪುಟ್ಟ ಜಗಳದಿಂದ ಹಿಡಿದು ಕೊನೆಯ ಸ್ಫೋಟದ ವರೆಗೆ, ಪ್ರತಿಯೊಂದೂ ಬಹಿರಂಗ ವಾಗಿಯೇ ಎಲ್ಲರ ಕಣ್ಣೆದುರಿಗೇ ನಡೆದಿತ್ತು. ಆದರೆ ತಾನು? ಮನೆಯಲ್ಲಿ ಜಗಳಾಡಿ ದರೂ ಬೀದಿಗೆ ಕೇಳಿಸಬಾರದೆಂಬ ಭಯ. ಪಕ್ಕದ ಮನೆ ರಾಧಮ್ಮನಿಗೇನೋ ತನ್ನ ಸಂಕಟದ ಸ್ಥೂಲ ಪರಿಚಯವಿತ್ತು. ಆದರೆ ವಿವರ ತಿಳಿದಿರಲಿಲ್ಲ. ಸ್ವಲ್ಪ ಆಚೆಗಿನ ಕುಸುಮಳಿಗೆ ಮಾತ್ರ ಆ ವಿಷಯ ಏನೂ ತಿಳಿಯದು–ಏನೇನೂ ತಿಳಿಯದು.

ಬೇರೆಯವರು ಏನೆನ್ನುವರೆಂದು ಆ ಹೆಂಗಸು ಚಿಂತಿಸಿರಲಿಲ್ಲ. ಆದರೆ ತನ್ನ ಚಿಂತೆಯೋ–ನೂರಾರು.

ತನ್ನೊಡನೆ ಕ್ರೂರ ಮೃಗದಂತೆ ವರ್ತಿಸುವ ಗಂಡನನ್ನು ಬಿಟ್ಟು ಮಗುವನ್ನೆತ್ತಿ ಕೊಂಡು ತಾನು ಹೊರಟು ಹೋಗುವ ಕಲ್ಪನೆ....ವಿದ್ಯಾವತಿಯಾದ ತಾನು ಯಾರಿಗೆ ಹೆದರಬೇಕು? ಏನಾದರೊಂದು ಉದ್ಯೋಗ ದೊರಕಿಸಿಕೊಂಡು ಸಂಪಾದಿಸಿ ಜೀವನ ನಡೆಸುವುದಕ್ಕಾಗುವುದಿಲ್ಲವೆ?

ಆದರೆ, ಆಗ ಸಮಾಜ ಏನೆನ್ನುವುದು? ತನ್ನ ತಾಯಿ ತಂದೆ ಏನು ಹೇಳುವರು? ಅವಿವಾಹಿತೆಯಾಗಿಯೇ ಕುಳಿತ ತಂಗಿಯ ಗತಿ ಏನಾಗುವುದು? ಒಬ್ಬಳೇ ಆದ ತಾನು ಎಲ್ಲಿರಬೇಕು? ಬೇಕಷ್ಟು ಜನ ಕೆಟ್ಟವರಿದ್ದಾರೆ ಈ ಪ್ರಪಂಚದಲ್ಲಿ....ಅವರೆಲ್ಲ ತನ್ನನ್ನು ಸುಮ್ಮನೆ ಬಿಡುವುದುಂಟೆ?

...ತಾನು ಅಸಹಾಯಳಾಗಿ ಮಗುವನ್ನೆತ್ತಿಕೊಂಡು ಚಿಂದಿಸೀರೆಯುಟ್ಟು ಕೆದರಿದ ಕೂದಲಿನೊಡನೆ ಬೀದಿ ಅಲೆಯುವ ಚಿತ್ರ–ಆ ದಿನ ಹೊರಟು ಹೋದ ಹೆಂಗಸಿನ ಹಾಗೆ.

ಆ ಯೋಚನೆಯಿಂದಲೆ ಸುನಂದೆಯ ಮೈ ಬೆವತಿತು.

## ೨೦

ಮಾರನೆಯ ಬೆಳಗ್ಗೆ ಗಂಡ ಕೆಲಸಕ್ಕೆ ಹೊರಟಾಗ ಸುನಂದಾ ಕೇಳಿದಳು:

"ತಾಯಿ ಮನೆಗೆ ಹೋಗ್ಬೇಕೂಂತ ಆಸೆಯಾಗಿದೆ. ಬಿಟ್ಬಿಟ್ಟು ಬರ್ತೀರಾ?"

ಪುಟ್ಟಣ್ಣ ಕ್ರುದ್ಧನಾಗಿ ಹೇಳಿದ:

"ನೀನು ಹೋಗಕೂಡದು."

"ಯಾಕೆ? ಬಿಟ್ಟು ಬರೋಕೆ ನಿಮಗೆ ಪುರಸೊತ್ತಿಲ್ವೆ?"

"ತವರುಮನೆಗೆ ಹೋಗೋ ಯೋಚ್ನೇನೆಲ್ಲ ಬಿಟ್ಬಿಡು."

ಸುನಂದೆಗೆ ಕೋಪ ಬರದಿದ್ದರೂ ಗಂಡನ ಬಿರುಸು ನುಡಿ ಕೇಳಿ ತಮಾಷೆ ಎನಿಸಿ, ಮತ್ತೂ ಆತನನ್ನು ರೇಗಿಸಬೇಕೆಂದು ತೋರಿತು. ಅದು, ಆತನ ಹಾರಾಟವನ್ನು ನೋಡುತ್ತಾ ತನ್ನ ವ್ಯಥೆಯನ್ನು ಮರೆಯಲು ಆಕೆ ಬಳಸಿದ ಮಾರ್ಗ.

"ಯೋಚ್ನೆ ಬಿಟ್ಟಿಡೋದು ಅಂದರೇನು? ನಾನೇನು ಹಸುವೆ? ದುಡ್ಡು ಕೊಟ್ಟು ತಂದು ಹಟ್ಟೀಲಿ ಕಟ್ಟಿದವರ ಹಾಗೆ ಮಾತಾಡ್ತೀರಲ್ಲ!"

"ಸುನಂದಾ! ಮುಚ್ಚು ಬಾಯಿ!"

"ಸಾವಿರ ಸಲ ಆ ಮಾತಂದಿದೀರಾ. ಆದರೂ ನನ್ನದು ಮುಚ್ಕೋ ಬಾಯಿಯೇ ಅಲ್ಲ."

ಅಲ್ಲೇ ಆಕೆಗೊಂದು ಬಿಗಿಯಬೇಕೆಂದು ಪುಟ್ಟಣ್ಣನಿಗೆ ತೋರಿತು. ಆದರೆ, ಬಾಗಿಲು ತೆರೆದಿದ್ದುದರಿಂದ ತಮ್ಮ ಪ್ರಕರಣ ಬೀದಿಯವರೆಗೂ ಕಾಣಿಸಬಹುದೆಂದು, ಆತ ತನ್ನನ್ನೆ ತಡೆದುಕೊಂಡು ಕೈ ಬೆರಳುಗಳನ್ನು ಹಿಸುಕಿದ.

"ಬೆಳಗ್ಗೆ ಏನಾದರೂ ಬೇಕೂಂತಾ ಹೀಗೆ ಮಾತಾಡ್ತಿದೀಯೇನು?"

"ಓ! ಏಟು ತಾನೆ? ಅದಕ್ಕೆ ಬೆಳಗಾದರೇನು, ರಾತ್ರೆಯಾದರೇನು?"

"ಸಾಕು ಮಾಡು!"

"ಹೊಡಿಯೋಕೆ ಹೊರಟೋರು ಸುಮ್ನೆ ನಿಂತಿರಲ್ಲ? ಯಾಕೆ? ಬೀದಿಯೋರಿಗೆಲ್ಲಾ ನಿಮ್ಮ ದೊಡ್ಡಸ್ತಿಕೆ ಗೊತ್ತಾಗುತ್ತೇಂತ ಭಯವೆ?"

ಪುಟ್ಟಣ್ಣ ಬಾಗಿಲು ಮುಚ್ಚಿದ. ಹೆಂಡತಿಯ ಕೈ ಹಿಡಿದು ದಡದಡನೆ ಒಳ ಹಜಾರಕ್ಕೆ ಎಳೆದೊಯ್ದ. ಅಲ್ಲಿ ಬಿಗಿಮುಷ್ಟಿಯಿಂದ ಆಕೆಯ ತಲೆಗೆ ಕುಟ್ಟಿ, ಬಲವಾಗಿ ಗೋಡೆಯ ಮೂಲೆಗೆ ತಳ್ಳಿದ.

ಸುನಂದಾ ಬೀಳಲಿಲ್ಲ. ಕೂಗಾಡಲಿಲ್ಲ. ತಾಯಿತಂದೆಯರ ಸರಸವನ್ನು ಕಂಡು ಸರಸ್ವತಿ ಅಳತೊಡಗಿದಳೆಂದು ತಾನು ಗಾಬರಿಯಾಗಲಿಲ್ಲ. ಬದಲು, ಗಂಡನನ್ನು ನೋಡುತ್ತ ಸಣ್ಣನೆ ನಕ್ಕಳು.

"ಈಗ ಇಷ್ಟು ಸಾಕು. ಇನ್ನು ಉಳಿದದ್ದನ್ನ ರಾತ್ರಿಗಿಟ್ಟುಕೊಳ್ಳಿ"

—ಎಂದು ವ್ಯಂಗ್ಯವಾಗಿ ಅಂದಳು.

"ಥುತ್ ನಿನ್ನ—"

—ಎಂದು ಧಿಕ್ಕಾರದ ಮಾತನ್ನಾಡಿ ಪುಟ್ಟಣ್ಣ ಹೊರಟುಹೋದ.

....ಆತ ಹೋದಮೇಲೆ, ಸುನಂದಾ ತನ್ನ ವರ್ತನೆಯ ಬಗೆಗೆ ತಾನೇ ಆಶ್ಚರ್ಯ ಪಟ್ಟಳು. ತಾನು ತೋರಿದ ಸ್ಥೈರ್ಯ ಆತ್ಮ ವಿಶ್ವಾಸ ಆಕೆಯ ದೃಷ್ಟಿಯಲ್ಲಿ ಅಸಾಮಾನ್ಯವಾಗಿದ್ದುವು. 'ಪರವಾಗಿಲ್ಲ ನಾನೂ!' ಎಂದು ಮನಸ್ಸಿನಲ್ಲೆ ಹೇಳಿ ನಕ್ಕು, ಮಗುವನ್ನೆತ್ತಿಕೊಂಡು ಆಕೆ ಮುದ್ದಿಸಿದಳು.

* * * *

ಮಧ್ಯಾಹ್ನ ಊಟವಾದ ಮೇಲೆ, ಆಕೆ ಸರಸ್ವತಿಯೊಡನೆ ಕುಸುಮಳ ಮನೆಗೆ

ಹೋದಳು.

ಕೆಳ ಹಜಾರದಲ್ಲಿ ಕುಸುಮಳ ಅತ್ತೆ–ಮಾವ ರೇಡಿಯೋ ಹಾಕಿಕೊಂಡು ಕುಳಿತಿದ್ದರು.

"ಮೇಲಕ್ಬನ್ನಿ"

—ಎಂದು ಕುಸುಮಾ ಮಹಡಿಯ ಮೇಲಿದ್ದ ತನ್ನ ಕೊಠಡಿಗೆ ಸುನಂದೆಯನ್ನು ಕರೆದೊಯ್ದಳು.

ಬೇಗನೆ ತಾಯಿಯಾಗಲಿದ್ದ ಕುಸುಮಾ, ಈಗ ಆಯಾಸವಾಗುತ್ತದೆಂದು ಸರಸ್ವತಿಯನ್ನು ಅಷ್ಟಾಗಿ ಎತ್ತಿಕೊಳ್ಳುತ್ತಿರಲಿಲ್ಲ. ಆದರೆ ಆ ಮಗುವಿಗಾಗಿ ಅವಳ ಮನೆಯಲ್ಲಿ ವಿಧವಿಧದ ಸಿಹಿ ತಿಂಡಿಗಳಿಗೆ ಯಾವ ಕೊರತೆಯೂ ಇರಲಿಲ್ಲ.

"ಮಧ್ಯಾಹ್ನ ಇವತ್ತು ನಿದ್ದೆ ಮಾಡ್ಲಿಲ್ವೇನು?"

—ಎಂದು ಕುಸುಮಾ ಸುನಂದೆಯನ್ನು ಕೇಳಿದಳು.

"ಇಲ್ಲ ಕಣ್ರೀ. ಬೇಜಾರಾಯ್ತು. ನಿಮ್ಮ ಜತೇಲಿಷ್ಟು ಹರಟೆ ಹೊಡಿಯೋಣಾಂತ ಬಂದೆ."

ಹಿಂದೆಯೊಮ್ಮೆ ಕುಸುಮಾ ಸುನಂದೆಯನ್ನು ಕುರಿತು ಗೇಲಿಮಾಡಿದ್ದಳು: "ನಿದ್ದೆ ಅಂದರೆ ನಿಮಗೆ ತುಂಬಾ ಇಷ್ಟಾಂತ ಕಾಣುತ್ತೆ" ಎಂದು. ಆಗ ಸುನಂದಾ, ನಕ್ಕು ಸುಮ್ಮನಿದ್ದಳೇ ಹೊರತು, ಆ ಮಾತನ್ನು ಅಲ್ಲಗಳೆದಿರಲಿಲ್ಲ. ತನ್ನ ಪಾಲಿಗೆ ನಿದ್ದೆ, ಮನಸಿನ ನೋವನ್ನು ಮರೆಯಲು ಒಂದು ಸಾಧನವೆಂದು ಆಕೆ ತಿಳಿಸಿರಲಿಲ್ಲ.

ಕಲಾಪ್ರಿಯತೆಯನ್ನೂ ರಸಿಕತೆಯನ್ನೂ ತೋರಿಸುವ ಕೊಠಡಿ. ಹೆಚ್ಚು ಬೆಲೆಯ ಸೋಫಾಗಳಿರಲಿಲ್ಲ. ಆದರೆ ಬೆತ್ತದ ಒರಗು ಕುರ್ಚಿಗಳಿದ್ದುವು. ಅವುಗಳ ಮೇಲೆ ಕಸೂತಿ ಹಾಕಿದ ನೀಲಿ ಹೊದಿಕೆ. ಮೂಲೆಯಲ್ಲಿ ಕರಿಮರದ ಆಸನದ ಮೇಲೆ ಧ್ಯಾನಮಗ್ನ ಬುದ್ಧನ ಪಿಂಗಾಣಿ ಪ್ರತಿಮೆ. ಗೋಡೆಯಲ್ಲೊಂದೆಡೆ ಒಂದು ಸುಂದರವಾದ ಕ್ಯಾಲೆಂಡರು. ಇನ್ನೊಂದು ಕೊಠಡಿಗೆ ಹೋಗುವ ಬಾಗಿಲ ಬಳಿ ಮೇಲ್ಗಡೆ, ತಾಯ್ತನದ ಹಿರಿಮೆಯನ್ನು ಸೂಸುವ ಒಂದು ವರ್ಣಚಿತ್ರ. ಕಂದಮ್ಮನನ್ನು ಮಡಿಲಿಗೆ ಬರಸೆಳೆದುಕೊಂಡು ಮೈಮರೆತ ತಾಯಿ. "ನನ್ನ ತಮ್ಮ ಮಾಡಿದ್ದು. ಚೆನ್ನಾಗಿ ಚಿತ್ರ ತೆಗೀತಾನೆ." ಕೊಠಡಿಯ ನಡುವಿನಲ್ಲಿ ಮರದ ಸೊಗಸಾದ ಎತ್ತರದೊಂದು ಮಣೆಯ ಮೇಲೆ, ನಡುವೆ ಏಕಾಕಿಯಾದ ಚೆಂಗುಲಾಬಿಯೂ ಸುತ್ತು ಬಿಳಿಯ ಗುಲಾಬಿ ಪುಷ್ಪಗಳೂ ಇದ್ದೊಂದು ಹೂದಾನಿ... ಹಿನ್ನೆಲೆಯಲ್ಲಿ ಗೋಡೆಗೆ ತಗಲಿ, ಪುಸ್ತಕ ತುಂಬಿದ್ದ ಎರಡು ಬೀರುಗಳು.

ಕುಸುಮಾ, ಸರಸ್ವತಿಗೆ 'ಬೊಂಬೆ' ತೋರಿಸಲೆಂದು 'ಇಲ್ಲಸ್ಟ್ರೇಟೆಡ್ ವೀಕ್ಲಿ' ತಂದಳು. ಮಗುವನ್ನು ತನ್ನ ಮೊಣಕಾಲುಗಳ ನಡುವೆ ನಿಲ್ಲಿಸಿ, ಚಿತ್ರ ತೋರಿಸಿದಳು. ಚಿತ್ರ ತೋರಿಸುತ್ತಾ ಸುನಂದೆಯನ್ನು ನೋಡಿ, ಕುಸುಮಾ ಕೇಳಿದಳು:

"ಈಗ ನಿಮ್ಮ ಮನೆಯ ಹತ್ತಿರ ಗಲಾಟೆ ಇಲ್ಲ, ಅಲ್ವೇನ್ರಿ? ಅವರ ಜಗಳ ಕೇಳಿ

ಕೇಳಿ ನಿಮಗೆ ಬೇಜಾರು ಬಂದಿತ್ತೂಂತ ಕಾಣ್ತದೆ."

"ಹೂಂ"

—ಎಂದಳು ಸುನಂದಾ ನಕ್ಕು.

ಎಷ್ಟು ಮುಗ್ಧೆ ಕುಸುಮಾ! ಆ ಬಡ ದಂಪತಿಗಳ ಜಗಳದಿಂದ ತನ್ನ ನೆಮ್ಮದಿಗೆ ಭಂಗ ಬರುತ್ತಿತ್ತೆಂದು ಆಕೆ ಭಾವಿಸಿದ್ದಳು. ಸ್ವತಃ ತನ್ನ ಮನೆಯೊಳಗೇ–ತನ್ನೆದೆಯೊಳಗೇ–ಜ್ವಾಲಾಮುಖಿ ಭೋರ್ಗರೆಯುತ್ತಿದ್ದುದನ್ನು ಆಕೆ ಊಹಿಸಿರಲಿಲ್ಲ.

ಅತ್ತ ಬಂದ ಕೆಲಸದ ಹುಡುಗಿಯನ್ನು ಕರೆದು ಕುಸುಮಾ, ಸರಸ್ವತಿಯನ್ನು ಆಕೆಗೆ ಕೊಟ್ಟಳು. ಪಕ್ಕದ ಕೊಠಡಿಯಿಂದ ಚಾಕಲೇಟುಗಳನ್ನು ತಂದು, ಒಂದನ್ನು ತೆರೆದು ಸರಸ್ವತಿಯ ಬಾಯಿಗೂ ಉಳಿದುವನ್ನು ಆಕೆಯ ಲಂಗದ ಜೇಬಿಗೂ ತುರುಕಿದಳು.

"ಕೆಳಗೆ ಆಡಿಸ್ತಾ ಇರು. ಹಾಗೇ, ಸ್ವಲ್ಪ ಹೊತ್ತು ಬಿಟ್ಕೊಂಡು ಟೀ ಕಳಿಸ್ಬೇಕೂಂತ ಅಡುಗೆಯವಳಿಗೆ ಹೇಳು..."

—ಎಂದು ಆ ಹುಡುಗಿಗೆ ಕುಸುಮಾ ಆದೇಶವಿತ್ತಳು.

ಮಗುವಿನೊಡನೆ ಹುಡುಗಿ ಕೆಳಗಿಳಿದು ಹೋದಾಗ ಕುಸುಮಾ ಅಂದಳು:

"ನಾನು ಕೆಟ್ಟವಳು ಅಲ್ವೇನ್ರಿ? ನೀವು ಬಂದಾಗಲೆಲ್ಲಾ ಮಗೂನ ಸ್ವಲ್ಪ ಹೊತ್ತು ಆಡಿಸಿ ಕೆಳಗೆ ಕಳಿಸ್ತೀನಿ—ಆಮೇಲೆ ನಾವಿಬ್ಬರೇ ಜತೇಲಿರಬಹುದೂಂತ!"

ಸುನಂದಾಗೆ ನಗು ಬಂತು.

"ನಾಳೆ ನಿಮ್ಮ ಮಗು ಬಂದರೂ ಹೀಗೇ ಮಾಡ್ತೀರೋ?"

ಕುಸುಮಳ ಮುಖ ರಂಗೇರಿತು.

"ಹಾಗೇ ಮಾಡ್ತೀನಿ. ಮಾತು ಕೊಡ್ಬೇಕೇನು? ಮಗು ನನ್ನದೂಂತ ಪಕ್ಷಪಾತ ತೋರಿಸೊಲ್ಲ. ಯಾವಾಗಲೊ ಸ್ವಲ್ಪ ಹೊತ್ತು ಎತ್ತಿ ಆಡಿಸ್ತಾ ಇದ್ದರಾಯ್ತು... ಮಕ್ಕಳೆಂದರೆ ನನಗೆ ಪ್ರೀತಿ...ಯಾವ ಮಗುವಾದರೇನು ಹೇಳಿ?"

'ಅದು ಸುಳ್ಳು'—ಎಂದಿತು ಸುನಂದೆಯ ಮನಸ್ಸು. ಹಿಂದಿನ ದಿನ ಹೊರಟು ಹೋದ ಆ ಕೆಲಸದವಳ ಕೊಳಕು ಮಗುವಿರಲಿಲ್ಲವೆ? ಅದನ್ನು ಕುಸುಮಾ ಎತ್ತಿ ಆಡಿಸುತ್ತಿದ್ದಳೆ?

ಆದರೆ ಆ ವಿಚಾರಗಳನ್ನು ಪ್ರಕಟಪಡಿಸದೆ ಸುನಂದಾ ಅಂದಳು:

"ಹಾಗೇ ಆಗಲಮ್ಮ."

ಏನೋ ಕೇಳಬೇಕೆಂದಿದ್ದುದು ಮರೆತು ಹೋಗಿ ಮತ್ತೆ ನೆನಪಾದಂತೆ ಕುಸುಮಾ ಕೇಳಿದಳು:

"ಅಲ್ರೀ ನಿನ್ನೆ ಡೈವೋರ್ಸ್ ಆಯ್ತಲ್ಲಾ–ನೋಟೀಸು ಅವನು ಕೊಟ್ಟನೋ ಅವಳೋ?"

"ಅವಳಿಗೇ ಸಾಕಾಗಿತ್ತಮ್ಮ. ತುಂಬಾ ಕಷ್ಟ ಸಹಿಸ್ತಿದ್ಲು, ಪಾಪ!..."

"ಇರ್ಬೇಕು. ನೋಡಿ ಸುನಂದಮ್ಮ, ಹಸಿವು–ಉಪವಾಸ–ಬಡತನ ಅಂದರೇ ನೂಂತ ನನಗೆ ಗೊತ್ತಿಲ್ಲ. ಆದರೆ ಅಂಥ ಬಡಪಾಯಿಗಳನ್ನು ಕಂಡಾಗ, 'ಯಾರೂ ಹೀಗಿರಬಾರದು' ಅನಿಸುತ್ತೆ."

ಸುನಂದೆಯ ಒಳದನಿ 'ಮಾತನಾಡು, ಇದೇ ಅವಕಾಶ' ಎಂದು ಪ್ರೇರೇಪಿಸಿತು. 'ಆದರೆ ಹುಷಾರಾಗಿರು, ಗುಟ್ಟು ಬಿಡಬೇಡ' ಎಂದು ಎಚ್ಚರಿಸಿತು. 'ಬೆಣ್ಣೆಯ ಹಾಗೆ ಕರಗಿ ಅಳೋಕೆ ಶುರುಮಾಡ್ಬೇಡ' ಎಂದು ನಗೆಯಾಡಿತು.

"ಅಲ್ಲ ಕುಸುಮಾ, ನೀವು ಡೈವೋರ್ಸ್ ಅಂದರಲ್ಲಾ. ಎಂಥ ತಮಾಷೆ! ಆ ಬಡಪಾಯಿಗಳಿಗೆ ವಿವಾಹವಿಚ್ಛೇದನ ಅಂದರೇನು ಅನ್ನೋದೇ ಗೊತ್ತಿಲ್ಲ. ಈ ವಿಷಯದಲ್ಲೆಲ್ಲ ಸರಕಾರ ಕಾನೂನು ಮಾಡಿಟ್ಟಿದೆ ಅನ್ನೋದೂ ಗೊತ್ತಿಲ್ಲ. ಆದರೆ ಸುಲಭವಾಗಿ ಡೈವೋರ್ಸ್ ಮಾಡ್ಕೊಂಡ್ರು!"

ಕುಸುಮಳಿಗೆ ಅದು ಸ್ವಾಭಾವಿಕವಾಗಿಯೇ ತೋರಿತು.

"ಅಲ್ಲದೆ ಇನ್ನೇನಂತೆ? ದುಡಿದು ಬದುಕೋ ಜನರಲ್ಲೆಲ್ಲ ಇಷ್ಟೆ. ಸರಿಹೋಗ ದಿದ್ದರೆ ಬೇರೆಯಾಗ್ತಾರೆ. ಬೇರೆಯವರ್ನ ಕಟ್ಕೊಳ್ತಾರೆ. ಇಬ್ಬರೂ ದುಡಿದು ಸಂಪಾದಿಸೋರು ನೋಡಿ. ಇಬ್ಬರಲ್ಲೂ ಸಮಾನತೆ!"

ತನಗೆ ಈಗಾಗಲೇ ತಿಳಿದಿದ್ದ ಸತ್ಯ ಸಂಗತಿಯೊಂದಕ್ಕೆ ರೂಪು ಗೊಟ್ಟಿತು ಕುಸು ಮಳ ನುಡಿ. ಇಬ್ಬರೂ ದುಡಿದು ಸಂಪಾದಿಸುವಾಗ, ವಿರಸದ ವಿಷಮದಾಂಪತ್ಯವನ್ನು ಮುಕ್ತಾಯಗೊಳಿಸುವುದು ಸಾಧ್ಯ. ಆದರೆ ಹೆಣ್ಣು ಗಂಡಿನ ಮೇಲೆ ಅವಲಂಬಿಸಿರು ವಷ್ಟು ಕಾಲ ಅದು ಸಾಧ್ಯವಲ್ಲ....

"ಹಾಗಾದರೆ ವಿವಾಹ ವಿಚ್ಛೇದನ ತೀರ ಕೆಳತರಗತಿ ಜನರಲ್ಲಿ ಮಾತ್ರ ಸಾಧ್ಯ ಅಂತೀರಾ?"

ಮಾತುಕತೆ ಗಂಭೀರವಾಗುತ್ತಿದ್ದುದನ್ನು ಕಂಡು ಕುಸುಮಳಿಗೆ ಸಂತೋಷ ವಾಯಿತು. ತನ್ನ ಗೆಳತಿಯ ಮನೋವೇದನೆಯನ್ನು ತಿಳಿಯದೆಯೇ ಆಕೆ ಮಾತ ನಾಡಿದಳು:

"ಇಲ್ಲ ಅತ್ಯಂತ ಮೇಲಿನ ತರಗತಿ ಜನರಲ್ಲೂ ಸಾಧ್ಯ. ಹೋದ ವರ್ಷ ಬೊಂಬಾಯಿಯಲ್ಲಿ ನನ್ನ ಪರಿಚಯದ ಕುಟುಂಬದಲ್ಲೇ ಹೀಗಾಯ್ತು. ಆಗರ್ಭ ಶ್ರೀಮಂತರು–ಕೋಟ್ಯಧೀಶ್ವರರು. ಅವರಿಗೆ ಇಬ್ಬರೇ ಮಕ್ಕಳು–ಹುಡುಗ ಮತ್ತು ಹುಡುಗಿ. ಅತಿ ಸಲಿಗೆ ಕೊಟ್ಟದ್ದರಿಂದ ಮಕ್ಕಳು ಕೆಟ್ಟು ಹೋದರು. ಹುಡುಗಿಯ ಸ್ವೇಚ್ಛಾಚಾರಕ್ಕೆ ಮಿತಿ ಇರ್ಲಿಲ್ಲ. ಅಂತೂ ಅವಳಿಗೆ ಮದುವೆ ಮಾಡಿದರು. ವರ ಅವರಷ್ಟು ಶ್ರೀಮಂತನಲ್ಲ. ಆದರೆ ತುಂಬಾ ಸ್ವಾಭಿಮಾನಿ. ಆತನನ್ನು ಗುಲಾಮ ನಾಗಿ ಇಟ್ಟುಕೊಳ್ಳೋಕೆ ಆಕೆ ಪ್ರಯತ್ನಪಟ್ಟಳು. ಅವನಿಗದೊಂದೂ ಸರಿಹೋಗಲಿಲ್ಲ. ಹ್ಯಾಗೆ ಸರಿಹೋಗುತ್ತೆ ಹೇಳಿ? ವಿರಸವಾಯ್ತು. ಆಕೆ ಅವನಿಗೆ ಬಯ್ದು ಅವಮಾನ ಮಾಡಿದಳು. 'ನೀನು ನನಗೆ ತಕ್ಕವನಲ್ಲ' ಅಂತ ಜರೆದಳು. ಕೊನೆಗೆ ವಿಚಿತ್ರ ಕಾರಣ

ಗಳನ್ನೆಲ್ಲ ಕೊಟ್ಟು ನ್ಯಾಯಸ್ಥಾನಕ್ಕೆ ಅರ್ಜಿ ಹಾಕಿ ಡೈವೋರ್ಸ್ ಪಡಕೊಂಡ್ಬಿಟ್ಟಳು. ಏನ್ಹೇಳ್ತೀರಿ ಇದಕ್ಕೆ?"

ಕುಸುಮಾ ಹೇಳಿದ ಕಥೆಗೂ ಸುನಂದೆಯ ಬದುಕಿಗೂ ಯಾವ ಸಂಬಂಧವೂ ಇರಲಿಲ್ಲ. ಆದರೂ ಆ ವಿವರ ಸುನಂದೆಯ ಲೋಕಾನುಭವವನ್ನು ಹೆಚ್ಚಿಸಿತು.

"ಧೈರ್ಯವಂತೆ! ಪರವಾಗಿಲ್ಲ!"

"ಒಳ್ಳೇ ಹೇಳಿದಿರಿ—ಆಕೆಗಿರೋ ಧೈರ್ಯ ಐಶ್ವರ್ಯದ್ದು. ಅಂಥಾದ್ದೆಲ್ಲಾ ಆಯ್ತೂಂತ ಆ ಮಟ್ಟದಲ್ಲಿ ಯಾರೂ ನಗೋದಿಲ್ಲ. ಅವಳ ಹಣದ ಮೇಲೆ ಕಣ್ಣಿಟ್ಟು, ನಾನು ಮುಂದೆ ನಾನು ಮುಂದೆ ಅಂತ, ಆಕೆಯ ಕೈ ಹಿಡಿಯೋಕೆ ಇನ್ನೆಷ್ಟೋ ಜನ ಬರ್ತಾರೆ. ಆ ಸಮಾಜದಲ್ಲಿ ಅವಳ ಖ್ಯಾತಿ ಹೆಚ್ಚುತ್ತೆ. ಹೀಗೆಂದರೆ ನೀವು ನಂಬ್ತೀರೋ ಇಲ್ಲವೋ..."

"ಯಾಕಮ್ಮ ನಂಬದಿರ್ಲಿ? ಅಂತೂ ಒಳ್ಳೇ ಕಾದಂಬರಿ ಇದ್ದ ಹಾಗಿದೆ ಈ ವಿಷಯ."

ಕುಸುಮಾ ರಹಸ್ಯವನ್ನೇನೊ ಹೇಳುವಂತೆ ಸ್ವರ ತಗ್ಗಿಸಿ ಅಂದಳು:

"ಆಕೆ ನನ್ನ ಜತೇಲೇ ಓದ್ತಿದ್ಲು. ಉತ್ತರ ದೇಶದ ಜನ. ಇದು ನಡೆದದ್ದು ಹೋದ ವರ್ಷ."

ತನ್ನ ಅಭಿಪ್ರಾಯಗಳನ್ನು ಸ್ಫುಟಗೊಳಿಸುತ್ತ ಸುನಂದಾ ಕೇಳಿದಳು:

"ಅಂತೂ ಈ ಸ್ವಾತಂತ್ರ್ಯವೆಲ್ಲ ಸುಪ್ಪತ್ತಿಗೆ ಮೇಲೆ ಹೊರಳೋರಿಗೆ ಮತ್ತು ಗಟಾರದಲ್ಲಿ ಮಲಗೋರಿಗೆ ಮಾತ್ರ—ಅಲ್ವೇನ್ರಿ?"

"ಸರಿ ಹೇಳಿದ್ರಿ...ಸುಪ್ಪತ್ತಿಗೆ ಮೇಲೆ ಹೊರಳೋರು—ಗಟಾರದಲ್ಲಿ ಮಲಗೋರು; ನೀವು ಹೇಳಿರೋ ರೀತಿ ಸೊಗಸಾಗಿದೆ."

ದೊರಗಾದ ಹಳೆಯ ಹಾಸಿಗೆಯ ಮೇಲೆ ಮಲಗುವ ಜಾತಿಗೆ ಸೇರಿದ ಸುನಂದಾ, ಆ ಹೊಗಳಿಕೆಯನ್ನು ಕೇಳಿ ನಕ್ಕಳು. ಆ ಸಂಭಾಷಣೆಯಲ್ಲಿ ಆಸಕ್ತಿ ಹೆಚ್ಚಾಗಿ, ಆಕೆ ಕೇಳಿದಳು:

"ಕುಸುಮಾ, ಒಂದು ಕೇಳ್ತೀನಿ, ಹೇಳ್ತೀರಾ?"

"ಏನು?"

"ಈ ವಿವಾಹ ವಿಚ್ಛೇದನದ ವಿಷಯದಲ್ಲಿ ನಿಮ್ಮ ಸ್ವಂತ ಅಭಿಪ್ರಾಯವೇನು?"

ಒಂದು ಕ್ಷಣ ಕುಸುಮಾ ಸುಮ್ಮನಿದ್ದಳು. ಬಳಿಕ ನಕ್ಕು ನುಡಿದಳು:

"ವಿವಾಹ ವಿಚ್ಛೇದನದ ತತ್ವ ನನಗೆ ಒಪ್ಪಿಗೆ. ಆದರೆ ಅದನ್ನು ಆದ ಅನ್ಯಾಯ ಸರಿಪಡಿಸೋಕೆ ಉಪಯೋಗಿಸ್ಬೇಕು. ಹೊಸ ಅನ್ಯಾಯ ಮಾಡೋದಕ್ಕಲ್ಲ."

ಪ್ರಶ್ನೆಯನ್ನು ಮೊದಲೆ ಮನಸ್ಸಿನಲ್ಲಿ ರೂಪಿಸಿ ಸುನಂದಾ ಕೇಳಿದಳು:

"ಈ ವಿಷಯದಲ್ಲಿ ನಿಮ್ಮ ಗಂಡನ ಅಭಿಪ್ರಾಯವೇನ್ರೀ?"

ಕುಸುಮಳಿಗೆ ನಗು ಬಂತು.

"ಒಳ್ಳೇ ಪ್ರಶ್ನೆ! ಏನಿದ್ದೀತು ನೀವೇ ಹೇಳಿ. ನನ್ನ ಅಭಿಪ್ರಾಯವೇ! ಇಂಥ ಮುಖ್ಯ ವಿಷಯದಲ್ಲೆಲ್ಲ ನಮ್ಮೊಳಗೆ ಭಿನ್ನಾಭಿಪ್ರಾಯ ಇರುತ್ತೇಂತ ತಿಳಿದಿರೇನು?"

ಸುನಂದೆಗೆ ಯಾರೋ ತನ್ನನ್ನು ಚುಚ್ಚಿ ನೋಯಿಸಿದ ಹಾಗಾಯಿತು. ತನ್ನೆದುರಿಗಿದ್ದುದು ಸುಂದರ ಪುಷ್ಪೋದ್ಯಾನ. ತಾನೋ ಅದರ ಸುತ್ತಲಿನ ಮುಳ್ಳು ಬೇಲಿಯಾಚೆಗಿನ ಕಳೆ ಹುಲ್ಲು...

ಟೀ ಬಂತು. ಬೆಳಗ್ಗೆ ಕಾಫಿ, ಮಧ್ಯಾಹ್ನ ಟೀ. ರುಚಿಯಾದದ್ದು. ಮನಸ್ಸಿನೊಳಗಿನ ಎಲ್ಲಾ ಕಹಿ ಭಾವನೆಗಳನ್ನೂ ಮಧುರಗೊಳಿಸುವ ಸಾಮರ್ಥ್ಯ ಉಳ್ಳದ್ದು...

ಸುನಂದಾ ಅಂದಳು:

"ಹೀಗೆ ಕೇಳ್ದೇಂತ ಕೋಪಿಸ್ಕೋಬೇಡಿ."

"ಛೆ! ಛೆ! ಕೋಪ ಯಾಕೆ? ಹೀಗೆಲ್ಲಾ ಇವತ್ತು ಮಾತಾಡಿದೆವಲ್ಲಾಂತ ನನಗೆ ಸಂತೋಷವೇ. ದಿನಾ ಇಂಥದೇ ವಿಷಯ ಏನಾದರೂ ಮಾತಾಡ್ತಿರೋಣ. ಮಾಡೋದು ಏನೂ ಇಲ್ದೇ ಹೋದರೂ ಮಾತಾಡೋಕೆ ಏನಂತೆ?"

ಇಬ್ಬರೂ ನಕ್ಕರು. ಕುಸುಮಳದು ನಿರ್ಮಲವಾದ ನಗೆಯ ಹೊನಲು. ಸುನಂದೆಯದು ನೋವಿನ ನಗೆಯ ತುಂತುರು....

ಮಗು ಅತ್ತಿತೆಂದು ಹುಡುಗಿ ಅದನ್ನು ರಮಿಸುತ್ತ ಎತ್ತಿಕೊಂಡು ಮೇಲಕ್ಕೆ ಬಂದಳು. ತಾಯ ಮುಖ ನೋಡಿದೊಡನೆ ಮಗು ಅಳು ನಿಲ್ಲಿಸಿತು.

ಕುಸುಮಾ ಅಂದಳು:

"ತಾಯಿ ಅಂದರೆ ಎಷ್ಟೊಂದು ಪ್ರೀತಿ ನಿಮ್ಮ ಸರಸ್ವತಿಗೆ! ಮನೇಲಿ ತಂದೆ ಹತ್ತಿರಕ್ಕೂ ಇವಳು ಹೋಗೋದಿಲ್ವೇನೋ?"

ಸೂಜಿಯಿಂದ ಚುಚ್ಚಿಸಿಕೊಳ್ಳುವುದು ಸುಲಭ. ಆದರೆ ಇಂಥ ಮಾತನ್ನು ಕೇಳುವುದಲ್ಲ. ಬೈಗಳು ಎಂದು ತಿಳಿದಿದ್ದಾಗ ಮನಸಿಗೆ ಹೆಚ್ಚು ನೋವಾಗುವುದಿಲ್ಲ. ಆದರೆ, ನೇರವಾಗಿ ಸರಳವಾಗಿ ಬಂದ ಮಾತುಗಳು ವಿಪರೀತಾರ್ಥಕ್ಕೆ ಎಡೆಗೊಟ್ಟಾಗ, ಆಗುವ ಹಿಂಸೆ ಅಸಹನೀಯ.

—'ಮಾಡೋದು ಏನೂ ಇಲ್ದೇ ಹೋದರೂ ಮಾತಾಡೋಕೆ ಏನಂತೆ?'

—'ಮನೇಲಿ ತಂದೆ ಹತ್ತಿರಕ್ಕೂ ಇವಳು ಹೋಗೋದಿಲ್ವೇನೋ?'

ಸುನಂದೆ ಎದ್ದು ಮಗುವನ್ನೆತ್ತಿಕೊಂಡು ಮನೆಗೆ ಹೊರಟಳು.

"ಬರ್ತೀನಮ್ಮ. ಹೊತ್ತಾಯ್ತು."

"ಅದೇನು ಹೊತ್ತೋ? ಯಾವಾಗ್ಲೂ ಅವಸರ ನಿಮಗೆ."

"ಇನ್ನೊಂದಿವ್ಸ ಬರ್ತೀನಿ."

"ಇನ್ನೊಂದಿವಸವಲ್ಲ, ನಾಳೆ ಬನ್ನಿ; ಪ್ರತಿನಿತ್ಯವೂ ಬನ್ನಿ."

ಕೆಳಕ್ಕೆ ಇಳಿಯುತ್ತಿದ್ದಂತೆ ಕುಸುಮಾ, ಏನೋ ಯೋಚಿಸಿ ಹೇಳಿದಳು:

"ನೋಡ್ರಿ ನಾವಿವತ್ತು ಸಿನಿಮಾಕ್ಕೆ ಹೋಗ್ತೀವಿ. ನೀವೂ ಬನ್ರೀ."

ಆ ದಂಪತಿಗಳ ಜೊತೆಯಲ್ಲಿ ತಾನು!

"ಬೇಡಿ ಕುಸುಮಾ, ಇವತ್ತು ಬೇಡಿ."

"ತುಂಬಾ ಸಂಕೋಚದವರಪ್ಪ ನೀವು."

"ಹಾಗೇ ಅಂದ್ಕೊಳ್ಳಿ!"

...ತನ್ನ ಮನೆ ಸೇರುತ್ತಿದ್ದಂತೆ ಸುನಂದೆಗೆ, ಈ ದಿನ ತಾನು ಇಷ್ಟೊಂದು ಮಾತ ನಾಡಿದೆನಲ್ಲ ಎಂದು ದಿಗ್ಭ್ರಮೆಯಾಯಿತು. ಒಂದೇ ಸಮನೆ ದುಡಿಯುತ್ತಿದ್ದ ಮೆದುಳು ವಿಶ್ರಾಂತಿ ಕೇಳಿತು.

ರಾಧಮ್ಮ ಕರೆದರು:

"ಬನ್ರೀ. ಅದೇನು ಹಾಗೇ ಹೋಗ್ತೀರಲ್ಲ. ಹಳೇ ಸ್ನೇಹಿತರ್ನ ಬಿಟ್ಬಿಟ್ತೀ ರೇನು?"

"ಯಾಕೋ ತಲೆನೋವು ರಾಧಮ್ಮ. ಒಂದಿಷ್ಟು ಮಲಕೋತೀನಿ."

## ೨೧

ದಿನಗಳು ಒಂದೇ ಸಮನಾಗಿ, ಸುನಂದೆಯ ಬದುಕಿನಲ್ಲಿ ಯಾವ ಸ್ಥಿತ್ಯಂತರಕ್ಕೂ ಕಾರಣವಾಗದೆ ಉರುಳಿದುವು. ಒಂದು ದಿನ, ಪುಟ್ಟಣ್ಣನ ಅಣ್ಣ ಸಂಸಾರ ಸಮೇತ ನಾಗಿ ಬಂದಿಳಿದ. ಆತ, ಉಳಿದಿದ್ದ ರಜಾವನ್ನು ಉಪಯೋಗಿಸಲೆಂದು, ಹೆಂಡತಿ ಯನ್ನೂ ಮೂವರು ಮಕ್ಕಳನ್ನೂ ಕಟ್ಟಿಕೊಂಡು ಊರೂರು ನೋಡುವ ರೈಲು ಪ್ರವಾಸ ಹೊರಟಿದ್ದ.

ತಾಯಿ ಸತ್ತಾಗ ಪುಟ್ಟಣ್ಣನ ಅಣ್ಣ ಒಮ್ಮೆ ಬಂದಿದ್ದನಾದರೂ ಅವರೆಲ್ಲ ಒಟ್ಟಾಗಿ ಕಳೆದ ಸಾರೆ ಕಲೆತುದು ಪುಟ್ಟಣ್ಣನ ಮದುವೆಯಲ್ಲೆ. ಆ ಸೋದರರು ಒಂದಾಗಿ ಇದ್ದಿದ್ದರೆ, ಬಂದಾಕೆ ಮನೆಗೆ ಹಿರಿಯ ಸೊಸೆಯಾಗುತ್ತಿದ್ದಳು–ಸುನಂದಾ ಕಿರಿಯ ಯಜಮಾನಿತಿ. ಆದರೆ, ವಿಸ್ತಾರವಾಗುತ್ತ ನಡೆದಿದ್ದ ಬದುಕು ಅಂತಹ ಅವಿಭಕ್ತ ಕುಟುಂಬ ಜೀವನವನ್ನು ದುಸ್ಸಾಧ್ಯಗೊಳಿಸಿತ್ತು. ಆದರೂ ಜತೆಯಲ್ಲೆ ಇದ್ದಿದ್ದರೆ ಹೇಗಿರುತ್ತಿತ್ತೆಂಬ ಕಲ್ಪನೆಯ ಚಿತ್ರ ತಮಾಷೆಯಾಗಿ ತೋರುತ್ತಿತ್ತು ಸುನಂದೆಗೆ.

ಹಿರಿಯವಳಿಗೆ ಮೂವರು ಮಕ್ಕಳು. ಕಳೆದ ಸಾರೆ ಬಂದಾಗ ಎರಡನೆಯದು ಕೈ ಮಗುವಾಗಿತ್ತು. ಅದನ್ನು ಸ್ಮರಿಸಿಕೊಂಡುದಾಯಿತು. ಆಕೆಯ ಕಿರಿಯ ಮಗನ ಹಾಗೂ ಸರಸ್ವತಿಯ ಜನನದ ವಿಷಯ. ಅತ್ತೆಯ ಸಾವು. "ತುಂಬಾ ಒಳ್ಳೆಯವ ರಮ್ಮ. ನನಗೆ ಅವರ ಸೇವೆ ಮಾಡಿ ಪುಣ್ಯ ಕಟ್ಟಿಕೊಳ್ಳೋ ಭಾಗ್ಯವಿರಲಿಲ್ಲ........"

ಸುನಂದಾ ಮನಸಿನೊಳಗೇ ಅಂದಳು: 'ನಾನು ಅವರ ಸೇವೆ ಮಾಡಿದೀನಿ. ಪುಣ್ಯ ಕಟ್ಟಿಕೊಂಡಿದೀನಿ. ಆ ಪುಣ್ಯಾನ ಈಗ ಅನುಭವಿಸ್ತಿದೀನಿ.'

ಆದರೆ ಸುನಂದಾ ಹೆಚ್ಚು ಕುತೂಹಲ ತಳೆದುದು, ಆ ಅಣ್ಣ ತಮ್ಮಂದಿರೊಳಗಿನ ವರ್ತನೆಗೆ ಸಂಬಂಧಿಸಿ. ತನ್ನೊಡನೆ ಕಾಡುಮಾನವನಾಗಿ ನಡೆದುಕೊಳ್ಳುತ್ತಿದ್ದ ಗಂಡ, ಈ ವಾತಾವರಣದಲ್ಲಿ ಹೇಗೆ ವರ್ತಿಸುವನೆಂದು ತಿಳಿಯಲು ಆಕೆ ಆತುರಳಾಗಿದ್ದಳು. ಅಣ್ಣ ಅತ್ತಿಗೆ ಮನೆಗೆ ಬಂದರೆಂದು ಪುಟ್ಟಣ್ಣನಿಗೆ ಸಂತೋಷವೇನೂ ಆಗಲಿಲ್ಲ. ಅಣ್ಣನೇನೋ ತಮ್ಮನೊಡನೆ ಮಾತನಾಡಲು ಯತ್ನಿಸಿದರೂ ಆತ ಸಂಭಾಷಣೆಯಲ್ಲಿ ಆಸಕ್ತಿ ತೋರಲಿಲ್ಲ. ಅವರೆಲ್ಲರ ಜೊತೆಯಲ್ಲಿ ಆತ ಊಟಕ್ಕೆ ಕುಳಿತುದು ಒಂದು ಮಧ್ಯಾಹ್ನ ಮಾತ್ರ. ಭಾನುವಾರ. ಅದೂ, ತಪ್ಪಿಸಿಕೊಳ್ಳುವುದು ದುಸ್ಸಾಧ್ಯವಾದುದರಿಂದ. ಅತ್ತಿಗೆಯೊಡನೆ ಆತ, 'ಚೆನ್ನಾಗಿದೀರಾ?' ಎಂಬ ಪ್ರಶ್ನೆಯನ್ನೂ ಕೇಳಲಿಲ್ಲ. ಇದರಿಂದ ಅತ್ತಿಗೆಗೆ ರೇಗಿತು. ಆದರೂ ಅದನ್ನು ತೋರಗೊಡದೆ ಆಕೆ ಕೇಳಿದಳು:

"ನಿಮ್ಮವರಿಗೀಗ ಕೆಲಸ ಜಾಸ್ತೀಂತ ತೋರುತ್ತೆ."

"ಹೂಂ ಕಣ್ರೀ"

—ಎಂದಳು ಸುನಂದಾ.

ಅವಳಿಗೊಂದು ವಿಚಿತ್ರ ರೀತಿಯ ಸಮಾಧಾನವಾಯಿತು. ಅದಕ್ಕೆ ಕಾರಣ, ಆತನ ವಿಪರೀತ ವರ್ತನೆ ತನ್ನೊಬ್ಬಳೊಡನೆ ಮಾತ್ರವಲ್ಲ—ಎಂಬುದು.

ಆಕೆ ಹೆಚ್ಚಿನ ಲವಲವಿಕೆಯಿಂದ ಓಡಾಡಿದಳು. ಎಂದಿಗಿಂತ ಭಿನ್ನವಾಗಿ ಹೊತ್ತು ಕಳೆಯಲು ದೊರೆತ ಆ ಅವಕಾಶವನ್ನು ಉಪಯೋಗಿಸಿಕೊಂಡಳು.

ಬಂದ ಮೂರನೆಯ ದಿನ, ಆ ಸಂಸಾರ ಹೊರಡುವುದೆಂದು ಗೊತ್ತಾದಾಗ, ಸುನಂಧಾ ಗಂಡನನ್ನು ಕೇಳಿದಳು:

"ಇವತ್ತು ಹೊರಡ್ತಾರಂತೆ. ಉಡುಗೊರೆ ಕೊಟ್ಟು ಕಳಿಸ್ಬೇಕು, ಅಲ್ವೆ?"

ಗಂಡನಿಂದ ದೊರೆತುದು ವಾದಕ್ಕೆ ಆಸ್ಪದವಿಲ್ಲದಂತಹ ಸ್ಪಷ್ಟ ಉತ್ತರ:

"ಏನೂ ಮಾಡ್ಬೇಕಾದ್ದಿಲ್ಲ."

ಆತನ ವಿಚಾರ ಸರಣಿಯೇ ಕೆಟ್ಟಿತ್ತೆಂಬುದಕ್ಕೆ ಸುನಂದೆಗೆ ಬೇರೆ ನಿದರ್ಶನ ಬೇಕಾಗಿರಲಿಲ್ಲ. ದೊರೆತ ಉತ್ತರದ ಮೂಲಕ ಆತನ ಕಾಹಿಲೆಯ ಸ್ವರೂಪವನ್ನು ಮತ್ತೂ ಚೆನ್ನಾಗಿ ತಿಳಿದುಕೊಂಡು ಆಕೆ ಮರುಮಾತನಾಡಲಿಲ್ಲ. ತಾನು ಉಳಿಸಿದ್ದ ಸ್ವಲ್ಪ ಹಣವನ್ನು ರಾಧಮ್ಮನ ಕೈಗೆ ಕೊಟ್ಟು, ಮಕ್ಕಳಿಗೋಸ್ಕರ ಒಂದಿಷ್ಟು ಬಟ್ಟೆಬರೆ ತರಿಸಿ, ಉಡುಗೊರೆಯ ಶಾಸ್ತ್ರ ತೀರಿಸಿದಳು. ಪುಟ್ಟಣ್ಣನ ಉಪೇಕ್ಷೆಯನ್ನು ಆಗಲೆ ಗಮನಿಸಿದ್ದ ಆ ದಂಪತಿಗೆ ಉಡುಗೊರೆಯ ಬಡತನ ಕಂಡು ಆಶ್ಚರ್ಯವೇನೂ ಆಗಲಿಲ್ಲ.

ರಾತ್ರೆ ಅವರು ಹೊರಡುವ ಹೊತ್ತಿಗೂ ಪುಟ್ಟಣ್ಣ ಬರಲಿಲ್ಲ. ಸುನಂದೆಯೇ ಅವರ ಜತೆಯಲ್ಲಿ ಹತ್ತು ಹೆಜ್ಜೆ, ರೈಲು ನಿಲ್ದಾಣಕ್ಕೆ ಹೋಗುವ ಬಸ್ಸಿನವರೆಗೆ,

ಹೋದಳು.

ಬಂದಿದ್ದಾಕೆ ಮನಸಿನ ದುಗುಡವನ್ನು ಮುಚ್ಚಿಡಲಾರದೆ ಹೇಳಿದಳು:

"ನಾವು ಬೆಂಗಳೂರಿಗೆ ಬಂದದ್ದು ನಿಮ್ಮವರಿಗೆ ಇಷ್ಟವಾಗಲಿಲ್ಲಾಂತ ಕಾಣುತ್ತೆ. ಸಾಕಮ್ಮ, ಇನ್ನು ಬರೋದಿಲ್ಲ."

ಮನಸ್ಸಿನೊಳಗೆ ನಕ್ಕರೂ ಹೊರಗೆ ಉಪಚಾರಕ್ಕಾಗಿ ಸುನಂದಾ ಅಂದಳು:

"ಹಾಗೇನಿಲ್ರೀ. ನೀವೇ ನೋಡಿದ್ದಿರಲ್ಲ, ಅವರ ಸ್ವಭಾವ."

ಬಸ್ಸು ಬಂತು. ಅವರೆಲ್ಲ ಹತ್ತಿ ಕುಳಿತುಕೊಂಡಂತೆ ಸುನಂದಾ ಹೇಳಿದಳು:

"ನನ್ನಿಂದೇನಾದರೂ ತಪ್ಪಾಗಿದ್ರೆ ಕ್ಷಮಿಸಿ ಅಕ್ಕಾ. ಮುಂದಿನ ವರ್ಷವೂ ಬೆಂಗಳೂರಿಗೆ ಬನ್ನಿ. ಆಗಾಗ್ಗೆ ಬರ್‍ತಾನೇ ಇರಿ."

ಅವರನ್ನೆಲ್ಲ ಬಿಟ್ಟು ಮನೆಗೆ ಹಿಂತಿರುಗಿದಾಗ ಸುನಂದೆಯ ಮನಸ್ಸು ಹಗುರವಾಗಿತ್ತು. ಗಟ್ಟಿಯಾಗಿ ಬಿದ್ದುಬಿದ್ದು ನಗಬೇಕೆಂದು ತೋರುತ್ತಿತ್ತು ಆಕೆಗೆ. ತನ್ನ ಗಂಡನ ಆಪ್ತ ಬಂಧುಗಳೇ ಬಂದು ಆತನ ಗುಣ ನಡತೆಯನ್ನು ಇದ್ದುದು ಇದ್ದಂತೆ ತಿಳಿದುಕೊಳ್ಳುವಂತಾಯಿತೆಂದು, ಆಕೆಗೆ ಸಂತೋಷವಾಗಿತ್ತು.

ಆಕೆ ಮನೆ ಸೇರುತ್ತಿದ್ದಂತೆ ರಾಧಮ್ಮ ಕೇಳಿದರು:

"ಕಳಿಸ್ಕೊಟ್ಟು ಬಂದಿರೇನ್ರೀ?"

"ಹೂನಮ್ಮಾ."

"ಇರೋ ಕಷ್ಟ ಸಾಲದ್ದಕ್ಕೆ ಈ ಅತಿಥಿ ಸತ್ಕಾರ ಬೇರೆ. ಪರಮಾತ್ಮನಿಗೇ ಪ್ರೀತಿಯಮ್ಮ ನಿಮ್ಮ ಅವಸ್ಥೆ."

ಕನಿಕರದಿಂದ ರಾಧಮ್ಮ ಹಾಗೆ ಆಡಿದ್ದರು, ಸಹಾನುಭೂತಿಯ ಮಾತೆಂದು ಭಾವಿಸಿ. ಆದರೆ ಸುನಂದೆಯ ಮನೋಭಾವ ಆಗ ಹಾಗಿರಲಿಲ್ಲ. ಆ ಮೂರು ದಿನಗಳ ಕಾಲ ಆಕೆಗೊಂದು ರೀತಿಯ ತೃಪ್ತಿ ದೊರೆತಿತ್ತು–ಬಲು ಕ್ರೂರವಾದ ತೃಪ್ತಿ. ಅದನ್ನು ರಾಧಮ್ಮ ಅರಿತುಕೊಂಡಿರಲಿಲ್ಲ.

ಒಳಗೆ ಹೋಗಿ ಸುನಂದಾ, ನೆಂಟರ ಆ ಬಳಗ ಬಂದುಹೋದ ಬಳಿಕ ಸ್ವಲ್ಪ ಅಸ್ತವ್ಯಸ್ತವಾಗಿದ್ದ ಆ ಮನೆಯನ್ನು ನೋಡಿದಳು. ಎಲ್ಲವನ್ನೂ ಸರಿಯಾಗಿರಿಸಿ ಕಸ ಗುಡಿಸಬೇಕೆಂದುಕೊಂಡಳು. ಬಳಿಕ, 'ಈಗೇನು ಅವಸರ? ಗಂಡ ಬಂದು ಇದನ್ನೆಲ್ಲಾ ನೋಡಲಿ. ಬಂದು ಹೋದವರ ನೆನಪಾದಾಗ ಆತ ವಿಚಿತ್ರವಾಗಿ ವರ್ತಿಸಬಹುದು. ಸ್ವಾರಸ್ಯವಾಗಿರುತ್ತೆ' ಎಂದು ಸುಮ್ಮನಾದಳು.

ಆದರೆ ಹೊತ್ತು ಕಳೆದಂತೆ, ಆ ಮೂರು ದಿನ ಇದ್ದ ಸಮಾಧಾನ ಮಾಯವಾಯಿತು. ಭಾವನ ಸಂಸಾರದ ಬದಲು ಬೇರೆ ಯಾರಾದರೂ ಬಳಗ ಬಂದಿದ್ದರೆ? ತನ್ನ ಕಡೆಯವರೇ ಯಾರಾದರೂ ಬಂದು ಬಿಟ್ಟಿದ್ದರೆ? ಆಗ ಎಷ್ಟು ಸಪ್ಪಗಾಗುತ್ತಿರಲಿಲ್ಲ ತನ್ನ ಮುಖ! ಮನೆಯೊಡತಿಯಾದ ತನಗೆ ಆಗ ಎಂತಹ ಅವಮಾನವಾಗುತ್ತಿತ್ತು! ಆಗ ಸತ್ಯವಾಗುತ್ತಿತ್ತು, ರಾಧಮ್ಮ ಹೇಳಿದ 'ಪರಮಾತ್ಮನಿಗೇ ಪ್ರೀತಿಯಮ್ಮ

ನಿಮ್ಮ ಅವಸ್ಥೆ' ಎಂಬ ಮಾತು....

ಬಾಣಂತಿತನಕ್ಕೆಂದು ತವರುಮನೆಗೆ ಹೋದಂದಿನಿಂದ ಈ ವರೆಗೆ—ಈ ಹದಿನಾರು ಹದಿನೆಂಟು ತಿಂಗಳ ಕಾಲ–ತಾನು ಅನುಭವಿಸಿದುದನ್ನೆಲ್ಲ ಊಹಿಸಿದರೇ ಸಾಕು, ಮೈ ಜುಮ್ಮೆನ್ನಬೇಕು ಯಾರಿಗಾದರೂ. ಮೊದಮೊದಲು ಆಕೆಗೆ ಅದೆಲ್ಲ ಬಹಳ ಕಷ್ಟವಾಗಿತ್ತು. ಹೃದಯ ಒಡೆದು ಹೋಗುವುದೇನೋ, ತಾನು ಕುಸಿದು ಬೀಳುವೆನೇನೋ, ಹಾಗೆಯೇ ಗತಪ್ರಾಣಳಾಗುವೆನೇನೋ ಎನಿಸಿತ್ತು.

ಆದರೆ ಈಗ ಪರಿಸ್ಥಿತಿ ಹಾಗಿರಲಿಲ್ಲ. ಐದು ವರ್ಷಗಳಲ್ಲ–ಹತ್ತು ವರ್ಷ ಕಳೆದು ಹೋದುವೇನೋ ಎನ್ನುವಷ್ಟು ಘಟನೆಗಳು, ಆ ಕಾಲಾವಧಿಯಲ್ಲಿ ಸಂಭವಿಸಿದ್ದುವು. ಎಲ್ಲದರ ಪರಿಣಾಮವಾಗಿ, ದೇಹವಲ್ಲದೆ ಹೋದರೂ ಆಕೆಯ ಹೃದಯ ಈಗ ಹೆಚ್ಚು ಗಟ್ಟಿಯಾಗಿತ್ತು. ನೂರು ತೂತುಗಳಾಗಿದ್ದರೂ ಅದು ಭದ್ರವಾಗಿತ್ತು.

ಈಗೀಗ ಅಳುತ್ತಿರಲಿಲ್ಲ ಸುನಂದಾ. ಕಂಬನಿ ಒಸರಿದರೆ ತಾನೇ ಅಳು?

"ಯಾಕ್ರೀ ಕಣ್ಣು ಕೆಂಪಗಿದೆ?"

—ಎಂದು ರಾಧಮ್ಮ ಕೇಳಿದಾಗ ಸುನಂದಾ ಈಗ ಧೈರ್ಯವಾಗಿ ಉತ್ತರ ಕೊಡುತಿದ್ದಳು.

"ಒಲೆ ಬುಡದಲ್ಲಿ ಕೂತು ಹಾಗಾಗಿದೆ ಕಣ್ರೀ."

"ಸುಳ್ಳು!"

"ನಿಮ್ಮಾಣೆ. ಅಳ್ತಾ ಇದ್ದೇಂತ ತಿಳಿದಿರೇನು? ಇಲ್ಲ. ನಾನೀಗ ಅಳೋದಿಲ್ಲ ರಾಧಮ್ಮ. ಇನ್ನೂ ಸ್ವಲ್ಪ ದಿವಸ ಹೋಗ್ಲಿ. ಅಳೋದು ಹ್ಯಾಗೆ ಅನ್ನೋದೇ ನನಗೆ ಮರೆತ್ಹೋಗುತ್ತೆ. ನೋಡಿ ಬೇಕಾದರೆ."

ಪ್ರತಿ ಸಲವೂ ಹೆಚ್ಚು ಕಡಮೆ ಇದೇ ರೀತಿಯ ಉತ್ತರ. ಕ್ರಮೇಣ ರಾಧಮ್ಮ ಅದನ್ನು ನಂಬಿದರು. ಪರಿಣಾಮವಾಗಿ ಸುನಂದೆಯ ಬಗೆಗೆ ಅವರ ಗೌರವ ಹೆಚ್ಚಾಯಿತು.

ಇನ್ನು ಕುಸುಮಾ. ಆಕೆಯೊಡನೆ ಸುನಂದೆಗಿದ್ದುದು ಒಂದು ರೀತಿಯ ಬೌದ್ಧಿಕ ಸ್ನೇಹ. ರಾಧಮ್ಮ ತೋರುತ್ತಿದ್ದ ಆತ್ಮೀಯವಾದ 'ಅಕ್ಕತನ'ಕ್ಕಿಂತ ಭಿನ್ನವಾದುದು. ಲೋಕವೆಲ್ಲ ಬರಡು ಭೂಮಿಯಲ್ಲ, ಅಲ್ಲಿ ಇಲ್ಲಿ ಸುಂದರವಾದ ಪುಷ್ಕರಿಣಿಗಳಿವೆ, ತಿಳಿವಳಿಕೆಯುಳ್ಳ ಮಾನವರಿದ್ದಾರೆ–ಎಂಬುದನ್ನು ಕುಸುಮಳ ಸಹವಾಸದಲ್ಲಿ ತಿಳಿದಾಗ ಎಷ್ಟೊಂದು ಸಂತೋಷವಾಗಿತ್ತು ಸುನಂದೆಗೆ!

ಕಳೆದ ಮೂರು ದಿನಗಳು ಮೂರು ನಿಮಿಷಗಳ ಹಾಗೆ ಕರಗಿ ಹೋಗಿದ್ದುವು. ಆಕೆಗೆ ಗೊತ್ತಿತ್ತು: ಇನ್ನು ಮುಂದಿನ ಒಂದೊಂದು ದಿನವೂ ಒಂದೊಂದು ಯುಗವೇ.

* * * *

ಟಕ್ ಟಕ್—ಡಬ್—"ಬಾಗಿಲು!"

ತೂಕಡಿಸುತಿದ್ದ ಸುನಂದೆಗೆ ಎಚ್ಚರವಾಯಿತು.

ಮತ್ತೊಮ್ಮೆ—ಡಬ್ ಡಬ್ "ಬಾಗಿಲು!"

ಯಾವ ಅವಸರವೂ ಇಲ್ಲದೆ ಸುನಂದಾ ನಿಧಾನವಾಗಿ ಎದ್ದಳು. ಮೈಮುರಿದು, ನಿದ್ದೆಯನ್ನೋಡಿಸಿದಳು. ಮೆಲ್ಲನೆ ನಡೆದು ಬಂದು ಬಾಗಿಲು ತೆರೆದಳು.

'ಎಂಥ ಸುಡುಗಾಡಿನ ನಿದ್ದೆ! ಎಷ್ಟು ಕರೆದರೂ ನಿನಗೆ ಕೇಳಿಸೋದಿಲ್ವಲ್ಲಾ'

—ಎಂದು ಆತ ರೇಗುತ್ತಲೆ ಒಳಗೆ ಕಾಲಿಡಬಹುದೆಂದು ಸುನಂದಾ ಭಾವಿಸಿದ್ದಳು.

ಹಾಗಾಗಲಿಲ್ಲ. ಮಾತಾಡದೇ ಇದ್ದರೂ ಆತ ಬುಸುಗುಟ್ಟುತ್ತ ಬಂದ.

"ಗಂಟೆ ಎಷ್ಟಾಯ್ತು?"

—ಎಂದು ಸುನಂದಾ ಕೇಳಿದಳು.

ಆತ ದುರದುರನೆ ಆಕೆಯನ್ನು ನೋಡಿದ; ಉತ್ತರ ಕೊಡಲಿಲ್ಲ.

ಕೈಯಿಂದ ಬಿಚ್ಚಿ ಗಡಿಯಾರವನ್ನು ಕ್ಯಾಲೆಂಡರಿನ ಮೊಳೆಗೆ ನೇತು ಹಾಕಿದಾಗ ಆಕೆ ಬಳಿಗೆ ಹೋಗಿ, ಹೊತ್ತು ನೋಡಿದಳು:

"ಹತ್ತೂ ನಲ್ವತ್ತಾಯಿತು,"

—ಎಂದು ಒಣ ಸ್ವರದಲ್ಲಿ ಅಂದು, ಊಟದ ಮನೆಗೆ ಹೋಗಿ, ತಟ್ಟೆ ಇಟ್ಟಳು.

ಉಡುಪು ಬದಲಿಸಿ ಪುಟ್ಟಣ್ಣ, ಕೈಕಾಲು ತೊಳೆದು ಬಂದು, ತಟ್ಟೆಯ ಎದುರು ಕುಳಿತ. ಸುನಂದಾ ಬಡಿಸಿದಳು.

ಆತ ಮೌನವಾಗಿ ಒಂದು ತುತ್ತನ್ನು ಬಾಯಿಗಿಡುತ್ತಿದ್ದಂತೆ ಆಕೆ ಹೇಳಿದಳು:

"ನಿಮ್ಮ ಅಣ್ಣ ಅತ್ತಿಗೆ ಎಲ್ಲಾ ರಾತ್ರೆ ಗಾಡೀಲಿ ಊರಿಗೆ ಹೋದ್ರು."

ಆತ ಉತ್ತರವಿತ್ತ:

"ಒಳ್ಳೇದಾಯ್ತು."

"ನಿಮ್ಮ ಅತ್ತಿಗೆ ತುಂಬಾ ನೊಂದ್ಕೊಂಡು ಹೋದ್ರು. ಹೋಗ್ತಾ, ಇನ್ನು ಬರೋದಿಲ್ವಮ್ಮ, ನಾವು ಬಂದದ್ದು ಮೈದುನನಿಗೆ ಇಷ್ಟವಾಗ್ಲಿಲ್ಲಾಂತ ತೋರುತ್ತೆ—ಅಂದರು."

"ಸಾಕುಮಾಡು ಮಾತ್ನ!"

ಒಂದು ಸೌಟು ಹುಳಿ ಬಡಿಸುತ್ತಾ ಸುನಂದಾ ಹೇಳಿದಳು:

"ಅವರು ಪಾಪ ಹಾಗಂದರೂಂತ ಹೇಳಿದ್ನೇ ಹೊರತು—"

"ಏನು ಸುಡುಗಾಡಿನ ಅನ್ನ—ತಣ್ಣಗಿದೆ!"

ಇದು ಸಿಟ್ಟನ್ನು ತೋರಿಸುವ ರೀತಿ ಎಂದು ತಿಳಿದಿದ್ದ ಸುನಂದಾ ಮುಗುಳ್ನಕ್ಕಳು.

ಆಗಲೆ ಆಕೆಯ ಮುಖ ನೋಡಿದ ಪುಟ್ಟಣ್ಣ, ಒಮ್ಮೆಲೆ ಊಟದ ತಟ್ಟೆಯನ್ನು ಮುಷ್ಟಿಯಿಂದ ತಳ್ಳಿದ. ಅದು ಗೋಡೆಗೆ ಬಡಿದು ಅನ್ನ ನೆಲದ ಪಾಲಾಯಿತು.

"ಹಸಿವಿಲ್ದೇ ಹೋದ್ರೆ ಸುಮ್ನೆ ಏಳಬಾರದಾಗಿತ್ತೆ? ನೋಡಿ, ಊಟದ ಮನೆ

ಯಲ್ಲಾ ಗಲೀಜಾಗ್ಹೋಯ್ತು."

—ಎಂದಳು ಸುನಂದಾ ಶಾಂತ ಸ್ವರದಲ್ಲಿ.

ತಟಕ್ಕನೆ ಎದ್ದು ನಿಂತ ಪುಟ್ಟಣ್ಣ, ಆಕೆಯ ಕತ್ತಿಗೇ ಗುದ್ದಬೇಕೆಂದು ಬಗೆದ. ಕ್ಷಣ ಹೊತ್ತು ಹಾಗಿದ್ದು ಮುಷ್ಟಿ ಸಡಿಲಿಸಿ, ಕೈತೊಳೆದುಕೊಂಡು ನೇರವಾಗಿ ಕೊಠಡಿಗೆ ಹೋಗಿ, ದೀಪವಾರಿಸಿ ಮಲಗಿದ.

ಸುನಂದಾ ನಿಧಾನವಾಗಿ ಊಟದ ಮನೆಯನ್ನು ಸ್ವಚ್ಛ ಮಾಡಿದಳು. ತಾನೂ ಉಣ್ಣಲಿಲ್ಲ. ಹಾಲಿಗೆ ಹೆಪ್ಪು ಹಾಕಿ ಉಳಿದ ಮಜ್ಜಿಗೆಯನ್ನು ಕುಡಿದಳು. ಒಂದು ಲೋಟ ನೀರನ್ನೊಯ್ದು ಪುಟ್ಟಣ್ಣ ಮಲಗಿದ್ದ ಕೊಠಡಿಯಲ್ಲಿಟ್ಟು ಬಂದಳು. ಆತನಿಗೆ ನಿದ್ದೆ ಬಂದಿರಲಿಲ್ಲವೆಂಬುದು ಗೊತ್ತಿದ್ದರೂ ಆಕೆ ಮಾತನಾಡಿಸಲಿಲ್ಲ.

ಹಜಾರದಲ್ಲಿ ಸುನಂದಾ ತನ್ನ ಹಾಸಿಗೆ ಬಿಡಿಸಿದಳು. ತೊಟ್ಟಿಲಿನಿಂದ ಮಗುವನ್ನೆತ್ತಿ ಹಾಸಿಗೆಯ ಮೇಲೆಯೇ ಮಲಗಿಸಿದಳು. ಸೆಕೆ ಆಗಲೆ ಆರಂಭವಾಗಿತ್ತು. ಕಿಟಿಕಿ ತೆರೆದಿಟ್ಟು ದೀಪವಾರಿಸಿ ತಾನೂ ಮಲಗಿದಳು.

ನಿದ್ದೆ ಹೋಗಿದ್ದ ಮಗುವನ್ನು ಪ್ರೀತಿಯಿಂದ ಮುಟ್ಟುತ್ತ ಸುನಂದಾ ಅಂದುಕೊಂಡಳು:

'ನಾನಿನ್ನು ಸೋಲುವುದಿಲ್ಲ; ಖಂಡಿತ ಸೋಲುವುದಿಲ್ಲ.'

## ೨೨

ಕುಸುಮಾಳ ತಾಯಿತಂದೆ ಬಂದು, ಮಗಳನ್ನು ಬಾಣಂತಿತನಕ್ಕಾಗಿ ಊರಿಗೆ ಕರೆದೊಯ್ದರು. ತಾನಿಲ್ಲದಿದ್ದರೂ ಮನೆಗೆ ಬರುತ್ತಿರಬೇಕೆಂದು, ಪುಸ್ತಕ ಪತ್ರಿಕೆಗಳನ್ನು ಒಯ್ಯುತ್ತಿರಬೇಕೆಂದು, ಕುಸುಮಾ ಹೇಳಿದ್ದಳು. ಆದರೆ ಸುನಂದೆಯಿಂದ ಅದು ಸಾಧ್ಯವಾಗಲಿಲ್ಲ. ಸುನಂದೆಯ ಬದಲು, ಆಮನೆಯನ್ನು ದಿನ ನಿತ್ಯ ಸಂದರ್ಶಿಸುತಿದ್ದವಳು ಸರಸ್ವತಿ. ಕುಸುಮಳ ಅತ್ತೆಯೂ ಮಾವನೂ ಕೆಲಸದ ಹುಡುಗಿಯನ್ನು ಕಳುಹಿಸಿ, ಸರಸ್ವತಿಯನ್ನು ಕರೆಸಿಕೊಳ್ಳುತ್ತಿದ್ದರು.

"ಎಲ್ಲಿಗೆ ಹೋಗಿದ್ಯೆ?"

—ಎಂದು ಮನೆಗೆ ಮರಳಿದ ಮಗಳನ್ನು ತಾಯಿ ಕೇಳಿದರೆ, ಮಗಳು ಆ ಮನೆಯತ್ತ ಬೊಟ್ಟುಮಾಡಿ ತೊದಲುತಿದ್ದಳು:

"ತಾತಾ."

....ಈ ದಿನವೂ ಸರಸ್ವತಿ ಮನೆಯಲ್ಲಿರಲಿಲ್ಲ. ಮಧ್ಯಾಹ್ನ ಆಗಲೆ ಬಿಸಿಲೇರಿತ್ತು.

ಎಲ್ಲ ಕೆಲಸವೂ ಮುಗಿದು, ಇನ್ನು ಬೀದಿಯ ಕಡೆ ಹೋಗಿ ಮಗಳನ್ನು ಕರೆಯೋಣ ವೆಂದು, ಸುನಂದಾ, ಅಡುಗೆಮನೆಯ ಕಿಟಿಕಿ ಮುಚ್ಚಲು ಬಂದಳು.

ಕಿಟಿಕಿಯ ಆಚೆ ನಿವೇಶನ ಬರಿದಾಗಿ ಕಾಣುತಿತ್ತು. ಈಗ ಆ ಜಾಗ, ಶ್ಯಾಮನಿಗೂ ಆತನ ಗೆಳೆಯರಿಗೂ ಕ್ರಿಕೆಟ್ ಆಟದ ಬಯಲು. ಶ್ಯಾಮ ಶಾಲೆಗೆ ಹೋಗತೊಡಗಿದ್ದ ನಾದರೂ ಶಾಲೆಯ ಹೊರಗಿನ ಪ್ರತಿ ನಿಮಿಷವನ್ನೂ ಆ ಬಯಲಲ್ಲೆ ಕಳೆಯುತ್ತಿದ್ದ. ಅಲ್ಲಿ ಈಗ ಹಳೆಯ ಹರುಕು ಗುಡಿಸಲಿರಲಿಲ್ಲ. ಆ ಹೆಂಗಸು ಮಗುವನ್ನೆತ್ತಿಕೊಂಡು ಹೊರಟುಹೋದ ಮೇಲೆ ಆ ಜಾಗದ ಒಡೆಯರಾದ ನಾಗೇಂದ್ರಪ್ಪನವರು ಬಂದು ಆ ಗಂಡಸಿಗೆ "ಇನ್ನು ಕಂಬಿ ಕೀಳಪ್ಪ" ಎಂದಿದ್ದರು. ಒಂದು ಮುಂಜಾನೆ ಆತ ಅಲ್ಲಿರ ಲಿಲ್ಲ. ಎಲ್ಲಿಗೋ ಎದ್ದುಬಿಟ್ಟಿದ್ದ. ಮನೆ ಬದಲಾಯಿಸಿದೆ, ಎಂದು ಹೊಸ ವಿಳಾಸ ಕೊಟ್ಟುಹೋಗುವ ಅಗತ್ಯವಾದರೂ ಆತನಿಗೇನಿತ್ತು? ಆತ ಹೋದುದನ್ನು ಖಚಿತ ಮಾಡಿಕೊಂಡು ಶ್ಯಾಮ, ಆ ಜಾಗವೀಗ ತನ್ನ ಅಧೀನಕ್ಕೆ ಬಂದಿದೆಯೆಂದು ತನ್ನ ಸ್ನೇಹಿ ತರಿಗೆಲ್ಲ ಸುದ್ದಿ ಮುಟ್ಟಿಸಿದ. ನಗೆ ಗದ್ದಲ ಕೋಲಾಹಲಗಳ ನಡುವೆ ಗುಡಿಸಲು ನೆಲ ಸಮವಾಯಿತು. ಹುಡುಗರೆಲ್ಲ ಕಳೆಕಿತ್ತು ನೆಲವನ್ನು ಸಮಮಾಡಿದರು. ಬಿಸಿಲು ಬಂದು ಹಸುರು ಗರಿಕೆಗಳಿಗೆ ಕುಠಾರವಾಯಿತು.

"ಚೆನ್ನಾಗಿ ಆಡಿ. ನಾಗೇಂದ್ರಪ್ಪನವರು ಮನೆ ಕಟ್ಟಿಸೋ ಹೊತ್ತಿಗೆ ನೆಲ ಸ್ವಚ್ಛ ವಾಗಿರ್ಲಿ"

—ಎಂದು ರಾಧಮ್ಮ ಆ ದಿನ ನಗುತ್ತ ಹೇಳಿದರು.

ಈಗ ಆ ಜಾಗದಿಂದ ಹೊರಟು ಕಿಟಿಕಿಯ ಎಡೆಯಿಂದ ಒಳಕ್ಕೆ ತೂರುತಿದ್ದ ಸದ್ದುಗಳು: 'ಬಾಲ್ ಪ್ಲೀಸ್' 'ಬೆಟ್' 'ನಾಯ್ಡು' 'ಮಂಕಡ್' ಮರ್ಚೆಂಟ್... ಸುನಂದೆಗೆ ಆಸಕ್ತಿಯೇ ಇಲ್ಲದ ಸ್ಕೋರುಗಳ ಲೆಕ್ಕಾಚಾರ....

ಹುಡುಗರ ಉತ್ಸಾಹ ಅಂಟು ಜಾಡ್ಯವಾಗಿತ್ತು. ಅವರು ಆಡುತ್ತಿದ್ದರೆ ಸುನಂದಾ ಕಿಟಿಕಿಯ ಬಳಿ ಬಂದು ನಿಲ್ಲುತ್ತಿದ್ದಳು. ಇಲ್ಲವೆ ಹೊರಗೆ ರಾಧಮ್ಮನೊಡನೆ ಅಂಗಳ ದಲ್ಲಿರುತ್ತಿದ್ದಳು. ಕ್ರಿಕೆಟ್ ವೀರರು ಬೌಂಡರಿ ಹೊಡೆದು ಚೆಂಡು ತಮ್ಮೆಡೆಗೆ ಬಂದಾಗ ಶ್ಯಾಮ, "ಅತ್ತೆ, ಬಾಲ್ ಬಾಲ್" ಎಂದಾಗ, ತಾನು ಅದನ್ನೆತ್ತಿ ಬಯಲಿಗೆ ಎಸೆಯು ತ್ತಿದ್ದಳು.

ಅಂತಹ ಸಂದರ್ಭಗಳಲ್ಲೆಲ್ಲ ಆಕೆಯ ಹೃದಯ ಹಗುರವಾಗುತ್ತಿತ್ತು. ಬದುಕು ಬೇಸರವೆನಿಸುತ್ತಿರಲಿಲ್ಲ.

ಆದರೂ ಒಮ್ಮೊಮ್ಮೆ ವಿನಾಕಾರಣವಾಗಿ ಮನಸ್ಸು ಮುದುಡಿಕೊಳ್ಳುತ್ತಿತ್ತು. ಉದಾಹರಣೆಗೆ ಈಗ. ಹುಡುಗರಿಲ್ಲದ ಬರಿ ಬಯಲನ್ನು ನೋಡುತ್ತಿದ್ದರೆ ಆಕೆಗೇನೋ ಬೇಜಾರು. ಅಥವಾ ಯಾವುದೋ ನೆನಪಾದಾಗ. ಅಂಥ ಹೊತ್ತಿನಲ್ಲಿ ಸುನಂದಾ ಅಂತರ್ಮುಖಿಯಾಗುತ್ತಿದ್ದಳು. ತಾನು ದುಃಖಿನಿ, ಚಿರದುಃಖಿನಿ, ತನ್ನಷ್ಟು ನರಳು ತ್ತಿರುವವರು ಈ ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲ—ಎನಿಸುತ್ತಿತ್ತು. ಮತ್ತೆ

ನಿಧಾನವಾಗಿ ಹೊರಗೆ ನೋಡಿದಾಗ, ಇತರರ ಸಂಕಟಗಳನ್ನೂ ಕಂಡಾಗ, ಆಕೆ ಚೇತರಿಸಿಕೊಳ್ಳುತ್ತಿದ್ದಳು.

ಬಿಡುಗಡೆ ಹೊಂದುವ ಯೋಚನೆ ಬಹಳ ದಿನ ಆಕೆಯನ್ನು ಕಾಡಿತು. ತಾನು ಸ್ವತಂತ್ರ ಭಾರತದ ಪ್ರಜೆ, ಪ್ರಾಯಸ್ಥೆ, ವಿದ್ಯಾವತಿ, ನ್ಯಾಯಸ್ಥಾನಕ್ಕೆ ಹೋಗಿ ಕ್ರೂರಿಯಾದ ಗಂಡನಿಂದ ಬೇರ್ಪಡುವ ಹಕ್ಕು ತನಗಿದೆ... ಆತನಿಂದ ವರ್ಷಾಶನ ಪಡೆಯಬಹುದು .. ಯಾಕೆ ತಾನು ಹಾಗೆ ಮಾಡಬಾರದು? ಯಾಕೆ ಮಾಡಬಾರದು? ಯಾಕೆ ಆ ಹೆಜ್ಜೆ ಇಡಬಾರದು?

ಎಷ್ಟೊಂದು ರಾತ್ರೆಗಳು ಆ ರೀತಿಯ ಯೋಚನೆಯಲ್ಲೇ ಆಕೆ ನಿದ್ದೆಗೆಟ್ಟಿದ್ದಳು!

ಆದರೆ ಆ ಅಂತಿಮ ನಿರ್ಧಾರಕ್ಕೆ ಬರುವುದು ಆಕೆಯಿಂದ ಆಗಿರಲಿಲ್ಲ.

ಗಂಡ ಸುಧಾರಿಸಬಹುದೆಂಬ ಆಸೆ ಇನ್ನೂ ಆಕೆಗೆ ಇತ್ತೆಂದೇ?

ಸುನಂದಾ ಎಷ್ಟೋ ಸಾರೆ ತನ್ನನ್ನೆ ಕೇಳಿಕೊಂಡಿದ್ದಳು:

'ಇನ್ನೂ ಆ ಭ್ರಮೆ ಇದೆಯೇನು?'

ಸ್ವಲ್ಪ ಮಟ್ಟಿಗೆ ಇತ್ತೇನೋ ಎನಿಸುತಿತ್ತು. ಆದರೂ ಆತ ಎಷ್ಟೇ ಸುಧಾರಿಸಿದರೂ ಹಿಂದಿನಂತೆ ತನ್ನ ಬದುಕು ಮತ್ತೆ ಹಸನಾಗುವುದು ಎಂದಿಗೂ ಸಾಧ್ಯವಿಲ್ಲವೆಂಬುದು ಆಕೆಗೆ ಸ್ಪಷ್ಟವಾಗಿತ್ತು.

ಸುನಂದಾ ಎಷ್ಟೋ ಸಾರೆ ಸೀತೆ ಸಾವಿತ್ರಿ ದಮಯಂತಿಯರನ್ನು ನೆನೆಸಿಕೊಂಡಿದ್ದಳು. ಕುಸುಮಾ ಮತ್ತು ಆಕೆ ಆ ವಿಷಯವಾಗಿ ಹಲವು ಬಾರಿ ತಮ್ಮೊಳಗೆ ಚರ್ಚಿಸಿದ್ದರು. ಸಾಹಿತ್ಯ ನಿರ್ಮಿಸಿದ್ದ ಆ ಅದ್ಭುತ ಪಾತ್ರಗಳೆದುರು ಅನನ್ಯ ಭಕ್ತಿಯಿಂದ ತಲೆಬಾಗಿ ನಮಿಸುವಂತಾಗುತ್ತಿತ್ತು. ಅವರೆಲ್ಲ ಅನುಕರಣೀಯ ಸ್ತ್ರೀ ರತ್ನಗಳೇ. ಆ ವಿಷಯದಲ್ಲೇನೂ ಸಂದೇಹವಿರಲಿಲ್ಲ.

ಆ ದಿನ ಕುಸುಮಾ ನಗುತ್ತಾ ಹೇಳಿದ್ದಳು:

"ಸೀತೆ ಸಾವಿತ್ರಿ ಎಲ್ಲಾ ಸರಿಯೆ, ಆದರೆ ರಾಮಂದಿರು ಸತ್ಯವಾನರನ್ನು ಎಲ್ಲಿ ಹುಡುಕೋಣ ಈಗ? ನಮಗೆ ನೋಡೋದಕ್ಕೆ ಸಿಗೋದೆಲ್ಲ ರಾಮನ ಉಡುಪು ತೊಟ್ಟಿರುವ ರಾವಣ ಶರೀರಗಳೇ, ಸತ್ಯದ ಕಿರೀಟವಿಟ್ಟಿರುವ ಅಸತ್ಯವಾನರೇ, ಅಲ್ಲವೇನ್ರೀ?"

ಸುನಂದಾ ಆ ಮಾತಿಗೆ ತಲೆದೂಗಿದ್ದಳು.

ಮನುಷ್ಯತ್ವ ಕಳೆದುಕೊಂಡ ಮಾನವ ಪ್ರಾಣಿಯೊಂದರ ಭೋಗದ ಆಟಿಗೆಯಾಗಿರಲು, ಮನೆಯಲ್ಲಿ ಊಳಿಗದ ತೊತ್ತಾಗಲು, ನಿಂದೆ ಅವಹೇಳನಗಳಿಗೆ ಮಾತ್ರ ಪಾತ್ರಳಾದ ಚರಣದಾಸಿಯಾಗಲು, ಸುನಂದಾ ಸಿದ್ಧಳಿರಲಿಲ್ಲ.

ಆದರೆ ವಸ್ತುಸ್ಥಿತಿ, ಆಕೆಯ ಅಸಹಾಯತೆ, ದೌರ್ಬಲ್ಯ, ಮಗುವಿನ ಭವಿತವ್ಯದ ಬಗೆಗೆ ಕಾತರ,–ಎಲ್ಲ ಒಂದಾಗಿ ಒಳಸಂಚು ನಡೆಸಿ, ಬಂದುದನ್ನಿದಿರಿಸುತ್ತ ಆಕೆ ಅಲ್ಲೆ

ಇರುವಂತೆ ಮಾಡಿದ್ದುವು.

....ಬಯಲಿನತ್ತ, ಬಯಲಿನಾಚೆ ಬೀದಿಯತ್ತ, ಬೀದಿಯ ಆಚೆ ಮನೆಗಳತ್ತ, ಶೂನ್ಯನೋಟ ಬೀರುತ್ತ ನಿಂತಿದ್ದ ಸುನಂದಾ, ಹಾಗೆ ನಿಂತಿರುವುದು ಬೇಸರವಾಗಿ, ನಿಟ್ಟುಸಿರು ಬಿಟ್ಟು ಕಿಟಿಕಿ ಮುಚ್ಚಿದಳು.

ಅಷ್ಟರಲ್ಲೆ ಹೊರಗಿನಿಂದ "ಪೋಸ್ಟ್" ಎಂಬ ಸ್ವರ ಕೇಳಿಸಿತು.

ಕುಸುಮಾ ಬರೆಯುವೆನೆಂದಿದ್ದಳು. ಆಕೆಯಿಂದ ಬಂದಿರಬಹುದೆಂದು ಭಾವಿಸುತ್ತ ಸುನಂದಾ ಅತ್ತ ಧಾವಿಸಿ ಬಾಗಿಲಿನೊಳಕ್ಕೆ ಬಿದ್ದಿದ್ದ ಲಕೋಟೆಯತ್ತ ಬಾಗಿದಳು:

ಅದು ಆಕೆಯ ತಂದೆಯಿಂದ ಬಂದಿತ್ತು. ಆತುರವಾಗಿ ಸುನಂದಾ ಅದನ್ನೊಡೆದಳು:

ಕಾಗದದ ಬದಿಗಳಿಗೆ ಹಚ್ಚಿದ್ದ ಅರಸಿನ ನೋಡಿ ಆಕೆಯ ಮುಖ ಅರಳಿತು.

ಆಶೀರ್ವಾದಗಳನ್ನೆಲ್ಲಾ ಕೊಟ್ಟು ಅವರು ಬರೆದಿದ್ದರು:

"ವಿಜಯಾಗೆ ವರ ಗೊತ್ತಾಗಿದೆ. ನಮ್ಮ ಮಟ್ಟಕ್ಕೆ ಸರಿಹೋಗುವಂಥ ಮನೆತನ. ಶಿವಮೊಗ್ಗಾ ಕಡೆಯವರು. ಈ ತಿಂಗಳ ಕೊನೆಯಲ್ಲೇ ಒಳ್ಳೇ ಮುಹೂರ್ತವಿದೆ ಯಾದ್ದರಿಂದ ಅದನ್ನೇ ಗೊತ್ತುಮಾಡಿದ್ದೇವೆ. ಇನ್ನು ಹೆಚ್ಚು ದಿವಸಗಳೇ ಇಲ್ಲ. ರಜಾ ತೆಗೆದುಕೊಂಡು ಮಗುವಿನೊಡನೆ ನೀವಿಬ್ಬರೂ ಕೂಡಲೇ ಬರಬೇಕೆಂದು ಅಳಿಯಂದಿರಿಗೂ ಬರೆದು ಇದರ ಜತೆಯಲ್ಲಿರಿಸಿದ್ದೇನೆ...ಖಂಡಿತಾ ಬನ್ನಿ...ಎಲ್ಲಾ ಅವಸರದಲ್ಲೇ ಆಗಬೇಕಾಗಿದೆ. ಕಾಗದ ನೋಡಿದ ತಕ್ಷಣ ಬರಬೇಕೆಂದು ವಿಜಯಾ ಹೇಳುತ್ತಾಳೆ. ನಿನ್ನ ತಾಯಿಯೂ ಅದೇ ಅಭಿಪ್ರಾಯ ಪಡುತ್ತಾಳೆ...."

ಜತೆಯಲ್ಲಿ ಪುಟ್ಟಣ್ಣನಿಗೆಂದು ಬರೆದಿದ್ದ ಕಾಗದವಿತ್ತು. ಅದನ್ನೂ ಸುನಂದಾ ಅವಸರವಾಗಿ ಓದಿದಳು. ಅದರಲ್ಲೂ ಹೆಚ್ಚು ಕಡಮೆ ಆ ವಿಷಯವೇ ಇತ್ತು.

ಅಂಗಳಕ್ಕಿಳಿದು ನೇರವಾಗಿ ರಾಧಮ್ಮನ ಮನೆಯೊಳಕ್ಕೆ ಹೋಗಿ ಸುನಂದಾ ಅಂದಳು:

"ರಾಧಮ್ಮ! ನನ್ನ ತಂಗಿಗೆ ವರ ಗೊತ್ತಾಗಿದೆ. ಈ ತಿಂಗಳಲ್ಲೇ ಮದುವೆ!"

ಅನ್ನ ಬಸಿಯುತ್ತಿದ್ದ ರಾಧಮ್ಮ, ಸುನಂದೆಯ ಗದ್ದಲದ ನಡುವೆ ಕೈ ಬೆರಳು ಸುಟ್ಟುಕೊಂಡರು. ಸುನಂದಾ ಹೇಳಿದುದನ್ನು ಕೇಳಿ, ಸಂತೋಷದಿಂದ ಆಕೆ ಬೆರಳನ್ನು ತುಟಿಗಳ ನಡುವಿಗಿಟ್ಟು ಚೀಪಿದರು.

## ೨೩

ತಕ್ಷಣವೇ ಅಲ್ಲದಿದ್ದರೂ ಆ ವಾರವೇ ಸುನಂದಾ ತವರುಮನೆಗೆ ಹೊರಟಳು. ಪುಟ್ಟಣ್ಣ ಬರಲಿಲ್ಲ. ಆದರೆ ಹೆಂಡತಿಯನ್ನೂ ಮಗುವನ್ನೂ ಕಳುಹಿದ.

ಹೊರಟು ನಿಂತಾಗ ಸುನಂದಾ ಕೇಳಿದಳು:

"ಮದುವೆಗಾದರೂ ಬರ್ತೀರಿ ತಾನೆ?"

"ಬರೋದಿಲ್ಲ"

—ಎಂದು ಪುಟ್ಟಣ್ಣ ನಿರೀಕ್ಷಿತ ಉತ್ತರವನ್ನೇ ಕೊಟ್ಟ.

"ಆ ಮೇಲೆ ನನ್ನನ್ನು ಕರಕೊಂಡು ಬರೋದಕ್ಕಾದರೂ ಬರ್ತೀರಾ?"

"ಯಾಕೆ? ಈಗ ಹ್ಯಾಗೆ ಹೊರಟಿದೀಯೋ ಹಾಗೇ ಬಂದ್ಬಿಡು."

"ಅಪ್ಪಣೆ!"

* * * *

ತಾಯಿಮನೆಯಲ್ಲಿ, ಸುನಂದೆ ಮಗುವಿನೊಡನೆ ಬಂದಳೆಂದು ಎಲ್ಲರಿಗೂ ಸಂತೋಷವಾಯಿತು. ಆಕೆ ಗಂಡನೊಡನೆ ನಡೆಸುತ್ತಿದ್ದ ಸುಖದ ಬಾಳ್ವೆಯ ವಿಷಯ ಯಾರೂ ಏನನ್ನೂ ಕೇಳಲಿಲ್ಲ. ಸರಸ್ವತಿಯನ್ನು ಮುದ್ದಿಸಿ ಮುದ್ದಿಸಿ ಎಲ್ಲರೂ ಕುಣಿದಾಡಿದರು.

ಸೊರಗಿದ್ದ ಹಿರಿಯ ಮಗಳನ್ನು ಕಂಡು ತಾಯಿ ಹೇಳಿದರು:

"ಬಂದವಳು ಒಂದಷ್ಟು ದಿನ ಹಾಯಾಗಿದ್ದು ಹೋಗು. ಮದುವೆ ಮುಗಿದ ತಕ್ಷಣ ಓಡ್ಬೇಡ."

ಸುನಂದಾ ನಕ್ಕು ಉತ್ತರ ಕೊಡದೆ ಸುಮ್ಮನಾದಳು.

ಅಕ್ಕನ ಗೋಳಿನ ಕಥೆಯೆಲ್ಲ ವಿಜಯಾಗೆ ತಿಳಿದಿತ್ತು. ಆಕೆಯ ದೃಷ್ಟಿಯಲ್ಲಿ ಸುನಂದಾ, ರಣರಂಗದಿಂದ ಗಾಯಗೊಂಡಿದ್ದರೂ ಬದುಕಿ ಬಂದಿದ್ದ ವೀರ ಯೋಧೆ. ಸುನಂದಾ ಬಂದ ಕ್ಷಣದಿಂದ ಅವರಿಬ್ಬರೂ ಜೊತೆಯಾಗಿಯೇ ಉಳಿದರು.

ಮದುವೆಯಾಗಿ ಗಂಡನ ಮನೆಗೆ ಹೋಗಲಿದ್ದ ತಂಗಿಯೊಡನೆ, ತನ್ನ ಗಂಡನ ಜೊತೆಯಲ್ಲಿ ತಾನು ಅನುಭವಿಸಿದ ಸುಖದ ಕಥೆಯನ್ನು ಸುನಂದಾ ಹೇಳಲಿಲ್ಲ. ಆದರೆ, ಬದುಕು ಕಲ್ಪನೆಗಿಂತಲೂ ಎಷ್ಟೋ ಪಾಲು ಗಭೀರತರವಾಗಿದೆ ಎಂಬುದನ್ನು, ಮೃದು ಮಾತುಗಳಲ್ಲಿ ತಿಳಿಯಹೇಳಿದಳು.

ಅಕ್ಕ ತಂಗಿಯನ್ನು ಕೇಳಿದಳು:

"ವರ ನಿನಗೆ ಮೆಚ್ಚುಗೆಯಾಗಿದಾನಾ ವಿಜಯಾ?"

"ನನಗೆ ಗೊತ್ತಿಲ್ಲವಕ್ಕ. ನಿರಾಶೆ ಅನುಭವಿಸಿ ಅನುಭವಿಸಿ ತಂದೆ ಕೊನೆಗೆ ಈ ವರ ಗೊತ್ಮಾಡಿದಾರೆ. ಇಂಥಾದ್ದರಲ್ಲಿ ನನ್ನ ಕರ್ತವ್ಯ ಏನು ಹೇಳು?"

ಸುನಂದೆಯ ಉಸಿರು ಕಟ್ಟಿತು.

"ಮುದುಕನೇನೂ ಅಲ್ವಲ್ಲ ಸದ್ಯಃ!"

"ಅಲ್ಲ. ಬೇಗನೆ ವಿಧವೆಯಾಗೋ ಭಯವೇನೂ ಇಲ್ಲ."

ಸುನಂದಾ ತನ್ನ ಅಂಗೈಯಿಂದ ತಂಗಿಯ ಬಾಯಿಮುಚ್ಚಿದಳು. ಆ ಬಳಿಕ ಸ್ವಲ್ಪ ತಡೆದು ಆಕೆಯೆಂದಳು:

"ನೋಡೋಕೆ ಚೆನ್ನಾಗಿದಾನೊ?"

ವಿಜಯಾ ನಗುತ್ತ ಅಂದಳು:

"ನಗಬೇಡ ಅಕ್ಕ. ಪಕ್ಕದ ಮನೆಯೋರು ಏನಂದರಂತೆ ಗೊತ್ತೆ?–ಈ ಗಿಣೀನ ಅವನ ಕೈಗೆ ಕೊಡ್ತಾರಲ್ಲಾ–ಅಂತ!"

ಸುನಂದೆಗೆ ಬೇಸರವಾದರೂ ತೋರಿಸಿಕೊಳ್ಳದೆ ಅಂದಳು:

"ಹೋಗಲಿ ಬಿಡು. ರೂಪದಲ್ಲೇನಿದೆ? ನನಗೆ ರೂಪವಂತನಾದ ಗಂಡ ಸಿಕ್ಕಿದ. ಕೊನೆಗೇನಾಯ್ತು?"

ಭಾರವಾಗಿದ್ದ ಸ್ವರದಲ್ಲಿ ವಿಜಯಾ ನುಡಿದಳು:

"ನನಗೇನೂ ವ್ಯಥೆಯಿಲ್ಲ ಅಕ್ಕ. ಪಾಲಿಗೆ ಬಂದ ಪಂಚಾಮೃತ–ಅಂತ ಸುಮ್ನಿರ್ತೀನಿ."

"ಪಾಲಿಗೆ ಬಂದ ಪಂಚಾಮೃತ. ಹೂಂ! ಅಂತೂ ಒಳ್ಳೇ ಲಾಟರಿ ಆಗೋಯ್ತಲ್ಲೇ ಮದುವೆ ಅನ್ನೋದು!"

—ಆ ಮಾತು ಸುನಂದೆಯ ಬಾಯಿಂದ ಹೊರಟಿತು. ತಕ್ಷಣವೆ 'ಅಯ್ಯೋ ಹಾಗೆ ಹೇಳಬಾರದಾಗಿತ್ತು' ಎಂದು ಸುನಂದಾ ತುಟಿ ಕಚ್ಚಿಕೊಂಡಳು.

ತಂಗಿಯನ್ನು ಉಲ್ಲಾಸಗೊಳಿಸಬೇಕೆಂದು ಸುನಂದಾ, ಕುಸುಮಳ ವಿಷಯ ಹೇಳತೊಡಗಿದಳು. ಒಂದೊಂದನ್ನೂ ಎಷ್ಟು ಬಣ್ಣಿಸಿದರೂ ಆಕೆಗೆ ತೃಪ್ತಿಯಾಗಲಿಲ್ಲ. ಆ ಬಳಿಕ ಕುಸುಮಳ ಹಾಗೆ ಶ್ರೀಮಂತಳಲ್ಲದಿದ್ದರೂ ವಿದ್ಯಾವತಿಯಲ್ಲದಿದ್ದರೂ ಗಂಡನೊಡನೆ ಸುಖವಾಗಿಯೇ ಇದ್ದ ರಾಧಮ್ಮನ ವಿಷಯ. ಗಂಡನನ್ನು ಬಿಟ್ಟು ಮಗುವಿನೊಡನೆ ಹೊರಟು ಹೋದ ಬಡ ಹೆಂಗಸಿನ ಕತೆ. ಮತ್ತೆ ಕುಸುಮಳ ಪ್ರಸ್ತಾಪ. ಆಕೆಗೂ ತನಗೂ ವಿವಾಹಕ್ಕೆ ಸಂಬಂಧಿಸಿ ನಡೆದ ಮಾತುಕತೆ. 'ಡೈವೋರ್ಸ್' ಎಂಬ ಪದವನ್ನು ಪಯೋಗಿಸಿದ ಕುಸುಮಾ. ಡೈವೋರ್ಸ್ ಅಂದರೇನು? ಎಂದು ಕೇಳಿದ, ಕುಸುಮಳಷ್ಟೇ ಒಳ್ಳೆಯ, ರಾಧಮ್ಮ....

ಹೀಗೆ, ಲೋಕಶಿಕ್ಷಣದಲ್ಲಿ ಮೇಲಿನ ತರಗತಿಯಲ್ಲಿದ್ದ ಅಕ್ಕನಿಂದ, ಆಕೆ ಸಂಪಾದಿಸಿದ್ದ ಅನುಭವ ರಾಶಿಯಿಂದ, ತಂಗಿ ಹಲವು ಪಾಠಗಳನ್ನು ಕಲಿತಳು.

ಮದುವೆಗೆ ಮೂರೇ ದಿನಗಳು ಉಳಿದಾಗ ಒಂದು ಸಂಜೆ, ಯಾವುದೋ ಮಾತು ಬಂದು, ಬೇಸರಗೊಂಡು, ವಿಜಯಾ ಅಕ್ಕನನ್ನು ಕೇಳಿದಳು:

"ನಾವು ಕಾಲೇಜ್ನಲ್ಲಿ ಓದಿದ್ದೆಲ್ಲಾ ವ್ಯರ್ಥವಾಯ್ತು, ಅಲ್ವೆ ಅಕ್ಕಾ?"

ಸುನಂದಾ ಒಪ್ಪಲಿಲ್ಲ.

"ಹಾಗೆ ಹೇಳೋಕಾಗಲ್ಲ ವಿಜಯಾ. ಈ ಲಾಟರೀಲಿ ನಮಗೆ ಸಂಪೂರ್ಣ ಸೋಲಾದಾಗ, ಕಲಿತಿರೋ ನಾಲ್ಕಕ್ಷರದ ಸಹಾಯದಿಂದ ದುಡಿದು, ಒಂದಿಷ್ಟು ಸಂಪಾದ್ನೆನಾದರೂ ಮಾಡಿ ಬದುಕೋದು ಸಾಧ್ಯವಾಗುತ್ತೆ."

ಅಕ್ಕನ ಆ ಮಾತಿನ ಹಿಂದಿದ್ದ ಆಳವಾದ ನೋವನ್ನು ವಿಜಯಾ ಗ್ರಹಿಸಿದಳು.

"ನಿಜ ಅಕ್ಕ. ಅದೂ ಸರಿಯೆ. ಮುಂದೆ ನಮಗಿಬ್ಬರಿಗೂ ಅಂಥ ದಿನ ಬಂದಾಗ

ನಾವಿಬ್ಬರೂ ಜತೆಯಾಗಿಯೇ ಇದ್ದು ಬಿಡೋಣ–ಏನಂತಿಯಾ?"

ಆ ಮಾತು ಕೇಳಿ ಸುನಂದಾ ತಂಗಿಯನ್ನು ತನ್ನ ಬಾಹುಗಳಿಂದ ಬಳಸುತ್ತ ಅಂದಳು:

"ನನ್ನ ವಿಜೀ! ನನಗೇನೂ ಬುದ್ಧಿ ಇಲ್ಲ. ಅಂಥ ಮಾತೆಲ್ಲ ಯಾಕಾದರೂ ಆಡ್ತೀನೋ? ನೋಡ್ತಿರು ಬೇಕಾದರೆ. ನಿನ್ನ ಗಂಡ ಖಂಡಿತ ಒಳ್ಳೆಯವನಾಗಿರ್ತಾನೆ. ನಿನ್ನನ್ನ ದೇವರ ಹಾಗೆ ನೋಡ್ಕೋತಾನೆ. ನನ್ನ ಮಾತು ಸುಳ್ಳಾದರೆ ಆಮೇಲೆ ಹೇಳು."

ವಿಜಯಾ ನಕ್ಕಳು. ತನ್ನನ್ನು ಸುತ್ತುವರಿದಿದ್ದ ಅಕ್ಕನ ಬಾಹುಗಳನ್ನು ಬಿಡಿಸುತ್ತ ಅಂದಳು:

"ನೋಯುತ್ತೆ, ಬಿಡು!"

* * * *

ಅವರ ಮನೆಯಲ್ಲಿ ಇನ್ನೂ ಮದುವೆಯಾಗಬೇಕಾದ ಹೆಣ್ಣು ಬೇರೆ ಇರಲಿಲ್ಲ. ಆ ಕಾರಣದಿಂದ, ವಿಜಯಳ ಮದುವೆಯನ್ನು ಸಾಲ ಇತ್ಯಾದಿಗಳ ಸಹಾಯದಿಂದ ತಕ್ಕ ಮಟ್ಟಿನ ವಿಜೃಂಭಣೆಯಿಂದಲೆ ಆಕೆಯ ತಂದೆ ನೆರವೇರಿಸಿದರು.

ವರನ ಕಡೆಯವರು ಒಳ್ಳೆಯವರೇ ಆಗಿದ್ದರು. ವಧುವಿನ ಊರಿಗೆ ಬಂದು ಮದುವೆ ಜರಗುವವರೆಗೂ ಯಾವ ರೀತಿ ಜಗಳವನ್ನೂ ಅವರು ಆಡಲಿಲ್ಲ. ಮುಂದಾದರೂ ಅವರು ಗೊಂದಲವೆಬ್ಬಿಸಬಹುದೆನ್ನುವುದಕ್ಕೆ ಯಾವ ಲಕ್ಷಣವೂ ಇರಲಿಲ್ಲ.

ಮದುವೆಯ ಕಾಲದಲ್ಲಿ ಸುನಂದೆಯ ಗಂಡ ಕಾಣಿಸಲಿಲ್ಲವೆಂದು, ಆ ಬಗೆಗೆ ಪ್ರಸ್ತಾಪ ಬಂತು.

"ಎಲ್ಲಿ, ನಿಮ್ಮ ಮೊದಲ್ನೆ ಅಳಿಯ–ಕಾಣ್ಲೆ ಲ್ವಲ್ಲ?"

—ಎಂದು ಕನ್ಯಾಪಿತೃವನ್ನು ಆ ಸಂದರ್ಭದಲ್ಲಿ ಊರಿನ ಕೆಲವರು ಕೇಳಿದರು.

ಅವರಿಗೆಲ್ಲಾ ಸುನಂದೆಯ ತಂದೆ ಉತ್ತರ ಕೊಟ್ಟರು:

"ನಿನ್ನೆ ತಾನೇ ಟೆಲಿಗ್ರಾಂ ಬಂತು. ಅದೇನೋ ಅರ್ಜೆಂಟ್ ಕೆಲಸದಿಂದಾಗಿ ಹೊರಡೋಕೆ ಆಗೋದಿಲ್ಲಾ ಂತ. ಹೇಗೂ ಒಮ್ಮೊಮ್ಮೆ ಆಗುತ್ತೆ ನೋಡಿ."

ಸುನಂದಾ, ಕಹಿ ನೆನಪುಗಳನ್ನೆಲ್ಲ ಹೃದಯದ ಆಳದಲ್ಲಿ ಹೂತಿಟ್ಟು, ಸರಸ್ವತಿಯನ್ನು ಹೊತ್ತುಕೊಂಡು ಸಂಭ್ರಮದಿಂದ ತಂಗಿಯ ಮದುವೆಯಲ್ಲಿ ಓಡಾಡಿದಳು.

ಮದುವೆಗೆ ಬಂದಿದ್ದ ಸುನಂದೆಯ ಓರಗೆಯವರೆಲ್ಲ ಆಕೆಯನ್ನು ಕುರಿತು ತಮ್ಮೊಳಗೆ ಪಿಸು ಧ್ವನಿಯಲ್ಲಿ ಮಾತನಾಡಿಕೊಂಡರು.

"ಎಷ್ಟೊಂದು ಖುಷಿಯಾಗಿದ್ದಾಳೆ ಸುನಂದಾ!"

"ಅವಳಿಗೇನಮ್ಮಾ, ಕಡಿಮೆ?"

"ಮಗು ತುಂಬಾ ಮುದ್ದಾಗಿದೆ, ಅಲ್ವಾ?"

"ಆಕೆ ಉಟ್ಟಿರೋ ರೇಷ್ಮೆ ಸೀರೆ ಖಂಡಿತಾ ಭಾರೀ ಬೆಲೇದು ಕಣ್ರೇ."

"ಆಕೆ ಗಂಡ ಬೆಂಗಳೂರಲ್ಲಿ ದೊಡ್ಡ ಕೆಲಸದಲ್ಲಿದಾನಂತೆ–ಭಾರೀ ಸಂಬಳವಂತೆ."

"ಅದಕ್ಕೇ ಇಷ್ಟು ಸಂತೋಷವಾಗಿದಾಳೆ."

"ಅಂತೂ ಒಳ್ಳೆ ಗಂಡನ ಕೈ ಹಿಡಿದ್ಲು."

"ಪಡಕೊಂಡು ಬರಬೇಕಮ್ಮಾ ಇದಕ್ಕೆಲ್ಲಾ!"

...ಅವರ ನಡುವೆ ಭಿನ್ನಾಭಿಪ್ರಾಯಗಳೇ ಇರಲಿಲ್ಲ. ಸುನಂದಾ ಭಾಗ್ಯಶಾಲಿನಿ ಎಂಬ ವಿಷಯದಲ್ಲಿ ಎಲ್ಲರಿಗೂ ಒಮ್ಮತವಿತ್ತು.

## ಈ ಕಾದಂಬರಿಯನ್ನು ಕುರಿತು
## ಸಾಧನೆಗೆ ಒಂದು ಕಾಗದ

ವಿಲ್ಸನ್ ಗಾರ್ಡನ್
ಬೆಂಗಳೂರು–೨

ಜೀವ,

ಕಾದಂಬರಿಯೊಂದನ್ನು ಬರೆದು ಮುಗಿಸಿ ನಿನಗೆ ಕಾಗದ ಬರೆಯ ಹೊರ ಟಿದ್ದೇನೆ.

ಹೆಸರು 'ಪಾಲಿಗೆ ಬಂದ ಪಂಚಾಮೃತ.' ಹಾಗೆಂದು ಹೇಳಿದೊಡನೆಯೇ ಕಥಾ ವಸ್ತುವೇನೆಂದು ತಿಳಿಯಿತು, ಎನ್ನುವೆಯೇನೋ! ನೀನು ಬುದ್ಧಿವಂತೆ. ಸರಿಯಾಗಿಯೇ ಊಹಿಸಿಕೊಂಡರೂ ಆಶ್ಚರ್ಯವೇನಿಲ್ಲ. ಎಷ್ಟೆಂದರೂ ನನ್ನ ಒಡನಾಡಿ ತಾನೆ?

ಈ ಸಲ ಈ ಕಾದಂಬರಿಯನ್ನು ಬರೆದಾಗ ನನಗೊಂದು ರೀತಿಯ ವಿಚಿತ್ರ ಅನು ಭವವಾಯಿತು:

ನೀನು ನನ್ನೆದುರು ಕುಳಿತು, ಮೇಜಿನ ಮೇಲೆ ಮೊಣಕೈಗಳನ್ನೂರಿ, ಅಂಗೈಗಳ ಮೇಲೆ ಮುಖವಿಟ್ಟು [ಮುದ್ದು ಮುಖವಿಟ್ಟು—ಕ್ಷಮಿಸು!], ನನ್ನನ್ನೆ ದಿಟ್ಟಿಸುತ್ತಿದ್ದ ಹಾಗೆ. ನಡುನಡುವೆ ಎದ್ದು, ನನ್ನ ಹಿಂಬದಿಯಲ್ಲಿ ನಿಂತು, ನಾನು ಬರೆಯುತಿದ್ದು ದನ್ನು ಓದಿದ ಹಾಗೆ.

ಒಮ್ಮೆ ನಿನ್ನ ಸ್ವರವೇ ಕೇಳಿಸಿತು:

"ಹೀಗೆ ನೋಡ್ತಾ ಇದ್ದರೆ ನಿನಗೆ ತೊಂದರೆಯಾಗ್ತದೆ, ಅಲ್ಲ?"

ನಾನು ಉತ್ತರವಿತ್ತೆ:

"ನೋಡ್ತಾ ಇದ್ದರೆ ತೊಂದರೆಯಾಗೋದಿಲ್ಲ; ದೃಷ್ಟಿಯಾಗ್ತದೆ!"

ನೀನು ನಕ್ಕು ಸುಮ್ಮನಾದೆ.

ಸಾಮಾನ್ಯವಾಗಿ ಯಾರಾದರೂ ಎದುರಿಗಿದ್ದರೆ, ಬರೆವಣಿಗೆಯಲ್ಲಿ ತಲ್ಲೀನವಾಗು ವುದು ಕಷ್ಟ. ಆದರೆ ನೀನಿದ್ದಾಗ, ಆ ತಲ್ಲೀನತೆಗೆ ಯಾವ ಭಂಗವೂ ಬರಲಿಲ್ಲ.

ಅಷ್ಟೇ ಅಲ್ಲ, ನನ್ನ ಬರೆವಣಿಗೆ ಹೆಚ್ಚು ಸುಲಭವಾಯಿತು. ನಡ ನಡುವೆ ಎಷ್ಟೋ ಸಾರೆ ನಾನು ನಿನ್ನ ಸಲಹೆ ಕೇಳಿದೆ. ಹೆಣ್ಣಿನ ಮನಸ್ಸಿಗೆ ಸಂಬಂಧಿಸಿ, ಗಂಡಿನ ವರ್ತನೆಗೆ ಸಂಬಂಧಿಸಿ, ನಿನ್ನೊಡನೆ ವಿಚಾರ ವಿನಿಮಯ ಮಾಡಿದೆ. ಹೀಗೆ ಈ ಕಾದಂಬರಿಯಲ್ಲಿರುವ ಪಾತ್ರಗಳು ಸೃಷ್ಟಿಯಾದುವು: ಸುನಂದಾ–ಪುಟ್ಟಣ್ಣ, ರಾಧಮ್ಮ, ಕುಸುಮಾ...ಒಬ್ಬೊಬ್ಬರೂ. ಅಧ್ಯಾಯದಿಂದ ಅಧ್ಯಾಯಕ್ಕೆ ಕಥೆ ರೂಪುಗೊಳ್ಳುತ್ತ ಸಾಗಿ ಪಾತ್ರಗಳು ಪುಷ್ಟವಾಗಿ, ಮುಕ್ತಾಯ ಬಂತು.

ಬರೆದು ಮುಗಿಸಿದಾಗ, ನಾನು ಸಾಧನಾ ಇಬ್ಬರೂ ಸೇರಿ ಇದನ್ನು ಬರೆದೆವೆನ್ನಿಸಿತು. [ಆದರೆ ಪ್ರಕಾಶಕರು ಕೇಳಬೇಕಲ್ಲ?]

ಹೀಗಾದುದು ಕಟ್ಟು ಕಥೆಯಲ್ಲ: ನಿಜವಾಗಿ ನನಗಾದ ಅನುಭವ....

ಯಾಕೆ ಹೀಗಾಯಿತು? ಈ ಸಲ ಯಾಕೆ ಇಂತಹ ಅನುಭವವಾಯಿತು?

ಕಾರಣ ಸ್ಪಷ್ಟ. ಇಲ್ಲಿರುವ ಕಥಾವಸ್ತುವಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನೂರು ಸಾರೆ ನಾವು ಚರ್ಚಿಸಿದ್ದೇವೆ. ಚರ್ಚೆಯ ಫಲವಾಗಿ ಸರಿಯಾದ ತಿಳಿವಳಿಕೆ ರೂಪುಗೊಂಡು ಯಾವಾಗಲೂ ಒಂದೇ ಅಭಿಪ್ರಾಯಕ್ಕೆ ಬಂದಿದ್ದೇವೆ. ನಮ್ಮದೆಂದಿಗೂ ಬರಿಯ ಸಿದ್ಧಾಂತಕ್ಕೆ ಸಂಬಂಧಿಸಿದ ಚರ್ಚೆಯಾಗಿರಲಿಲ್ಲ. ನಮಗೆ ಪರಿಚಿತವಾದ ಹಲವು ಸಂಸಾರಗಳ ಕತೆಯೆಲ್ಲ ಕಣ್ಣಿಗೆ ಕಟ್ಟಿ, ಅವುಗಳನ್ನು ಉದಾಹರಿಸಿ, ನಾವು ಮಾತನಾಡುತ್ತಿದ್ದೆವು. ಕಠಿನವೆನಿಸಿದ ನಿನ್ನೆಯಿಂದ ಹಿಡಿದು, ಸುಲಭವಲ್ಲದ ಇವತ್ತನ್ನು ದಾಟಿ, ಕಲ್ಪನೆಯ ನಾಳೆಯವರೆಗೆ—ಎಲ್ಲ ಚಿತ್ರಗಳನ್ನೂ ನಾವು ಕಾಣುತ್ತಿದ್ದೆವು.

ಅದರ ಫಲ ಈ ಕಾದಂಬರಿ.

ಭಾರತೀಯ ಗೃಹಿಣಿಯ ಹಿರಿತನವನ್ನು ಕುರಿತಾದ ಸಹಸ್ರಾರು ನೀತಿಬೋಧೆಗಳು ಪುರಾತನ ಕಾಲದಿಂದಲೂ ನಡೆದು ಬಂದಿವೆ. ನಮ್ಮ ಜನ ಪುರಾಣೇತಿಹಾಸಗಳ ವೀರ ಸ್ತ್ರೀಯರನ್ನು ಹೊಗಳುತ್ತಾರೆ. ಆದರೆ ಮನೆಯಲ್ಲಿ ಹೆಂಗಸರನ್ನು ಕಾಲಿಗೆ ಕಸವಾಗಿ ಕಾಣುತ್ತಾರೆ. ಹೊರಗೆ ನಾಗರಿಕತೆಯನ್ನೂ ಸ್ತ್ರೀ ಪುರುಷ ಸಮಾನತೆಯನ್ನೂ ಪ್ರತಿಪಾದಿಸುವ ವ್ಯಕ್ತಿ ಮನೆಗೆ ಬಂದೊಡನೆ, ತನ್ನ ಬರವನ್ನು ಕಾಯುತ್ತಾ ಹೊರಗೆ ನಿಂತಿದ್ದ ಹೆಂಡತಿಗೆ, “ಬಾಗಿಲಲ್ಲಿ ಯಾಕ್ನಿಂತಿದೀಯಾ?” ಎಂದು ಕೇಳುತ್ತಾನೆ. ನಮ್ಮಲ್ಲಿ ಹೆಂಡತಿ ಮಾತ್ರ ಸೀತೆಯಾಗಿದ್ದರಾಯಿತು–ಗಂಡ ರಾಮನಾಗಬೇಕೆಂಬ ನಿಯಮವಿಲ್ಲ. ಗಂಡಸು ಗಟಾರದಲ್ಲಿ ಹೊರಳಿ ಬಂದರೂ ಸರಿಯೆ, ಮನೆಗೆ ಬಂದೊಡನೆ ಪುನೀತನಾಗುತ್ತಾನೆ. ಹೆಂಗಸಿಗೆ ಮಾತ್ರ, ಯಾವುದೇ ಕಾರಣಕ್ಕಾಗಿ ಏನಾದರೂ ಒಮ್ಮೆ ಆದರೆ, ಆಕೆ ಆ ಕ್ಷಣದಿಂದಲೆ ನಾಯಿ ಮುಟ್ಟಿದ ತಪ್ಪಲೆ—ತಾವು ಮುಟ್ಟಬಾರದ ಎಂಜಲು ಪಾತ್ರೆ.

ಸುನಂದಾ ಒಳ್ಳೆಯವಳು. ಸುಗುಣೆ. ವಿದ್ಯಾವತಿ. ಸುಂದರ ಬಾಳ್ವೆಯ ನೂರು ಕನಸುಗಳೊಡನೆ ಗಂಡನ ಮನೆಗೆ ಬಂದವಳು.

ಹುಡುಗಿಯರಲ್ಲಿ ಆ ರೀತಿ ಗಂಡನ ಮನೆಗೆ ಬರುವವರ ಸಂಖ್ಯೆಯೇ ಹೇರಳ. ಆ ಮಟ್ಟಿಗೆ ಸುನಂದಾ ವಿಶಿಷ್ಟ ಜೀವವಲ್ಲ, ಸಾಮಾನ್ಯ ಜೀವ.

ಆದರೆ, ಮುಂದೆ ಸುನಂದೆಯ ಕನಸುಗಳೆಲ್ಲ ಒಡೆದುಹೋದುವು. ಕೈ ಹಿಡಿದ ಪುಟ್ಟಣ್ಣ ಕೆಟ್ಟವನಾಗಿ ಅಸಹನೀಯ ಸಂಕಟಕ್ಕೆ ಆಕೆಯನ್ನು ಗುರಿಮಾಡಿದ. ಹೀಗೆ, ಸುನಂದೆಯ ಜೀವ ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿತು. ಎಲ್ಲ ಹುಡುಗಿಯರಿಗೂ ಹಾಗಾಗುತ್ತದೆಂದಲ್ಲ. ಆದರೆ ಆಕೆಗೆ ಹಾಗಾಯಿತು.

ಅದಕ್ಕೆ ಕಾರಣ ಪುಟ್ಟಣ್ಣ. ಆತನೊಬ್ಬ ವಿಚಿತ್ರ ಪ್ರಾಣಿ. ಸಾಮಾನ್ಯವಾಗಿ

ಕಾಣಸಿಗುವ ವ್ಯಕ್ತಿಯಲ್ಲ. 'ನನ್ನಲ್ಲೂ ಒಳ್ಳೆಯ ಗುಣಗಳಿವೆ. ಪರೀಕ್ಷಿಸಿ ನೋಡಿ' ಎಂದು ಆತ ಹೇಳಬಹುದು. ಪ್ರಪಂಚವನ್ನೆಲ್ಲ ಪ್ರಯೋಗ ಶಾಲೆಯಾಗಿ ಮಾಡಿ, ಕಾಣಬರುವ ಅದ್ಭುತ ಸೃಷ್ಟಿಗಳನ್ನೆಲ್ಲ ಅಭ್ಯಸಿಸುವುದು ಸ್ವಾರಸ್ಯದ ಕೆಲಸವೇನೋ ಹೌದು, ಆದರೆ ಅದನ್ನು ಇತರರು ಮಾಡಬಹುದೇ ಹೊರತು, ಆ ವ್ಯಕ್ತಿಯ ಸಂಬಂಧಿಕರಲ್ಲ. ಉದಾಹರಣೆಗೆ ಸುನಂದಾ. ಪುಟ್ಟಣ್ಣನಂತಹ ಗಂಡ ದೊರೆತಾಗ, ಏನನ್ನು ತಾನೆ ಆಕೆ ಮಾಡಬಲ್ಲಳು?

ವಸ್ತುಸ್ಥಿತಿಯಲ್ಲಿ ಸಾಮಾನ್ಯವಾಗಿ ಹೆಣ್ಣು, 'ಹೆಣ್ಣಿನಬಾಳು ಕಣ್ಣೀರೇ' ಎಂದು ನಂಬಿ, ಇದೆಲ್ಲಾ ತನ್ನ ಪೂರ್ವಜನ್ಮದ ಕರ್ಮ ಫಲ–ಎನ್ನುವುದು ಪದ್ಧತಿ. ಹಾಗೆ ಹೇಳಿ, ಆಕೆ ಬದುಕಲ್ಲದ ಬದುಕನ್ನು ಬಾಳಿದರೆ, ಸತ್ತವಳಾಗಿ ಬದುಕಿದರೆ, ಕೆಲವರು ಆಕೆಯನ್ನು ದೇವತೆ ಎನ್ನಲೂಬಹುದು.

ಸುನಂದಾ ಅಂತಹ ದೇವತೆಯಲ್ಲ. ಆಕೆ ಮನುಷ್ಯಳು. ಬಲು ದೀರ್ಘಕಾಲ ಅವಳು ಎಲ್ಲವನ್ನೂ ಸಹಿಸಿದಳು. ಸಹಿಸುವ ಸಾಮರ್ಥ್ಯವೂ ಇಲ್ಲ ಎನಿಸಿದಾಗ, ಈ ಸಂಕಟದಿಂದ ಪಾರಾಗುವುದು ಹೇಗೆ?–ಎಂದು ಯೋಚಿಸಿದಳು. ಸಾವು ಒಂದು ಪರಿಹಾರವಾಗಿ ತೋರಿತು. ಆದರೆ ಎಳೆಯ ಮಗುವಿನ ತಾಯಿ ಆ ಹಾದಿ ಹಿಡಿಯಲಿಲ್ಲ. ಉಳಿದ ಹಾದಿ ಎಂದರೆ ಗಂಡನಿಂದ ಬೇರ್ಪಡುವುದು–ವಿವಾಹ ವಿಚ್ಛೇದನ. ಹಾಗೆ ಸ್ವಾತಂತ್ರ್ಯ ಸಂಪಾದಿಸುವ ಯೋಚನೆ ಆಕರ್ಷಣೀಯವಾಗಿತ್ತು. ಆದರೆ ಅದರ ಪರಿಣಾಮದ ಕಲ್ಪನೆ ಏನೇನೂ ರಮ್ಯವಾಗಿರಲಿಲ್ಲ...

ಬಡ ಶ್ರಮಜೀವಿಯ ಹೆಂಡತಿ, ತನ್ನ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿಕೊಂಡಳು. ಒಲ್ಲದ ಗಂಡನಿಂದ ಆಕೆ ಬೇರೆಯಾದಳು.

ಸಮಾಜದ ಏಣಿಯ ಮೇಲಣ ಹಂತದಲ್ಲಿದ್ದ ಶ್ರೀಮಂತ ಕುಮಾರಿಯೂ ಸುಲಭವಾಗಿ ಗಂಡನಿಂದ ಬೇರೆಯಾದಳು–ಬೇರೆ ಕಾರಣಕ್ಕಾಗಿ.

ಆದರೆ ಅವರ ನಡುವಿದ್ದ ಸುನಂದೆಯ ಪಾಲಿಗೆ ಆ ಹಾದಿ ಕಲ್ಲು ಮುಳ್ಳುಗಳಿಂದ ಕೂಡಿತ್ತು. ಅದನ್ನು ತುಳಿಯಲು ಆಕೆ ಯತ್ನಿಸಲಿಲ್ಲ. ಅದಕ್ಕೆ ಹಲವು ಕಾರಣಗಳಿದ್ದುವು: ತನ್ನ ಕೈಗೂಸು; ಅವಿವಾಹಿತೆ ತಂಗಿಯ ಪ್ರಶ್ನೆ; ಸಾಮಾಜಿಕ ಭದ್ರತೆಯ ಕೊರತೆ. ಗಂಡನ ಮನೆ ಬಿಟ್ಟು ಬೀದಿಗೆ ಬಂದರೆ ಆಕೆ ಹೋಗಬೇಕೆಲ್ಲಿಗೆ?

....'ತಾನು ಅಸಹಾಯಳಾಗಿ ಮಗುವನ್ನೆತ್ತಿಕೊಂಡು ಚಿಂದಿಸೀರೆಯುಟ್ಟು ಕೆದರಿದ ಕೂದಲಿನೊಡನೆ ಬೀದಿ ಅಲೆಯುವ ಚಿತ್ರ'...

'ಆ ಯೋಚನೆಯಿಂದಲೆ ಸುನಂದೆಯ ಮೈ ಬೆವತಿತು.'

ಸುಖ ದಾಂಪತ್ಯವನ್ನು ಅನುಭವಿಸುತ್ತಿರುವ ನವಯುವತಿ ಕುಸುಮಾ ಹೊಸ ವಿಚಾರಗಳುಳ್ಳ ವ್ಯಕ್ತಿ.

ಆಕೆಯ ದೃಷ್ಟಿಯಲ್ಲಿ–

"ವಿವಾಹ ವಿಚ್ಛೇದನದ ತತ್ವ ನನಗೆ ಒಪ್ಪಿಗೆ. ಆದರೆ ಅದನ್ನು ಆದ ಅನ್ಯಾಯ ಸರಿಪಡಿಸೋಕೆ ಉಪಯೋಗಿಸ್ಬೇಕು. ಹೊಸ ಅನ್ಯಾಯ ಮಾಡೋದಕ್ಕಲ್ಲ."

ಸುನಂದೆಗೂ ಅದು ಸಮ್ಮತವೇ.

ರಾಧಮ್ಮನ ಅಭಿಪ್ರಾಯವಿಷ್ಟು:

"ಒಮ್ಮೆ ಮುರಿದ್ಮೇಲೆ ಕೂಡ್ಸೋಕಾಗೊಲ್ಲ. ಕೂಡಿಸಿದರೂ ಅದು ಮೊದಲಿನ ಹಾಗೆ ಭದ್ರವಾಗಿರೋದಿಲ್ಲ."

ಹೀಗಾಗಿ ಆಕೆ ಕೊಡುತ್ತಿದ್ದ ಸಲಹೆಯೊಂದೇ: "ದುಡುಕಬಾರದು."

ಆ ಮಾತುಗಳಲ್ಲೂ ಅರ್ಥವಿತ್ತು. ಬೇರೆಯವರಿಗೆ ಸಂಬಂಧಿಸಿದ ವಿಷಯವಾದರೆ ಸುನಂದೆಯೂ ಹಾಗೆಯೇ ಹೇಳುತ್ತಿದ್ದಳು. ಆದರೆ ಸ್ವಂತ ಆಕೆಯ ವಿಷಯದಲ್ಲಿ ಹಾಗಿರಲಿಲ್ಲ. ಅಲ್ಲಿ ಆಗಬೇಕಾಗಿದ್ದುದು, ಅನ್ಯಾಯ ಸರಿಪಡಿಸುವ ಕೆಲಸ. ಮುರಿದ ಮೇಲೆ ಕೂಡಿಸುವ ಮಾತಲ್ಲ.

ಬಡವರಿಗಾದರೆ?

"ಆ ಬಡಪಾಯಿಗಳಿಗೆ ವಿವಾಹ ವಿಚ್ಛೇದನ ಅಂದರೇನು ಅನ್ನೋದೇ ಗೊತ್ತಿಲ್ಲ. ಈ ವಿಷಯದಲ್ಲೆಲ್ಲ ಸರ್ಕಾರ ಕಾನೂನು ಮಾಡಿಟ್ಟಿದೆ ಅನ್ನೋದೂ ಗೊತ್ತಿಲ್ಲ. ಆದರೆ ಸುಲಭವಾಗಿ ಡೈವೋರ್ಸ್ ಮಾಡ್ಕೊಂಡ್ರು!"

ಆಕೆಗಾದರೋ ಪ್ರತಿಯೊಂದೂ ಗೊತ್ತಿತ್ತು. ಆ ವಿಷಯದಲ್ಲೆಲ್ಲ ಸರಕಾರ ಕಾನೂನು ಮಾಡಿಟ್ಟುದೂ ಗೊತ್ತಿತ್ತು. ಆದರೆ ಆ ಕಾನೂನನ್ನು ಉಪಯೋಗಿಸುವುದು ಮಾತ್ರ ಅವಳಿಂದಾಗಲಿಲ್ಲ.

ಮನುಷ್ಯ ಜೀವನದಲ್ಲಿ ವಿರಸವೇರ್ಪಡದೇ ಇರುವುದೆಂದಿಲ್ಲ. ಬದುಕಿನಲ್ಲಿ ಅಂತಹ ವಿಷ ಗಳಿಗೆಗಳು ಹೇರಳವಾಗಿರುತ್ತವೆ. ಆಗ ಗಂಡು-ಹೆಣ್ಣು ಇಬ್ಬರೂ ಪರಸ್ಪರ ಸಹಕರಿಸಿ ಸಂಸಾರದ ಬಂಡಿಯನ್ನು ಮತ್ತೆ ಬೀದಿಗೆ ತರಬೇಕು. ಆದರೆ ಒಮ್ಮೊಮ್ಮೆ ಎಂದೆಂದಿಗೂ ಸರಿಹೋಗದಂತಹ ದುರ್ಘಟನೆಗಳು ಒದಗುತ್ತವೆ. ಗಂಡ ಹೆಂಡತಿ ಎರಡು ಧ್ರುವಗಳಾಗುತ್ತಾರೆ. ಎಷ್ಟು ಕಾಲ ಹೋದರೂ ಮತ್ತೆ ಹೃದಯಗಳ ಬೆಸುಗೆ ಯಾಗುವುದಿಲ್ಲ. ಮಕ್ಕಳೂ ಹಿರಿಯರನ್ನು ಒಂದುಗೂಡಿಸಲು ಸಮರ್ಥರಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ದಂಪತಿಗಳು ಬೇರೆಬೇರೆಯಾಗುವುದೇ ಮೇಲು...

ಆದರೆ, ಈಗಿನ ಸಾಮಾಜಿಕ ಇರುವಿಕೆಯಲ್ಲಿ ಗಂಡು ಮಾತ್ರ ಹೆಣ್ಣನ್ನು ಬಿಟ್ಟು ಕೊಡಲು ಸಮರ್ಥನಾಗಿದ್ದಾನೆ.

ವಿವಾಹ ಪದ್ಧತಿಯಲ್ಲೇ ಬದಲಾವಣೆಯಾದರೆ, ಜೀವಮಾನವೆಲ್ಲ ಜತೆಗಿರ ಬೇಕಾದ ಗಂಡು ಮತ್ತು ಹೆಣ್ಣು ಮದುವೆಗೆ ಮುಂಚಿತವಾಗಿಯೇ ಪರಸ್ಪರರನ್ನು ಚೆನ್ನಾಗಿ ತಿಳಿದಿದ್ದರೆ, ನೂರರಲ್ಲಿ ತೊಂಭತ್ತೊಂಭತ್ತರ ಮಟ್ಟಿಗೆ ದಾಂಪತ್ಯ ಜೀವನ ವಿರಸದಲ್ಲಿ ಮುಕ್ತಾಯವಾಗುವ ಸಂಭವವೇ ಇಲ್ಲ.

ಸುನಂದೆಗೆ ಆ ರೀತಿ ಅರಿತು ಮದುವೆಯಾಗುವ ಅವಕಾಶ ಸಿಗಲಿಲ್ಲ. ಆದರೆ

ಆಕೆಯ ತಂಗಿ ವಿಜಯಾಗಾದರೂ ಅದು ದೊರೆತಿತೆ?

"ವರ ನಿನಗೆ ಮೆಚ್ಚುಗೆಯಾಗಿದಾನಾ ವಿಜಯಾ?"

"ನನಗೆ ಗೊತ್ತಿಲ್ಲವಕ್ಕ. ನಿರಾಶೆ ಅನುಭವಿಸಿ ಅನುಭವಿಸಿ ಗೊತ್ಮಾಡಿದಾರೆ.... ಪಾಲಿಗೆ ಬಂದ ಪಂಚಾಮೃತ–ಅಂತ ಸುಮ್ನಿರ್ತೀನಿ."

ಆ ಮಾತಿಗೆ ಕಥಾನಾಯಿಕೆ ಸುನಂದೆಯ ಪ್ರತಿಕ್ರಿಯೆ ಇದು:

"ಪಾಲಿಗೆ ಬಂದ ಪಂಚಾಮೃತ. ಹೂಂ! ಅಂತೂ ಒಳ್ಳೇ ಲಾಟರಿ ಆಗೋಯ್ತಲ್ಲೆ ಮದುವೆ ಅನ್ನೋದು!"

ಅದು ನೋವಿನ ವ್ಯಂಗ್ಯದ ಮಾತು.

...ಹಾಗಾದರೆ ಒಟ್ಟಿನಲ್ಲಿ ಏನಾದ ಹಾಗಾಯಿತು?

'ಮನುಷ್ಯತ್ವ ಕಳೆದುಕೊಂಡ ಮಾನವ ಪ್ರಾಣಿಯೊಂದರ ಭೋಗದ ಆಟಿಗೆಯಾಗಿರಲು, ಮನೆಯಲ್ಲಿ ಊಳಿಗದ ತೊತ್ತಾಗಲು, ನಿಂದೆ ಅವಹೇಳನಗಳಿಗೆ ಮಾತ್ರ ಪಾತ್ರಳಾದ ಚರಣದಾಸಿಯಾಗಿರಲು, ಸುನಂದಾ ಸಿದ್ಧಳಿರಲಿಲ್ಲ.'

ಆದರೆ ವಸ್ತುಸ್ಥಿತಿ, ಆಕೆಯ ಅಸಹಾಯತೆ, ದೌರ್ಬಲ್ಯ, ಮಗುವಿನ ಭವಿತವ್ಯದ ಬಗೆಗೆ ಕಾತರ–ಎಲ್ಲ ಸಂಕಟವನ್ನೂ ಮುಚ್ಚಿಟ್ಟು ಸುನಂದಾ ಓಡಾಡಿದರೂ ಆಕೆಯ ಮನಸ್ಸು ಹೇಗಿತ್ತು?

"ನಾವು ಓದಿದ್ದೆಲ್ಲಾ ವ್ಯರ್ಥವಾಯ್ತು, ಅಲ್ವೆ ಅಕ್ಕ?"

"ಹಾಗೆ ಹೇಳೋಕಾಗಲ್ಲ ವಿಜಯಾ. ಈ ಲಾಟರೀಲಿ ನಮಗೆ ಸಂಪೂರ್ಣ ಸೋಲಾದಾಗ, ಕಲಿತಿರೋ ನಾಲ್ಕಕ್ಷರದ ಸಹಾಯದಿಂದ ದುಡಿದು, ಒಂದಿಷ್ಟು ಸಂಪಾದ್ನೆ ನಾದರೂ ಮಾಡಿ ಬದುಕೋದು ಸಾಧ್ಯವಾಗುತ್ತೆ."

ಆ ಮಾತಿಗೆ ಪ್ರತಿಯಾಗಿ ತಂಗಿ ಹೇಳಿದುದೂ ಅಷ್ಟೇ ಗಮನಾರ್ಹವಾದುದು.

"ನಿಜ ಅಕ್ಕ. ಅದೂ ಸರಿಯೆ. ಮುಂದೆ ನಮಗಿಬ್ಬರಿಗೂ ಅಂಥ ದಿನ ಬಂದಾಗ, ನಾವಿಬ್ಬರೂ ಜತೆಯಾಗಿಯೇ ಇದ್ದು ಬಿಡೋಣ—"

ಆದರೆ ಸುನಂದೆಗೆ ಅಳುಕು, ಆಸೆ.

"ಇಲ್ಲ ವಿಜೀ...ನಿನ್ನ ಗಂಡ ಖಂಡಿತ ಒಳ್ಳೆಯವನಾಗಿರ್ತಾನೆ. ದೇವರ ಹಾಗೆ ನಿನ್ನ ನೋಡ್ಕೋತಾನೆ"

—ಎಂದು ಆಕೆ ಹೇಳುತ್ತಾಳೆ.

...ಇದಿಷ್ಟು ಕಾದಂಬರಿಯನ್ನು ಕುರಿತು.

ಸಾಧನಾ, ಈ ಸಮಸ್ಯೆಗೆ ಸಂಬಂಧಿಸಿ ನಿನ್ನ ಅಭಿಪ್ರಾಯವೇನೆಂಬುದನ್ನು ನಾನು ಬಲ್ಲೆ. ವಿವಾಹ ವಿಚ್ಛೇದನದಂತಹ ಪ್ರಮುಖ ಪ್ರಶ್ನೆಯ ವಿಷಯವಾಗಿ ನಮ್ಮಿಬ್ಬರ ಅಭಿಮತವೂ ಒಂದೇ. ಹಾಗಿರುವುದು ಸ್ವಾಭಾವಿಕ. ಆದರೆ ನಮ್ಮ ನಾಡಿನ ಸಹಸ್ರಾರು ಸೋದರಿಯರ ಅಭಿಪ್ರಾಯಗಳೇನೋ ಎಂದು ತಿಳಿಯುವ ಕುತೂಹಲ ನನಗೆ.

[ಅವರು ನನಗೆ ಬರೆಯುತ್ತಾರೆಂದು ನೀನೆಂದೂ ಆಕ್ಷೇಪಿಸಿ ವಿರಸಕ್ಕೆ ಕಾರಣವಾಗಿಲ್ಲ ವಲ್ಲ, ಸಧ್ಯಃ!] ಹಾಗೆಯೇ ಪುರುಷ ಓದುಗರ ವಿಷಯ ಕೂಡ.

...ಕಾದಂಬರಿಯನ್ನು ಬರೆದು ಮುಗಿಸಿದ ಮೇಲೆ ಯಾರಿಗೆ ಅರ್ಪಿಸೋಣವೆಂಬ ಪ್ರಶ್ನೆ ಮೂಡಿತು. ಇಂತಹ ಕಾದಂಬರಿಯನ್ನು, ಯಾವುದೇ ಒಬ್ಬ ವ್ಯಕ್ತಿಗೆ–ಗಂಡಿರಲಿ ಹೆಣ್ಣಿರಲಿ–ಅರ್ಪಿಸುವುದು ಸರಿಯಲ್ಲವೆಂದು ಗೃಹಲಕ್ಷ್ಮಿಯರನ್ನು ಸ್ಮರಿಸಿಕೊಂಡೆ.

...ಇಲ್ಲಿ ಒಂದು ಮುಖ್ಯ ವಿಷಯವನ್ನು ನಿನಗೆ ನಾನು ಹೇಳಬೇಕು. ಬರೆಯುತ್ತ ಲಿದ್ದಂತೆ ಪುಸ್ತಕ ಅಚ್ಚಾಗುತ್ತಿತ್ತು. [ನಾಮಕರಣವೂ ಅಷ್ಟರಲ್ಲೇ ಆಗಿತ್ತೆನ್ನು!] ಆ ಸಂದರ್ಭದಲ್ಲಿ ಕಾಣಸಿಕ್ಕಿದ ಗೆಳೆಯರು ಎಂದಿನಂತೆ ಕೇಳಿದರು: "ಈಗೇನು ಬರೀತಿ ದೀರಿ?" ಪುಸ್ತಕದ ಹೆಸರು ಹೇಳಿದೆ. "ಹೆಸರು ಚೆನ್ನಾಗಿದೆ" ಅಂದರು. ಅದೇನೂ ಹೊಗಳಿಕೆಯಾಗಿ ನನಗೆ ತೋರಲಿಲ್ಲ. [ಹೆಸರಿಡುವ ವಿಷಯದಲ್ಲಿ ನನಗಿರುವ ದಕ್ಷತೆ ಯನ್ನು ನೀನು ಬಲ್ಲೆ!]

ಆದರೆ ಒಂದೆರಡು ದಿನ ಕಳೆದ ಮೇಲೆ, ಪುಸ್ತಕದ ಹೆಸರು ಕಿವಿಯಲ್ಲಿ ಗುಂಯ್ ಗುಡುತ್ತಿದ್ದಾಗ, ನನಗೆ ಒಮ್ಮೆಲೆ ಹೊಳೆಯಿತು: ಸಾಹಿತ್ಯ ಕೃತಿಗೆ ಈ ರೀತಿ ಹೆಸರಿಟ್ಟಿರು ವುದು ನಾನೇ ಮೊದಲಲ್ಲ–ಎಂದು. ಹಾಗೆ ಹೊಳೆದಾಗ ಬೇಸರವಾಯಿತು.

ಓದುಗ ಸ್ನೇಹಿತರಿಂದ ನನಗೆ ಬಂದಿರುವ ಕಾಗದಗಳನ್ನೆಲ್ಲ ಓದಿರುವ ನಿನಗೆ, ಶ್ರೀಮತಿ ಸರೋಜಮ್ಮ ಬಿ. ಶರಣಪ್ಪ ಎಂಬ ಹೆಸರು ನೆನಪಿರಬಹುದು. 'ವಿಮೋಚನೆ' 'ಬನಶಂಕರಿ' ಕಾದಂಬರಿಗಳಿಗೆ ಸಂಬಂಧಿಸಿ ಅವರು ಎರಡು ಸಾರೆ ಬರೆದರು. ಒಂದರಲ್ಲಿ, ತಾವೂ ಲೇಖನಗಳನ್ನು ಬರೆದಿರುವುದಾಗಿಯೂ ಒಂದು ಪುಟ್ಟ ಕಾದಂಬರಿಯನ್ನು ಈಗಾಗಲೇ ಬರೆಯುತ್ತಿರುವುದಾಗಿಯೂ 'ಪಾಲಿಗೆ ಬಂದ ಪಂಚಾಮೃತ'ವೆಂಬುದು ಅದರ ಹೆಸರೆಂದೂ ತಿಳಿಸಿದ್ದರು. [ನೆನಪಾಯಿತಲ್ಲವೆ?] ಆದರೆ ಅದು ಒಂದು ವರ್ಷಕ್ಕೆ ಹಿಂದೆ. ಆ ಅವಧಿಯಲ್ಲಿ ಸಹಸ್ರಾರು ಶೀರ್ಷಿಕೆಗಳು ಸಾಹಿತ್ಯ ವಾತಾವರಣದಲ್ಲಿ ಧೂಳೆಬ್ಬಿಸಿದ್ದುವು. ಆ ಗೊಂದಲದಲ್ಲಿ, ಸೋದರಿಯೊಬ್ಬರು ಕೃತಿ ಬರೆದಿರುವರೆಂಬುದು ನೆನಪಿದ್ದರೂ ಕೃತಿಯನ್ನು ನೋಡದೆ ಇದ್ದುದರಿಂದ ಅದರ ಹೆಸರು ಮರೆತು ಹೋಯಿತು.

ಈಗ ನನ್ನ ಕೃತಿಗೇ 'ಪಾಲಿಗೆ ಬಂದ ಪಂಚಾಮೃತ'ವೆಂದು ಹೆಸರಿಟ್ಟಿದೇನೆ. ನಿಜ. ಆದರೂ ಅರಿಯದೆ ನನ್ನಿಂದ ಒಂದು ಅಪರಾಧವಾಯಿತೆಂದು ಖೇದವೆನಿಸಿದೆ. ಅದಕ್ಕಾಗಿ ನಾನು ಆ ಸೋದರಿಯ ಕ್ಷಮೆ ಕೇಳಬೇಕು. ಅಲ್ಲದೆ, ಅವರ ಕಾದಂಬರಿಯ ವಸ್ತು ಯಾವುದೇ ಇರಲಿ, ಅದು ಪ್ರಕಟವಾಗಬೇಕು; 'ಪಾಲಿಗೆ ಬಂದ ಪಂಚಾಮೃತ' ಎಂಬ ಹೆಸರಲ್ಲೇ ಪ್ರಕಟವಾಗಬೇಕು;–ಎಂಬುದು ನನ್ನ ಹಾರೈಕೆ.

ನನ್ನ ಈ ಪುಸ್ತಕಕ್ಕೆ ಕನ್ನಡದ ಪ್ರಸಿದ್ಧ ಕಲಾವಿದರಾದ ಶ್ರೀ ಎಂ. ಟಿ. ವಿ. ಆಚಾರ್ಯರು ಹೊದಿಕೆಯ ಚಿತ್ರ ಬರೆದಿದ್ದಾರೆ; ಪುಸ್ತಕ 'ತಾಯಿನಾಡು' ಪ್ರೆಸ್ಸಿನಲ್ಲಿ

ಅಚ್ಚಾಗಿದೆ; ಸುಧಾ ಪ್ರಕಾಶನದ ಶ್ರೀ ಹೆಬ್ಬೂರು ರಂಗಸ್ವಾಮಿಯವರು ಪ್ರಕಟಿಸಿದ್ದಾರೆ. ಇವರೆಲ್ಲರಿಗೂ ನನ್ನ ನೆನಕೆಗಳು.

ತಾಳ್ಮೆಯಿಂದ ಕತೆ–ಕಂತೆ ಓದಿದ ನಿನಗೂ ವಂದನೆಗಳು!

ಓದಿದ ಮೇಲೆ ಏನನ್ನಾದರೂ ಬರೆಯದೆ ಇರಲಾರೆಯೆಂಬ ನಂಬುಗೆಯೊಡನೆ–

—ಸತೀವ್ರತ

**ನಿರಂಜನ**

೨೮–೧–೧೯೫೪

ವಿಲ್ಸನ್ ಗಾರ್ಡನ್

ಬೆಂಗಳೂರು